ಕರ್ನಾಟಕ ಸರ್ಕಾರ

ಪುರಂದರ ಸಾಹಿತ್ಯ ದರ್ಶನ

ಸಂಪುಟ ೩

ಸಮಾಜ ದರ್ಶನ

ಪುರಂದರ ಸಾಹಿತ್ಯ ದರ್ಶನ–ಸಂಪುಟ ೩

ಸಮಾಜ ದರ್ಶನ

ಸಂಪಾದಕರು

ವಿದ್ಯಾಲಂಕಾರ ಪ್ರೊ॥ ಸಾ. ಕೃ. ರಾಮಚಂದ್ರರಾವ್

ಸಹಾಯಕ ಸಂಪಾದಕರು

ಪ್ರೊ॥ ಅ. ರಾ. ಮಿತ್ರ

ರತ್ನಾ ಶಿವಶಂಕರ್

ಪ್ರಕಾಶನ

ಶ್ರೀ ಪುರಂದರದಾಸರ ಐದನೆಯ ಶತಮಾನೋತ್ಸವದ ಸಂದರ್ಭದಲ್ಲಿ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

೧೪-೩ಎ, ನೃಪತುಂಗ ರಸ್ತೆ, ಬೆಂಗಳೂರು ೫೬೦ ೦೦೨

PURANDARA SAHITYA DARSHANA (in 4 Volumes)—Collection of Purandaradasa's compositions with Annotations, and a Critical Estimate of his Personality, Times and Works : Vol. 1 : Jivana-Darshana (Compositions pertaining to his life and travel) ; Vol. 2 : Adhyatma-Darshana (Philosophical compositions) ; Vol. 3 : Samaja-Darshana (Compositions dealing with social and ethical problems) ; Vol. 4 : Kirtana-Darshana (Compositions dealing with Krishna ; Suladis, Ugabhogas and Udayaragas) ; Edited by Prof. S. K. Ramachandra Rao, and Associate Editors Prof. A. R. Mitra and Smt. Ratna Shivashankar ; Published by Sri A. R. Chandrahasa Gupta, I.A.S., for The Directorate of Kannada and Culture, Government of Karnataka, 14-3A, Nrupathunga Road, Bangalore 560 002, on the occasion of the 500th Birth Anniversary of Sri Purandaradasa, 1985.

Pp. 399 + iv

© ಕರ್ನಾಟಕ ಸರ್ಕಾರ

ಛಾಯಾ ಚಿತ್ರಗಳು : ಬಿ. ಕೇಸರ್‌ಸಿಂಗ್

ಮೊದಲ ಮುದ್ರಣ : 1985, ಶ್ರೀ ಪುರಂದರದಾಸರ ಐದನೆಯ ಶತಮಾನೋತ್ಸವ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪರವಾಗಿ, ಶ್ರೀ ಅ. ರಾ. ಚಂದ್ರಹಾಸಗುಪ್ತ, ಐ.ಎ.ಎಸ್., ಅವರಿಂದ ಪ್ರಕಟಿತ. ಐಬಿಎಚ್ ಪ್ರಕಾಶನ ಪ್ರಿಂಟರ್ಸ್, ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು 560 054ರ ಪರವಾಗಿ ಎಚ್. ಎಸ್. ಎನ್. ರಾವ್, ಅವರಿಂದ ಮುದ್ರಣವಾದದ್ದು.

ಪರಿವಿಡಿ

ಪ್ರಸ್ತಾವನೆ :

ಪುರಂದರದಾಸರ ಸಾಮಾಜಿಕ ನಿಲುವು.

ಭಾಗ ೧ : ವ್ಯಕ್ತಿನೀತಿ

ನಾಮಸ್ಮರಣೆ – ಜೀವನ ಸೂತ್ರಗಳು – ಸಂಸಾರ ಚಿತ್ರಗಳು.

ಭಾಗ ೨ : ಸಮಾಜ ಚಿಂತನ

ಬೂಟಕತನ – ಸ್ವಭಾವ ವಿಶ್ಲೇಷಣೆ – ಹೆಣ್ಣು ಹೊನ್ನು ಮಣ್ಣು.

ಭಾಗ ೩ : ಮನೋಬೋಧೆ

ಜೀವಸಂಬೋಧನೆ – ವಿಧಿಚಿಂತನೆ – ಶಬ್ದಚಿಂತನೆ.

ಪರಿಶಿಷ್ಟ : ಪುರಂದರದಾಸರ ಪದಗಳಲ್ಲಿ ಸಾಹಿತ್ಯ ವಿಮರ್ಶೆ
ಪ್ರೊ॥ ಅ. ರಾ. ಮಿತ್ರ

ಪದಾರಂಭದ ಅಕಾರಾದಿ

ಪ್ರಸ್ತಾವನೆ

ಪುರಂದರದಾಸರ ಸಾಮಾಜಿಕ ನಿಲುವು

1

ಪುರಂದರದಾಸರು ಹರಿದಾಸರು, ಭಗವದ್ಭಕ್ತಿಯೇ ಅವರ ಮುಖ್ಯಪ್ರವೃತ್ತಿ. ಆದರೆ ಅವರು ಸಂಸಾರವನ್ನು ತೊರೆದ ಸಂನ್ಯಾಸಿಯಲ್ಲ. ಮಾನವಜನ್ಮ ದೊಡ್ಡ ದೆಂದೂ ಸಂಸಾರವೆಂಬುದು ಭಾಗ್ಯವೆಂದೂ ಹಾಡಿ ಹೊಗಳಿದವರು. ಬದುಕಿನುದ್ದಕ್ಕೂ ಹೆಂಡತಿ ಮಕ್ಕಳೊಂದಿಗೆ, ನೆರೆಹೊರೆಯವರೊಂದಿಗೆ ಊರಮಂದಿಯ ನಡುವೆ ಬಾಳಿದವರು. ಸಾಮಾನ್ಯರಲ್ಲಿ ಸಾಮಾನ್ಯರಾಗಿ ಭಕ್ತರಲ್ಲಿ ಭಕ್ತರಾಗಿ, ಭಾವುಕರಲ್ಲಿ ಭಾವುಕರಾಗಿ ಇದ್ದವರು. ಭಗವದುನ್ಮಾದದಲ್ಲಿ ಮೈಮರೆತು ಹುಚ್ಚರಂತೆ, ಪಿಶಾಚ ದಂತೆ, ಮಕ್ಕಳಂತೆ ಇದ್ದವರಲ್ಲ. ನೆರೆಹೊರೆಯವರ ಪರಿಯನ್ನೆಲ್ಲ ಅರಿತುಕೊಂಡವರು, ಊರವರ ವ್ಯವಹಾರವನ್ನೆಲ್ಲ ಬಲ್ಲವರು, ಆಳರಸರ ಓರೆಕೋರೆಗಳನ್ನೆಲ್ಲ ತಿಳಿದವರು. ಪ್ರಪಂಚವನ್ನು ಮಾಯೆಯೆಂದು ಜರಿದು, ಸಂಸಾರವನ್ನು ಅಸಾರವೆಂದು ಹೊರದೂಡಿ, ಅಡವಿಯನ್ನು ಸೇರುವ ಹೇಡಿ ವೈರಾಗ್ಯವೂ ಅವರದ್ದಲ್ಲ. 'ಈಸಬೇಕು, ಇದ್ದು ಜಯಿಸಬೇಕು' ಎಂದು ಹೇಳುವ ಗಟ್ಟಿಗುಂಡಿಗೆ ಅವರದ್ದು, 'ಇರಬೇಕು, ಇರದಿರ ಬೇಕು' ಎಂದು ಕಿವಿಮಾತು ಹೇಳುವ ಜಾಣತನವೂ ಅವರದ್ದು.

ಪುರಂದರದಾಸರ ಪೂರ್ವಜೀವನ ಏನೋ, ಮೊದಲಿಗೆ ಯಾವ ಉದ್ಯೋಗ ವನ್ನು ಹಿಡಿದಿದ್ದರೋ, ಆಗ ಅವರ ಆರ್ಥಿಕನೆಲೆಯೇನೋ ಸಾಮಾಜಿಕ ಸ್ಥಾನಮಾನ ಏನೋ ತಿಳಿದುಬಂದಿಲ್ಲ. ಕತೆಗಳನ್ನು ನಂಬುವುದಾದರೆ ಚಿನಿವಾರಿಕೆವೃತ್ತಿ, ಶ್ರೀಮಂತರು, ಸಮಾಜದಲ್ಲಿ ಪ್ರಭಾವಶಾಲಿಗಳು. ಕತೆಗಳೇನು ಇತಿಹಾಸದ ಪರ್ಯಾಯಗಳಲ್ಲ! ಹರಿದಾಸರಾದ ಮೇಲೆ ಊಂಛವೃತ್ತಿಯನ್ನು (ಮಧುಕರ ವೃತ್ತಿ, ಯಾಯಾವರ) ಹಿಡಿದರೆನ್ನುವುದೇನೋ ಸ್ಪಷ್ಟವಾಗುತ್ತದೆ ; ಅವರ ಪದಗಳೂ ಇದನ್ನು ಹೇಳುತ್ತವೆ, ಹರಿದಾಸರ ಬದುಕಿನ ಬಗೆಯೂ ಇದನ್ನು ಸಮರ್ಥಿಸುತ್ತದೆ. ವಿರಕ್ತರಾದರೂ ಸಂನ್ಯಾಸಿಯಾಗಲಿಲ್ಲ ; ಅಪರೋಕ್ಷಜ್ಞಾನಿಯಾದರೂ ಹೆಂಡತಿ ಮಕ್ಕಳನ್ನು ಕೈಬಿಡಲಿಲ್ಲ ; ವ್ಯಾಸರಾಯಸ್ವಾಮಿಗಳ ಶಿಷ್ಯರಾದರೂ ಮಠವನ್ನು ಸೇರಲಿಲ್ಲ ; ಅರಸನ ಆದರವನ್ನು ಪಡೆದುಕೊಂಡರೂ ಅರಮನೆಯ ಊಳಿಗಕ್ಕೆ ಬಾಯಿಬಿಡಲಿಲ್ಲ. ಹರಿದಾಸರಾದಮೇಲೂ ಗೃಹಸ್ಥರಾಗಿಯೇ ಉಳಿದರು. ಉದ್ಯೋಗ ವನ್ನು ಬಿಟ್ಟು ಊಂಛವೃತ್ತಿಯನ್ನು ಹಿಡಿದರು, ಹಣದ ಹಂಬಲವನ್ನು ಬಿಟ್ಟು ಹರಿದಾಸರಾದರು, ಲೌಕಿಕ ಪ್ರಸಕ್ತಿಯ ಕೆಸರನ್ನು ಬಿಟ್ಟು ಪರಮಾರ್ಥದ ಬಂಡೆಯ

ನ್ನೇರಿದರು. ಆದರೆ ತಾವಿದ್ದ ಪರಿಸರದಿಂದ ದೂರವಾಗಲಿಲ್ಲ, ಸಮಾಜದ ಕಟ್ಟು ಪಾಡಿನಿಂದ ಕಳಚಿಕೊಳ್ಳಲಿಲ್ಲ.

ಸಂನ್ಯಾಸಿಯಾಗಿದ್ದರೆ ಸಮಾಜದಲ್ಲಿನ ಸ್ಥಾನ–ಮಾನ ಬೇರೆಯಾಗುತ್ತಿತ್ತು ; ಉಳಿದವರಿಗಿಂತ ಮೇಲಿನ ನೆಲೆ ಎಂದೆನಿಸಿಕೊಂಡು ಪಾದಪೂಜೆ, ಭಿಕ್ಷೆ, ಸನ್ಮಾನ, ಪುರಸ್ಕಾರಗಳನ್ನು ಪಡೆಯುತ್ತಿದ್ದರು ; ಗೃಹಸ್ಥರಿಂದ ಬಗೆಬಗೆಯ ಸೇವೆಯೂ ನಡೆಯುತ್ತಿತ್ತು. ಆದರೆ ಪುರಂದರದಾಸರು ಗೃಹಸ್ಥರಾಗಿಯೇ ಉಳಿದುದರಿಂದ ಈ ಅನುಕೂಲಗಳು ಒದಗಿರಲು ಸಾಧ್ಯವಿಲ್ಲ. ಎಲ್ಲರಂತೆ ಅವರೂ ಹೊಟ್ಟೆ ಹೊರೆದುಕೊಂಡು, ಹೆಂಡತಿ ಮಕ್ಕಳನ್ನು ಸಾಕಿ, ಎಲ್ಲರಂತೆಯೇ ಇದ್ದುಕೊಂಡರಾಗಿ ವಿಶೇಷವಾದ ಯಾವ ಸೌಲಭ್ಯವನ್ನೂ ಪಡೆದುಕೊಂಡಿರಲಾರರು. ಬಾಳುವೆಯ ಕಡೆಗಾಲದಲ್ಲಿ ಇವರ ಹಿರಿಮೆಯನ್ನು ಗಮನಿಸಿ ಕೆಲವರು ಶಿಷ್ಯರು ಅವರ ಸುತ್ತ ನೆರೆದಿದ್ದರೆ ನೆರೆದಿರಬಹುದು ; ಜನರು ಸಂತರೆಂದು ಇವರನ್ನು ಗೌರವದಿಂದ ಕಂಡಿರ ಬಹುದು. ಇದೂ ನೆಚ್ಚಿಗೆಯಿಲ್ಲ. ಅವರ ಪದಗಳಲ್ಲಿ ಕಂಡುಬರುವ ಧೋರಣೆ ಯನ್ನು ಗಮನಿಸಿದರೆ ಯಾರ ಹಂಗಿಗೂ ಒಳಗಾಗುವ ವ್ಯಕ್ತಿಯಂತೆ ತೋರುವುದಿಲ್ಲ ; ಒಂಟಿ ಸಲಗನಂತೆ ಇದ್ದು ಮರೆಯಾದವರಂತೆ ಕಾಣುತ್ತಾರೆ.

ಹರಿದಾಸರಾಗಿ ಅವರು ಕೈಗೊಂಡದ್ದು ಊಂಛವೃತ್ತಿಯನ್ನು ಎಂದು ಹೇಳಿದೆ ನಷ್ಟೆ. ಆದರೆ ಊಂಛವೃತ್ತಿ (ಮಧುಕರವೃತ್ತಿ) ಸಂನ್ಯಾಸಿಗಳಿಗೆ, ಅವಧೂತರಿಗೆ, ಕರ್ಮನಿಷ್ಠರಾದ ಯಾಯಾವರರಿಗೆ ಹೇಳಿದ್ದು. ಪುರಂದರದಾಸರು ಈ ಯಾವ ಗುಂಪಿಗೂ ಸೇರಿದವರಲ್ಲ. ಪೂರ್ವದಲ್ಲಿ ಹರಿದಾಸರು ಈ ವೃತ್ತಿಯನ್ನು ಹಿಡಿದಿ ದ್ದರೋ ಎನ್ನುವುದು ಸ್ಪಷ್ಟವಾಗಿಲ್ಲ. ಪುರಂದರದಾಸರ ಗುರುಗಳಾದ ವ್ಯಾಸರಾಯ ಸ್ವಾಮಿಗಳು ಸಂನ್ಯಾಸಿಯಾದರೂ ಈ ವೃತ್ತಿಯನ್ನು ಅವಲಂಬಿಸಿರಲಿಲ್ಲ ; ಅವರು ಮಠಾಧಿಪತಿಗಳು, ರಾಜಗುರುಗಳು. ಭಿಕ್ಷೆಯೆತ್ತುವುದು ಆಶ್ರಮಧರ್ಮವಾದರೂ (ಸಂನ್ಯಾಸಿಗೆ ಭಿಕ್ಷುವೆಂದೇ ಹೆಸರು), ಸ್ವಾಮಿಗಳು ಉಣ್ಣುವ ಊಟವನ್ನು 'ಭಿಕ್ಷೆ' ಯೆಂದು ವ್ಯವಹಾರದಲ್ಲಿ ಕರೆದರೂ, ಅವರೇನು ಮನೆಮನೆಗೆ ಅಲೆದು ಭಿಕ್ಷೆ ಬೇಡುವ ರಲ್ಲ. ತೀರ ಬಡವರಾದವರು, ಬೇರೆ ಗತಿಯಿಲ್ಲದವರು, ದೇವರ ಹೆಸರನ್ನು ಹೇಳಿ ತಿರುಪೆಯನ್ನು ಎತ್ತುವರು ; ಇವರೇ ಗೋಪಾಳದವರು ; ಇವರದ್ದು ಊಂಛ ವೃತ್ತಿ. ಈ ವೃತ್ತಿಗೆ ಒಂದು ಹೀನಾಯ ಮೊದಲಿಂದ ಇದ್ದದ್ದೇ. ಪುರಂದರ ದಾಸರ ಕಾಲದಲ್ಲೂ ಇದ್ದಿರಬೇಕು. ಹೀಗಿದ್ದರೂ ಪುರಂದರದಾಸರು ಧೈರ್ಯ ಮಾಡಿ ಗೋಪಾಳಬುಟ್ಟಿ ಹಿಡಿದರಲ್ಲವೆ ?

ವ್ಯಾಸರಾಯಸ್ವಾಮಿಗಳು ಹರಿದಾಸಕೂಟವನ್ನು ತೊಡಗಿಸಿದಾಗ ಇದೊಂದು ಕಟ್ಟುಪಾಡನ್ನೂ ಮಾಡಿಸಿದರೆಂದು ತೋರುತ್ತದೆ. ಲೌಕಿಕಜನರಾದರೆ ಲಾಭ ದಾಯಕವಾದ ಯಾವುದಾದರೊಂದು ಉದ್ಯೋಗವನ್ನು ಹಿಡಿಯುತ್ತಾರೆ ; ಪಂಡಿತ ರಾದರೆ ಮಠದಿಂದ ಮರ್ಯಾದೆ, ಅರಸರ ಆಸರೆ ದೊರೆಯುವ ಸಂಭವವುಂಟು ;

ಅವಧೂತರಾದರೆ ಅಡವಿಯಲ್ಲೇ ಇರುವವರು. ಆದರೆ ಹರಿಸೇವೆಗೆಂದು ಬದುಕನ್ನೇ ಮುಡಿಪಿಟ್ಟವರಿಗೆ ದಾರಿಯೇನು ? ಜನರಿಗೆ ಇವರ ನೆರವು ಒದಗುವುದೆಂಬುದನ್ನು ವ್ಯಾಸರಾಯಸ್ವಾಮಿಗಳು ಮನಗಂಡು, ಜನರ ನಡುವೆ ಅಧ್ಯಾತ್ಮದ ಅಗತ್ಯ, ನೀತಿಯ ನೆಲೆ, ಧರ್ಮದ ಸ್ವಾರಸ್ಯಗಳನ್ನು ಹರಡುವ ಹರಿದಾಸರನ್ನು ಜನರೇ ನೋಡಿಕೊಳ್ಳಬೇಕಾದುದು ಅವರ ಕರ್ತವ್ಯವೆಂದು ಊಂಛವೃತ್ತಿಯನ್ನು ಹರಿದಾಸರಿಗೆ ವಿಧಿಸಿದರೆಂದು ಕಾಣುತ್ತದೆ. ಹರಿದಾಸರು ನರಸೇವೆ ಮಾಡಬಾರದೆಂದು ನಿಯಮ. ಊರಿನ ಅರಸನೂ ನರನೇ, ಮಠದ ಸ್ವಾಮಿಯೂ ನರನೇ, ಉದಾರಿಯಾದ ಧನಿಕನೂ ನರನೇ. ಹರಿದಾಸರು ಇವರಲ್ಲಿ ಯಾರನ್ನೂ ಆಶ್ರಯಿಸಬಾರದು.

ವ್ಯಾಸಕೂಟ–ದಾಸಕೂಟಗಳ ನಡುವೆ ಇರುವ ವ್ಯತ್ಯಾಸಗಳಲ್ಲಿ ಇದೂ ಒಂದು. ವ್ಯಾಸಕೂಟದ ಪಂಡಿತರು ಮಠಕ್ಕೆ ಅಂಟಿಕೊಂಡವರು, ಶ್ರೀಮಂತರ ಆದರವನ್ನು ಬಯಸುವವರು, ಅರಸನ ಓಲಗದಲ್ಲಿ ಕೈಮುಗಿದು ನಿಲ್ಲಬಲ್ಲವರು. ಅವರದ್ದು ಪರಾಧೀನವೃತ್ತಿ ; ಹರಿಯೇ ಸರ್ವೋತ್ತಮನೆಂದು ಪಾಠಪ್ರವಚನಗಳಲ್ಲಿ ಹೇಳಿದರೂ, ಬದುಕಿನಲ್ಲಿ ಹುಲುಮಾನವರನ್ನೇ ನೆರೆನಂಬಿ ಹೊಟ್ಟೆಹೊರೆದುಕೊಳ್ಳುವರು. ಹರಿದಾಸರಾದರೆ ಹಾಗಲ್ಲ. ಹರಿಯನ್ನು ಬಿಟ್ಟು ಬೇರೆ ಯಾರ ಹಂಗಿಗೂ ಒಳಗಾಗುವವರಲ್ಲ. 'ಬಂದದ್ದೆಲ್ಲಾ ಬರಲಿ, ಗೋವಿಂದನ ದಯವೊಂದಿರಲಿ' ಎನ್ನುವವರು ; 'ಎಷ್ಟಾದರೂ ತಾ ಮುನ್ನ ಕೊಟ್ಟಷ್ಟೆ', 'ತಾ ಪಡೆದು ಬಂದುದದಕುಪಾಯವಿಲ್ಲ' ಎನ್ನುವರು ; 'ನೀ ಇಟ್ಹಾಂಗೆ ಇರುವೆನೋ ಹರಿಯೆ' ಎನ್ನುವವರು ; 'ಹರಿ ಇರಲಾಗಿ ನನಗೇತರ ಚಿಂತೆ ?' ಎನ್ನುವರು. ಹೀಗಾಗಿ ಅರಸರ ಆಸ್ಥಾನಗಳಲ್ಲಾಗಲಿ, ಮಠದ ಕಾರುಬಾರಿನಲ್ಲಾಗಲಿ ಹರಿದಾಸರು ಕಾಣಿಸಿಕೊಳ್ಳುವುದಿಲ್ಲ. ವಿಜಯದಾಸರ ಕಾಲವಾದ ಮೇಲೆ ಹರಿದಾಸರಿಗೂ ಮಾಧ್ವ ಮಠಗಳಿಗೂ ಹಲವು ವೇಳೆ ವಿರಸ ಒದಗಿದುದೂ ಉಂಟು. ವಿಜಯದಾಸರಿಗೇ ಉತ್ತರಾದಿಮಠದಿಂದ ಬಹಿಷ್ಕಾರಪತ್ರ ಬಂದಿದ್ದಿತಂತೆ ! ಮುಂದೆ ಹರಿದಾಸರ ಚರಿತ್ರೆಗಳಲ್ಲಿ ಇಂಥ ಪ್ರಸಂಗಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಹರಿದಾಸರ ಮನೋವೃತ್ತಿಗೆ ಸಿದ್ಧಾಂತದ ಸಮರ್ಥನೆಯನ್ನೊದಗಿಸಿದ ಪ್ರಖ್ಯಾತ ಸಂನ್ಯಾಸಿ ಪಂಡಿತರು ವಿಷ್ಣುತೀರ್ಥರಿಗೂ (1750–1806, ತೀರ ವಿರಕ್ತರಾಗಿ ಅಡವಿ ಆಚಾರ್ಯರೆಂದು ಹೆಸರಾಗಿದ್ದವರು ; ಸಂಸ್ಕೃತದಲ್ಲಿ ಶಾಸ್ತ್ರಪ್ರಕರಣ ಗ್ರಂಥಗಳನ್ನೂ ಬರೆದ ಹಿರಿಯರು) ಬಹಿಷ್ಕಾರದ ಬೇಗೆ ತಪ್ಪಲಿಲ್ಲ !

ಪುರಂದರದಾಸರು ಹರಿದಾಸರಾಗಿ ಊಂಛವೃತ್ತಿಯನ್ನು ಕೈಗೊಳ್ಳುವಂತೆ ಮಾಡಿದ ವ್ಯಾಸರಾಯಸ್ವಾಮಿಗಳ ಉದ್ದೇಶವಾದರೂ ಏನಾಗಿದ್ದಿತು ? ಇವರ ಗುರುಗಳಾದ ಶ್ರೀಪಾದರಾಜರೂ ಈ ವಿಚಾರವಾಗಿ ಒಂದು ನಿಲುವನ್ನು ತಳೆದಿದ್ದವರೇ. ಅವರ ರಚನೆಗಳಲ್ಲಿ ಮನುಷ್ಯಮಾತ್ರದವರಿಂದ ಇರಲಿ, ಕಡೆಗೆ ದೇವರಿಂದಲೂ ತಮಗೆ ಯಾವ ಲೌಕಿಕ ಪ್ರಯೋಜನವೂ ಬೇಡವೆಂದು ಧೈರ್ಯದಿಂದ, ಅಡಿಗಡಿಗೆ, ಹೇಳಿರುವುದಿದೆ.

'ಗ್ರಾಸವಾಸಗಳಿಗೆ ಇಲ್ಲವೆಂದು ನಿನ್ನ
ಬೇಸರಿಸಿ ಬೇಡ ಬಂದುದಿಲ್ಲ'

'ಸತಿಸುತರುಗಳ ಸಹಿತನಾಗಿ ನಾ
ಹಿತದಿಂದ ಇರಬೇಕೆಂಬೊದಿಲ್ಲ'

'ಸಾಲವಾಯಿತೆಂದು ಸಂಬಳ ಎನಗೆ
ಸಾಲದೆಂದು ಬೇಡ ಬಂದುದಿಲ್ಲ'

'ಒಡವೆಗಳಿಲ್ಲ ಒಡ್ಯಾಣಗಳಿಲ್ಲೆಂದು
ಬಡವನೆಂದು ಬೇಡ ಬಂದುದಿಲ್ಲ'

'ಆಗಬೇಕು ರಾಜ್ಯಭೋಗಗಳೆನಗೆಂದು
ಈಗ ನಾನು ಬೇಡ ಬಂದುದಿಲ್ಲ'

ಎಂದು ದೇವರಿಗೇ ಎಚ್ಚರಿಕೆ ಕೊಟ್ಟಿದ್ದಾರೆ! 'ನಾ ನಿನಗೇನು ಬೇಡುವುದಿಲ್ಲ ಎನ್ನ, ಹೃದಯಕಮಲದೊಳು ನೆಲಸಿರು ಹರಿಯೆ' ಎಂದಷ್ಟೇ ಅವರ ಬಯಕೆ. ಮುಂದೆ ಪುರಂದರದಾಸರೂ ಇದನ್ನೇ 'ನಾ ನಿನ್ನೊಳನ್ಯ ಬೇಡುವುದಿಲ್ಲ ಎನ್ನ ಹೃದಯಕಮಲ ದೊಳು ನಿಂದಿರು ಹರಿಯೆ' ಎಂದು ಹಾಡಿದರು; ದೇವರಿಗೇ 'ನೀನ್ಯಾಕೋ ನಿನ್ನ ಹಂಗ್ಯಾಕೋ' ಎಂದು ಹೇಳಿದರು. ಇದು ಭಕ್ತಿ-ವಿರಕ್ತಿಗಳು ಕೂಡಿಕೊಂಡಿರುವ ಭಾವ; ಮಾಹಾತ್ಮ್ಯಜ್ಞಾನ-ದೃಢ ಸ್ನೇಹಗಳು ಸೇರಿರುವ ಭಾವ. ಶ್ರೀಪಾದರಾಜರೂ ವ್ಯಾಸರಾಯ ಸ್ವಾಮಿಗಳೂ ಈ ಭಾವವನ್ನು ಬೇರೂರಿಸಲೆಂದೇ ದಾಸಕೂಟವನ್ನು ಕಲ್ಪಿಸಿದರು; ಪುರಂದರದಾಸರನ್ನು ಈ ಭಾವದ ಪುತ್ಥಳಿಯಾಗಿ ಮುಂದೆ ಬಿಟ್ಟರು.

ಪುರಂದರದಾಸರ (ಎಲ್ಲ ಹರಿದಾಸರ) ಕೆಲಸ ಜನಸಾಮಾನ್ಯರ ನಡುವೆ. ಬೇರೆ ಬೇರೆ ವೃತ್ತಿಗಳ, ಪ್ರವೃತ್ತಿಗಳ ಜನರೊಂದಿಗೆ ಬೆರೆತು, ಊರೂರು ತಿರುಗಿ, ಜನರಲ್ಲಿ ಒಂದಾಗಿ, ಅವರವರ ಹವ್ಯಾಸಗಳಲ್ಲಿ ತೊಡಗಿರುತ್ತಲೇ ಅವರಿಗೆ ಭಕ್ತಿಯ ಸ್ವಾರಸ್ಯ ವನ್ನು ಮನಗಾಣಿಸುವುದು ದಾಸರ ಕೆಲಸ. ಹೀಗಾಗಿ ಅವರು ಸಮಾಜದಿಂದ ದೂರಾ ಗುವ, ಅಥವಾ ಜನಸಾಮಾನ್ಯರ ದಾರಿಯನ್ನು ಜರಿಯುವ ಸಂಭವವಿಲ್ಲ. ಜನರ ನಿತ್ಯಜೀವನದಲ್ಲಿ ಕಷ್ಟ ಕಾರ್ಪಣ್ಯಗಳು ಬಂದಾಗ, ಬದುಕಿನ ಸ್ಥಿತಿಗತಿಗಳನ್ನು ಕುರಿತು ಸಂಶಯವೊದಗಿದಾಗ, ಭಕ್ತಿಯ ಊರುಗೋಲನ್ನು ಪಡೆದುಕೊಂಡು ಜನರು ನೆಮ್ಮದಿ ಯಿಂದಿರಲಿ, ಬಾಳುವೆಗೊಂದು ಪ್ರಯೋಜನವನ್ನು ಪಡೆದುಕೊಳ್ಳಲಿ ಎಂದೇ ದಾಸ ಕೂಟ ಏರ್ಪಟ್ಟದ್ದು. ಆದುದರಿಂದ ದಾಸರ ಕೆಲಸ ಊರೂರು ತಿರುಗುವುದು, ಕೇರಿಕೇರಿಗಳಲ್ಲಿ ಅಲೆದಾಡುವುದು, ಮನೆಮನೆಗಳ ಮುಂದೆ ನಿಂತು ದೇವರ ಹಿರಿಮೆ ಯನ್ನು ಹಾಡುವುದು, ದಾರಿ ತಪ್ಪಿದ ಜನರನ್ನು ಎಚ್ಚರಿಸುವುದು, ತಿದ್ದುವುದು,

ದಾರಿ ಕಾಣದವರಿಗೆ ದಾರಿ ತೋರಿಸುವುದು, ದಾರಿಯನ್ನು ಕಂಡುಕೊಂಡವರನ್ನು ಹುರಿದುಂಬಿಸುವುದು; ಇತರರಿಗೆ ಆದರ್ಶವಾಗಿ ಸರಳ ಜೀವನ ನಡೆಸುತ್ತ, ವಿರಕ್ತಿಯೂ ಪ್ರವೃತ್ತಿಯೂ ಕಲೆತಿರುವಂತೆ ಬಾಳುವುದು.

ಈ ಕೆಲಸಕ್ಕೆ ಊರವರು, ನೆರೆಹೊರೆಯವರು ನೀಡುವ ಪ್ರತಿಫಲ ದಾಸರಿಗೆ ಅಂದಂದಿನ ಕೂಳು. ಇದರಲ್ಲಿ ವ್ಯಾಪಾರಮನೋಧರ್ಮವೇನು ಇರದು. ದಾಸರು 'ನಾಳೆಗಿಡೆನು, ಸಾಲದೆನೆನು' ಎಂದು ಆಗಲೇ ಪ್ರತಿಜ್ಞೆಮಾಡಿರುತ್ತಾರಾಗಿ, ತಮ್ಮ ದಿನನಿತ್ಯದ ಅಗತ್ಯಕ್ಕಿಂತ ಹೆಚ್ಚು ಕೂಳನ್ನು ಗಳಿಸಲು ಒಪ್ಪುವುದಿಲ್ಲ. ಮೇಲಾಗಿ ಅವರು ಸಿದ್ಧವಾದ ಅನ್ನವನ್ನು ಸ್ವೀಕರಿಸುವುದಿಲ್ಲ, ಅವರಿವರ ಮನೆಗೆ ಔತಣಕ್ಕೆಂದು ಹೋಗುವುದಿಲ್ಲ. ಅವರು ಮನೆಗಳಿಂದ ಉಪಾದಾನರೂಪವಾಗಿ ಪಡೆದುಕೊಳ್ಳು ವುದು ಬಹುಮಟ್ಟಿಗೆ ಅಕ್ಕಿಯನ್ನು; ಆಗಾಗ ಇತರ ಕಾಳುಬೇಳೆಗಳನ್ನು, ಸಂಬಾರ ದಿನಸಿಗಳನ್ನು. ಅವನ್ನು ತಮ್ಮ ಮನೆಗೊಯ್ದು, ಅಡುಗೆ ಮಾಡಿ ಮನೆಯವ ರೊಂದಿಗೆ ಊಟಮಾಡುವರು; ಶಿಷ್ಯರಿದ್ದರೆ ಅವರು, ಇತರ ಭಾಗವತರು ದೊರೆತರೆ ಅವರೂ ಸೇರುವರು. ದಿನದ ಅಡುಗೆಗೆ ಅಗತ್ಯವಾದದ್ದಕ್ಕಿಂತ ಹೆಚ್ಚು ಅಕ್ಕಿ ಬೇಳೆ ದೊರೆತರೆ ಅದರಿಂದ ಬದುಕಿನ ಇತರ ಅಗತ್ಯಗಳನ್ನು ಪೂರೈಸುವರು. ಇದು ಊಂಛ ವೃತ್ತಿಯ ನಿಯಮ. ಮನೆಮನೆಯಿಂದ ತಿರುಪೆಯೆತ್ತುವುದು ಆಹಾರಸಾಮಗ್ರಿ ಗಳಷ್ಟನ್ನೇ. ಹಣ, ಉಡುಗೆ ಮತ್ತಿತರ ಕಾಣಿಕೆಗಳನ್ನು ಮುಟ್ಟಬಾರದು. ಒಟ್ಟಿ ನಲ್ಲಿ 'ಒಬ್ಬರ ಹಂಗಿರದೆ' ಸರಳವಾಗಿ ಸಾರ್ಥಕವಾದ ಬಾಳನ್ನು ಕಳೆಯುವುದು, ತಾವಾಗಿ ಬಡತನವನ್ನು ಆರಿಸಿಕೊಂಡು ದೈನ್ಯವಿಲ್ಲದೆ ಬದುಕುವುದು ಉದ್ದೇಶ.

2

ಈ ತೆರನಾದ ಉದಾತ್ತ ಉದ್ದೇಶದಿಂದ ಕೂಡಿದವರೇ ದಿಟವಾಗಿ ಹರಿದಾಸರು. ವ್ಯಾಸರಾಯಸ್ವಾಮಿಗಳು ಪುರಂದರದಾಸರನ್ನು ಹೊಗಳಿ ರಚಿಸಿರುವ ಕೃತಿಯಲ್ಲಿ (ಮೊದಲ ಸಂಪುಟದ ಮೊದಲನೇ ಭಾಗದ ಮೊದಲ ಕೃತಿ, ಪುಟ 59) ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು, ಬೇಸರಿಲ್ಲದೆ ಕಾಡಿ ಬೇಡಿ ಬಳಲಿಸುತ ಕಾಸು ಗಳಿಸುವ ವನು, ಡಂಭಕದಿಂದ ತುಳಸಿಮಾಲೆ ಧರಿಸಿ ಹರಿಸ್ಮರಣೆ ಮಾಡಿ ಜನರ ಮುಂದೆ ಸಂಭ್ರಮದಿ ತಾನುಂಬ ಊಟ ಬಯಸುವವನು ಹರಿದಾಸನಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಹರಿದಾಸ ಜೀವನಕ್ಕೆ ಆಧ್ಯಾತ್ಮಿಕ ಪ್ರೌಢಿಮೆ ಹಿನ್ನೆಲೆಯಲ್ಲಿರಬೇಕು; ಭಕ್ತಿ–ವಿರಕ್ತಿಗಳು ದೃಢ ವಾಗಿರಬೇಕು; ಇದೊಂದು ಸಾಧನೆಯೆಂಬ ಅರಿವಿರಬೇಕು. ಲೋಕೋಪಕಾರಕ್ಕಾಗಿ ಹರಿದಾಸ್ಯ ಎನ್ನುವ ನಿಶ್ಚಯವಿರಬೇಕಾದುದು ಮುಖ್ಯ; ಅದಕ್ಕೆ ಮೊದಲು ತನ್ನ ಸ್ವರೂಪೋದ್ಧಾರವಾಗಿರಬೇಕು, ಅದನ್ನು ಒದಗಿಸುವುದೇ ಹರಿದಾಸದೀಕ್ಷೆಯ ಸ್ವಾರಸ್ಯ.

ಪುರಂದರದಾಸರಿಗೆ (ದಿಟವಾದ ಎಲ್ಲ ಹರಿದಾಸರಿಗೆ) ಲೌಕಿಕ ಪ್ರಸಕ್ತಿಯಾಗಲಿ, ಪ್ರಾಪಂಚಿಕ ಆಶೆ ಆಕಾಂಕ್ಷೆಗಳಾಗಲಿ ಇಲ್ಲದಿರುವುದರಿಂದ ಊಂಛವೃತ್ತಿಯನ್ನು ಹಿಡಿದರೂ ಅವರಿಗೆ ಹೀನಾಯವೇನಿಲ್ಲ. 'ನನಗೆ ಇಂದಿನ ಕೂಳು ನೀಡಿ ನೀ ಧನ್ಯನಾದೆ' ಎನ್ನುವ ಸ್ವಾಭಿಮಾನ ಅವರದ್ದು. ಅದರೂ ಊಂಛವೃತ್ತಿಯಲ್ಲಿರುವ ದೈನ್ಯಭಾವ ಅವರ ಗಮನಕ್ಕೆ ಬಾರದಿರಲಿಲ್ಲ. 'ಕಾಯಲಾರೆನು ಕೃಷ್ಣ ಕಂಡವರ ಬಾಗಿಲನು, ನಾಯಿ ಕುನ್ನಿಗಳಂತೆ ಪರರ ಪೀಡಿಸುತ' ಎಂದು ಕೊರಗಿದುದುಂಟು. ಆದರೆ ತಾವು ಕೈಗೊಂಡಿರುವ ಕೆಲಸ ದೊಡ್ಡದು, ಗುರುಗಳಿಂದ ಏರ್ಪಟ್ಟುದು ಎಂಬ ವಿಶ್ವಾಸ ಅವರನ್ನು ಕಾಯಿತು. 'ಹರಿದಾಸರಿಗಿನ್ನು ಸರಿಯುಂಟೆ ?' ಎಂದವರು ಅವರು. 'ಇದು ಭಾಗ್ಯವಿದು ಭಾಗ್ಯವಯ್ಯ, ಪದುಮನಾಭನ ಪಾದಭಜನೆ ಸುಖವಯ್ಯ' ಎಂದು ಹಿಗ್ಗಿದರು. ಹರಿದಾಸಜೀವನದಲ್ಲೂ ತೊಡಕುಗಳು, ಜಂಜಾಟ, ನಿಂದನೆ ತಪ್ಪುವಂತಿರಲಿಲ್ಲ. ಆದರೆ ಇದರಿಂದ ದಾಸರು ಧೈರ್ಯಗೆಡಲಿಲ್ಲ. 'ಯಾಕೆ ಕಕುಲಾತಿ ಪಡುವೆ ಎಲೆ ಮರುಳೆ, ಲೋಕಮೂರನು ಆಳ್ವ ಶ್ರೀನಿವಾಸನು ನಮ್ಮ ಸಾಕಲಾರದೆ ಬಿಡುವನೇ ?' ; 'ನಾನೇಕೆ ಬಡವನು, ನಾನೇಕೆ ಪರದೇಶಿ, ಶ್ರೀನಿಧೇ ಹರಿ ಎನಗೆ ನೀನಿರುವತನಕ ?' ; 'ಎನ್ನ ಕಡೆ ಹಾಯಿಸುವುದು ನಿನ್ನ ಭಾರ, ನಿನ್ನ ನೆನೆಯುತಿಹುದೆ ಎನ್ನ ವ್ಯಾಪಾರ' ಎಂದು ದುಗುಡವನ್ನು ಮೆಟ್ಟಿ ಮೇಲೆ ನಿಂತರು.

ಜನರು ತಮ್ಮನ್ನು ಜರಿದು ಮೂದಲಿಸಿ ಸಣ್ಣಮಾತನ್ನಾಡಿದಾಗ, ಅವರು 'ನಿಂದಕರಿರಬೇಕು' ಎಂದುಕೊಂಡರು. ಅದರಿಂದ ತಮ್ಮ ಆತ್ಮವಿಶ್ವಾಸವೇನು ಕದಡಲಿಲ್ಲ, 'ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗೆ' ಎಂದು ಕಟುವಾದ ಉಪಮೆಯುನ್ನು ಅವರತ್ತ ಬಿಸಾಡಿದರು ;

'ದುಷ್ಟಜನಂಗಳು ಈ ಸೃಷ್ಟಿಯೊಳಗಿದ್ದರೆ
ಶಿಷ್ಟರಿಗೆಲ್ಲ ಕೀರ್ತಿಗಳು ಇಷ್ಟಪ್ರದ ಶ್ರೀಕೃಷ್ಣ
ಇಷ್ಟೆ ನಿನ್ನೊಳು ವರವ ಬೇಡುವೆನಯ್ಯ

ದುರುಳಜನಂಗಳು ಚಿರಕಾಲವಿರುವಂತೆ
ಕರವ ಮುಗಿದು ವರವ ಬೇಡುವೆನು'

ಎಂದು ನಗೆಯಾಡಿದರು. ತಾವು ಕೈಗೊಂಡ ಕೆಲಸದಲ್ಲಿ ಅಷ್ಟು ಅಚಲವಾದ ಶ್ರದ್ಧೆ ಅವರದ್ದು. ಈ ಶ್ರದ್ಧೆಯ ಬಳುವಳಿಯೂ ಅವರಿಗೆ ಗುರುಗಳಿಂದಲೇ ಬಂದದ್ದು. ಜೀವತ್ರೈವಿಧ್ಯವನ್ನು ಒಪ್ಪಿಕೊಂಡು ಅನಂತ ಜೀವರಾಶಿಗಳಲ್ಲಿ ಸ್ವರೂಪ ಯೋಗ್ಯತೆ ಅಧಿಕಾರಗಳಲ್ಲಿ ತಾರತಮ್ಯವಿರುವುದನ್ನು ಗಮನಿಸಿ, ಅನಾದಿಸಿದ್ಧವಾದ ಕರ್ಮ, ಅಜ್ಞಾನಗಳಿಂದಾಗಿ ಜೀವರ ಕರ್ಮ, ಪ್ರವೃತ್ತಿ, ಭೋಗಗಳಲ್ಲೂ ಭೇದವಿರುವುದನ್ನು

ಕಂಡುಕೊಂಡ ಹರಿದಾಸರು ಎಲ್ಲರೂ ತಮ್ಮಂತೆಯೇ ಸದಾಚಾರ ಸಂಪನ್ನರಾಗಿರುವರು, ಸಜ್ಜನರು, ಸತ್ತ್ವದ ಉತ್ಕರ್ಷೆಯುಳ್ಳವರು, ಪ್ರಗಲ್ಭಜೀವಿಗಳು ಎಂದು ನಿರೀಕ್ಷಿಸ ಲಾರರು. ವ್ಯಾಸರಾಯಸ್ವಾಮಿಗಳು ಜನರ ಪಾಡನ್ನು ಬಣ್ಣಿಸುತ್ತ ಒಬ್ಬೊಬ್ಬರನ್ನೂ

'ಮಾಯೆಯೆಂಬ ದುಷ್ಟರಾಯು
ಮಾನವೆಂಬ ಬಿನುಗು ಮಂತ್ರಿ
ಇಂದ್ರಿಯಗಳೆಂಬ ತಿರಿದೋಡುವ ಪರಿವಾರ
ಬಿಗಿದು ಕಟ್ಟಿ

ತಾವು ಕ್ರೋಧ ಮೊದಲಾದ ಹಗೆಗಳಿಗೆ ಕೊಟ್ಟರು ಎಂದು ವಿವರಿಸಿದರು. ಈ ಕಾರಣದಿಂದ ಜನರು ಅನೇಕ ಬಗೆಯವರು, ಹಲವು ಪರಿಯ ಕೆಲಸದಲ್ಲಿ ತೊಡಗಿರು ವವರು, ಬೇರೆ ಬೇರೆ ಪ್ರವೃತ್ತಿಗಳುಳ್ಳವರು. ಹರಿದಾಸರು ಜನರನ್ನು ಕುರಿತಂತೆ ಸಹನೆಯನ್ನೂ, ಸಹಾನುಭೂತಿಯನ್ನೂ ಬೆಳೆಸಿಕೊಂಡುದು ಸಹಜವೇ. ಜನರ ನಡುವೆ ಇದ್ದುಕೊಂಡು, ಅವರೊಂದಿಗೆ ಬೆರೆತು, ಅವರಿಗೆ ಹಿತವೆನಿಸುವ ಕೆಲಸವನ್ನೇ ಕೈಗೊಂಡವರಿಗೆ ಹಟಮಾರಿತನ ಸಲ್ಲದು ತನ್ನ ಬದುಕಿನ ನಿಷ್ಠೆಯನ್ನು ಬಿಟ್ಟುಕೊಡದೆ, ಇತರರ ವಿಚಾರವಾಗಿ ಉದಾರವಾದ ಒಡಲನ್ನು ಹೊಂದಿರುವುದು ಹರಿದಾಸಜೀವನದ ಒಂದು ಪ್ರಕಾರವೇ. ಶ್ರೀಪಾದರಾಜರ ಒಂದು ಉಗಾಭೋಗ ಇದು

'ಮನೆಯಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ಧನದಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ವನಿತೆಯಿಂ ಸಂತೋಷ ಕೆಲವರಿಗೆ ಲೋಕದಲ್ಲಿ
ತನಯರಿಂ ಸಂತೋಷ ಕೆಲವರಿಗೆ ಲೋಕದಲ್ಲಿ
ಇನಿತು ಸಂತೋಷ ಅವರವರಿಗಾಗಲಿ ನಿನ್ನ
ನೆನೆವೊ ಸಂತೋಷ ಎನಗಾಗಲಿ ನಮ್ಮ ರಂಗವಿಠಲ'

ಹರಿದಾಸರು ಕೈಗೊಂಡ ಲೋಕೋಪಕಾರದ ಕೆಲಸ ಸಮರ್ಥವಾಗಿ ಜರುಗಲು ಅವರು ಜನರೊಂದಿಗೆ ಬೆರೆತು ಅವರ ಕಷ್ಟಸುಖಗಳನ್ನೂ ಬಯಕೆ ಬಿನ್ನಾಣಗಳನ್ನೂ ಅಡ್ಡಿ ಆತಂಕಗಳನ್ನೂ ಅರಿತುಕೊಳ್ಳುವುದು ಮುಖ್ಯವಾದ ಸಾಧನೆ. ಸಂನ್ಯಾಸಿಗಳ ವಿರಕ್ತಿಗೂ ಹರಿದಾಸರ ವಿರಕ್ತಿಗೂ ಒಂದು ಅಂತರವಿದೆ. ಸಂನ್ಯಾಸಿಗಳು ವಿರಕ್ತರಾಗಿ ಸಂಸಾರವನ್ನು ಹೇಯವೆಂದು ಬಗೆದು ಅದರಿಂದ ದೂರವಾಗುತ್ತಾರೆ; ದೇಹ ಯಾತ್ರೆಗೆ ಅಗತ್ಯವಾದಷ್ಟು ಮಾತ್ರ ಜನರೊಂದಿಗೆ ಸಂಪರ್ಕವನ್ನಿರಿಸಿಕೊಂಡು ಉಳಿ ದಂತೆ ಖಡ್ಗವಿಷಾಣಕಲ್ಪರಾಗಿ (ಖಡ್ಗಮೃಗದ ಕೊಂಬಿನಂತೆ ಒಂಟಿಯಾಗಿ) ಇರುತ್ತಾರೆ. ಹರಿದಾಸರು ವಿರಕ್ತರಾದರೂ ಸಂಸಾರದ ಅಸಾರತೆಯನ್ನು ಮನಗಂಡರೂ ಸಂಸಾರ ವನ್ನು ಬಿಟ್ಟೋಡುವಂತಿಲ್ಲ. ಏಕೆಂದರೆ ಅವರಿಗೊಂದು ಕರ್ತವ್ಯಪ್ರಜ್ಞೆಯಿದೆ.

ಸಂನ್ಯಾಸಿಗೆ ಕರ್ತವ್ಯವೆಂಬುದೇನೂ ಇರದು, ಯಾವ ಹೊಣೆಗಾರಿಕೆಯೂ ಇರದು. ಹರಿದಾಸರಿಗಾದರೋ ಲೋಕಸಂಗ್ರಹ ಎನ್ನುವ ವ್ರತವಿದೆ. ಜನರನ್ನು

'ಗಾಳಿ ಬಂದ ಕೈಯಲ್ಲಿ ತೂರಿಕೊಳ್ಳಿರೋ
ನಾಳೆ ಎನ್ನಬೇಡಿ ಇದೇ ವೇಳೆ ಬನ್ನಿರೋ'

'ಮಾನವಜನ್ಮ ದೊಡ್ಡದು ಇದ
ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರಾ'

ಎಂದು ಮೊದಲಾಗಿ ಎಚ್ಚರಿಸಬೇಕಾದುದು ಹರಿದಾಸರ ಕೆಲಸ. ಇದು ಸಮಾಜದ ಚೌಕಟ್ಟಿನಲ್ಲಿಯೇ ಸಾಗಬೇಕಾದುದರಿಂದ ಹರಿದಾಸರ ಹೊಣೆ ಗೃಹಸ್ಥರಾಗಿಯೇ ಉಳಿಯುವುದು.

ವಿರಕ್ತರಾಗಿ ಗೃಹಸ್ಥರಾಗಿರುವುದು ಅಸಿಧಾರಾವ್ರತವೇ, ಕತ್ತಿಯ ಅಲುಗಿನ ಮೇಲೆ ನಡೆಯುವಷ್ಟು ಕಷ್ಟವೇ. ಅದಕ್ಕಾಗಿ ಹರಿದಾಸರಿಗೆ ವಿಶೇಷ ಸಾಧನೆಗಳನ್ನೂ ಹೇಳಿದ್ದಾರೆ. ಇದು ಭಾಗವತಧರ್ಮದಲ್ಲಿ ಮುಖ್ಯವಾಗಿ ಬರುವ ವಿಚಾರ. ಭಾಗವತ ಧರ್ಮದ ಕೈಗನ್ನಡಿಯಾದ ಭಗವದ್ಗೀತೆಯಲ್ಲಿ ಬರುವ ಕರ್ಮಯೋಗವೂ ಇದೇ ಪ್ರಕಾರಕ್ಕೆ ಸೇರಿದ್ದು. ಅಲ್ಲಿ ಸಂನ್ಯಾಸವೆಂಬ ಮಾತಿಗೆ ಆಶ್ರಮಸಂನ್ಯಾಸವೆನ್ನುವ ಅರ್ಥ ಎಲ್ಲಿಯೂ ಹೊರಡುವುದಿಲ್ಲ; ಸಂಕಲ್ಪ ಸಂನ್ಯಾಸವೇ ಸಂನ್ಯಾಸ ('ನ ಹ್ಯಸನ್ಯಸ್ತ ಸಂಕಲ್ಪೋ ಸಂನ್ಯಾಸೀ ಭವತಿ ಕಶ್ಚನ'). ಮತ್ತು ಅಲ್ಲಿ ಲೋಕಸಂಗ್ರಹ (ಎಂದರೆ ಜನರಿಗೆ ನೆರವಾಗಿ ಅವರನ್ನು ಮೇಲೆತ್ತುವುದು) ಅವಶ್ಯವಾದ ಕರ್ತವ್ಯವೆಂದು ಕಾಣಿಸ ಲಾಗಿದೆ ('ಚಿಕೀರ್ಷುರ್ಲೋಕಸಂಗ್ರಹಂ', 'ಲೋಕಸಂಗ್ರಹಮೇವಾಪಿ ಸಂಪಶ್ಯನ್' ಇತ್ಯಾದಿ'). ಆದುದರಿಂದ ಹರಿದಾಸ ಪಂಥಕ್ಕೆ ಮಾರ್ಗದರ್ಶಕವಾದುದು ಭಾಗವತಧರ್ಮ.

ಭಾಗವತಧರ್ಮವೆಂದರೆ ಭಾಗವತಪುರಾಣದಲ್ಲಿ ಹೇಳಿರುವ ಧರ್ಮವೆಂದು ಬಗೆಯಬಾರದು. ಭಾಗವತಪುರಾಣ ಮೈದಳೆಯುವ ಎಷ್ಟೋ ಕಾಲಕ್ಕೆ ಮೊದಲೇ ಭಾಗವತಧರ್ಮ ನಮ್ಮ ದೇಶದಲ್ಲಿ ಬಳಕೆಯಲ್ಲಿದ್ದಿತು. ದಿಟವಾಗಿ ಭಾಗವತ ಪುರಾಣಕ್ಕೂ ಭಾಗವತಧರ್ಮಕ್ಕೂ ನಂಟು ಇರದು. ಭಾಗವತಧರ್ಮದ ಒಕ್ಕಣೆ ಮಹಾಭಾರತದ ಮೋಕ್ಷಧರ್ಮಪರ್ವದ 334ನೆಯ ಅಧ್ಯಾಯದಿಂದ ಮೊದಲಾಗುವ ನಾರಾಯಣೀಯವೆಂಬ ಪರಿಚ್ಛೇದದಲ್ಲಿ ಬರುತ್ತದೆ. ಪಾಂಚರಾತ್ರಶಾಸ್ತ್ರವೂ ಭಾಗವತ ಧರ್ಮವನ್ನು ಅನುಸರಿಸಿದೆ. ಶಂಕರಾಚಾರ್ಯರೂ ಭಾಗವತಧರ್ಮದ ಮೂಲ ಪ್ರಮೇಯಗಳನ್ನು ಒಪ್ಪಿಕೊಂಡಿದ್ದಾರೆ (ಬ್ರಹ್ಮಸೂತ್ರಭಾಷ್ಯ 2, 2, 42). ಈ ಧರ್ಮದ ಮೂಲಪ್ರಮೇಯವೆಂದರೆ ಭಗವಚ್ಛಬ್ದವಾಚ್ಯನಾದ ವಾಸುದೇವನಿಗೆ ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರೆಂಬ ರೂಪಗಳಿದ್ದು ನಾಲ್ವರೂ ಕೂಡಿ

ಚತುರ್ವ್ಯೂಹಗಳಿಂದು ಜಗತ್ತಿನ ಎಲ್ಲ ಕೆಲಸಗಳನ್ನೂ ಮಾಡಿಸುವರೆಂಬುದು. ಈ ಧರ್ಮದ ಪ್ರಕಾರ ಚತುರ್ಮುಖಬ್ರಹ್ಮನಿಂದ ಹಿಡಿದು ಹುಲ್ಲುಕಡ್ಡಿಯವರೆಗೆ ಜಗತ್ತೆಲ್ಲವೂ ಭಗವಂತನ ವ್ಯೂಹವೇ. ಆದುದರಿಂದ ಜಗತ್ತನ್ನು ಸುಳ್ಳೆಂದಾಗಲಿ ಜೊಳ್ಳೆಂದಾಗಲಿ ಯಾರೂ ತೊರೆಯುವಹಾಗಿಲ್ಲ. ಎಲ್ಲವೂ (ತಾನು, ತನ್ನದು, ಒಳಗಿನ ವಿವರಗಳು, ಹೊರಗಿನ ಪದಾರ್ಥಗಳು ಎಲ್ಲವೂ) ಭಗವಂತನಿಗೇ ಸೇರಿದ್ದು ಎಂದು ('ಯತ್ತದ್ ಭಾಗವತಂ ಸರ್ವಂ ಇತಿ') ಭಾವಿಸುವುದೇ ಈ ಧರ್ಮದ ತಾತ್ಪರ್ಯ (ಮೋಕ್ಷಧರ್ಮ, 335).

ಭಾಗವತಧರ್ಮವನ್ನು ಏಕಾಂತ ಧರ್ಮವೆಂದೂ ಕರೆಯುತ್ತಾರೆ. ಏಕೆಂದರೆ ಇಲ್ಲಿ ಏಕಾಂತ ಭಕ್ತಿಯ ಹೆಗ್ಗಳಿಕೆಯನ್ನು ಹೇಳಿದೆ (ಭಗವದ್ಗೀತೆಯಲ್ಲಿ 'ಏಕಭಕ್ತಿರ್ವಿಶಿಷ್ಯತೇ' 7, 17 ಎಂಬ ಮಾತನ್ನು ಗಮನಿಸಿ). ಏಕಾಂತ ಧರ್ಮವು ಪ್ರವೃತ್ತಿ ಪರವಾದುದು; ನಿವೃತ್ತಿ ಪರವಾದುದಲ್ಲ. 'ಪ್ರವೃತ್ತಿ ಲಕ್ಷಣಂ ಧರ್ಮಂ ಋಷಿರ್ನಾರಾಯಣೋऽಬ್ರವೀತ್' ಎಂಬ ಸ್ಪಷ್ಟವಾದ ಮಾತು ಮಹಾಭಾರತದ ಮೋಕ್ಷಧರ್ಮಪರ್ವದಲ್ಲೇ (217, 2) ಬರುತ್ತದೆ. ಪ್ರವೃತ್ತಿ ಲಕ್ಷಣವೆಂದರೆ ಸಂಸಾರದಲ್ಲೇ ತೊಡಗಿದ್ದು ಗೃಹಸ್ಥನೋ ಬ್ರಹ್ಮಚಾರಿಯೋ ವಾನಪ್ರಸ್ಥನೋ ಆಗಿದ್ದು ಉಂಛವೃತ್ತಿಯನ್ನು ಹಿಡಿದು ಸಾಧನೆಯನ್ನು ಮುಂದುವರಿಸುವುದು. ಈ ನಿರ್ದೇಶನ ಮಹಾಭಾರತದ ನಾರಾಯಣೀಯ ಪರಿಚ್ಛೇದದಲ್ಲೇ ಬಂದಿದೆ (334, 1). ಪರಮಪುರುಷಾರ್ಥ ಸಾಧನೆಗೆ ಸಂನ್ಯಾಸಾಶ್ರಮವೇ ಯುಕ್ತವಾದುದೆಂಬ ನಿಲುವು ಈ ಧರ್ಮದ್ದಲ್ಲ. ಭಗವಂತನು 'ಸರ್ವಾಶ್ರಮಾಭಿಗಮನ'. ಏಕಾಂತ ಭಕ್ತರು ಯಾವ ಆಶ್ರಮದಲ್ಲಿದ್ದು ಯಾವ ಕರ್ಮವನ್ನೇ ಮಾಡಿದರೂ ಅದು ಭಗವಂತನಿಗೆ ಶಿರೋಧಾರ್ಯವೇ (ಅಲ್ಲೇ 343, 64). ಮತ್ತು ಜಾತಿ, ಮತ, ಕುಲ, ವಂಶಗಳ ಎಣಿಕೆಯಿಲ್ಲ. ಯಾರಾದರೂ ಅಧಿಕಾರವನ್ನು ಪಡೆದುಕೊಂಡು ಸಾಧನೆಯನ್ನು ಕೈಗೊಳ್ಳಬಹುದು. ಪುರಂದರದಾಸರು

'ಆವ ಕುಲದವನಾದರೇನು
ಆವನಾದರೇನು ಆತ್ಮ
ಭಾವವರಿತ ಮೇಲೆ ಪ

ಹಸಿ ಕಬ್ಬು ಡೊಂಕಿರಲು ಅದರ
ರಸ ಡೊಂಕೇನೋ ವಿಷಯಾಸೆಗಳ ಬಿಟ್ಟು
ಹಸನಾದ ಗುರುಭಕ್ತಿ ಮಾಡೊ ೧

ನಾನಾ ವರ್ಣದ ಆಕಳು ಅದು
ನಾನಾ ವರ್ಣದ ಕ್ಷೀರವೇನೋ
ಹೀನ ಕರ್ಮಗಳನು ಬಿಟ್ಟು ಹಿಗ್ಗಿ
ಜ್ಞಾನ ಒಲಿಸಿರೋ ೨

ಕುಲದ ಮೇಲೆ ಹೋಗಬೇಡ ಮನುಜ
ಕುಲವಿಲ್ಲ ಜ್ಞಾನಿಗಳಿಗೆ ವರಪುರಂದರ ವಿ
ಠಲನ ಪಾದವ ಸೇರಿ ಮುಕ್ತನಾಗೋ ೩

ಎಂದು ಹೇಳಿದಾಗ ಭಾಗವತಧರ್ಮದ ನಿಷ್ಠೆಯನ್ನೇ ಹಿಡಿದರು.

ಹರಿದಾಸರ ಸಾಧನ ವಿಚಾರವಾಗಿ, ವರ್ಣಾಶ್ರಮ ಧರ್ಮಗಳ ಪಾಲನೆಗಿಂತ ಹೆಚ್ಚಾಗಿ ಭಾಗವತಧರ್ಮದ ಸಾಧನಾ ಚತುಷ್ಟಯದ ಬಳಕೆಯಿದೆ. ಭಾಗವತ ಪಂಥದಲ್ಲಿ ಭಗವದನುಸಂಧಾನಕ್ಕೆ ಅಭಿಗಮನ (ಮುಂಜಾನೆ ಎದ್ದೊಡನೆ ಮಾಡಬೇಕಾದ ಹರಿಸ್ಮರಣೆ, ಇತ್ಯಾದಿ), ಉಪಾದಾನ (ಪೂರ್ವಾಹ್ನದಲ್ಲಿ ಪೂಜಾದ್ರವ್ಯಗಳ ಸಂಪಾದನೆ ಮತ್ತು ಸಿದ್ಧತೆ), ಇಜ್ಯಾ (ಮಧ್ಯಾಹ್ನದಲ್ಲಿ ಪೂಜೆ), ಸ್ವಾಧ್ಯಾಯ (ಅಪರಾಹ್ಣದಲ್ಲಿ, ಸಚ್ಛಾಸ್ತ್ರ ಪಠನ, ಚಿಂತನ, ಜಪ ಇತ್ಯಾದಿ) ಮತ್ತು ಯೋಗ (ರಾತ್ರಿ, ಧ್ಯಾನ) ಎಂಬ ಪಂಚಕರ್ಮಗಳನ್ನು ಸಾಧನೆಯೆಂದು ಹೇಳಿ ಪಂಚ ಕಾಲಗಳಿಗೆ ಹೊಂದಿಸಿದ್ದಾರೆ. ಹರಿದಾಸರು ಈ ವಿವರಗಳನ್ನೆಲ್ಲ ತಮ್ಮ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. ಆದರೆ ಕೆಲವೊಂದು ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾರೆನ್ನಿ. ಉಪಾದಾನವೆಂಬ ಕರ್ಮಾಂಗದಲ್ಲಿ ಊಂಛವೃತ್ತಿಯನ್ನು ಸೇರಿಸಿಕೊಳ್ಳುತ್ತಾರೆ ; ತಮ್ಮ ಊಟವೂ ಭಗವದಾರಾಧನೆಯೆಂಬ ಪೂಜೆಯ ಪ್ರಕಾರವೇ ಎಂಬ ಭಾವನೆ ('ಸಕಲವೂ ಹರಿಸೇವೆಯೆನ್ನಿ'). ದಿಟವಾಗಿ ಉಪಾದಾನವೆಂಬ ಮಾತಿಗೆ ಪೂಜೆಗೆಂದು ಹೂವು, ಹಣ್ಣು, ಧೂಪ, ದೀಪ, ನೀರು ಮೊದಲಾದ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುವುದು ಎಂದರ್ಥ. ಆದರೆ ಹರಿದಾಸರು ಇದನ್ನು ಅಭಿಗಮನದಲ್ಲೇ ಸೇರಿಸಿಕೊಂಡು, ಉಪಾದಾನವೆಂದರೆ ತಮ್ಮ ಅಡುಗೆಗೆ ಬೇಕಾದ ಸಾಮಗ್ರಿಯನ್ನು ಹೊಂದಿಸಿಕೊಳ್ಳುವುದು ಎಂಬರ್ಥವನ್ನು ಹೇಳುತ್ತಾರೆ. ತಾವು ಮಾಡುವ ಊಟ ತಮ್ಮೊಳಗಿರುವ ಬಿಂಬರೂಪೀ ಪರಮಾತ್ಮನಿಗೆ ಮಾಡುವ ಆರೋಗಣೆಯೇ ತಾನೆ ? ಇದೇ ಕಾಲದಲ್ಲಿ ಭಗವನ್ನಾಮಸಂಕೀರ್ತನವನ್ನೂ ನಡೆಸುತ್ತಾರೆ. ಬೀದಿಗಳಲ್ಲಿ ನಡೆಯುತ್ತ, ತಂಬೂರಿ ತಾಳಗಳನ್ನು ಹಿಡಿದು, ಪದಗಳನ್ನು ಹಾಡಿ ಜನರನ್ನು ಸನ್ಮಾರ್ಗಕ್ಕೆ ತಿರುಗಿಸಲೆತ್ನಿಸುವ ವೇಳೆ ಇದೇ.

ಮಧ್ಯಾಹ್ನದ 'ಇಜ್ಯಾ' ಎಂಬ ಕರ್ಮ ವಿಭಾಗದಲ್ಲಿ ಪೂಜೆ ಸೇರುವುದಷ್ಟೆ. ಭಾಗವತ ಧರ್ಮದಲ್ಲಿ ಪೂಜೆ ವೇದೋಕ್ತವೇ ಆಗಿರಬೇಕೆಂಬ ನಿಯಮವಿಲ್ಲ ; ಪೂಜೆಯಲ್ಲಿ ವೈದಿಕ, ತಾಂತ್ರಿಕ, ಮಿಶ್ರ ಎಂದು ಮೂರು ಬಗೆಗಳನ್ನು ಹೇಳಿ ಯಾವು

ದಾದರೂ ಆದೀತೆಂದು ಕಲ್ಪನೆಯಿದೆ. ಸಾಮಾನ್ಯವಾಗಿ ಹರಿದಾಸರು ನಡೆಸುವ ಪೂಜೆ ಮಿಶ್ರವೆಂಬ ಪ್ರಕಾರಕ್ಕೆ ಸೇರಿದ್ದು ; ವೈದಿಕ ಮಂತ್ರಗಳು, ತಾಂತ್ರಿಕ ಪ್ರಕ್ರಿಯೆಗಳು. ಅಪರಾಹ್ಣದ 'ಸ್ವಾಧ್ಯಾಯ'ದಲ್ಲಿ ಪುರಾಣಶ್ರವಣ, ಭಕ್ತರ ಚರಿತ್ರೆಗಳ ಪಠನ, ಸತ್ಸಂಗ, ಹರಿಕಥೆ ಮೊದಲಾದವು ಸೇರುತ್ತವೆ ; ಹರಿದಾಸರು ಕವಿಗಳೂ ಆಗಿದ್ದರೆ ಕೃತಿ ರಚನೆ ಈ ವೇಳೆ ನಡೆಯಬೇಕು. ಪುರಂದರದಾಸರಾದರೆ ಆಶುಕವಿಗಳು; ಅವರ ಉಂಛವೃತ್ತಿಯ ಸಮಯದಲ್ಲೇ ಕೃತಿರಚನೆಯೂ ಸಾಗುತ್ತಿದ್ದಿತು. ಮುಂದೆ ತ್ಯಾಗರಾಜಸ್ವಾಮಿಗಳೂ ಹೀಗೆಯೇ ಮಾಡುತ್ತಿದ್ದರು. ರಾತ್ರಿಯ 'ಯೋಗ' ಬಿಂಬೋಪಾಸನೆಗೆ, ಮಾನಸಪೂಜೆಗೆ ಪ್ರಶಸ್ತವಾದ ಅವಕಾಶ.

ಹೀಗೆ ಹರಿದಾಸರ ನಿತ್ಯಜೀವನದಲ್ಲಿ ಸಮಾಜವನ್ನು ಕುರಿತಂತೆ ಕರ್ತವ್ಯ ನಿರ್ವಹಣೆ ಸಾಗುತ್ತಿದ್ದಿತು. ಸತ್ಸಂಗಕ್ಕೆ ಹೆಚ್ಚಿನ ಆದರವಿದ್ದುದರಿಂದ 'ಸ್ವಾಧ್ಯಾಯ'ದ ವೇಳೆಯಲ್ಲಿ ಹರಿದಾಸರ ಸುತ್ತ ಊರವರು, ಆಸಕ್ತರು, ಭಕ್ತರು, ಶಿಷ್ಯರು ನೆರೆದು ಗೋಷ್ಠಿಯಲ್ಲಿ ಭಜನೆ, ಪುರಾಣ ಪ್ರವಚನ, ನಾಮಸಂಕೀರ್ತನ ಮೊದಲಾದುವು ನಡೆಯುತ್ತಿದ್ದುವು. ಈ ಪದ್ಧತಿ ಈಗ್ಗೆ ಸುಮಾರು ಮೂವತ್ತು ನಲವತ್ತು ವರ್ಷಗಳ ವರೆಗೂ ಅಲ್ಲಲ್ಲಿ ಉಳಿದಿದ್ದಿತು. ಈಗ ಸಂಪೂರ್ಣವಾಗಿ ಮರೆಯಾಗಿದೆಯೆನ್ನಿ.

3

ಭಾಗವತಧರ್ಮದ, ಹರಿದಾಸಪಂಥದ ಹಿನ್ನೆಲೆಯನ್ನು ಕುರಿತು ಸ್ವಲ್ಪ ಪರಿಶೀಲಿಸಬೇಕಾದುದಿದೆ. ವ್ಯಾಸಕೂಟದವರು ಹರಿದಾಸರನ್ನು ಹೀನಾಯವಾಗಿ ಕಂಡಂತೆಯೇ ವೇದಾಂತಿಗಳು ಭಾಗವತರನ್ನು ಕೀಳಾಗಿ ಕಂಡುದುಂಟು. ಇದಕ್ಕೆ ಕಾರಣವೇನೆಂದು ತಿಳಿಯಲು ಸಮಾಜದ ಪೂರ್ವಗ್ರಹಗಳನ್ನು ಗಮನಿಸಬೇಕು. ಭಾಗವತರು ಮತ್ತು ಹರಿದಾಸರು ಸಭ್ಯರೆನಿಸಿಕೊಂಡ ಸಮಾಜ ವಿಭಾಗಕ್ಕೆ ಹೊರಗಾದವರು. ವೈದಿಕ ಮೇಲ್ಮೆಯನ್ನು ಮೇಲೇರಿಸಿಕೊಂಡ ಜನರನ್ನು ಎದುರಿಸಿದವರು. ಭಾಗವತರ ವಿಚಾರವಿರಲಿ ; ಇಲ್ಲಿ ನಮಗೆ ಪ್ರಸಕ್ತವಾದುದು ಹರಿದಾಸರ ವಿಚಾರ. ನಮ್ಮ ಗಮನಕ್ಕೆ ಬಂದಿರುವ ಹರಿದಾಸರು ಬಹುಮಟ್ಟಿಗೆ ಬ್ರಾಹ್ಮಣರು, ವೈದಿಕ ಸಂಸ್ಕೃತಿಯ ಮಡಿಲಲ್ಲಿ ಬೆಳೆದವರು ; ಮಾಧ್ವಸಂಪ್ರದಾಯಕ್ಕೆ ಸೇರಿದವರು ; ವೈದಿಕವೆನ್ನಬಹುದಾದ ಆಚಾರ–ವಿಚಾರಗಳನ್ನು ಸ್ಥೂಲವಾಗಿಯಾದರೂ ಒಪ್ಪಿಕೊಂಡವರು. ಎಂದ ಮೇಲೆ ವೈದಿಕನಿಷ್ಠೆಯುಳ್ಳ ವ್ಯಾಸಕೂಟದ ಪಂಡಿತರು ಇವರನ್ನು ಕೀಳಾಗಿ ಕಂಡುದೇಕೆ ? ಸಮಾಜದಲ್ಲಿ ಹರಿದಾಸರ ಸ್ಥಾನ ಎಂದಿಗೂ ಸಂದಿಗ್ಧವಾದುದೇ ; ಅಷ್ಟಾಗಿ ಮಾನ್ಯತೆಯನ್ನು ಎಂದಾದರೂ ಅವರು ಪಡೆದಿದ್ದರೋ ಎನ್ನುವುದು ಸಂಶಯವೇ. ಈ ವಿಪರ್ಯಾಸಕ್ಕೆ ಕಾರಣವೇನು ?

ಹರಿಯ ದಾಸರೆಂದು ತಮ್ಮನ್ನು ಭಾವಿಸಿಕೊಂಡು ಹರಿಯ ಸೇವೆ, ನಾಮ ಸಂಕೀರ್ತನೆ, ಕ್ಷೇತ್ರಾಟನಗಳಲ್ಲೇ ಬಾಳನ್ನು ಕಳೆಯುವ ಜನರು ಪುರಂದರದಾಸರ, ವ್ಯಾಸರಾಯಸ್ವಾಮಿಗಳ, ಶ್ರೀಪಾದರಾಜರ ಕಾಲಕ್ಕೆ ಎಷ್ಟೋ ಹಿಂದಿನಿಂದ ಇದ್ದರು. ದ್ರವಿಡದೇಶದಲ್ಲಿ ಆಳ್ವಾರುಗಳು ಈ ಗುಂಪಿಗೆ ಸೇರಿದವರೇ ; ಕ್ರಿಸ್ತಾಬ್ದ ಆರು–ಏಳನೆಯ ಶತಮಾನಗಳಿಂದ ಇಂಥವರು ದಕ್ಷಿಣದೇಶದಲ್ಲೆಲ್ಲ ಇದ್ದರು. ಇವರು ಹಲವಾರು ಜಾತಿಗಳಿಗೆ ಸೇರಿದವರು, ಬೇರೆ ಬೇರೆ ಕುಲಗಳವರು, ನಾನಾ ಸಂಪ್ರದಾಯದವರು. ಕೆಲವರು ಬ್ರಾಹ್ಮಣರಿದ್ದರೂ ಇತರರ ಸಂಖ್ಯೆ ದೊಡ್ಡದು. ಇತರರಲ್ಲೂ ಸಾಮಾಜಿಕವಾಗಿ ತೀರ ಕೀಳೆಂದು ಬಗೆಯಲ್ಪಟ್ಟ ಜನಾಂಗಗಳವರೇ ಹೆಚ್ಚು ಮಂದಿ. ನರಸೇವೆ ಮಾಡುವುದು ಸಮಾಜದ ಕಟ್ಟುಪಾಡಾಗಿರುವಾಗ ಇವರು ನರಸೇವೆಯನ್ನು ನಿರಾಕರಿಸಿ ಹರಿಸೇವೆಯನ್ನು ಕೈಗೊಂಡದ್ದು ಸಾಹಸವೇ, ಕ್ರಾಂತಿಯ ಮನೋಧರ್ಮವೇ. ಹೀಗೆ ದಾಸರೆಂಬ ಜನಾಂಗಗಳು ತಮಿಳುನಾಡು, ಆಂಧ್ರದೇಶ, ಕರ್ನಾಟಕಗಳಲ್ಲಿ ಮೊದಲಿಂದ ಇದ್ದವು, ಈಗಲೂ ಇವೆ. ತೆಲುಗು ದೇಶದಲ್ಲಿ ಬುಕ್ಕದಾಸರಿ, ಪಾಗದಾಸರಿ, ಬುಟ್ಟದಾಸರಿ, ದಂಡೆದಾಸರಿ, ಚಿನ್ನದಾಸರಿ, ಮಾಲದಾಸರಿ, ಭಾಗವತ ದಾಸರಿಗಳೆಂಬ ವಿಭಾಗಗಳೂ ಇದ್ದುವು. ಕರ್ನಾಟಕದಲ್ಲಿ ಬಣಜಿಗ, ಕುರುಬ, ವೊಕ್ಕಲಿಗ, ಸಾಲೆ, ತಿಗುಳ, ಗೊಲ್ಲ, ಬೇಡ, ಬೆಸ್ತ, ವಡ್ಡ, ಹೊಲೆಯ, ಮಾದಿಗರ ಜಾತಿಗಳಿಗೆ ಸೇರಿದ ದಾಸರಿಗಳಿದ್ದಾರೆ. ಇವರಲ್ಲಿ ಸಮಗಾರ ದಾಸರು, ನಾಮಧಾರಿ ದಾಸರು, ಶನಿವಾರ ದಾಸರು, ಯಲ್ಲಂ ದಾಸರು, ದೊಂಬಿ ದಾಸರು, ಬಿಂದಿಗೆ ದಾಸರು, ಆಟ ದಾಸರು, ಕತ್ತರಿ ದಾಸರು, ದೇಶಭಾಗ ದಾಸರು, ಧರ್ಮ ದಾಸರುಗಳೆಂಬ ವಿಭಾಗಗಳೂ ಇವೆ.

ಇವರೆಲ್ಲ ವೈಷ್ಣವರು ; ದಿಟವಾಗಿ ಹರಿ–ದಾಸರೇ. ಗುರುಗಳಿಂದ ದೀಕ್ಷೆಯನ್ನು ಪಡೆದು ಚಕ್ರಾಂಕನವನ್ನು ತಳೆದು ಅಷ್ಟಾಕ್ಷರಿ ಮಂತ್ರವನ್ನು ಜಪಿಸುತ್ತಾರೆ ; ತುಳಸೀ ಮಣಿಯ ಮಾಲೆಯನ್ನು ತೊಡುತ್ತಾರೆ, ಹಣೆಯ ಮೇಲೆ ಊರ್ಧ್ವಪುಂಡ್ರವನ್ನು ಧರಿಸುತ್ತಾರೆ; ತಿರುಪತಿಯ ವೇಂಕಟೇಶ್ವರನೇ ಬಹುಮಟ್ಟಿಗೆ ಇವರ ದೈವ. ಉಳಿದಂತೆ ನರಸಿಂಹ ಮತ್ತು ಹನುಮಂತ ಇವರ ಪೂಜೆಯೂ ವಿಶೇಷವಾಗಿ ನಡೆಯುತ್ತದೆ. ಇವರ ಕಸುಬು ದೇವರ ಹೆಸರನ್ನು ಹೇಳಿಕೊಂಡು ಊರೂರು, ಕೇರಿ ಕೇರಿ ತಿರುಗುತ್ತ ತಿರುಪೆ ಎತ್ತುವುದು. ಗರುಡಗಂಭವನ್ನು (ಗರುಡಗಂಭವೆಂದು ಹೆಸರಾದರೂ ಇದು ದೀಪದ ಕಂಬವೇ) ಕೈಯಲ್ಲಿ ಹಿಡಿದು ನಡೆಯುತ್ತ, ಎಲ್ಲಾದರೊಂದು ಕಡೆ ನೆಲದ ಮೇಲಿರಿಸಿ ಶಂಖವನ್ನೂದಿ, ಜಾಗಟೆಯನ್ನು ಬಡಿದು, ತಂಬೂರಿಯನ್ನು (ಕಿನ್ನರಿಯನ್ನು) ಮೀಟಿ, ವಿಷ್ಣುಸಂಕೀರ್ತನವನ್ನು ಮಾಡುವರು; ಗೋವಿಂದ ನಾಮೋಚ್ಚಾರಣೆಯನ್ನು ಮಾಡುವರು. ನೆರೆದ ಜನರು ಕಾಣಿಕೆಯನ್ನು ಇಟ್ಟುಹೋಗುವರು. ಇದು ಊಂಛವೃತ್ತಿಯ ಜಾನಪದ ನೆಲೆ. ಕೆಲವೊಮ್ಮೆ ಕಾವಡಿಯನ್ನು ಹೊತ್ತು ಅದರಲ್ಲಿ ವಿಷ್ಣುವಿಗ್ರಹ, ಶಾಲಿಗ್ರಾಮ, ಶಂಖ, ತಿರುಮಣ್ಣು (ಶ್ರೀಚೂರ್ಣ) ಮೊದಲಾದುವು

ಗಳನ್ನಿರಿಸಿಕೊಂಡು, ಜನರೆದುರು ಅವನ್ನು ತೋರಿಸಿ ದೇವರ ನಾಮುಗಳನ್ನು ಹಾಡು ವರು, ತಿರುಮಣ್ಣನ್ನು ಪ್ರಸಾದವಾಗಿ ಕೊಡುವರು, ಜನರಿಂದ ಬಂದ ಕಾಣಿಕೆಯನ್ನು ಸ್ವೀಕರಿಸಿ ಮುಂದೆ ಹೋಗುವರು.

ಇವರಲ್ಲಿ ಆಟದ ದಾಸರು ಅಥವಾ ಭಾಗವತದಾಸರೆಂಬ ಗುಂಪಿನವರು ಗಂಡಸರು ಸ್ತ್ರೀವೇಷವನ್ನು ತೊಟ್ಟು ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ತಾಳ ಮೃದಂಗದ ಗತಿಗೆ ನಾಟ್ಯವಾಡುವರು ; ಭಾಗವತ ಪುರಾಣದ ಪ್ರಸಂಗಗಳನ್ನು ಎತ್ತಿಕೊಂಡು ನಾಟಕ ವನ್ನಾಡುವುದೂ ಉಂಟು. ಕೆಲವರು ಕೋಲೆಬಸವನನ್ನು ಮುಂದೆಮಾಡಿಕೊಂಡು ಹೋಗುತ್ತ ಅದರಿಂದ ಆಟವಾಡಿಸುವರು. ದಂಡೆದಾಸರೆಂಬ ಗುಂಪಿನವರಿಗೆ ಕಾಂಚೀ ಪುರದ ಅರಸರು ದುಂಡೆ, ತಾಳ,ತಂಬೂರಿಗಳನ್ನು ಸನ್ಮಾನವಾಗಿ ನೀಡಿದರೆಂದು ಅವರಲ್ಲಿ ಪ್ರತೀತಿಯಿದೆ. ಅಂದಿನಿಂದ ಅವರು ದಂಡಿಗೆಯ ದಾಸರು ಅಥವಾ ದಂಡೆದಾಸರೆನಿಸಿ ಕೊಂಡರಂತೆ. ಇವರು ವಿಶೇಷವಾಗಿ ಹಾಡುವರು ; ಹಾಡುವಾಗ ಏಕನಾದದಂಥ ಸರಳವಾದ ತಂಬೂರಿಯನ್ನು ಮೀಟುವರು. ರಾಮಾಯಣವನ್ನು ಕವಿಯಾದ ವಾಲ್ಮೀಕಿಯಿಂದ ಕಲಿತು ಹಾಡಿದ ಕುಶೀಲವರು ಈ ಗುಂಪಿಗೆ ಸೇರಿದ ಗಾಯಕರೇ. 'ಕುಶೀಲವೌ' ಎಂಬ ಮಾತಿಗೆ 'ಗಾಯಕೌ' ಎಂದೇ ನಿಘಂಟಿನ ಅರ್ಥ ; ರಾಮನ ಮಕ್ಕಳಾದ ಲವ–ಕುಶ ಎಂಬುದು ಕಾಲಾಂತರದಲ್ಲಿ ಒದಗಿದ ಒಕ್ಕಣೆ.

ಪುರಂದರದಾಸರ ಕಾಲದಲ್ಲೇ ಕೃಷ್ಣದೇವರಾಯನು ರಚಿಸಿದ 'ಆಮುಕ್ತ ಮಾಲ್ಯದ' ಎಂಬ ತೆಲುಗು ಗ್ರಂಥದಲ್ಲಿ ವೈಷ್ಣವದಾಸರನ್ನು ಕುರಿತ ಉಲ್ಲೇಖವಿದೆ. ಕೃಷ್ಣದೇವರಾಯನು ವೈಷ್ಣವನೇ ; ವಿಜಯನಗರದ ಅರಸರೆಲ್ಲ ವೈಷ್ಣವ ಶ್ರದ್ಧಾಳು ಗಳೇ ಎನ್ನಿ. ಅವನು ಬರೆದ 'ಸಕಲಕಥಾಸಾರಸಂಗ್ರಹ'ವು ವೈಷ್ಣವ ಪುರಾಣಗಳಲ್ಲಿ ಬರುವ ಕಥೆಗಳ, ವಿಷ್ಣುಭಕ್ತರ ಪ್ರಸಂಗಗಳ ಸಂಕಲನವೆಂದು ಉಲ್ಲೇಖವಿದೆ ; ಈ ಗ್ರಂಥವೇನೋ ಉಪಲಬ್ಧವಾಗಿಲ್ಲ. ಅವನ ಕೃತಿಗಳಲ್ಲಿ ಉಳಿದುಬಂದಿರುವ 'ಜಾಂಬ ವತೀ ಕಲ್ಯಾಣ'ವೆಂಬ ಸಂಸ್ಕೃತ ನಾಟಕ ಮತ್ತು 'ಆಮುಕ್ತಮಾಲ್ಯದ'ವೆಂಬ ತೆಲುಗು ಕಾವ್ಯಗ್ರಂಥ ಎರಡೂ ವಿಷ್ಣುವಿನ ಮಾಹಾತ್ಮ್ಯೆಯನ್ನು ಹೇಳುವಂಥವೇ. 'ಆಮುಕ್ತ ಮಾಲ್ಯದ'ಕ್ಕೆ 'ವಿಷ್ಣುಚಿತ್ತೀಯ'ವೆಂದೂ ಹೆಸರಿದೆ. ಹನ್ನೆರಡು ಮಂದಿ ಆಳ್ವಾರರಲ್ಲಿ ಪ್ರಸಿದ್ಧರಾದ ಪೆರಿಯಾಳ್ವಾರರನ್ನು (ವಿಷ್ಣುಚಿತ್ತರನ್ನು) ಕುರಿತ ಈ ಕೃತಿಯಲ್ಲಿ ವಿಷ್ಣುವೇ ಪೆರಿಯಾಳ್ವಾರರಿಗೆ ಹೇಳಿದ "ಮಾಲದಾಸರಿ ಕಥೆ"ಯೆಂಬ ಸೊಗಸಾದ ಭಾಗವಿದೆ. 'ಮಾಲದಾಸರಿ' ಎನ್ನುವುದು ಮೇಲೆ ಹೇಳಿದ ದಾಸವರ್ಗಗಳಲ್ಲಿ ಒಂದು ಹೀನಕುಲವೆಂದೂ 'ಹೇಳಬಾರದ' ಕುಲವೆಂದೂ ಮಾತುಗಳಿವೆ. ಆದರೆ ಇಲ್ಲಿನ ಮಾಲದಾಸ ಮಹಾವಿಷ್ಣುಭಕ್ತ; ಕುರಂಗುಡಿಯ ಅರ್ಚಾಮೂರ್ತಿ ಅವನ ಇಷ್ಟದೈವ. ಅವನ ಹೆಗ್ಗಳಿಕೆಯಿಂದ ಬ್ರಹ್ಮರಾಕ್ಷಸನಿಗೂ ಮುಕ್ತಿ ದೊರೆಯಿತು ! ಅವನು ಮುಂಜಾನೆ ಎದ್ದು ಗುಡಿಗೆ ಹೋಗಿ ಮಂಗಳಕೈಶಿಕರಾಗದಲ್ಲಿ ಹಾಡುತ್ತ, ಕುಣಿಯುತ್ತ ದೇವರನ್ನು ಸೇವೆಮಾಡುತ್ತಿದ್ದ ಚಿತ್ರ ಈ ಕಾವ್ಯದಲ್ಲಿ ದೊರೆಯುತ್ತದೆ.

ಈಗ "ಗೀತನರ್ತನದಿಂದ ಕೃಷ್ಣನ್ನ ಪೂಜಿಸುವ ಪೂತಾತ್ಮ ಪುರಂದರದಾಸರ" (ವ್ಯಾಸರಾಯಸ್ವಾಮಿಗಳು ಮಾಡಿದ ವರ್ಣನೆ) ಹಿನ್ನೆಲೆಯನ್ನು ಗುರುತಿಸಬಹುದಲ್ಲವೆ? ವ್ಯಾಸರಾಯಸ್ವಾಮಿಗಳು ಎತ್ತಿ ನಿಲ್ಲಿಸಿದ ಹರಿದಾಸರ ಕೂಟದಲ್ಲಿ ಬ್ರಾಹ್ಮಣರೂ ಇದ್ದರು, ಬ್ರಾಹ್ಮಣರಲ್ಲದವರೂ ಇದ್ದರು. ಹೆಸರಾದವರಲ್ಲಿ ಪುರಂದರದಾಸರು ಬ್ರಾಹ್ಮಣರು, ಕನಕದಾಸರು ಕುರುಬರು, ವೈಕುಂಠದಾಸರು ಸಾತಾನಿಗಳು. ಉಳಿದವರು ಇಂದು ನಮ್ಮ ನೆನಪಿನಲ್ಲಿ ಉಳಿದುಬಂದಿಲ್ಲ. ಕೃಷ್ಣದೇವರಾಯನ ಗಮನವನ್ನೂ ಗೌರವವನ್ನೂ ಸೆಳೆದುಕೊಂಡ ಮಾಲದಾಸರಿಯ ಕಥೆ, ಅವನ ಗುರುಗಳಾದ ವ್ಯಾಸರಾಯಸ್ವಾಮಿಗಳಿಗೂ ತಿಳಿದಿದ್ದಿರಬೇಕು. ವ್ಯಾಸರಾಯಸ್ವಾಮಿಗಳು ಈ ಜಾನಪದ 'ದಾಸ'ರ ಆದರ್ಶವನ್ನೇ ಹಿಡಿದು, ಅವರ ಸ್ಫೂರ್ತಿಯಿಂದಲೇ ದಾಸಕೂಟವನ್ನು ಕಟ್ಟಿದರೆಂದರೆ ತಪ್ಪಾಗದು. ಪುರಂದರದಾಸರಿಗೆ ಮೊದಲೇ ಕನಕದಾಸರು ವ್ಯಾಸರಾಯಸ್ವಾಮಿಗಳನ್ನು ಕೂಡಿಕೊಂಡಿದ್ದರು. ಪುರಂದರದಾಸರು ಕನಕದಾಸರನ್ನು ಉಲ್ಲೇಖಿಸಿದ್ದಾರೆ; ಕನಕದಾಸರ ಕೃತಿಗಳಲ್ಲಿ ಪುರಂದರದಾಸರ ಹೆಸರು ಕಾಣಸಿಗುವುದಿಲ್ಲ. ದಾಸಕೂಟದ ರೀತಿನೀತಿಗಳನ್ನು ವ್ಯಾಸರಾಯಸ್ವಾಮಿಗಳು ನಿರ್ಧರಿಸಿದ್ದು ಕನಕದಾಸರ ನೆರವಿನಿಂದಲೇ ಇದ್ದೀತು. ಏಕೆಂದರೆ ಕನಕದಾಸರು ಜಾನಪದ ನೆಲೆಯ ದಾಸರ ಗುಂಪಿನಿಂದಲೇ ಬಂದವರು.

ವ್ಯಾಸರಾಯಸ್ವಾಮಿಗಳು ದಾಸಕೂಟವನ್ನು ಏರ್ಪಡಿಸಿದಾಗ 'ದೇಸಿ'ಯಾಗಿದ್ದ ಒಂದು ವಿವರವನ್ನು 'ಮಾರ್ಗಿ'ಯಾಗಿ ಮಾರ್ಪಡಿಸಿದರು; ಜಾನಪದವಾದ ಒಂದು ಪ್ರವೃತ್ತಿಯನ್ನು ಸಭ್ಯತೆಯ ಚೌಕಟ್ಟಿನಲ್ಲಿ ಅಳವಡಿಸಿದರು. ಗ್ರಾಮಾಂತರಗಳಲ್ಲಿ ಓಡಿಯಾಡುತ್ತಿದ್ದ ದಾಸರ ಮೊದಲಾಕೃತಿಯನ್ನೇ ಅನುಸರಿಸಿ ದಾಸಕೂಟದವರಲ್ಲೂ ಊಂಛವೃತ್ತಿ (ತಿರುಪೆಗೆ ಸಂಸ್ಕೃತದ ಹೆಸರು ; ಪುರಂದರದಾಸರು ತಮ್ಮ ವೃತ್ತಿಯನ್ನು 'ತಿರುಪ'ವೆಂದೇ ಬಣ್ಣಿಸಿಕೊಂಡಿದ್ದಾರೆ), ದಂಡಿಗೆ, ಬೆತ್ತ, ತಂಬೂರಿ, ಚಿಟಿತಾಳ, "ಕಾಲಿಗೆ ಗೆಜ್ಜೆ ಕಟ್ಟಿ ನೀಲವರ್ಣನ ಗುಣ, ಆಲಾಪಿಸುತ್ತ ಬಲು ಓಲಗ" ಮಾಡುವುದು (ಪುರಂದರದಾಸರ ವರ್ಣನೆ), 'ಗೀತ ನರ್ತನದಿಂದ ಕೃಷ್ಣನ್ನ ಪೂಜಿಸುವುದು' (ವ್ಯಾಸರಾಯಸ್ವಾಮಿಗಳ ಒಕ್ಕಣೆ), ಗೋಪಾಳಬುಟ್ಟಿ ಮೊದಲಾದ ವಿವರಗಳನ್ನು ವಿಧಿಸಿದರು (ದಾಸಯ್ಯನ ಗರುಡಗಂಭವನ್ನೇನೋ ಕೈಬಿಟ್ಟರೆನ್ನಿ.)

ವ್ಯಾಸರಾಯಸ್ವಾಮಿಗಳ ಒಂದು ಕೃತಿಯಲ್ಲಿ ಸಂಕೀರ್ತನ ಪದ್ಧತಿಯಲ್ಲಿದ್ದ ಹೀನಾಯದ ಉಲ್ಲೇಖವೂ ಇದೆ

ಗೆಜ್ಜೆಯ ಕಾಲಲ್ಲಿ ಕಟ್ಟಿ
ಲಜ್ಜೆ ಬಿಟ್ಟು ಹರಿಯ ನಾಮ
ಗರ್ಜನೆ ಮಾಡುತ್ತ ಅಘ
ವರ್ಜಿತರಾಗಿಪ್ಪರ ಸಂಗ

ಇಲ್ಲಿ 'ಲಜ್ಜೆ ಬಿಟ್ಟು' ಎಂದು ಸ್ಪಷ್ಟವಾಗಿ ಹೇಳಿರುವುದನ್ನು ಗಮನಿಸಬೇಕು. ಗಂಡಸರು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಬೀದಿಯಲ್ಲಿ ಕುಣಿದಾಡುವುದು ನಾಲ್ಕು ಮಂದಿಯ ನಡುವೆ ಲಜ್ಜೆಯ ಮಾತಲ್ಲವೆ ? ಆ ಕಾಲದ, ಮುಂದಿನ ಕಾಲದ, ವೈದಿಕ ನಿಷ್ಠ ಬ್ರಾಹ್ಮಣರಿಗೆ ವ್ಯಾಸರಾಯಸ್ವಾಮಿಗಳು ಕೈಗೊಂಡ ಈ ಕೆಲಸ ಹಿಡಿಸದಿದ್ದುದು ಸಹಜವೇ.

ವ್ಯಾಸರಾಯಸ್ವಾಮಿಗಳಿಗೆ ಪ್ರಿಯವೆನಿಸಿದ 'ಹರಿದಾಸರ ಸಂಗ'ದಲ್ಲಿ ಎಲ್ಲ ಜಾತಿಯ ಜನರೂ ಇರುವುದು ಅವರಿಗೆ ಒಪ್ಪಿಗೆಯಾಗಲಿಲ್ಲ. ಅಷ್ಟೇ ಅಲ್ಲದೆ, ಯಾವ ಸಂಕೋಚವೂ ಇಲ್ಲದೆ ವ್ಯಾಸರಾಯಸ್ವಾಮಿಗಳು ಬೇರೆ ಬೇರೆ ಜಾತಿಯವರಿಗೆಲ್ಲ ಹರಿ ದೀಕ್ಷೆಯನ್ನು ಒದಗಿಸಿದರು ; ಹರಿದಾಸರ ಕೂಟದಲ್ಲಿ ಕುಲಕ್ಕೆ, ಜಾತಿಗೆ ಬೆಲೆಯಿಲ್ಲ ವೆಂದು ಪ್ರಕಟವಾಗಿ ಹೇಳಿದರು. ಈ ಧೈರ್ಯದಿಂದಲೇ ಪುರಂದರದಾಸರು "ಯಾವ ಕುಲದವನಾದರೇನು, ಆವನಾದರೇನು, ಆತ್ಮಭಾವವರಿತ ಮೇಲೆ" ಎಂದು ಹಾಡಿದರು; "ಹೊಲೆಯ ಹೊರಗಿಹನೆ, ಊರೊಳಗಿಲ್ಲವೆ ?" ಎಂದು ಮಡಿವಂತರನ್ನು ಕೇಳಿದರು ; "ಜಂಗಮರು ನಾವು ಜಗದೊಳಗೆ" ಎಂದು ಬಣ್ಣಿಸಿಕೊಂಡರು. ವ್ಯಾಸರಾಯಸ್ವಾಮಿ ಗಳನ್ನು ಅನುಸರಿಸಿ ಅವರ ಶಿಷ್ಯರಾದ ವಾದಿರಾಜಸ್ವಾಮಿಗಳು ಉಡುಪಿಯ ಕಡೆ ಧೈರ್ಯದಿಂದ ಹಲವು ಜಾತಿಗಳವರಿಗೆ ಹರಿದೀಕ್ಷೆಯನ್ನು ಕೊಟ್ಟರು. ಇವೆಲ್ಲ ವ್ಯಾಸ ಕೂಟದ ಕರ್ಮಠ ಪಂಡಿತರನ್ನು ಕೆರಳಿಸಿದುವೆಂದರೆ ಆಶ್ಚರ್ಯವೇನಿಲ್ಲ.

ವ್ಯಾಸರಾಯಸ್ವಾಮಿಗಳ ದಾಸಕೂಟ ದಿಟವಾಗಿ ಒಂದು ಕ್ರಾಂತಿಯೇ, ಒಂದು ಆಂದೋಳನವೇ. ಪುರಂದರದಾಸ, ಕನಕದಾಸ, ವಾದಿರಾಜರಂಥ ಪ್ರತಿಭಾವಂತರು, ಪ್ರಭಾವಶಾಲಿಗಳು ಮುಂದೆ ದಾಸಕೂಟದಲ್ಲಿ ಕಾಣಿಸಿಕೊಳ್ಳಲಿಲ್ಲವಾದ ಕಾರಣ ಈ ಕ್ರಾಂತಿಯ ಪ್ರಭಾವ ಬೇರೂರಲಿಲ್ಲ ; ಹರಡಲಿಲ್ಲ. ವೈದಿಕನಿಷ್ಠೆಯಿದ್ದ ಮೇಲು ಜಾತಿಗಳ ಜನರ ಕೈ ಬಲಗೊಂಡಿದ್ದರಿಂದ ದಾಸಕೂಟ ಗೌರವದಿಂದ ಉಳಿಯುವುದೂ ಕಷ್ಟವೆನಿಸಿತು. ಮಾಧ್ವ ಮಠಗಳು ತಮ್ಮ ಪಂಗಡಕ್ಕೆ ಸೇರಿದ್ದ ಹರಿದಾಸರನ್ನು ಹಂಗಿಸಿ, ಭಂಗಿಸಿ ಮೂಲೆಗೊತ್ತಿದುವು. ವ್ಯಾಸರಾಯಸ್ವಾಮಿಗಳಿಗಿದ್ದ ಧೈರ್ಯ, ಔದಾರ್ಯ, ಉದಾತ್ತವಾದ ಮಾನವೀಯತೆ, ಲೋಕೋತ್ತರವಾದ ದೃಷ್ಟಿ ಮುಂದೆ ಯಾವ ಮಠಾಧಿಪತಿಗಳಿಗೂ ಬರಲಿಲ್ಲ. ಸಣ್ಣಜನರು ದೊಡ್ಡ ಪೀಠಗಳಲ್ಲಿ ಕುಳಿತು ಹಟಹಿಡಿದು, ಬಲಗೊಂಡು, ಜಾಲಿಯ ಮರದಂತೆ ದುರ್ಜನರನ್ನು ಸುತ್ತ ಸೇರಿಸಿ ಕೊಂಡು, ನೇರವಾಗಿ ನಡೆಯುವವರನ್ನು ಕಾಡತೊಡಗಿದಾಗ ದಾಸಕೂಟ ಕಳೆ ಗುಂದಿತು. ಮಠಗಳ ಮತ್ತು ಮಡಿವಂತರ ಹಿಡಿತ ಬಿಗಿಯಾಗಿ ದಾಸರಿಗೆ ಉಳಿಗಾಲ ವಿಲ್ಲದಾಗ, ದಾಸರೂ ಅಂಜಿ ಮಠದ ಧೋರಣೆಯನ್ನೇ ಹಿಡಿದರು. ಬರುಬರುತ್ತ ದಾಸಕೂಟದಲ್ಲಿ ಕೇವಲ ಮಾಧ್ವಪ್ರಕ್ರಿಯೆಗಳ ತೂರಾಟ, ಮಡಿವಂತಿಕೆಯ ಹಾರಾಟ ಇಷ್ಟೇ ಉಳಿದುಕೊಂಡದ್ದರಿಂದ ಸಮಾಜದಲ್ಲಿ ಅದಕ್ಕೆ ಒದಗಬಹುದಾಗಿದ್ದ ಸ್ಥಾನ ತಪ್ಪಿತು.

ವ್ಯಾಸರಾಯಸ್ವಾಮಿಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಶ್ರೀಪಾದರಾಜರು ರಚಿಸಿರುವ ಕೃತಿ ದಾಸಕೂಟದ ಮುಖ್ಯಪ್ರವೃತ್ತಿಯನ್ನು ಹೇಳುವುದಲ್ಲದೆ ಅದಕ್ಕೆ ವಿರುದ್ಧವಾದ ಧೋರಣೆಯನ್ನೂ ಬಣ್ಣಿಸುತ್ತದೆ. ಇವೆರಡರ ಸೆಣಸಾಟದಲ್ಲಿ ಕಡೆಗೆ ದಾಸಕೂಟದ ಮುಖ್ಯಪ್ರವೃತ್ತಿಯೇ ಸೋತಿತು ; ಮಡಿವಂತಿಕೆಯ ಬೂಟಕತನ ಗೆದ್ದಿತು. ಶ್ರೀಪಾದರಾಜರ ಕನಸು, ವ್ಯಾಸರಾಯಸ್ವಾಮಿಗಳ ಸಾಹಸ, ಪುರಂದರ ದಾಸರ ಶ್ರಮ ಎಲ್ಲವೂ ನಿಷ್ಫಲವಾದುವು. ಇದೊಂದು ದುರ್ದೈವ.

ನಾರಾಯಣಿ ಆದಿ

ಸುಮ್ಮನೆ ವೈಷ್ಣವನೆಂಬಿರಿ ಪರ
ಬೊಮ್ಮ ಸುಜ್ಞಾನವನರಿಯದ ಮನುಜನ ಪ

ಮುಖವ ತೊಳೆದು ನಾಮವನಿಟ್ಟೆನಲ್ಲದೆ
ಸುಖತೀರ್ಥ ಶಾಸ್ತ್ರವನೋದಿದೆನೆ ?
ಸುಖಕೆ ಶೃಂಗಾರಕ್ಕೆ ಮಾಲೆ ಹಾಕಿದೆನಲ್ಲದೆ
ಭಕುತಿ ರಸದಲ್ಲಿ ಮುಳುಗಿದೆನೇನಯ್ಯ ? ೧

ಊರು ಮಾತುಗಳಾಡಿ ದಣಿದೆನಲ್ಲದೆ
ನಾರಾಯಣ ಕೃಷ್ಣ ಶರಣೆಂದೆನೆ ?
ನಾರಿಯ ನುಡಿಕೇಳಿ ಮರುಳಾದೆನಲ್ಲದೆ
ಗುರುಹಿರಿಯರ ಮಾತ ಮನ್ನಿಸಿದೆನೇನಯ್ಯ ? ೨

ಜಗತು ಸತ್ಯವೆಂದು ಪಂಚಭೇದವ ತಿಳಿದು
ಮಿಗೆ ರಾಗದ್ವೇಷಂಗಳನು ವರ್ಜಿಸಿ
ಭಗವಂತನ ಲೀಲೆ ಶ್ರವಣ ಕಥೆಗಳಿಂದ
ನಿಗಮಗೋಚರನೆಂದು ತಿಳಿದೆನೇನಯ್ಯ ? ೪

ಗಂಗೆಯಲಿ ಮೈಮಣ್ಣ ತೊಳೆದೆನಲ್ಲದೆ ಭವ
ಹಿಂಗುವ ಸ್ನಾನ ಮಾಡಿದೆನೆ ?
ರಂಗವಿಠಲನ ನಿಜವಾದ ದಾಸರ
ಸಂಗ ಸುಖವೆಂದು ತಿಳಿದೆನಯ್ಯ ? ೫

4

ಪುರಂದರದಾಸರು ಬಾಳಿದ ಕಾಲದಲ್ಲಿ ಅವರನ್ನೊಳಗೊಂಡ ಸಮಾಜದ ಸ್ವರೂಪ ಹೇಗಿದ್ದಿತೆಂದು ಸಾಧ್ಯವಾದಷ್ಟು ಮಟ್ಟಿಗೆ ವಿಚಾರ ಮಾಡಬೇಕು. ಪುರಂದರದಾಸರ ಬದುಕು ವಿಜಯನಗರ ಸಾಮ್ರಾಜ್ಯದ ಪರ್ವಕಾಲಕ್ಕೆ ಸರಿಯಾಯಿತೆಂದು ಮೊದಲೇ ಹೇಳಿದೆನಷ್ಟೆ. ಪುರಂದರದಾಸರು ಹುಟ್ಟಿದ್ದು 1485 ಎಂದು ಬಗೆದರೆ ಅವರ ಬಾಲ್ಯ ಸಾಳುವ ನರಸಿಂಹ ವಿಜಯನಗರದ ಸಿಂಹಾಸನದಲ್ಲಿ ಕುಳಿತಿದ್ದ ಕಾಲ. ಸಾಳುವ ನರಸಿಂಹ ಪಟ್ಟಕ್ಕೆ ಬಂದುದು 1485ರಲ್ಲೇ. ಅವನು ಮುಂದೆ ಐದು ವರ್ಷಗಳನಂತರ ತೀರಿಕೊಳ್ಳುವ ವೇಳೆಗೆ ಹೆಚ್ಚೂ ಕಡಮೆ ದಕ್ಷಿಣದೇಶವನ್ನೆಲ್ಲ ಒಂದು ಛತ್ರದಡಿಯಲ್ಲಿ ಕೂಡಿಸಿದ್ದ. ಅವನು ವಶಪಡಿಸಿಕೊಂಡ ಊರುಗಳು ಈಗಿನ ತಮಿಳುನಾಡು (ಶ್ರೀರಂಗ, ಚೆಂಜಿ, ಆಮೂರು, ಕೊಂಗುಧಾರಾಪುರ, ಕುಂದಾಣಿ ಮುಂತಾದುವು), ಆಂಧ್ರಪ್ರದೇಶ (ನೆಲ್ಲೂರು, ಉದಯಾದ್ರಿ, ಪೆನುಗೊಂಡೆ, ಗಂಡಿಕೋಟ ಮುಂತಾದುವು), ಕರ್ನಾಟಕ (ನಾಗಮಂಗಲ, ಬೆಂಗಳೂರು, ಉಮ್ಮತ್ತೂರು, ಶ್ರೀರಂಗಪಟ್ಟಣ ಮೊದಲಾದುವು) ಈ ಪ್ರಾಂತ್ಯಗಳಲ್ಲಿ ಮುಖ್ಯವಾಗಿದ್ದವು. ಎಂದರೆ ದಕ್ಷಿಣದೇಶದ ಸಂಸ್ಕೃತಿಯ ಪ್ರಾಂತೀಯ ಪ್ರಕಾರಗಳು ಒಂದು ಆಡಳಿತದ ಪಡಿಯಚ್ಚಿನಲ್ಲಿ ಕೂಡಿಕೊಂಡುವು. ಈ ಪ್ರಕಾರಗಳಲ್ಲಿ ಸಮಾನಧರ್ಮಗಳು ಮೊದಲಿಂದಲೂ ಇದ್ದುವು ; ಭಾಷೆ, ಧರ್ಮ, ಆಚಾರ, ವ್ಯವಹಾರ ಮೊದಲಾದ ವಿವರಗಳು ಪ್ರಾಂತೀಯ ಗಡಿಗಳನ್ನು ದಾಟಿ ಹರಡಿಕೊಂಡಿದ್ದುವು. ಆದರೆ ಒಂದೇ ಆಡಳಿತದ ಚೌಕಟ್ಟು ಕಾಣಿಸಿಕೊಂಡುದು ಮುಖ್ಯವಾದ ಘಟ್ಟ. ಜನಜೀವನದಲ್ಲಿ ಒದಗುವ ಕೋಲಾಹಲ ಬಹುಮಟ್ಟಿಗೆ ಆಡಳಿತದ ಪ್ರಭಾವದಿಂದಲೇ ಒದಗುವುದು.

ಸಾಳುವ ನರಸಿಂಹ ಸಾಮಾನ್ಯ ಮಾಂಡಲಿಕನಾಗಿದ್ದವನು ತನ್ನ ಪ್ರತಿಭೆಯಿಂದ, ಸಾಹಸದಿಂದ ಸಾಮ್ರಾಜ್ಯದ ಚಕ್ರವರ್ತಿಯಾದವನು ; ಮುಂದೆ ಕೃಷ್ಣದೇವರಾಯನ ಕಾಲದಲ್ಲಿ ಮೈದುಂಬಿ ಮೂಡಿಬಂದ ಸುವರ್ಣಯುಗಕ್ಕೆ ನಾಂದಿಯನ್ನು ಹಾಡಿದವನು. ಹಿಂದೂಧರ್ಮದ ಸಂರಕ್ಷಣೆ ಅವನು ಕೈಗೊಂಡ ವ್ರತ. ಹಿಂದೂ ಸಮಾಜ ದುರವಸ್ಥೆಯಲ್ಲಿದ್ದುದು ಅವನಿಗೆ ಮನವರಿಕೆಯಾಗಿದ್ದಿತು. ಮಹಮ್ಮದೀಯರ ದಾಳಿಯಿಂದ ಸಮಾಜ ಕಂಗೆಟ್ಟಿದ್ದುದನ್ನು ಕಣ್ಣಾರೆ ಕಂಡು, ಸಮಾಜದ ಪುನರುಜ್ಜೀವನಕ್ಕೆ ರಾಜಕಾರಣದ ಬಲ ನೆರವಾಗಬೇಕೆಂಬ ಸಂಕಲ್ಪದಿಂದಲೇ ನರ್ಮದಾ ನದಿಯಿಂದ ಸಿಂಹಳದವರೆಗೆ ನಾಡಿನಲ್ಲೆಲ್ಲ ವರಾಹಧ್ವಜ (ವಿಜಯನಗರದ ಲಾಂಛನ) ಮೆರೆಯುವಂತೆ ಮಾಡಿದ. ಆದರೆ ಅವನ ಕಡೆಗಾಲದಲ್ಲಿ ನೆಮ್ಮದಿಯನ್ನು ಕಾಣದೆ ಕೊರಗಿ ಪ್ರಾಣ ಬಿಡಬೇಕಾಯಿತು. ಅವನ ಮರಣಶಾಸನದಲ್ಲಿ ಕೊಂಡವೀಡು, ಉದಯಗಿರಿ, ರಾಯಚೂರು ಈ ಮೂರು ದುರ್ಗಗಳು ವಶವಾಗದೆ ಸಾಮ್ರಾಜ್ಯ ಸುಭದ್ರವಾಗಿರದೆಂದೂ, ಮಹಮ್ಮದೀಯ ದಾಳಿಗೆ ಅಡ್ಡಿಯಿರದೆಂದೂ ಸೂಚಿಸಿ, ತನ್ನ ನಂತರ ದೊರೆ

ಗಳಾಗುವವರು ಈ ದುರ್ಗಗಳನ್ನು ವಶಪಡಿಸಿಕೊಳ್ಳಬೇಕೆಂಬ ಕಳಕಳಿಯನ್ನು ಕಾಣು ತ್ತೇವೆ. ಕೊಂಡವೀಡು ಮತ್ತು ಉದಯಗಿರಿ ದುರ್ಗಗಳನ್ನು ಕಳಿಂಗದ ಪುರುಷೋ ತ್ತಮ ಗಜಪತಿರಾಜನು ವಶಪಡಿಸಿಕೊಂಡಿದ್ದ ; ರಾಯಚೂರು ದುರ್ಗ ಬಹಮನೀ ಸುಲ್ತಾನರ ವಶದಲ್ಲಿದ್ದಿತು.

ಬೇರೆಬೇರೆ ಭಾಷೆಗಳಲ್ಲಿ, ಜಾತಿ ಮತಗಳಲ್ಲಿ, ದೇಶಾಚಾರ ಕುಲಾಚಾರಗಳಲ್ಲಿ ಹರಿದು ಹಂಚಿಹೋಗಿದ್ದ ಹಿಂದೂಸಮಾಜವು ಅಭ್ಯುದಯವನ್ನು ಕಾಣಬೇಕಾದರೆ ಅವೆಲ್ಲವನ್ನೂ ಒಳಗೊಂಡ ಒಂದು ಆಡಳಿತವೇ ಉಪಾಯವೆಂದು ಕಂಡುಕೊಂಡವನು ಸಾಳುವ ನರಸಿಂಹ. ತನ್ನ ಬದುಕಿನುದ್ದಕ್ಕೂ ಇದಕ್ಕಾಗಿಯೆ ಶ್ರಮಿಸಿದ. ಆದರೆ ಅವನು ತೀರಿಕೊಂಡಮೇಲೆ ಅವನ ರಾಯಸಾಮಂತರಾಗಿದ್ದ ಶ್ರೀರಂಗಪಟ್ಟಣದ ಹೊಯ್ಸಳೇಂದ್ರ, ಉಮ್ಮತ್ತೂರು ನಾಯಕ, ಚೋಳದೇಶದ ಅರಸು, ಪಾಂಡ್ಯ ನಾಯಕ, ಮಧುರಾವಲ್ಲಭ ಮಾನಭೂಷಣ ಇವರು ಸ್ವತಂತ್ರರಾಗಲು ಯತ್ನಿಸಿದರು ; ವಿಜಯನಗರ ಸಾಮ್ರಾಜ್ಯದ ಬಲವನ್ನು ಮುರಿಯಲು ಸಿದ್ಧರಾದರು. ಕಳಿಂಗ ದೇಶದ ಪ್ರತಾಪರುದ್ರ ಗಜಪತಿಯೂ ವಿಜಯನಗರ ಸಾಮ್ರಾಜ್ಯವನ್ನು ದಕ್ಕಿಸಿ ಕೊಳ್ಳಲು ಹೊಂಚುಹಾಕುತ್ತಿದ್ದ. ಬಹಮನೀ ಸುಲ್ತಾನನ ಸರದಾರನಾಗಿದ್ದ ಯುಸುಫ್ ಅದಿಲ್ ಖಾನ್ ಬಿಜಾಪುರ ಸಂಸ್ಥಾನದಲ್ಲಿ ಸ್ವತಂತ್ರಸುಲ್ತಾನನಾಗಿ ವಿಜಯನಗರದ ಬಲವನ್ನು ಗಾಳಿಗೆ ತೂರಲು ಹವಣಿಸುತ್ತಿದ್ದ. ಈ ಪರಿಸ್ಥಿತಿಯಲ್ಲಿ ದಕ್ಷಿಣದೇಶದ ಸಮಾಜ ಗೊಂದಲಕ್ಕೀಡಾದುದು ಸಹಜವೇ.

ಸಾಳುವ ನರಸಿಂಹ ಕಾಲವಾದಮೇಲೆ ಅವನ ಮರಣಶಾಸನದಂತೆ ಅವನ ಸರ್ವ ಸೇನಾಪತಿಯಾಗಿದ್ದ ತುಳುವ ನರಸನಾಯಕ (ಕೃಷ್ಣದೇವರಾಯನ ತಂದೆ) ರಾಜ್ಯದ ವ್ಯವಹಾರವನ್ನು ತನ್ನ ವಶಕ್ಕೆ ತೆಗೆದುಕೊಂಡ; ಹೆಸರಿಗೆ ಸಾಳುವ ನರಸಿಂಹನ ಮಕ್ಕಳು ರಾಜರಾಗಿದ್ದರು. ಸಮರ್ಥನಾದ ಇವನು ಆಡಳಿತದ ಒಕ್ಕೂಟವನ್ನು ಹಾಗೂ ಹೀಗೂ ಉಳಿಸಿಕೊಂಡು ಬಂದ. ಇವನು 1503ರಲ್ಲಿ ತೀರಿಕೊಂಡ ನಂತರ ಪಟ್ಟಕ್ಕೆ ಬಂದ ಇಮ್ಮಡಿ ನರಸಿಂಹ ಮತ್ತು ವೀರನರಸಿಂಹರಾಯ ಇವರ ಕಾಲದಲ್ಲಿ ಪರಿಸ್ಥಿತಿ ಹದಗೆಟ್ಟಿತು. ಉಮ್ಮತ್ತೂರು, ಶ್ರೀರಂಗಪಟ್ಟಣದ ದೊರೆಗಳು ವಿಜಯನಗರ ಸಾಮ್ರಾಜ್ಯಕ್ಕೆ ತಾವೇ ವಾರಸುದಾರರೆಂದು ಹೇಳಿಕೊಳ್ಳತೊಡಗಿದರು. ಆದೋನಿಯ ದುರ್ಗಾಧೀಶ ಕಾಚಪ್ಪ ಒಡೆಯನು ಬಿಜಾಪುರದ ಯುಸೂಫ್ ಅದಿಲ್ ಖಾನನೊಂದಿಗೆ ಸ್ನೇಹ ಬೆಳೆಸಿ ವಿಜಯನಗರವನ್ನು ನಿರ್ನಾಮ ಮಾಡುವ ಹಂಚಿಕೆಯಲ್ಲಿದ್ದನು. ಅಧಿಕಾರಲಾಲಸೆಯಿರುವಲ್ಲಿ ಸಮಾಜದ ಹಿತಚಿಂತನೆಗೆ ಅವಕಾಶವಿಲ್ಲ. ಈ ಒಡೆಯನ ಚಿತಾವಣೆಯಿಂದ ಖಾನನು ವಿಜಯನಗರವನ್ನು ದಾಳಿಮಾಡಲು ಸೇನೆಯನ್ನು ತಂದುದೂ ಉಂಟು. ವೀರನರಸಿಂಹನು ಆರವೀಟಿ ರಾಮರಾಜನ ನಾಯಕತ್ವದಲ್ಲಿ ಕಳುಹಿಸಿದ ಸೇನೆ ಖಾನನ ಸೇನೆಯನ್ನು ಹೊಡೆದೋಡಿಸಿತೆನ್ನಿ. ಆದರೆ ಉಮ್ಮ

ತ್ತೂರು, ಶ್ರೀರಂಗಪಟ್ಟಣದ ದೊರೆಗಳನ್ನು ದಾರಿಗೆ ತರಲು ಹೋದ ವೀರನರಸಿಂಹನ ಸೇನೆ ಅವರಿಂದ ಸೋತು ಹಿಂದಿರುಗಿತು.

ಸಮಾಜದಲ್ಲಿ ಎಷ್ಟು ಅನಿಶ್ಚಿತಪರಿಸ್ಥಿತಿ ಇದ್ದಿತೆನ್ನುವುದನ್ನು ಊಹಿಸಿಕೊಳ್ಳಬಹುದು. ವೀರನರಸಿಂಹನ ಆಳ್ವಿಕೆ ನಡೆಯುತ್ತಿರುವಾಗ ಪುರಂದರದಾಸರು ಇಪ್ಪತ್ತುಮೂರು ಇಪ್ಪತ್ತುನಾಲ್ಕು ವರ್ಷಗಳ ತರುಣ ; ಇನ್ನೂ ಪುರಂದರದಾಸರಾಗಿರಲಿಲ್ಲ. ಹರಿದಾಸದೀಕ್ಷೆ ಇನ್ನೂ ತುಂಬ ದೂರದಲ್ಲಿದ್ದಿತೇನೋ ; ಸಾಧನೆಯ ದಾರಿಯನ್ನು ಇನ್ನೂ ಕಂಡುಕೊಂಡಿರಲಿಲ್ಲ. ಜನಜೀವನದಲ್ಲಿ ಇದ್ದ ಆತಂಕ ಅವರನ್ನು ಕಾಡದೆ ಬಿಟ್ಟಿರಲಾರದು. ಮುಂದೆ ಅವರು ತಳೆದ ಸಾಮಾಜಿಕ ನಿಲುವು ಈ ಪರಿಸ್ಥಿತಿಯ ಪ್ರಭಾವವನ್ನು ಅಳವಡಿಸಿಕೊಳ್ಳದಿರುವುದು ಸಾಧ್ಯವಿಲ್ಲ. ಪುರಂದರದಾಸರು ನಡುವಯಸ್ಸಿನಲ್ಲಿರುವಾಗ ಪರಿಸ್ಥಿತಿ ಮತ್ತೆ ಉತ್ತಮಗೊಂಡಿತೆನ್ನಿ. ಕೃಷ್ಣದೇವರಾಯನು 1509ರಲ್ಲಿ ಪಟ್ಟಕ್ಕೆ ಬಂದು 1530ರಲ್ಲಿ ತೀರಿಕೊಳ್ಳುವವರೆಗೂ ಸುವರ್ಣಯುಗವೇ. ಸಾಮ್ರಾಜ್ಯ ಸುಭದ್ರವಾದುದು ಮಾತ್ರವಲ್ಲ, ಪ್ರಬಲವಾಯಿತು. ಕೃಷ್ಣದೇವರಾಯನನ್ನು ಸೆಣಸಬಲ್ಲ ರಾಜ ದಕ್ಷಿಣ ದೇಶದಲ್ಲೆಲ್ಲ ಒಬ್ಬನಿರಲಿಲ್ಲ ; ಮತ್ತೆ ಅವನು ಧರ್ಮಶ್ರದ್ಧೆಯುಳ್ಳವನು, ಕಲಾಭಿಮಾನಿ, ರಸಿಕ, ಪಂಡಿತಪೋಷಕ, ಸ್ವತಃ ಕವಿ. ಸಮಾಜದಲ್ಲಿ ಸಂಸ್ಕೃತಿಯ ಪಾತ್ರ ವಿಶಿಷ್ಟವಾಯಿತು. ಧರ್ಮಶ್ರದ್ಧಾಳುವಾದರೂ ಉದಾರಿ. ಬಹಮನೀ ಸುಲ್ತಾನನಾದ ಮಹಮದ್ ಶಾ ಆಸ್ಥಾನದ ಒಳಸಂಚಿನಿಂದ ಬೀದರಿನಲ್ಲಿ ಸೆರೆಯಲ್ಲಿದ್ದ ; ಕೃಷ್ಣದೇವರಾಯನು ಬೀದರನ್ನು ಮುತ್ತಿ, ಮಹಮದ್ ಶಾನನ್ನು ಸೆರೆಯಿಂದ ಬಿಡಿಸಿ ಅವನಿಗೆ ಮತ್ತೆ ಪಟ್ಟಗಟ್ಟಿ 'ಯವನರಾಜ್ಯಸ್ಥಾಪನಾಚಾರ್ಯ' ನೆಂಬ ಬಿರುದನ್ನು ಪಡೆದುಕೊಂಡ. ಹಿಂದೂ ಸಮಾಜ ಎಲ್ಲ ವಿಧದಲ್ಲೂ ಗರಿಕೆದರಿಕೊಂಡು ಮೆರೆದ ಕಾಲ ಅದು.

ಕೃಷ್ಣದೇವರಾಯನು ತೀರಿಕೊಳ್ಳುವ ಸಮಯದಲ್ಲಿ ಪುರಂದರದಾಸರಿಗೆ ನಲವತ್ತೈದು ವರ್ಷ ಪ್ರಾಯ. ಆ ವೇಳೆಗಾಗಲೇ ಅವರು ಹರಿದಾಸರಾಗಿದ್ದರು. ವ್ಯಾಸರಾಯಸ್ವಾಮಿಗಳು ಅರಸನಿಂದ ಸನ್ಮಾನಿತರಾಗಿ ರಾಜಧಾನಿಯಲ್ಲೇ (ಹಂಪಿಯಲ್ಲೇ) ಇರುತ್ತಿದ್ದರು. ಅರಸನ ದೀಕ್ಷೆ ಶ್ರೀವೈಷ್ಣವಸಂಪ್ರದಾಯದ ತಾತಾಚಾರ್ಯರಲ್ಲಿ ; ಅರಸನ ವೈಯಕ್ತಿಕ ನಿಷ್ಠೆ ಶ್ರೀವೈಷ್ಣವಧರ್ಮದಲ್ಲೇ. ತನ್ನ 'ಆಮುಕ್ತ ಮಾಲ್ಯದ' ಕೃತಿಯ ವಸ್ತು ಈ ಸಂಪ್ರದಾಯದ ಹಿರಿಯರಾದ ಪೆರಿಯಾಳ್ವಾರರು ; ಗ್ರಂಥಾರಂಭದಲ್ಲಿ ಶ್ರೀವೈಷ್ಣವ ಸಂಪ್ರದಾಯದಂತೆಯೇ ಅನಂತ, ಗರುಡ, ವಿಷ್ವಕ್ಸೇನರ ಸ್ತುತಿ, ಹನ್ನೆರಡು ಮಂದಿ ಆಳ್ವಾರರ ಸ್ತುತಿಗಳು ಬರುತ್ತವೆ. ದೊರೆ ಇತರ ಸಂಪ್ರದಾಯಗಳ ಹಿರಿಯರನ್ನೂ ಗೌರವದಿಂದ ಕಾಣುತ್ತಿದ್ದ. ನಿದರ್ಶನಕ್ಕೆ ಮಾಧ್ವಸಂಪ್ರದಾಯದ ವ್ಯಾಸರಾಯಸ್ವಾಮಿಗಳ ಮೇಲೆ ಅವನಿಗೆ ಎಲ್ಲಿಲ್ಲದ ಭಕ್ತಿ. ಅವರನ್ನು ಮೆಚ್ಚಿಕೊಂಡು ಕೊಂಡಾಡಿರುವ ಶಾಸನಗಳೇ ಇವೆ. ಹಾಗೆಯೇ ಶೈವ ಸಂಪ್ರದಾಯಕ್ಕೂ ಅವನು ನಡೆದುಕೊಂಡದ್ದುಂಟು. ಅರಸನ ಪ್ರವೃತ್ತಿ ಹೀಗಿದ್ದಿ

ತೆಂದರೆ ಅದರ ಪ್ರಭಾವ ಜನರ ಮೇಲೆ ಆಗದಿರುವುದು ಸಾಧ್ಯವಿಲ್ಲ. ಜನರಲ್ಲೂ ಧರ್ಮವನ್ನು ಕುರಿತಂತೆ ಉದಾರವಾದ ಮನೋವೃತ್ತಿ ಬೆಳೆಯತೊಡಗಿತು.

ಪುರಂದರದಾಸರೇ ಇದಕ್ಕೆ ಸಾಕ್ಷಿ. ಅವರು ತಮ್ಮ ಸ್ವಂತನಿಷ್ಠೆಯಲ್ಲಿ ಮಾಧ್ವರಾದರೂ ಶಿವದರುಶನ ತಮಗಾಯಿತು ಎಂದು ಹಿಗ್ಗಿದರು, ಜಂಗಮರು ತಾವೆಂದು ವೀರಭದ್ರಪ್ರಿಯಭಕ್ತರು ತಾವೆಂದು ಬಣ್ಣಿಸಿಕೊಂಡರು; ಸದ್ಗುರುವು ತನ್ನನ್ನು ಫಕೀರನನ್ನಾಗಿ ಮಾಡಿದುದನ್ನು ನೆನೆಸಿಕೊಂಡರು ; ತುರುಕರು ಕರೆದರೆ ಉಣಬಹುದೆಂದು ಮಾರ್ಮಿಕವಾಗಿ ಸೂಚಿಸಿದರು ; ಧ್ರುವಗೊಲಿದು ಪದವಿತ್ತವನನ್ನು ಕರಿಮೊರೆ ಕೇಳಿದ ಶ್ರೀಶನನ್ನು ಹುಸ್ಸೇನ್ ಎಂದು ಕರೆದು 'ಅರಿತು ಬಂದೆನಲ್ಲಿ, ಪುರಂದರವಿಠಲನಲ್ಲದಿಲ್ಲಲ್ಲಾ' ಎಂದು ಹೇಳಿದರು ; 'ಅಲ್ಲಾ ಖುದಾ ಎಂದು ಆತ್ಮದಲಿ ತಿಳಿಯದೆ ಮುಲ್ಲ ಶಾಸ್ತ್ರದ ನೆಲೆಯ ತಾನರಿಯದೆ' ಎಂದು ಮರುಗಿದರು ; 'ಅರಿಯದೆ ಬಂದೆವು ಕಿಮ್ಸನ್, ಪರಿಹರಿಸಯ್ಯ ಬಮ್ಸನ್, ಪರಿಯಿಂದಲೆ ಹರಿ ಹರಿ ಎಂದರೆ ದುರಿತದ ಭಯ ಒಂದಿಲ್ಲಲ್ಲಾ' ಎಂದು ಮುಂತಾಗಿ ಹಾಡಿದರು. ಈ ಬಗೆಯ ಕೃತಿಗಳು ವಿನೋದಕ್ಕಾಗಿ ಮಾಡಿದವಲ್ಲ. ದೇವರು ಒಬ್ಬನೇ, ಹೆಸರು ಯಾವುದಾದರಿರಲಿ, ಅವನ ಭಕ್ತರೆಲ್ಲ ಮಾನವಜನ್ಮವೆತ್ತಿದವರೇ ಎಂಬ ನಂಬಿಕೆ ಅವರ ಒಡಲ ಆಳದಲ್ಲಿ ಬೇರೂರಿದ್ದುದು ಈ ಕೃತಿಗಳನ್ನು ಹೊರಹೊಮ್ಮಿಸಿತು. ಈ ದೃಷ್ಟಿಯನ್ನು ಪುರಂದರದಾಸರಿಗೆ ಪೂರ್ವದಲ್ಲಾಗಲಿ ಅವರನಂತರ ಬಂದ ಹರಿದಾಸರಲ್ಲಾಗಲಿ ಕಾಣಲಾರೆವು.

ಕೃಷ್ಣದೇವರಾಯನು ತೀರಿಕೊಂಡಮೇಲೆ ಸಮಾಜದ ನೆಮ್ಮದಿ ಮತ್ತೆ ಬಿರುಗಾಳಿಗೊಡ್ಡಿದ ದೀವಿಗೆಯಂತಾಯಿತು. 'ನೆಚ್ಚದಿರಿ ಈ ಭಾಗ್ಯ ಸ್ಥಿರವಲ್ಲ' ಎಂದು ದಾಸರು ಜನರನ್ನು ಎಚ್ಚರಿಸಿದರು. ತೀರಿಕೊಳ್ಳುವ ಮುಂಚೆ ಕೃಷ್ಣದೇವರಾಯನು ಪ್ರಧಾನಿ ಚೆಲ್ಲಪ್ಪನನ್ನು ಚಂದ್ರಗಿರಿಗೆ ಕಳುಹಿಸಿ ಅಲ್ಲಿಂದ ಅಚ್ಯುತದೇವರಾಯನನ್ನು ಕರೆತರಿಸಿ ಪಟ್ಟಕಟ್ಟುವ ಅಪೇಕ್ಷೆಯನ್ನು ವ್ಯಕ್ತಪಡಿಸಿದನು ; ಮರಣೋನ್ಮುಖನಾದ ಅರಸನು ಸರ್ವಾಧಿಕಾರವನ್ನು ತನಗೇ ವಹಿಸುವನೆಂದು ಬಗೆದಿದ್ದ ಅವನ ಅಳಿಯ ಅರವೀಡು (ಆರವೇಟಿ) ರಾಮರಾಜನು ಎದುರುಬಿದ್ದನು. ಕಡೆಗೆ ಅಚ್ಯುತದೇವರಾಯನಿಗೇ ಪಟ್ಟವಾದರೂ ರಾಮರಾಜನ ಕಿರುಕುಳ ತಪ್ಪಲಿಲ್ಲ. ಅಚ್ಯುತದೇವರಾಯನು ಆಳಿದ ಹನ್ನೆರಡು ವರ್ಷಗಳೂ (1530–1542) ತೊಂದರೆಯ ಕಾಲವೇ ; ಅಲ್ಲಲ್ಲಿ ದಂಗೆಗಳು, ಆಗಾಗ ದಾಳಿಗಳು, ಮತ್ತೆ ಮತ್ತೆ ಯುದ್ಧದ ಪ್ರಸಕ್ತಿ ; ಅರಮನೆಯಲ್ಲಿ ಅಂತಃಕಲಹ, ಆಡಳಿತದಲ್ಲಿ ಅವ್ಯವಸ್ಥೆ. ಹೀಗಾಗಿ ಜನರಿಗೆ ಸುಖಜೀವನವೆಂಬುದು ಕನಸಾಯಿತು. ಈ ಸಮಯದಲ್ಲಿ ತಮ್ಮ ಕರ್ತವ್ಯವಿದೆಯೆಂದು ಭಾವಿಸಿ ಪುರಂದರದಾಸರು ವ್ಯಕ್ತಿಜೀವನದಲ್ಲಿ ಅಧ್ಯಾತ್ಮದಿಂದ ನೆಮ್ಮದಿಯನ್ನು ಪಡೆದುಕೊಳ್ಳುವ ಬಗೆಯನ್ನು ಜನರಿಗೆ ತಿಳಿಯಪಡಿಸಿದರು. ಅವರ ಹಲವಾರು ರಚನೆಗಳಲ್ಲಿ ಅಂದಿನ ಸಮಾಜದ ದುಗುಡವನ್ನು ಕಾಣಬಹುದು.

ಪುರಂದರದಾಸರು ಐವತ್ತಾರು – ಐವತ್ತೇಳು ವರ್ಷದವರಿದ್ದಾಗ ನಾಡಿನಲ್ಲಿ ಮತ್ತೊಂದು ಆತಂಕಪರಿಸ್ಥಿತಿಯೊದಗಿತು. ಅಚ್ಯುತರಾಯನು 1542 ರಲ್ಲಿ ತೀರಿ ಕೊಳ್ಳುವಾಗ ಅವನ ಮಗ ವೆಂಕಟಪತಿದೇವರಾಯನು ಇನ್ನೂ ಸಣ್ಣ ಹುಡುಗ. ಅವನ ಸೋದರಮಾವ ಸಲಕ ಚಿನ್ನತಿರುಮಲರಾಜ ಅವನ ಪರವಾಗಿ ಆಡಳಿತವನ್ನು ವಹಿಸಿ ಕೊಂಡ. ಇವನು ದುರುಳ, ದ್ರೋಹಿ ; ಅಧಿಕಾರದ ಆಸೆ ಹೆಚ್ಚಾಗಿ, ಹುಡುಗ ರಾಜ ನನ್ನೂ ತೀರಿಸಿ ತಾನೇ ಪಟ್ಟವೇರುವ ಸನ್ನಾಹ ಮಾಡತೊಡಗಿದ. ಇದರ ಸುಳಿವನ್ನು ತಿಳಿದ ವೆಂಕಟಪತಿದೇವರಾಯನ ತಾಯಿ ವರದಾದೇವಿ ಸಲಕ ಚಿನ್ನ ತಿರುಮಲರಾಜನ ಬಲವನ್ನು ಮುರಿಯಲು ಬಿಜಾಪುರ ಸುಲ್ತಾನ ಇಬ್ರಾಹಿಂ ಆದಿಲ್ ಶಾಹುವಿನ ನೆರವನ್ನು ಕೋರಿದಳು. ಈ ಮುಸಲ್ಮಾನ ದೊರೆಯು ವಿಜಯನಗರಕ್ಕೆ ದಂಡೆತ್ತಿಬಂದನು. ಜನರಲ್ಲಿ ಮತ್ತೆ ಹಾಹಾಕಾರ, ಜೀವನದಲ್ಲಿ ಗೊಂದಲ, ಆಡಳಿತದಲ್ಲಿ ಆತಂಕ. ಚಿನ್ನ ತಿರುಮಲರಾಜನು ಈ ಪರಿಸ್ಥಿತಿಯಲ್ಲಿ ರಾಜ್ಯಸೂತ್ರಗಳನ್ನು ತಾನೇ ನೇರವಾಗಿ ವಹಿಸಿಕೊಂಡು ಬಿಜಾಪುರ ಸುಲ್ತಾನನನ್ನು ಎದುರಿಸಿ ಹೊಡೆದೋಡಿಸಿದ. ಆದರೆ ಅಲ್ಲಿಂದ ಮುಂದೆ ಈ ಸಲಕ ರಾಜನ ದೌರ್ಜನ್ಯಕಾಂಡ ಮೊದಲಾಯಿತು. ಜನರನ್ನು ಬಗೆಬಗೆಯಾಗಿ ಕಾಡತೊಡಗಿದ, ರಾಜ ವೆಂಕಟಪತಿದೇವನನ್ನು ಕೊಲ್ಲಿಸಿದ ; ಅವನ ಪರವಾಗಿ ಇದ್ದವರೆಂದು ತಾನು ತಿಳಿದವರನ್ನೆಲ್ಲ ದೇಶದಿಂದ ಓಡಿಸಿದ.

ಪುರಂದರದಾಸರು "ಸತ್ಯವಂತರಿಗಿದು ಕಾಲವಲ್ಲ", "ದುಷ್ಟ ಜನರಿಗೆ ಸುಭಿಕ್ಷಕಾಲ" ಎಂದು ಕೊರಗಿದ್ದು, "ಒತ್ತಿಹಿಡಿದ ಕಂಬ ವ್ಯರ್ಥವಾಯಿತು, ಬಾವಿ ತೋಡಲು ಬೇತಾಳ ಹೊರಟಿತು, ಅರ್ಥಿಯ ಸಂಸಾರ ಅಡವಿಪಾಲಾಯಿತು" ಎಂದು ಮುಂತಾಗಿ ದಾಸರು ಪರಿತಪಿಸಿದ್ದು (ನೋಡಿ ಮೊದಲ ಸಂಪುಟ ಪದ 17, ಪುಟ 105) ಇದೇ ಕಾಲದಲ್ಲಿದ್ದೀತು. ಬಿಜಾಪುರ ಸುಲ್ತಾನನು ರಾಜಧಾನಿಯ ಮೇಲೆ ದಾಳಿಮಾಡಿದಾಗ ಸಲಕರಾಜನಿಗೆ ಸರ್ವಾಧಿಕಾರವನ್ನು ಕೊಟ್ಟವರು ಜನರೇ. ಅವನು ಬಲಿಷ್ಠನಾಗಿ ಪ್ರಜೆ ಗಳ ಹಿತವನ್ನು ಸಾಧಿಸಿಯಾನೆಂದು ಜನ ಭರವಸೆಯನ್ನು ತಾಳಿದ್ದರು. ಆದರೆ "ಭಾವಿಸಿದ್ದೆಲ್ಲ ಭೂಮಿಪಾಲಾಯಿತು, ಸರಸ ಸಂಸಾರದ ಸವಿ ಹಾರಿಹೋಯಿತು". "ಆರೇನು ಮಾಡುವರು ? ಆರಿಂದಲೇನಹುದು ?" "ಪ್ರಾಚೀನ ಕರ್ಮವು ಬಿಡಲರಿ ಯದು, ಯೋಚನೆಯಮಾಡಿ ನೀ ಬಳಲಬೇಡ", "ಯಾರಿಗೆ ಯಾರುಂಟು ಎರವಿನ ಸಂಸಾರ", "ಕಲಿಯುಗದ ಮಹಿಮೆಯು ಕಂಡುಬಂತೀಗ", "ಧರ್ಮಕ್ಕೆ ಕೈಬಾರದೀ ಕಾಲ" ಎಂಬ ನಿರಾಶಾಭಾವನೆಯೂ ಜನತಲ್ಲಿ ಮೂಡಿತು. "ಆರೇನು ಮಾಡುವರು ಅವನಿಯೊಳಗೆ ? ಪೂರ್ವಜನ್ಮದ ಕರ್ಮ ಹಣೆಯಲಿ ಬರೆದುದಕೆ ?" ಎಂದು ಮೊದಲಾಗುವ ಪದದಲ್ಲಿ ಜನರ ಬವಣೆಯ ವರ್ಣನೆಯಿದೆ. ಒಂದು ವರ್ಷ (1542) ಅಲ್ಲಿನ ಜನರ ಕಷ್ಟ ಹೇಳತೀರದು.

ಕಡೆಗೆ ಜನರು ಬೇಸತ್ತು ಅಳಿಯ ರಾಮರಾಜನನ್ನು (ಕೃಷ್ಣದೇವರಾಯನ ಅಳಿಯನಾಗಿ ಅವನ ಹೆಸರೇ ಅಳಿಯ ರಾಮರಾಜನೆಂದಾಯಿತು) ಪ್ರೋತ್ಸಾಹಿಸಿ

ಅವನು ಸಲಕ ಚಿನ್ನತಿರುಮಲರಾಯನನ್ನು ಎದುರಿಸಿ, ಅವನೊಂದಿಗೆ ಕಾದಾಡಿ ಕೊಲ್ಲುವಂತೆ ಮಾಡಿದರು. ಮರುವರ್ಷ ಅಳಿಯ ರಾಮರಾಜನು ಸದಾಶಿವರಾಯ ಮಹಾರಾಯನನ್ನು ಸಿಂಹಾಸನದ ಮೇಲೆ ಕೂರಿಸಿ ತಾನು ಅವನ ಪರವಾಗಿ ಆಡಳಿತ ವನ್ನು ಕೈಗೊಂಡು ಸರ್ವಾಧಿಕಾರಿಯಾದ. ರಾಮರಾಜನು ಸಮರಶೂರನಾದರೂ ಸುಸಂಸ್ಕೃತ, ವಿದ್ವತ್‌ಪಕ್ಷಪಾತಿ, ಕಲಾಪ್ರೇಮಿ, ಶ್ರದ್ಧಾಳು. ಅವನ ಆಡಳಿತದಲ್ಲಿ ಜನರು ಮತ್ತೆ ನೆಮ್ಮದಿಯಿಂದ ಉಸಿರು ಬಿಡುವಂತಾಯಿತು. ಆಗಲೂ ದಾಸರು ತಮ್ಮ ಕರ್ತವ್ಯವನ್ನು ಮನಗಂಡು "ಯಾರು ಒಲಿದರೇನು, ನಮಗಿನ್ನಾರು ಮುನಿದ ರೇನು ?", "ಅಂದಿಗಲ್ಲದೆ ಮನದ ಪರಿತಾಪವಡಗದೊ", "ಆವನಾವನು ಕಾಯ್ವ ಅವನಿಯೊಳಗೆ, ಜೀವರಿಗೆ ಧಾತ ಶ್ರೀಹರಿಯಲ್ಲವೆ ?", "ಏನು ಮಾಡಿದರೇನು ಭಯ ಹಿಂಗದು, ದಾನವಾಂತಕ ನಿನ್ನ ದಯವಾಗೊತನಕ", "ಯಾರಿದ್ದರೇನಯ್ಯ ನೀನಲ್ಲದೆನಗಿಲ್ಲ", "ಕೊಡುವ ಕರ್ತು ಬೇರೆ ಇರಲು, ಬಿಡು ಬಿಡು ಚಿಂತೆಯನು", "ಬಲವು ಬಲವೇ ನಿನ್ನ ಬಲವಲ್ಲದೆ ಮಿಕ್ಕ ಬಲಗಳುಂಟೆ ?", "ಅಂಜಿಕಿನ್ಯಾತಕಯ್ಯ ಸಜ್ಜನರಿಗೆ, ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ ?", "ಯಾಕೆ ಕಕುಲಾತಿ ಪಡುವೆ ಎಲೆ ಮರುಳೆ, ಲೋಕ ಮೂರನು ಆಳ್ವ ಶ್ರೀನಿವಾಸನು ನಮ್ಮ ಸಾಕಲಾರದೆ ಬಿಡುವನೆ ?", "ಬಂದದ್ದೆಲ್ಲ ಬರಲಿ ಗೋವಿಂದನ ದಯವೊಂದಿರಲಿ", "ಕಾವ ದೇವ ನೀನಲ್ಲದೆ ಜಗಕೆ ಇನ್ನಾವ ದೇವರುಳ್ಳರೈ ?", "ನೆಚ್ಚದಿರೀ ಭಾಗ್ಯ ಯಾರಿಗೂ ಸ್ಥಿರ ವಲ್ಲ, ನಿಶ್ಚಯವೆಚ್ಚರಿಕೆ !" ಎಂದು ಜನರನ್ನು ಎಚ್ಚರಿಸುತ್ತ ಬಂದರು.

ಇಂಥ ಪದಗಳಲ್ಲಿ ದಾಸರ ದೃಷ್ಟಿ ಆಧ್ಯಾತ್ಮಿಕವಾದುದೆಂದು ಹೇಳಿದರೂ ಜನರ ಒಲವುಗಳನ್ನು ತಿದ್ದುವುದು ಅವುಗಳ ಉದ್ದೇಶ. ಜನರು ಸಮಾಜದಲ್ಲಿರುತ್ತ ಆಡಳಿತದ ಕಡೆ ಕಣ್ಣುಹರಿಸಿ, ತಮ್ಮ ಬದುಕಿನ ಸುಖದುಃಖಗಳಿಗೆ, ಕಷ್ಟನಿಷ್ಠುರಗಳಿಗೆ, ಭಾಗ್ಯ ಬಡತನಗಳಿಗೆ ಆಡಳಿತವೇ ಹೊಣೆಯೆಂದು ಬಗೆಯುವುದು ಸಹಜ. ಅಧಿಕಾರದಲ್ಲಿರು ವವರು ಒಲಿದರೆ ತಮ್ಮ ಬಾಳು ಹಸನಾದೀತು ಎಂದು ಬಗೆಯುವರು ; ಸಂಪತ್ತು ಕೈಗೂಡಿದರೆ ಸುಖ ಸಿದ್ಧವಾಯಿತೆಂದು ಬಗೆಯುವರು ; ಪ್ರಾಪಂಚಿಕ ಅಭ್ಯುದಯ ವನ್ನು ಸಾಧಿಸಿಕೊಳ್ಳಲು ನೀತಿಯನ್ನು ಬಿಡಬೇಕಾಗಿ ಬಂದರೂ ಸರಿಯೇ ಎಂದು ಸಮಾ ಧಾನ ತಂದುಕೊಳ್ಳುವರು ; ಅರಸನ ದಯೆಯಾದರೆ ತಮ್ಮ ಕಾರ್ಪಣ್ಯ ಹರಿಯಿತು ಎಂದು ಬಾಯಿಬಿಡುವರು. ಈ ಮನೋವೃತ್ತಿಗಳಿಂದ ನೆಮ್ಮದಿಯು ಬರಲಾರದೆಂದು ದಾಸರ ಬೋಧೆ. ಇಂಥ ಆಸೆಗಳನ್ನಿರಿಸಿಕೊಂಡ ಜನ ಬರಿದೆ ಬವಣೆಪಡುವುದನ್ನು ಅವರು ಕಂಡಿದ್ದರು ; 'ದುಗ್ಗಾಣಿ ಎಂಬುದು ದುರ್ಜನಸಂಗ'ವೆಂಬುದನ್ನು ಅವರು ಎಲ್ಲೆಲ್ಲೂ ಕಾಣುತ್ತಿದ್ದರು. "ಈ ಸಿರಿಯನ್ನು ಕಂಡು ಹಿಗ್ಗುತ್ತಿದ್ದವರೇ" ಅವರ ಸುತ್ತ ಇದ್ದವರು. ಇಂಥವರ ಗಮನವನ್ನು ಅಧ್ಯಾತ್ಮದ ಕಡೆ ತಿರುಗಿಸಿ, ಅವರ ಆಚಾರವನ್ನು ನೀತಿಯಲ್ಲಿ ನಿಲ್ಲಿಸಿ, ವ್ಯಕ್ತಿಜೀವನದಲ್ಲಿ ಶುದ್ಧಿ, ಸ್ಥೈರ್ಯ, ಧೈರ್ಯ ಗಳನ್ನು ಮೂಡಿಸಬೇಕೆಂದೇ ಅವರು ದಾಸರಾಗಿ ಊರೂರು ತಿರುಗಾಡಿದರು.

ಜನರು ತಮ್ಮ ಬದುಕನ್ನು ಓರಣವಾಗಿ ಮಾಡಿಕೊಂಡಲ್ಲದೆ, ತಮ್ಮ ನಿಷ್ಠೆಯನ್ನು ದೈವದಲ್ಲಿ ಸಲ್ಲಿಸದೆ ನೆಮ್ಮದಿಯನ್ನು ಕಾಣಲಾರರು. ದೈವದ ಬಲವೆಂಬುದು ಯಾವ ಕಾಲದಲ್ಲೂ, ಯಾವ ದೇಶದಲ್ಲೂ ಯಾರಿಗಾದರೂ ಅಗತ್ಯವಾದುದು. "ಎನ್ನ ಕಡೆ ಹಾಯಿಸುವುದು ನಿನ್ನ ಭಾರ" ಎಂದು ದೈವವನ್ನು ಶರಣೆಂದು ಮನಗಾಣುವ ತನಕ "ಅನುಗಾಲವು ಚಿಂತೆ ಈ ಜೀವಕ್ಕೆ". ಅದನ್ನು ಬಿಟ್ಟು ನೆಮ್ಮದಿಯ ನೆಲೆಯನ್ನು "ಹತ್ತೆಂಟು ಜಾಗಗಳಲಿ ಹಂಬಲಿಸುವ ಮೂರ್ಖ". ಜನಜೀವನದಲ್ಲಿ ಆಧ್ಯಾತ್ಮಿಕ ದೃಷ್ಟಿ ಒದಗದೆ ಸಮಾಜದ ಅಭ್ಯುದಯ ಸಾಧ್ಯವಿಲ್ಲ. ಅದು ಸಾಧ್ಯವೆಂದು ಬಗೆದೇ "ಮೂರ್ಖರಾದರು ಜನರು ಲೋಕದೊಳಗೆ". ಆಧ್ಯಾತ್ಮಿಕ ಪ್ರಸಕ್ತಿಯಿರುವ ಜನ "ಧರ್ಮವೇ ಜಯವೆಂಬ ದಿವ್ಯಮಂತ್ರ"ವನ್ನು ಹಿಡಿಯುತ್ತಾರೆ. "ಹೆಮ್ಮೆಯಾಡು"ವುದಿಲ್ಲ, "ಅನ್ಯರನು ಘಾಸಿಪಡಿಸು"ವುದಿಲ್ಲ. ಧರ್ಮವೆಂಬುದು ವ್ಯಕ್ತಿಯನ್ನೂ ಸಮಾಜವನ್ನೂ ಒಟ್ಟಿಗೆ ಎತ್ತಿ ನಿಲ್ಲಿಸುವ ಸಾಧನೆಯೆಂದೇ ದಾಸರ ವಿಶ್ವಾಸ. ಅದಕ್ಕಾಗಿಯೇ ಅವರು "ಧರ್ಮದ ಹಾದಿಯ ಹಳಿಯಬೇಡೆಚ್ಚರಿಕೆ !" ಎಂದರು. ವ್ಯಕ್ತಿಗೆ ಯಾವುದು ವಿಹಿತವೋ ಸಮಾಜಕ್ಕೂ ಅದೇ ವಿಹಿತ. ವ್ಯಕ್ತಿಗೊಂದು ನೀತಿಸಂಹಿತೆ, ಸಮಾಜಕ್ಕೆ ಬೇರೆಯದೊಂದು ನೀತಿಸಂಹಿತೆ ಎಂಬುದನ್ನು ದಾಸರು ಒಪ್ಪರು. ವ್ಯಕ್ತಿಗಾಗಲಿ ಸಮಾಜಕ್ಕಾಗಲಿ ಸಾಧನ–ಸಾಧ್ಯಗಳಲ್ಲಿ ಹೊಂದಾಣಿಕೆಯಿರಬೇಕು

'ಎರವಿನ ಸಿರಿಗೆ ಬಿಮ್ಮನೆ ಬೆರೆತರೆ
ನೀರ ಕಡೆದರುಂಟೆ ಬೆಣ್ಣೆ ?

ಉರಗನ ಹೆಡೆಯು ನೆಳಲ ಸೇರಿದ ಕಪ್ಪೆ
ಸ್ಥಿರಕಾಲ ಬಾಳ್ವುದೆ ಜೀವವೇ ?'

ಬದುಕಿನಲ್ಲಿ ಆಧ್ಯಾತ್ಮಿಕತೆಯೆನ್ನುವುದು ಪಾಥೇಯ ; ಬುತ್ತಿ, "ತತ್ತ್ವವೆಂಬ ಬುತ್ತಿ". ಆ "ಬುತ್ತಿಯನ್ನು ಕಟ್ಟಿದರೆ ಎತ್ತಲಾದರೂ ಉಣ್ಣಬಹುದು" ; ಧರ್ಮವೆಂಬ ಮಡಕೆಯಲ್ಲಿ, ನಿರ್ಮಲಮನವೆಂಬ ಗಂಗೆ ತುಂಬಿ, ಸುಮ್ಮಾನದುರಿಯ ಹಚ್ಚಿ ಆ ಬುತ್ತಿಯನ್ನು ಸಿದ್ಧಪಡಿಸಬೇಕಂತೆ ; ಅರಿವೆಂಬ ಅರಿವೆ ಹಾಸಿ, ಹರಿಗೆ ಅರ್ಪಣೆಮಾಡಿ ನಿತ್ಯ ಉಂಡು ತೃಪ್ತಿಪಡಬೇಕಂತೆ.

ಇದಕ್ಕಾಗಿ ದಾಸರು ಧರ್ಮಜೀವನದ ಅಗತ್ಯವನ್ನು ಒತ್ತಿ ಹೇಳಿದರು. ಅವರ ರಚನೆಗಳಲ್ಲಿ ಬಹುಪಾಲು "ಮಾನವಜನ್ಮ ದೊಡ್ಡದು, ಅದ ಹಾನಿಮಾಡಲಿಬೇಡಿ" ಎಂಬ ಮಾತಿನ ವ್ಯಾಖ್ಯಾನರೂಪವಾದದ್ದೇ. ಭಗವತ್‌ಸ್ವರೂಪ, ಸಾಧನೆಗಳನ್ನು ಕುರಿತು ಪದಗಳಿಗಿಂತ ಹೆಚ್ಚಾಗಿ ವ್ಯಕ್ತಿಜೀವನದಲ್ಲಿರಬೇಕಾದ ಧರ್ಮನಿಷ್ಠೆಯನ್ನು ಕುರಿತ ಪದಗಳಿವೆ.

ವಿಷಯುದ ವಿಚಾರ ಬಿಡು
ವಿಹಿತಕರ್ಮವ ಮಾಡು
ವೈರಾಗ್ಯ ಭಾಗ್ಯವ ಬೇಡು

ಎಂಬುದು ಅವರು ಹೇಳಿಕೊಟ್ಟ ದಿವ್ಯಮಂತ್ರ. ಇದರಿಂದ ಇಹದಲ್ಲಿ ನೆಮ್ಮದಿಯುಂಟು, ಪರದಲ್ಲಿ ಸುಖವುಂಟು. ಮುಕ್ತಿಯನ್ನು ಬಯಸುವವರೂ ಇಲ್ಲಿನ ನೀತಿ ಸಂಹಿತೆಯನ್ನು ಕೈಬಿಡುವಹಾಗಿಲ್ಲ. ದಾಸರು ರಚಿಸಿರುವ 'ಸುಮ್ಮನೆ ಬರುವುದೆ ಮುಕ್ತಿ ?' ಎಂಬ ಪದದಲ್ಲಿರುವ ಒಕ್ಕಣೆಯನ್ನು ನೋಡಿ

'ಮನದಲ್ಲಿ ದೃಢವಿರಬೇಕು'
'ಜನರ ಸಂಸರ್ಗವ ನೀಗಲುಬೇಕು'
'ಕಾಮಕ್ರೋಧವ ಬಿಡಬೇಕು'
'ಕಾಮಿನಿಯರ ಹಂಬಲ ಬಿಡಬೇಕು'
'ಹೇಮದಾಸೆಯ ಸುಡಬೇಕು'
'ಸಂದಣಿಗಳ ಸೇರದಿರಬೇಕು'
'ನಿಂದಿಸಿದರೆ ಹಿಗ್ಗಬೇಕು'
'ಕೋಪಬಂದಾಗ ಸ್ಮರಣೆ ಬಿಡದಿರಬೇಕು'
'ಹರಿಯೇ ಗುರುವೆನ್ನಬೇಕು'
'ವ್ಯಾಪಾರವನು ಬಿಡಬೇಕು'
'ಪಾಪರಹಿತನಾಗಲಿಬೇಕು'
'ಜ್ಞಾನದೀಪದ ಬೆಳಕಿನಲಿ ಓಡ್ಯಾಡಬೇಕು'

ಇವೆಲ್ಲ ಮುಕ್ತಿಗೂ ಬೇಕು ; ಇಲ್ಲಿನ ಸಂಸಾರದಲ್ಲಿ ಸುಖವಾಗಿರಲೂ ಬೇಕಾದುವೇ. ಇಹ ಪರಗಳೆರಡನ್ನೂ ಒಟ್ಟಿಗೆ ಸಾಧಿಸಿಕೊಳ್ಳುವುದು ಜಾಣತನವೆಂದು ದಾಸರ ಕಿವಿ ಮಾತು. ಒಂದನ್ನು ಬಯಸಿ ಮತ್ತೊಂದನ್ನು ಹಾಳು ಮಾಡಿಕೊಳ್ಳುವವನು ಮೂರ್ಖ. ಈ ಮಾತು ಯೋಗಿಗೂ ಸರಿಯೇ ಭೋಗಿಗೂ ಸರಿಯೇ, ಅರಸನಿಗೂ ಸರಿಯೇ ಊಳಿಗದವನಿಗೂ ಸರಿಯೇ, ಪಂಡಿತನಿಗೂ ಸರಿಯೇ, ಪಾಮರನಿಗೂ ಸರಿಯೇ ಗಂಡಸಿಗೂ ಸರಿಯೇ ಹೆಂಗಸಿಗೂ ಸರಿಯೇ. ಇಹಪರಗಳ ಹೊಂದಾಣಿಕೆಯಲ್ಲಿ ಕುಲ, ಮತ, ಸಂಪತ್ತು, ಅಧಿಕಾರ ಮೊದಲಾದುವುಗಳ ಎಣಿಕೆಯಿರದು.

5

ಪುರಂದರದಾಸರ ಕಡೆಗಾಲದಲ್ಲಿ ವಿಜಯನಗರದ ರಾಜನಾಗಿದ್ದವನು ಸದಾಶಿವ ರಾಯುಮಹಾರಾಯ. ಹೆಸರಿಗೆ ಮಾತ್ರ ರಾಜ ; ಸರ್ವಾಧಿಕಾರವೂ ಅಳಿಯ ರಾಮ ರಾಜನದೇ. ರಾಮರಾಜನ ಪ್ರಭಾವ ಪ್ರಬಲವಾದಂದು ಅರವೀಡು ವಂಶದವರ ಮೇಲಾಟ ತಲೆದೋರಿತು. ಈ ಸಂದರ್ಭದಲ್ಲಿ ಕುಲಗಳ ನಡುವೆ ಕಲಹ, ಜಾತಿಗಳ ನಡುವೆ ಜಗಳ, ವರ್ಗಗಳ ನಡುವೆ ವಿರಸ ಹೆಚ್ಚಾದುದನ್ನು ಇತಿಹಾಸಕಾರರು ಗಮನಿಸಿದ್ದಾರೆ. ಇದರಿಂದ ಸಾಮ್ರಾಜ್ಯದ ಸಾಮರ್ಥ್ಯ ದುರ್ಬಲವಾಯಿತು ; ನೆರೆ ರಾಜ್ಯಗಳಾದ ಬಿಜಾಪುರ, ಅಹಮದ್‌ನಗರ, ಗೋಲ್ಕೊಂಡ, ಬೀದರುಗಳು ಬಲ ಗೊಂಡುವು. ಕಡಗೆ ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರದ ಸೇನೆ ಸೋತು ಸಾಮ್ರಾಜ್ಯ ಮರೆಯಾಗಬೇಕಾಯಿತು. ವಿಜಯನಗರದ ಚಕ್ರವರ್ತಿಗಳೆನಿಸಿಕೊಂಡ ವರು ತಲೆತಪ್ಪಿಸಿಕೊಂಡು ಪೆನುಗೊಂಡೆಯಲ್ಲಿ, ಕಳೆಗುಂದಿ ಅಳಿದುಳಿದ ವಜ್ರಸಿಂಹಾಸನ ವನ್ನು ಏರಿ ಕಾಲ ತಳ್ಳಬೇಕಾಯಿತು. ದೇಶ ಅರಾಜಕವಾಯಿತು. ವಿಜಯನಗರದ ರಾಜಧಾನಿಯಾದ ಹಂಪಿಯನ್ನು ಶತ್ರುಗಳು ಆರು ತಿಂಗಳುಗಳ ಕಾಲ ಲೂಟಿ ಮಾಡಿ ಅದರ ವೈಭವವನ್ನು ಮಣ್ಣುಗೂಡಿಸಿದರು.

ರಕ್ಕಸತಂಗಡಿ ಕದನವಾದ ವರ್ಷವೇ ಪುರಂದರದಾಸರು ತೀರಿಕೊಂಡರೆಂಬ ಉಲ್ಲೇಖವಿದೆ. ಕದನದ ಕಾವನ್ನು ಕಂಡಿದ್ದರೋ, ಅದಕ್ಕೆ ಮೊದಲೇ ಮರೆ ಯಾಗಿದ್ದರೋ ತಿಳಿದುಬರುವುದಿಲ್ಲ. ಕದನದ ವರ್ಷ 1565 ಆದರೂ ಅದಕ್ಕೆ ಸಿದ್ಧತೆಗಳು ಕೆಲವು ವರ್ಷಗಳಿಂದ ನಡೆಯುತ್ತಲೇ ಇದ್ದುವು. ಮುಂಬರುವ ಕಾರ್ಮೋಡದ ನೆರಳು ಮೊದಲೇ ಕಾಣಿಸಿಕೊಳ್ಳದಿರದೆ ? ಇಪ್ಪತ್ತೆರಡು ವರ್ಷಗಳಿಗೆ ಮುಂಚೆ ಸದಾಶಿವರಾಯನು ಪಟ್ಟಕ್ಕೆ ಬಂದುದೂ ಸಾಮ್ರಾಜ್ಯದ ಆತಂಕಸ್ಥಿತಿಯಲ್ಲೇ; ಈ ಆತಂಕ ಸ್ಥಿತಿ ಸಂಪೂರ್ಣವಾಗಿ ಮರೆಯಾಗಲೇ ಇಲ್ಲ. ಯಾವ ಹೊತ್ತಿನಲ್ಲಿ ಏನು ದಾಳಿಯೋ ಎಂಬ ಭೀತಿ ಜನರನ್ನು ಹಗಲಿರುಳೂ ಕಾಡುತ್ತಿದ್ದಿತು. ಬರುಬರುತ್ತ ಈ ಭೀತಿಗೆ ಆಧಾರಗಳು ದೃಢವಾದುವು ; ಹಲವರು ಹಂಪಿಯನ್ನು ಬಿಟ್ಟು ಸುತ್ತ ಮುತ್ತಲ ಹಳ್ಳಿಗಳಿಗೆ ಹೋದರು. ಪ್ರಾಪಂಚಿಕವಾದ ಸಂಪತ್ತು ಹೆಚ್ಚುತ್ತಿದ್ದುದು ದಿಟ ; ಆದರೆ ಸಂಪತ್ತಿನಿಂದ ಸುಖ ಬರುವುದೆಂಬ ನೆಚ್ಚಿಗೆಯಿರಲಿಲ್ಲ. ವ್ಯಾಪಾರಗಾರರು ಮಾತ್ರ ಬಿರುಸಿನಿಂದ ತಮ್ಮ ಕೆಲಸವನ್ನು ಸಾಗಿಸುತ್ತಿದ್ದರು. ಪರ್ಶಿಯ, ಅರೇಬಿಯ, ಪೋರ್ಚುಗಲ್, ಮತ್ತಿತರ ದೇಶಗಳಿಂದ ಜನ ಹಂಪಿಗೆ ಬರುವರು ; ಮುಖ್ಯವಾಗಿ ಕುದುರೆ ವ್ಯಾಪಾರ, ಸೇನೆಗೆ ಅಗತ್ಯವಾದ ಸಾಮಗ್ರಿಗಳ ಸರಬರಾಜು ಇವೇ ಈ ಪರದೇಶದವರ ವಹಿವಾಟು. ಇವರೊಂದಿಗೆ ನಮ್ಮವರು ವ್ಯವಹಾರದಲ್ಲಿ ತೊಡಗಿ ಹಣವನ್ನು ಗಳಿಸುವ ಯೋಚನೆಯಲ್ಲಿದ್ದರು.

ಅಧಿಕಾರಿಗಳಿಗಾಗಲಿ, ವ್ಯಾಪಾರಗಾರರಿಗಾಗಲಿ, ಇತರ ಉದ್ಯಮಗಳವರಿಗಾಗಲಿ ರಾಜಕಾರಣದ ಪ್ರಜ್ಞೆ ಏನೇನೂ ಇರಲಿಲ್ಲ ; ಇನ್ನು ಉಳಿದ ಜನಸಾಮಾನ್ಯರ ಪಾಡೇನು ? ಅರಸರ ಸ್ವತ್ತೆಂಬಂತೆ ರಾಜ್ಯದ ಆಡಳಿತ. ಕೃಷ್ಣದೇವರಾಯನ ಕಾಲದಲ್ಲಿ ಮಾರ್ಗದರ್ಶನ ಮಾಡಲು ವ್ಯಾಸರಾಯಸ್ವಾಮಿಗಳಿದ್ದರು, ಅಷ್ಟದಿಗ್ಗಜರೆಂಬ ಕವಿಗಳಿದ್ದರು, ಪ್ರತಿಭಾವಂತರಾದ ಸ್ವತಂತ್ರ ಚಿಂತನೆಗೆ ಸಮರ್ಥರಾದ ಸಚಿವರಿದ್ದರು. ಅಚ್ಯುತದೇವರಾಯನ ಕಾಲಕ್ಕೇ ಇವರೆಲ್ಲ ಬಹುಮಟ್ಟಿಗೆ ಮರೆಯಾದರು ; ಮುಂದೆ ಸದಾಶಿವರಾಯನ ಕಾಲದಲ್ಲಂತೂ ಇಂಥವರು ಇರಲೇ ಇಲ್ಲ. ಅಳಿಯ ರಾಮರಾಜನ ಚಿತ್ತ, ವಿಜಯನಗರದ ಭಾಗ್ಯ ! ಅವನು ಪೋರ್ಚುಗೀಸರೊಂದಿಗೆ ಸ್ನೇಹ ಬೆಳೆಸಿ ಅವರಿಗೆ ಆದರ ತೋರುವುದಕ್ಕೆ ಹಾತೊರೆಯುತ್ತಿದ್ದ ; ತನ್ನ ಉಳಿವಿಗಾಗಿ ಪ್ರಭಾವಶಾಲಿಗಳಾದ ಮುಸಲ್ಮಾನ ಮನೆತನಗಳೊಂದಿಗೆ ಸ್ನೇಹ ಬೆಳೆಸಿ ಅವರನ್ನು ಬಲಗೊಳಿಸುತ್ತಿದ್ದ. ಅವನಿಗೂ ಸ್ವತಂತ್ರವಾದ, ಸ್ಥಿರವಾದ, ಲೋಕಹಿತೈಷಿಯಾದ ರಾಜಕಾರಣಪ್ರಜ್ಞೆ ಇರಲಿಲ್ಲ. ಸಂದರ್ಭದ ಒತ್ತಡದಂತೆ ಜನರನ್ನು ಹತ್ತಿರ ಸೇರಿಸುವುದು, ದೂರ ಸರಿಸುವುದು. ಸೇನೆಯ ಅಧಿಕಾರಿಗಳು ಮತ್ತು ದುರ್ಗಾಧ್ಯಕ್ಷರು ಇವರ ಮಾತೇ ನಡೆಯುವುದು. ದೇಶದ ಹಿತವನ್ನು ಬಯಸುವ ಅಧಿಕಾರಿಗಳು ಹಿಂದೆಬಿದ್ದರು.

ರಾಜಕೀಯ ಪರಿಸ್ಥಿತಿ ಹೀಗಿರುವಾಗ ಅದರ ಪ್ರಭಾವ ಜನಜೀವನದ ಮೇಲೆ ಬೀಳದಿರುವುದು ಹೇಗೆ ? ಕುಲ, ಜಾತಿ, ವೃತ್ತಿ, ಆರ್ಥಿಕನೆಲೆ ಮೊದಲಾದ ವಿವರಗಳನ್ನು ಹಿಡಿದು ಹಗರಣಗಳು ಹೆಚ್ಚಿದುವು. ಕನಕದಾಸರಿದ್ದ ಕಾಲದಲ್ಲೇ, ಎಂದರೆ ಪುರಂದರದಾಸರಿಗೆ ಮೊದಲೇ, ಕುಲ ಕುಲವೆಂದು ಬಡಿದಾಡುವ ಜನರಿದ್ದರು. ಶ್ರೀಪಾದರಾಜರ ಕೃತಿಗಳಲ್ಲೂ ವ್ಯಾಸರಾಯಸ್ವಾಮಿಗಳ ಕೃತಿಗಳಲ್ಲೂ ಇದರ ಧ್ವನಿಯನ್ನು ಗುರುತಿಸಬಹುದು ; ಸದಾಶಿವರಾಯನ ಆಳ್ವಿಕೆಯಲ್ಲಿ ಇದು ಹೆಚ್ಚತೆಂದು ತೋರುತ್ತದೆ. ಹಣವಂತರ ಹಮ್ಮು ಯಾವ ಕಾಲದಲ್ಲೂ ಇದ್ದದ್ದೇ. ಆದರೆ ಇದು ಸರಿಯಲ್ಲವೆಂದು ಜನರಿಗೆ ತಿಳಿಯಹೇಳಲು ಮೊದಲು ವ್ಯಾಸರಾಯಸ್ವಾಮಿಗಳಂಥವರಿದ್ದರು ; ಈಗ ಹಾಗೆ ಅಧಿಕಾರವಾಣಿಯಿಂದ ಹೇಳಬಲ್ಲವರು ಇರಲಿಲ್ಲ. ಹಣವನ್ನು ಸಂಪಾದಿಸುವ ಗೀಳು ಜನಸಾಮಾನ್ಯರಿಗೆ ಇರುವುದು ಸಹಜವೇ. ಇದರಲ್ಲಿರುವ ಅನೀತಿಯನ್ನು ಧೈರ್ಯವಾಗಿ ತೋರಿಸುವ ಸಾಹಸ ಯಾರಿಗೆ ? "ಲೋಭ ಎಂಬುವುದೆ ಎಂದೆಂದು ದಾರಿದ್ರ್ಯ" ಎಂದು ಹೇಳಿದ ವ್ಯಾಸರಾಯಸ್ವಾಮಿಗಳು ಇರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಪುರಂದರದಾಸರು ಏಕಾಕಿಯಾಗಿ ಧರ್ಮಪ್ರಚಾರ ಮಾಡುತ್ತ ಸಮಾಜದ ಈ ಎಲ್ಲ ಕೊಳೆಗಳ ಕಡೆಗೆ ಕಣ್ಣಾಡಿಸಿದರು. ಅವನ್ನು ಜನರೆದುರು ಎತ್ತಿ ತೋರಿಸಿ, ಸರಿಯಾದ ದಾರಿಯನ್ನು ಸೂಚಿಸಲು ಯತ್ನಿಸಿದರು.

ಅವರು ಎಂದೂ ಅರಸನ ಓಲಗದಲ್ಲಿ ನೆರೆದವರಲ್ಲ ; ಅಧಿಕಾರಿಗಳೆದುರು ಕೈಕಟ್ಟಿ ನಿಂತವರಲ್ಲ ; ಹಣವಂತರ ಆದರಕ್ಕೆ ಬಾಯಿಬಿಟ್ಟವರಲ್ಲ ; ಮಠಗಳ ಅನುಗ್ರಹಕ್ಕೆ

ಅಂಗಲಾಚಿದವರಲ್ಲ. ಅವರ ಪದಗಳನ್ನು ನೋಡಿದರೆ ಅವರಿಗಿದ್ದ ಧೈರ್ಯದ ಅರಿವಾಗುತ್ತದೆ. ಅವರ ಸುತ್ತ ಅಂಥ ಧೈರ್ಯಶಾಲಿಗಳಾದ ಹಲವರು ಸೇರಿದ್ದಿರಬೇಕು. ಅವರ ಪರಿವಾರವನ್ನು ವಿಜಯದಾಸರು ಹೀಗೆ ಬಣ್ಣಿಸಿದ್ದಾರೆ

ಮದವೇರಿದ ಕರಿವಿಂಡಿನಂತೆ ದುರುಳ
ರೆದೆಯ ಮೆಟ್ಟಿ ದುಸ್ಸಂಗವನು ಜ
ರಿದು ಹರಿಸರ್ವೋತ್ತಮನೆಂದು ಕೂಗುತಲಿ ಹ
ರಿದಾಡಿ ಓಡ್ಯಾಡಿ ಬೀದಿ ಬೀದಿಯೊಳಗೆ
ತಿರುಗುತಲಿಪ್ಪರು ಕರಿಗಳಂದದಲಿ

ಮೇಲೆ ವಿವರಿಸಿದ ಪರಿಸ್ಥಿತಿಯಲ್ಲಿ ಜಾಣ್ಮೆಯಿರದಿದ್ದರೆ, ಧೈರ್ಯವಿರದಿದ್ದರೆ ಪುರಂದರ ದಾಸರಿಗೆ ಉಳಿಗಾಲವಿರುತ್ತಿರಲಿಲ್ಲ ; ದಾಸಕೂಟವೆಂಬ ಸೊಲ್ಲೇ ಕೇಳಿಬರುತ್ತಿರಲಿಲ್ಲ. ಆಗಿನ ಗೊಂದಲದ ವಾತಾವರಣದಲ್ಲಿ, ಕಷ್ಟದ ವೇಳೆಯಲ್ಲಿ ದಾಸರು ದಿಟ್ಟತನದಿಂದ ತಾವು ನಿಂತುದಲ್ಲದೆ, ಎಂದಿಗೂ ಬರುವ ಇಂಥದೇ ಪರಿಸ್ಥಿತಿಯಲ್ಲಿ ಸಾಮಾನ್ಯ ಜನ ನಿಲ್ಲಬೇಕಾದುದು ಹೇಗೆಂಬುದನ್ನು ತಿಳಿಯಹೇಳಿದರು. ಅವರು ಅಂದು ತಳೆದ ನಿಲುವು, ತೋರಿಸಿದ ದಾರಿ ನಮಗೆ ಇಂದಿಗೂ ಸರಿಯಾದುದೇ. "ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಎಂಬುದು ಅವರಿಗೆ ತಿಳಿಯದಿರಲಿಲ್ಲ ; ದಿಟವಾಗಿ ಅದು ಅವರ ಒಕ್ಕಣೆಯೇ ! ಆದರೆ ಹೀಗೆ ಮಾಡುವಾಗ ಅಧ್ಯಾತ್ಮವನ್ನು ಸೇರಿಸಿಕೊಳ್ಳಿ, ನೀತಿಯನ್ನು ಬಿಡಬೇಡಿ, ಧರ್ಮದ ಮೇಲೆ ಕಣ್ಣಿರಲಿ ಎಂದು ದಾಸರ ಆಗ್ರಹ.

ಉಪದೇಶಮಾಡುವಾಗ ವ್ಯವಹಾರವನ್ನು, ವಸ್ತುಸ್ಥಿತಿಯನ್ನು ಅವರೆಂದಿಗೂ ಮರೆಯಲಿಲ್ಲ. ಬಯಲುಮಂಟಪದ ಗಾಳಿಗೋಪುರವನ್ನೇರಿ ಕುಳಿತು, ದಿನನಿತ್ಯದ ಬದುಕಿಗೆ ಹೊಂದಿಸಿಕೊಳ್ಳಲಾಗದ ಕಗ್ಗವನ್ನು ಹೇಳಿ ಮುಂದೆಹೋಗುವ ಹವ್ಯಾಸ ಅವರದ್ದಲ್ಲ. ಅವರು ತಾವೇ ಸಂಸಾರದಲ್ಲಿ ಬಾಳಿದವರು, ಬಾಳುತ್ತಿದ್ದವರು, ಜನರ ಸ್ವಭಾವವನ್ನು ಕಂಡುಕೊಂಡವರು, ಬಾಳುತ್ತಲೇ ಬಾಳಿನಲ್ಲಿ ಬೆಳಕನ್ನು ಪಡೆದುಕೊಂಡವರು. ಅವರು ಮಾಡಿದ ಉಪದೇಶ ಪ್ರಯೋಗಕ್ಕೆ ಬರುವಂಥದೇ. ಬರಿದೆ ದೊಡ್ಡ ದೊಡ್ಡ ಮಾತುಗಳಿಂದ ಪ್ರವಚನಮಾಡಿ ಹೊಟ್ಟೆಹೊರೆದುಕೊಳ್ಳುವ ಗೊಡ್ಡು ಪಂಡಿತರನ್ನೂ ಬೂಟಾಟಿಕೆಯ ಮಡಿವಂತರನ್ನೂ ಪರಿಹಾಸ್ಯ ಮಾಡಿದರು. ಶೀಲದಲ್ಲಿ ಸಂವರವಿಲ್ಲದೆ, ನಡತೆಯಲ್ಲಿ ಶುದ್ಧಿಯಿಲ್ಲದೆ, ಆಡಂಬರದಿಂದ ಕುಲ, ಶಾಸ್ತ್ರಜ್ಞಾನ, ಮೇಲ್ಮೆಯ ಸೋಗು ಹಾಕಿ ಜನರನ್ನು ವಂಚಿಸುವುದು ಶಿಷ್ಟಾಚಾರವಲ್ಲ. ಲೋಕವ್ಯವಹಾರದಲ್ಲಿ ಬೂಟಕತನ ಬಹುಕಾಲ ಊರ್ಜಿತವಾಗಲಾರದು ; ಸತ್ತ್ವವಿಲ್ಲದ ಯಾವ ವಸ್ತು ತಾನೆ ಉಳಿಯಬಲ್ಲುದು ? ಅನುಷ್ಠಾನಕ್ಕೆ ಬಾರದ ಪಾಂಡಿತ್ಯಕ್ಕೆ ಬೆಲೆಯೇನು ? ಪುರಂದರದಾಸರು ನೇರವಾಗಿ ಕೇಳಿದರು

'ಹೋಗದೂರಿನ ದಾರಿ ಕೇಳಿ ಮಾಡುವುದೇನು ?'
'ತನಗಲ್ಲದಾ ವಸ್ತು ಎಲ್ಲಿದ್ದರೇನು ?'

ಇಂಥವರ "ಬೂಟಕತನವ ನೋಡಿ ಭ್ರಮಿಸದಿರಿ" ಎಂದು ಜನರನ್ನು ಎಚ್ಚರಿಸಿದರು. ಅದೂ ಧೈರ್ಯದ ಮಾತೇ. ಆದರೆ ಅವರಿಗೆ 'ಅಂಜಿಕೆ ಇನ್ಯಾತಕಯ್ಯಾ'.

ಕುಲ ಕುಲವೆಂದು ಜನ ಬಡಿದಾಡುತ್ತಿದ್ದ ಕಾಲದಲ್ಲಿ ದಾಸರು ಧೈರ್ಯವಾಗಿ ಕುಲವಾಗಲಿ ವಿದ್ಯೆಯಾಗಲಿ ಯಾವೊಬ್ಬನ ಹಿರಿಮೆಗೂ ಕಾರಣವಾಗದೆಂದು ಹೇಳಿದು ದನ್ನು ನೆನಪಿಗೆ ತಂದುಗೊಳ್ಳಬೇಕು. ಹೊಲೆಯರೆಂದು ಒಂದು ಪಂಗಡವನ್ನು ದೂರ ವಿರಿಸಿ ಕೀಳಾಗಿ ಕಾಣುತ್ತಿದ್ದ ಮೇಲೆಂಬ ಜಾತಿಯವರಿಗೆ ದಾಸರು ಮತ್ತೆ ಮತ್ತೆ ಹೊಲೆಯನೆಂಬುದು ಜಾತಿಸೂಚಕವಾದ ನಿಕೃಷ್ಟಶಬ್ದವಲ್ಲ, ಭ್ರಷ್ಟಾಚಾರವನ್ನು ಹೇಳುವ ಪದ ಎಂದು ಬಿಡಿಸಿ ಹೇಳಿದರು. ಈ ವಿಚಾರ ಮೊದಲೇ ಇನ್ನೊಂದು ಸಂದರ್ಭದಲ್ಲಿ ಬಂದಿದೆ. ಕುಲಕುಲವೆಂದು ಬಡಿದಾಡುವುದು ಇನ್ನೂ ತಪ್ಪಲಿಲ್ಲವಾಗಿ, ಇದನ್ನು ಮತ್ತೆ ಹೇಳಿದರೆ ತಪ್ಪಿಲ್ಲ. 'ಹೊಲೆಯ ಹೊರಗಿಹನೆ ಊರೊಳಗಿಲ್ಲವೆ, ಬಲ್ಲವರು ಪೇಳಿ ಹರಿಭಕ್ತರಾದವರು' ಎಂದು ಆರಂಭವಾಗುವ ದಾಸರ ಪದವೊಂದಿದೆ. ಅದರಲ್ಲಿ ಹೊಲೆತನದ ಲಕ್ಷಣಗಳನ್ನು ಪಟ್ಟಿಮಾಡಿದ್ದಾರೆ

'ಹೇಳಿದ ಶಾಸ್ತ್ರವನು ತಿಳಿಯದವ'
'ಆಳಾಗಿ ಅರಸಿಗೆ ಮಣಿಯದಾತ'
'ಇದ್ದು ದಾನಧರ್ಮವ ಮಾಡದಿದ್ದವ'
'ಆಶೆಯಿಂದಲಿ ಬಹಳ ದೋಷ ಮಾಡುವವ'
'ಹುಸಿಯಾಡುವವ'
'ಉಂಡಮನೆಗೆರಡ ಯೋಚಿಸುವಾತ'
'ಗಂಡಹೆಂಡಿರೊಳು ಭೇದವಿಕ್ಕುವವ'
'ಅರಿತು ಆಚಾರವನು ಮಾಡದಿದ್ದವ'
'ಗುರು ಹಿರಿಯರನು ಕಂಡು ಎರಗದಾತ'

ಇವರೆಲ್ಲ ಹೊಲೆಯರೆಂದು ದಾಸರ ಎಣಿಕೆ. ಹಾಗೆಯೇ ಬ್ರಾಹ್ಮಣನು ಯಾರೆಂಬು ದನ್ನೂ ಸ್ಪಷ್ಟಪಡಿಸುತ್ತಾರೆ—"ಬ್ರಾಹ್ಮಣನೆಂದರೆ ಬ್ರಹ್ಮವ ತಿಳಿದವನು ಅವನೀಗ ಬ್ರಾಹ್ಮಣನೋ". ಈ ಕೃತಿಯಲ್ಲಿ ಕಾಣಿಸಿರುವ ಲಕ್ಷಣಗಳನ್ನು ಗಮನಿಸಿದರೆ, ಅಧ್ಯಾತ್ಮ ಯೋಗದಲ್ಲಿ ತೊಡಗಿರುವವನೇ ಬ್ರಾಹ್ಮಣ ; ಪ್ರಾಪಂಚಿಕ ಪ್ರಸಕ್ತಿಗಳನ್ನು ತಳೆದಿರುವ ನನ್ನು ಬ್ರಾಹ್ಮಣನೆನ್ನಲಾಗದು. ಎಂದಮೇಲೆ, ಯಾರಾದರೂ ಆಧ್ಯಾತ್ಮಕ್ಕೆ ಒಲಿದು ಬ್ರಾಹ್ಮಣರಾಗಬಹುದು, ಯಾರಾದರೂ ಅದನ್ನು ದೂರವಿರಿಸಿ ಹೊಲೆಯರಾಗ ಬಹುದು. ಜೀವತ್ರೈವಿಧ್ಯವನ್ನು ಸಿದ್ಧಾಂತದಲ್ಲಿ ಒಪ್ಪಿರುವ ದಾಸರು ಸಾತ್ವಿಕ

ಜೀವರನ್ನು ಬ್ರಾಹ್ಮಣರೆಂದಾರು, ತಾಮಸಜೀವರನ್ನು ಹೊಲೆಯರೆಂದಾರು ; ಉಳಿದವರೆಲ್ಲ ರಾಜಸವರ್ಗದಲ್ಲಿ ಸೇರುತ್ತಾರೆ. ಜೀವದ ಸ್ವರೂಪ, ಯೋಗ್ಯತೆಗಳಿಗೂ ಕುಲ, ಜಾತಿಗಳಿಗೂ ಸಂಬಂಧವಿರದು. ಮುಂದೆ ದಾಸಕೂಟದಲ್ಲಿ ಹೀಗೆ ಹೇಳುವ ಧೈರ್ಯ ಯಾರಿಗೂ ಬರಲಿಲ್ಲ. ಪುರಂದರದಾಸರ ಹಿರಿಮೆಯಷ್ಟೆ ಅದು. ಅವರ ಈ ಉಗಾಭೋಗದಲ್ಲಿರುವ ಅವರ ಧೈರ್ಯವನ್ನು ನೋಡಿ

ಹೊಲೆಯ ಬಂದನೆಂದು ಒಳಗೆ ದೇವರ ಮಾಡಿ
ಗಣಗಣ ಗಂಟೆ ಬಾರಿಸುವರಯ್ಯ
ತನುವಿನ ಕೋಪವು ಹೊಲೆಯಲ್ಲವೆ ?
ಪರಧನ ಪರಸತಿ ಹೊಲೆಯಲ್ಲವೆ ?
ಹೊರಗಿದ್ದ ಹೊಲೆಯನ ಒಳಗೆ ಬಚ್ಚಿಟ್ಟರೆ
ಇದಕೇನು ಮದ್ದೋ ಪುರಂದರವಿಠಲ ?

6

ಪುರಂದರದಾಸರು ಬದುಕಿ ಬಾಳಿದ ಕಾಲ ನಮ್ಮ ನಾಡಿನ ಇತಿಹಾಸದಲ್ಲಿ ಒಂದು ಪರ್ವಕಾಲವೆನ್ನಬಹುದು. ನಾಡಿನ ಧಾರ್ಮಿಕನಿಲುವು, ಸಾಮಾಜಿಕ ವ್ಯವಸ್ಥೆ, ಜನಜೀವನದ ರೀತಿನೀತಿ ಇವು ಒಂದು ಘಟ್ಟದಿಂದ ಇನ್ನೊಂದು ಘಟ್ಟಕ್ಕೆ ಮುಟ್ಟಿದ ಕಾಲ. ನಾಡಿನಲ್ಲಿ ಪರ್ಶಿಯನ್, ಮುಸ್ಲಿಂ ಸಂಸ್ಕೃತಿಗಳು ಬಂದೊದಗಿದ್ದುವು ; ಕ್ರೈಸ್ತಶ್ರದ್ಧಾಳುಗಳು, ಪ್ರಚಾರಕರು ನಾಡಿನಲ್ಲಾಗಲೆ ಬಂದಿಳಿದಿದ್ದರು. ಪರ್ಶಿಯದಿಂದ ಬಂದ ಕ್ರೈಸ್ತರು (ನೆಸ್ಟೋರಿಯನ್ನರು) ಇದ್ದರು. ಉತ್ತರಭಾರತದಲ್ಲಿ ಮುಗಲ್ ಸಾಮ್ರಾಜ್ಯ ಸುಭದ್ರವಾಗಿ ಮೈದಳೆದಿದ್ದಿತು. ಜನರಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಪಾರ್ಸಿ ಪಂಗಡಗಳು ಕಾಣಿಸಿಕೊಳ್ಳತೊಡಗಿದ್ದುವು. ಆರ್ಥಿಕವಾಗಿ ನಾಡು ಹೊರನಾಡುಗಳೊಂದಿಗೆ ಸಂಪರ್ಕವನ್ನು ಬೆಳೆಸಿಕೊಂಡಿದ್ದಿತು. ಧಾರ್ಮಿಕವಾಗಿ ನಾಡಿನಲ್ಲೇ ವಾದ–ವಿವಾದಗಳು, ಮತಪರಿವರ್ತನೆಗಳು, ಖಂಡನ–ಮಂಡನಗಳು ಹರಡಿಕೊಳ್ಳುತ್ತಿದ್ದುವು. ಗ್ರಾಮಸಂಸ್ಕೃತಿಯು ನಗರ ಸಂಸ್ಕೃತಿಗೆ ಎಡೆಮಾಡಿಕೊಡುತ್ತಿದ್ದಿತು. ವ್ಯಾಪಾರ, ವಾಣಿಜ್ಯ, ಉದ್ಯಮಗಳು ಹೆಚ್ಚುತ್ತಿದ್ದುವು. ವರ್ಣಾಶ್ರಮಧರ್ಮದ ಕಟ್ಟುಪಾಡು ಸಡಿಲವಾಗುತ್ತಿದ್ದಿತು. ಜನಜೀವನದಲ್ಲಿ ಸುಖಸಾಧನೆಗಳು ಹೆಚ್ಚುತ್ತಿದ್ದುವು. ಆದರೂ ಜನರ ಮನಸ್ಸಿನಲ್ಲಿ ಆತಂಕದ ಹೊಗೆಯಾಡುತ್ತಲೇ ಇದ್ದಿತು. ಅಲ್ಲಲ್ಲಿ ಪಾಳಯಪಟ್ಟುಗಳು, ಸಣ್ಣಪುಟ್ಟ ರಾಜ್ಯಗಳು, ಆಡಳಿತದಲ್ಲಿ ಅಧಿಕಾರಿಗಳಿಂದ ಜನರ ಸುಲಿಗೆ, ಕ್ಷೇತ್ರಗಳಲ್ಲಿ ಪುರೋಹಿತಪಂಡರಿಂದ ಸುಲಿಗೆ, ನಗರಗಳಲ್ಲಿ ಕಾಮುಕ ಜನರಿಂದ ಪೀಡೆ, ಗ್ರಾಮಾಂತರ ಪ್ರದೇಶಗಳಲ್ಲಿ ತೆರಿಗೆಯ ಭೀತಿ, ಪ್ರಯಾಣದಲ್ಲಿ

ದರೋಡೆಕಾರರ ಹಾವಳಿ. ಸಮಾಜದ ವ್ಯವಸ್ಥೆ ಸಮರ್ಪಕವಾಗಿರಲಿಲ್ಲ ; ಸಮಾಜವು ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಿದ್ದುದು ಮುಖ್ಯಕಾರಣ.

ಇಂಥ ಪರ್ವಕಾಲದಲ್ಲಿ ನಾಡಿನ ಹಲವೆಡೆ ಹಿರಿಯ ಚೇತನಗಳು ಕಾಣಿಸಿ ಕೊಂಡುದು ಯುಗಧರ್ಮದ ಪರಿಣಾಮವಾಗಿಯೇ. ಕರ್ನಾಟಕದಲ್ಲಿ ಶ್ರೀಪಾದರಾಜರು, ವ್ಯಾಸರಾಯಸ್ವಾಮಿಗಳು, ಪುರಂದರದಾಸರು, ಕನಕದಾಸರು, ವಾದಿರಾಜರು ಬದುಕಿ ಬಾಳಿದ ಸಮಯದಲ್ಲೇ ಉತ್ತರಭಾರತದಲ್ಲಿ ರಾಮಾನಂದರು (1400–1470), ಕಬೀರದಾಸರು (1440–1518), ರಾಜಾಸ್ಥಾನದಲ್ಲಿ ಮೀರಾಬಾಯಿ (ಜನನ 1470), ಪಂಜಾಬಿನಲ್ಲಿ ಗುರುನಾನಕದೇವರು (1469–1539), ಬಂಗಾಳದಲ್ಲಿ ಕೃಷ್ಣಚೈತನ್ಯರು (1485–1533), ಮಹಾರಾಷ್ಟ್ರದಲ್ಲಿ ನಾಮದೇವ–ಸಿಂಪಿಗಳು (1400ರ ಸುಮಾರು), ಗುರು ಅಮರದಾಸರು (1574ರ ಸುಮಾರು), ಬ್ರಜ ಭೂಮಿಯಲ್ಲಿ ಸೂರದಾಸರು (1596ರ ಸುಮಾರು), ಕಾಶಿಯ ಕಡೆ ತುಳಸೀದಾಸರು (1532–1623) ಮೊದಲಾದ ಸಂತರು ಕಾಣಿಸಿಕೊಂಡರು. ಧರ್ಮಶ್ರದ್ಧಾಳುವೂ ಮೇಧಾವಿಯೂ ಅನುಭಾವಿಯೂ ಆದ ಮುಗಲ್ ಸಾಮ್ರಾಟ ಅಕ್ಬರ್ ಸರ್ವಧರ್ಮ ಸಮನ್ವಯಕ್ಕೆ ಮಾಡಿದ ಪ್ರಯತ್ನ ಪ್ರಕಟವಾದುದು 1575ರಲ್ಲಿ ; ಅವನ ಹೊಸ 'ತಾಹಿದ್–ಇ–ಇಲಾಹಿ' ಎಂಬ ಧರ್ಮ ಪ್ರವೃತ್ತವಾದುದು 1582ರಲ್ಲಿ.

ಪ್ರಸ್ತುತಧರ್ಮಕ್ಕೆ ಸಾಮಾಜಿಕ ಸ್ಥಿತಿಗತಿಗಳನ್ನನುಸರಿಸಿ ಹೊಸ ತಿರುವು ಅಗತ್ಯ ವೆಂಬ ಕಲ್ಪನೆ ಆ ಯುಗಧರ್ಮದಲ್ಲಿದ್ದಿತು. ಆಗ ಕಾಣಿಸಿಕೊಂಡ ಸಂತರೆಲ್ಲರೂ ಈ ಅಗತ್ಯವನ್ನೂ ಅರಿತುಕೊಂಡವರೇ. ಇವರಲ್ಲಿ ಬಹುಮಂದಿ ವೈಷ್ಣವರು ; ಸುಲಭ ಪೂಜೆಯ ಸ್ವಾರಸ್ಯವನ್ನು, ಭಕ್ತಿಯ ವೆಗ್ಗಳವನ್ನು ಜನರಿಗೆ ತಿಳಿಸುವುದರಲ್ಲಿ ಬಾಳನ್ನು ಕಳೆದವರು. ರಾಮಾನಂದರು ರಾಮಾನುಜಾಚಾರ್ಯರ ಪ್ರಶಿಷ್ಯರ ಶಿಷ್ಯನೆಂದು ಹೇಳು ತ್ತಾರೆ ; ಕಾರಣಾಂತರದಿಂದ ಅವರು ಕಾಶಿಗೆ ಹೋಗಿ ಅಲ್ಲಿ ಪಂಚಗಂಗಾಕ್ಷೇತ್ರದಲ್ಲಿ ವೈಷ್ಣವಧರ್ಮದ ಪ್ರಚಾರ ಮಾಡುತ್ತ ನಿಂತರು. ಇವರು ರಾಮಭಕ್ತರು. ಇವರ ಶಿಷ್ಯರಲ್ಲಿ ಪ್ರಸಿದ್ಧರಾದವರು ಕಾಶಿಯವರೇ ಆದ ಕಬೀರದಾಸರು. ಹಿಂದುಗಳು ಹಿಂದುವೆಂದೂ ಮುಸಲ್ಮಾನರು ಮುಸಲ್ಮಾನನೆಂದೂ ಆದರಿಸಿದ ಕಬೀರದಾಸರೂ ರಾಮಭಕ್ತರೇ ; ರಾಮನಾಮದ ಹಿರಿಮೆಯನ್ನು ಹಾಡಿ ಹೊಗಳಿದರು. ಹಠಯೋಗದ ಪ್ರಕಾರಗಳನ್ನೂ ಬಲ್ಲವರಾಗಿದ್ದು, ಅನುಭವೈಕವೇದ್ಯವಾದ ಭಾವಭಕ್ತಿಯನ್ನು ಬೋಧಿಸಿದರು. ಪುರಂದರದಾಸರಿಗಿಂತ ನಲವತ್ತೈದು ವರ್ಷ ಹಿರಿಯರಾದ ಇವರು ಸಂತರೂ ಹೌದು, ಕವಿಯೂ ಹೌದು. ಇವರ ದೋಹಗಳು ಹಿಂದಿ ಮಾತನಾಡುವ ಪ್ರಾಂತದಲ್ಲಿ ತುಂಬ ಜನಪ್ರಿಯವಾದುವು, ಇಂದಿಗೂ ಬಳಕೆಯಲ್ಲಿವೆ.

ಕಬೀರರ ವೈಷ್ಣವ ಸಂಪ್ರದಾಯದಿಂದ ಪ್ರಭಾವಿತರಾದ ಇನ್ನೊಬ್ಬ ಸಂತರೆಂದರೆ ಗುರುನಾನಕದೇವರು. ಪಂಜಾಬಿನಲ್ಲಿ ರಾವಿನದಿಯ ದಂಡೆಯ ಮೇಲೆ ತಳವಂಡಿ ಗ್ರಾಮದಲ್ಲಿ ಹುಟ್ಟಿದ ಇವರು ಏಕೇಶ್ವರ ಉಪಾಸನೆಯನ್ನು ಬೋಧಿಸಿ ಜನಜಾಗ್ರುತಿ

ಯನ್ನು ಮಾಡಿದರು. ಅವರ ರಚನೆಗಳು ಸ್ತೋತ್ರರೂಪದಲ್ಲಿವೆ. ಶ್ರೀರಾಗದಲ್ಲಿಯೇ ಹೆಚ್ಚಿನ ಕೀರ್ತನೆಗಳನ್ನು ರಚಿಸಿ, ಸಂಗೀತಕ್ಕೂ ಸಂಕೀರ್ತನಕ್ಕೂ ಸಂಬಂಧವನ್ನು ಒದಗಿಸಿದರು. ಇವರು ಶೀಖ (ಶೈಕ್ಷ್ಯ, ಎಂದರೆ ಶಿಷ್ಯ, ಎಂಬ ಮಾತಿನ ಅಪಭ್ರಂಶರೂಪ) ಪಂಥದ ಪ್ರವರ್ತಕರೆಂದು, ಆದಿಗುರುವೆಂದು ಪ್ರಸಿದ್ಧರಾಗಿದ್ದಾರೆ. ಮುಗಲ್ ಚಕ್ರವರ್ತಿ ಬಾಬರನ ಸಮಕಾಲಿಕರು. ಪುರಂದರದಾಸರಿಗಿಂತ ಹದಿನಾರು ವರ್ಷ ಹಿರಿಯರು. ಪುರಂದರದಾಸರು ಕಾಲವಾಗಿ ಹದಿನಾರು ವರ್ಷಗಳ ಮೇಲೆ ಹುಟ್ಟಿದ ಗುರು ಅರ್ಜುನದೇವರು ಶೀಖಸಂಪ್ರದಾಯದ ಆಧಾರವಾದ 'ಗ್ರಂಥಸಾಹೇಬ'ವನ್ನು ಸಿದ್ಧಪಡಿಸಿದರು. ಇದು ಸಂತವಾಣಿಯ ಸಂಕಲನ ; ಇದರಲ್ಲಿ ಹಲವಾರು ಸಂತರ ಬೇರ ಬೇರೆ ಸಂಪ್ರದಾಯಗಳ ದೋಹಗಳು ಸೇರಿರುವುದು ಯುಗಧರ್ಮವನ್ನು ಸೂಚಿಸುತ್ತದೆ.

ಪುರಂದರದಾಸರಿಗೆ ಆರುವರ್ಷಗಳಷ್ಟು ಹಿರಿಯರು ವಲ್ಲಭಾಚಾರ್ಯರು. ಕೃಷ್ಣಾ, ಗೋದಾವರಿ ನದಿಗಳ ನಡುವೆ ಕಾಕರವಾಡ ಎಂಬ ಗ್ರಾಮದಲ್ಲಿ ಹುಟ್ಟಿ, ಕಾಶಿಯಲ್ಲಿ ವಿದ್ಯಾಭ್ಯಾಸಮಾಡಿ, ವ್ರಜಭೂಮಿಯಲ್ಲಿ ವೈಷ್ಣವಧರ್ಮ ಪ್ರಚಾರಮಾಡಿದರು. ಕೃಷ್ಣದೇವರಾಯನು ವಿಜಯನಗರದ ವಜ್ರಸಿಂಹಾಸನವನ್ನು ಏರಿದ್ದ ಸಮಯದಲ್ಲಿ ಇಲ್ಲಿಗೆ ಬಂದಿದ್ದರೆಂದೂ, ರಾಯನು ಇವರಿಗೆ ಕನಕಾಭಿಷೇಕಮಾಡಿದನೆಂದೂ ಉಲ್ಲೇಖವಿದೆ. ಇವರು 1537ರ ಸುಮಾರಿನಲ್ಲಿ ತೀರಿಕೊಳ್ಳುವ ಮೊದಲು ಬ್ರಹ್ಮಸೂತ್ರಗಳ ಮೇಲೆ ಭಗವದ್ಗೀತೆಯ ಮೇಲೆ ಶುದ್ಧಾದ್ವೈತ ಸಂಪ್ರದಾಯದ ಭಾಷ್ಯಗಳನ್ನು ರಚಿಸಿ, ಗೋವರ್ಧನದಲ್ಲಿ ಶ್ರೀನಾಥಮಂದಿರವನ್ನು ವ್ಯವಸ್ಥೆಮಾಡಿದರು (1520ರಲ್ಲಿ). ಇವರು ಭಾಗವತಪುರಾಣವನ್ನು ಮೆಚ್ಚಿಕೊಂಡಿದ್ದವರು. ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳೆಂಬ ಪ್ರಸ್ಥಾನತ್ರಯದೊಂದಿಗೆ ಭಾಗವತವನ್ನೂ ಪ್ರಮಾಣಗ್ರಂಥವೆಂದು ಸ್ವೀಕರಿಸಿದರು. ಹರಿದಾಸರಿಗೆ ಭಾಗವತವೇ ಪರಮ ಪ್ರಮಾಣವೆಂಬುದನ್ನು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬೇಕು,

ಭಾಗವತವನ್ನೇ ಅವಲಂಬಿಸಿ ವೈಷ್ಣವ ಧರ್ಮವನ್ನು ಪ್ರಚಾರಮಾಡಿದ ಇನ್ನೊಬ್ಬ ಹಿರಿಯರು ಕೃಷ್ಣಚೈತನ್ಯ ಮಹಾಪ್ರಭು (ಗೌರಾಂಗದೇವ). ಪುರಂದರದಾಸರು ಹುಟ್ಟಿದ ವರ್ಷದಲ್ಲೇ ಹುಟ್ಟಿದ ಕೃಷ್ಣಚೈತನ್ಯರು ಪುರಿ ಜಗನ್ನಾಥನ ಭಕ್ತರು. ವಂಗದೇಶದ ಅನುಭಾವಿ ಸಂತರು ; ಗೌಡೀಯ ಸಂಪ್ರದಾಯದ ಪ್ರವರ್ತಕರು. ಅವರು ದಕ್ಷಿಣದೇಶಕ್ಕೆ ಬಂದಿದ್ದು ವ್ಯಾಸರಾಯಸ್ವಾಮಿಗಳನ್ನು ಕಂಡು ಅವರಿಂದ ದೀಕ್ಷೆ ಪಡೆದುಕೊಂಡರೆಂದೂ, ಉಡುಪಿಗೆ ಹೋಗಿ ವಾದಿರಾಜಸ್ವಾಮಿಗಳನ್ನೂ ಕಂಡಿದ್ದರೆಂದೂ ಉಲ್ಲೇಖವಿದೆ. ಗೌಡೀಯ ಸಂಪ್ರದಾಯದಲ್ಲಿ ಮಾಧ್ವ ಪ್ರಭಾವವಿರುವುದು ದಿಟ; ಅವರ ಆಚಾರ್ಯಪರಂಪರೆಯಲ್ಲಿ ಮಧ್ವಾಚಾರ್ಯರು ಸೇರಿದ್ದಾರೆ. ಕೃಷ್ಣ ಚೈತನ್ಯರು ರಾಧಾಕೃಷ್ಣರ ಪ್ರೇಮವನ್ನು ಆದರ್ಶವಾಗಿ ಹಿಡಿದು ವೈಷ್ಣವ ಭಕ್ತಿ ಪಂಥದ ಪ್ರಚಾರ ಮಾಡಿದರು. ಭಾಗವತದಲ್ಲಿಲ್ಲದ ರಾಧೆ ಕೃಷ್ಣನೊಂದಿಗೆ ಸೇರಿ

ಕೊಂಡದ್ದು ಈ ಪಂಥದ ಪ್ರಭಾವದಿಂದಲೇ. ರಾಧೆಯ ಉಲ್ಲೇಖ ಬ್ರಹ್ಮ ವೈವರ್ತ ಪುರಾಣದಲ್ಲಿ ಕಾಣಿಸಿಕೊಳ್ಳುತ್ತದೆ ; ಭಾರತ, ಭಾಗವತಗಳಲ್ಲಿಲ್ಲ. ಪುರಂದರದಾಸರು ತೀರಿಕೊಳ್ಳುವುದಕ್ಕೆ ಮೂವತ್ತು ವರ್ಷಗಳಷ್ಟು ಮೊದಲೇ ಕೃಷ್ಣಚೈತನ್ಯರು ತೀರಿ ಕೊಂಡರು.

ಮೇವಾಡದ ರಾಣನ ಸೊಸೆ ಮೀರಾಬಾಯಿ ಹುಟ್ಟಿದ್ದು 1570ರಲ್ಲಿ; ಪುರಂದರ ದಾಸರು ಹುಟ್ಟುವುದಕ್ಕೆ ಹದಿನೈದು ವರ್ಷಗಳ ಮುಂಚೆ. ಈಕೆಯೂ ವೈಷ್ಣವ ಪಂಥವನ್ನು ಹರಡಿದ ಹಿರಿಯಳು. ಈಕೆಯ ಭಕ್ತಿಗೀತೆಗಳು ಪ್ರಸಿದ್ಧವಾಗಿವೆ. ಈಕೆ ಯನ್ನು ಕಂಡು ಗೌರವಿಸಿದವರಲ್ಲಿ ಮುಗಲ್ ಚಕ್ರವರ್ತಿ ಅಕ್ಬರನೂ ಒಬ್ಬ. ಪುರಂದರ ದಾಸರು ಮುದುಕರಾಗಿರುವಾಗ ಉತ್ತರದೇಶದಲ್ಲಿ ಕಾಣಿಸಿಕೊಂಡ ಸಂತರಲ್ಲಿ ತುಳಸೀ ದಾಸರು ಮುಖ್ಯರು. ಅವರ 'ರಾಮಚರಿತಮಾನಸ' ಮೊದಲಾದ ಕಾವ್ಯಗಳು ಹಿಂದೀ ಸಾಹಿತ್ಯದ ಜನಪ್ರಿಯವಾದ ಅನರ್ಘ್ಯರತ್ನಗಳಾಗಿವೆ. ಕೃಷ್ಣಚೈತನ್ಯ ಮತ್ತು ವಲ್ಲಭಾಚಾರ್ಯರು ಕೃಷ್ಣಭಕ್ತರಾಗಿದ್ದರಂತೆ. ತುಳಸಿದಾಸರು ರಾಮಭಕ್ತರು. ರಾಮನೇ ಅವರ ಪಾಲಿಗೆ ಪರಬ್ರಹ್ಮ. ಪುರಂದರದಾಸರು ಕಾಲವಾದಮೇಲೆ ಇವರು ಬಹುಕಾಲ ಬದುಕಿದ್ದರು ; ಉತ್ತರ ಭಾರತದಲ್ಲಿ ಭಕ್ತಿಯ ಪ್ರಚಾರವನ್ನು ಕೈಗೊಂಡರು. ಪುರಂದರದಾಸರು ಬದುಕಿರುವಾಗ ಇವರ ಸಾಧನೆಯಿನ್ನೂ ಮುಗಿದಿರ ಲಿಲ್ಲ. ಪುರಂದರದಾಸರು ಕಾಲವಾದ ತರುಣದಲ್ಲೇ ಹುಟ್ಟಿ ನಾಡನ್ನು ಬೆಳಗಿದವರು ಸೂರದಾಸರು. ಇವರು ಅರವತ್ತು ಸಾವಿರ ದೋಹಗಳನ್ನು ಬ್ರಜಭಾಷೆಯಲ್ಲಿ ರಚಿಸಿದರಂತೆ ; ಇಂದಿಗೂ ಅವರ ಕವಿತೆಗಳು ಜನಪ್ರಿಯವಾಗಿವೆ. ಭಾಗವತ ಪುರಾಣ ವನ್ನು ಬ್ರಜಭಾಷೆಗೆ ಅನುವಾದ ಮಾಡಿ ಕೃಷ್ಣಭಕ್ತಿಯನ್ನು ಆ ಕಡೆ ಬೇರೂರಿಸಿದರು.

ಪುರಂದರದಾಸರ ಕಾಲಕ್ಕೆ ಸ್ವಲ್ಪ ಮುಂಚೆ ಮಹಾರಾಷ್ಟ್ರದಲ್ಲಿ ಜ್ಞಾನೇಶ್ವರ (ಮರಣ 1296) ಮತ್ತು ನಾಮದೇವ–ಸಿಂಪಿ ವಿಟ್ಠಲಭಕ್ತಿಯನ್ನು ಬೇರೂರಿಸಿದ್ದರು. ನಾಮದೇವ–ಸಿಂಪಿಗಳ ಕಾಲದ ಬಗ್ಗೆ ವಿವಾದವಿದೆ. ಕೆಲವರು ಅವರ ಜೀವನದ ಅವಧಿಯನ್ನು 1270 ರಿಂದ 1350ರವರೆಗೆ ಎಂದೂ, ಮತ್ತೆ ಕೆಲವರು ಅವರ ಜನ್ಮವೇ 1350ರ ಸುಮಾರಿಗೆ ಆಯಿತೆಂದೂ ಹೇಳುತ್ತಾರೆ. ಇದು ಏನಾದರಿರಲಿ, ಪುರಂದರದಾಸರಿಗೆ ಆರ್ತಭಕ್ತಿ, ನಾಮಸ್ಮರಣೆಗಳ ಸ್ಫೂರ್ತಿ ಒದಗಿದುದು ನಾಮದೇವ–ಸಿಂಪಿಗಳಿಂದಲೇ ಎನ್ನುವ ವಾದದಲ್ಲೇನೋ ತಿರುಳಿದೆ. ನಾಮದೇವರ ಅಭಂಗಗಳಲ್ಲಿ ಕಾಣುವ ಅನೇಕ ಭಾವನೆಗಳು ಪುರಂದರದಾಸರ ಪದಗಳಲ್ಲಿ ಕಾಣಸಿಗುತ್ತವೆ.

ಹೀಗೆ ಆ ಯುಗಧರ್ಮ ನಾಡಿನಲ್ಲಿ ಮೇಲುಗೈಯಾಗಿರುವಾಗ ಭಕ್ತಿಯ ದಾರಿ ಸ್ಪಷ್ಟವಾಯಿತು. ಶಾಸ್ತ್ರಪಾಂಡಿತ್ಯ, ಶುಷ್ಕತರ್ಕ, ಕರ್ಮಕಾಂಡಗಳು ಹಿಂದೆ ಸರಿದುವು; ಜ್ಞಾನಮಾರ್ಗ, ಕರ್ಮಮಾರ್ಗಗಳೆರಡನ್ನೂ ಮೀರಿ ಭಕ್ತಿಮಾರ್ಗ ನಿಂತಿತು, ಬೆಳೆ ಯಿತು. ಈ ಮಾರ್ಗದಲ್ಲಿ ಬಹುಜನರು ಸುಲಭವಾಗಿ ಕೈಗೊಳ್ಳಬಹುದಾದ ಸಂವಿಧಾನ ಗಳನ್ನು ಸಂತರು ಎತ್ತಿ ಹೇಳಿದರು. ಈ ಸಂವಿಧಾನಗಳಲ್ಲಿ ಮುಖ್ಯವಾದುದು ನಾಮ

ಸ್ಮರಣೆ. ರಾಮಾನಂದ, ಕಬೀರ, ನಾನಕ, ಚೈತನ್ಯ, ನಾಮದೇವ, ಮೀರಾಬಾಯಿ, ಸೂರದಾಸ ಎಲ್ಲರೂ ನಮ್ಮ ಶ್ರೀಪಾದರಾಜರು, ವ್ಯಾಸರಾಯಸ್ವಾಮಿಗಳು, ಪುರಂದರ ದಾಸರಂತೆ ನಾಮಸ್ಮರಣೆಯ ಹಿರಿಮೆಯನ್ನು ಹಾಡಿ ಹೊಗಳಿದರು ; ನಾಮಸ್ಮರಣೆ ಯಿಂದ ಭಕ್ತಿ ಪರಿಪಕ್ವವಾಗುವ ಬಗೆಯನ್ನು ವಿವರಿಸಿದರು. ನಾಮಸ್ಮರಣೆಗೆ ಆಧ್ಯಾತ್ಮಿಕ ತಾತ್ಪರ್ಯವಿರುವಂತೆಯೇ ಸಾಮಾಜಿಕ ತಾತ್ಪರ್ಯವೂ ಇದೆ. ಜ್ಞಾನ ಮಾರ್ಗ, ಕರ್ಮಮಾರ್ಗಗಳಲ್ಲಿ ವರ್ಣಾಶ್ರಮದ ಕಟ್ಟುಪಾಡುಂಟು, ಅಧಿಕಾರದ ವಿವೇಚನೆಯುಂಟು, ಪೂರ್ವಸಿದ್ಧತೆಯ ಅಗತ್ಯವುಂಟು. ಜನಸಾಮಾನ್ಯರೆಲ್ಲರಿಗೆ ದಕ್ಕುವಂಥದಲ್ಲ. ಆದರೆ ಯುಗಧರ್ಮ ಜನಸಾಮಾನ್ಯರ, ಬಹುಜನರ, ಸ್ತ್ರೀಪುರುಷ ರೆಲ್ಲರ ಅಭ್ಯುದಯವನ್ನು ಸಾಧಿಸುವ ಬಗೆಯನ್ನು ಕುರಿತದ್ದು. ಬೇರೆಬೇರೆ ಹಿನ್ನೆಲೆಗಳ, ಕುಲಧರ್ಮಗಳ, ಅಧಿಕಾರವೈವಿಧ್ಯಗಳ ಜನರೆಲ್ಲರಿಗೂ ಹಿತವಾಗಿ, ಅನುಕೂಲವಾಗಿ, ಸುಲಭವಾಗಿ ಪುರುಷಾರ್ಥಸಾಧನೆಯಾಗಲು ನಾಮಸ್ಮರಣೆ, ಹರಿಕೀರ್ತನೆ, ಭಜನೆ ಇವು ಸಾಧನೆಗಳೆಂದು ಆ ಕಾಲದ ಎಲ್ಲ ಸಂತರು ಒತ್ತಿ ಹೇಳಿದರು.

ಮತ್ತು ಆಧ್ಯಾತ್ಮಿಕತೆಯು ಸಾಮಾನ್ಯ ಜೀವನದಲ್ಲೇ ಮೂಡಿಬರುವುದು ಸಾಧ್ಯ ವೆಂದೂ, ಹಾಗೆ ಮೂಡಿಬರಬೇಕಾದುದೇ ಸಹಜವೆಂದೂ ಈ ಎಲ್ಲ ಸಂತರೂ ಕಾಣಿಸಿ ದರು. ಬಹುಮಟ್ಟಿಗೆ ಅವರೆಲ್ಲ ಗೃಹಸ್ಥರಾಗಿದ್ದವರೇ, ತಂತಮ್ಮ ಪ್ರಾಪಂಚಿಕ ಪರಿಸರ ಗಳಲ್ಲಿದ್ದವರೇ, ಸಾಮಾನ್ಯಜನರ ನಡುವೆ ಬಾಳನ್ನು ಕಳೆದವರೇ, ಜನರ ಪ್ರೀತಿಯನ್ನು ಪಡೆದುಕೊಂಡವರೇ. ಮೇಲಾಗಿ ಅವರೆಲ್ಲ ಕವಿಗಳು, ಕಾವ್ಯದ ಹೊನಲಲ್ಲಿ ಆಧ್ಯಾತ್ಮದ ಸೊಗಸನ್ನು ಸೇರಿಸಿದವರು. ಅವರ ರಚನೆಗಳು ಕೂಡ ಜನಪ್ರಿಯವಾಗುವಂತೆ ಸರಳ ಶೈಲಿಯನ್ನು ಹಿಡಿದವು ; ಛಂದೋಬದ್ಧವಾಗಿ ಪ್ರೌಢಸಾಹಿತ್ಯದ ಪ್ರಕಾರಕ್ಕೆ ಸೇರುವು ವಲ್ಲ. ಮೇಲಾಗಿ ಪ್ರಯತ್ನಪೂರ್ವಕವಾದ ರಚನೆಗಳೂ ಅಲ್ಲ ; ಬಹುಮಟ್ಟಿಗೆ ಸಂದರ್ಭಾನುಸಾರವಾಗಿ ಸ್ಫೂರ್ತಿಯ ಸೆಲೆಯಿಂದ ಹೊರಹೊಮ್ಮಿದ ಆಶುಕವಿತೆಗಳೇ. ಸಮಾಜವನ್ನು ತಿದ್ದಲೆಂದೇ ಹೊರಟವರು ಈ ಎಲ್ಲ ಸಂತರು ; ಸಮಾಜ ಸುಧಾರಣೆ ಅವರಿಗೆ ಮುಕ್ತಿಗಿಂತ ಹೆಚ್ಚು ಅಗತ್ಯವಾಗಿದ್ದ ವಿಚಾರ.

ಭಾಗ ೧

ವ್ಯಕ್ತಿನೀತಿ

ನಾಮಸ್ಮರಣೆ
ಜೀವನ ಸೂತ್ರಗಳು
ಸಂಸಾರ ಚಿತ್ರಗಳು

ನಾಮಸ್ಮರಣೆ

ಹರಿದಾಸರಲ್ಲಿ ಹರಿನಾಮಸ್ಮರಣೆಗೆ ಹೆಚ್ಚಿನ ಬೆಲೆಯುಂಟು. ಅದೊಂದು ವಿಶಿಷ್ಟಸಾಧನವೆಂಬ ಎಣಿಕೆ ಭಾಗವತ ಸಂಪ್ರದಾಯದಲ್ಲಿ ಮೊದಲಿಂದ ಬಂದದ್ದೆ. ವಿಟ್ಠಲ ಭಕ್ತಿಯ ಸಂದರ್ಭದಲ್ಲಿ ಅದಕ್ಕೆ ಹೆಚ್ಚಿನ ಒತ್ತು ದೊರಕಿತು. ಚೌಂಡರಸನು (1250ರ ಸುಮಾರು), "ಬೇರೆಯವರ ಗುಣಗಳನ್ನೂ ಅವಗುಣಗಳನ್ನೂ ಹಲವು ಬಗೆಗಳಲ್ಲಿ ತಿಳಿಯ ಹೇಳುವುದು ನಾಲಗೆಯ ಪ್ರಯೋಜನ ; ಹರಿಯ ವಿಶೇಷ ಗುಣಗಳನ್ನು ಹೇಳುವಂತೆ ನಾಮಭಜನೆ ಮಾಡುವ ಮನಸ್ಸನ್ನು ಅಭಂಗ ವಿಟ್ಠಲನೇ ನೀಡಬೇಕು" (ವಿಟ್ಠಲಾಷ್ಟಕ, ೫), "ನಾಮಬಲದಿಂದ ಅಘಕೋಟಿಯನೆಯ್ದ್ದಗೆಲ್ದು..." ಎಂದು ನಿರ್ದೇಶಿಸಿದುದು ಕರ್ನಾಟಕದ ಹರಿದಾಸರು ತಲೆಯೆತ್ತಿಕೊಳ್ಳುತ್ತಿದ್ದ ಕಾಲದಲ್ಲಿಯೇ. ವಿಟ್ಠಲಭಕ್ತನಾದ ನಾಮದೇವ ಸಿಂಪಿಯು "ನಿನ್ನ ನಾಮವನ್ನು ಅರಗಳಿಗೆ ನೆನೆಯದಿದ್ದರೆ ನನ್ನ ಪ್ರಾಣವೇ ತೊಲಗಲಿ" ಎಂದು ಹೇಳಿದುದೂ ಅದೇ ಸುಮಾರಿನಲ್ಲೇ (ಈ ಸಂತನ ಕಾಲ 1270–1350). ಈ ನಾಮಸ್ಮರಣೆಯ ಸಂಪ್ರದಾಯವನ್ನು ಹರಿದಾಸರ ಧರ್ಮವನ್ನಾಗಿ ಮಾಡಿದವರು ಶ್ರೀಪಾದರಾಜರು (1404–1502). "ನಾಲಿಗೆ ನಿನ್ನ ಕೊಂಡಾಡಲಿ", "ನಾಲಿಗ್ಗೆ ಭೂಷಣ ನಾರಾಯಣನಾಮ", "ಹರಿ ನಿನ್ನ ಒಮ್ಮೆ ನೆನೆದವ ನರಕಕ್ಕೆ ಹೋಗನಂತೆ",

'ಭವವೆಂಬ ಅಡವಿಯಲಿ ತಾಪತ್ರಯದಿ ಸಿಲುಕಿ
ಭಯಗೊಳ್ಳದಂತೆ ಗೆಲ್ಲುವುದಕೆ ಶ್ರೀಹರಿನಾಮ'

ಎಂದು ಮುಂತಾಗಿ ಹೇಳಿ ಈ ಪ್ರಕಾರದ ಹೆಚ್ಚಳವನ್ನು ಮನಗಾಣಿಸಿದರು. ಹರಿಸ್ಮರಣೆಯೇ ವಿಧಿಯೆಂದು, ಹರಿಯ ವಿಸ್ಮರಣೆ ನಿಷೇಧವೆಂದೂ ವಾಡಿಕೆ. "ಈಗಲೇ ಹರಿನಾಮದಿಂದೆಚ್ಚೆತ್ತು" ಮುಕ್ತಿಯ ದಾರಿಯನ್ನು ಆಗಮಜ್ಞರಿಂದ ಕಂಡುಕೊಳ್ಳಬೇಕೆಂದು ವಾದಿರಾಜಸ್ವಾಮಿಗಳು ಎಚ್ಚರಿಸಿರುವುದೂ ಇದೆ.

ನಾಮಸ್ಮರಣೆಗೆ ತಾತ್ತ್ವಿಕವಾದ ಹಿನ್ನೆಲೆಯೂ ಉಂಟು. ಅಪ್ರಾಕೃತನಾದ ಪರಮಾತ್ಮನ ವಿಷಯದಲ್ಲಿ ಮನಃಪ್ರಾವಣ್ಯವು ಕಾರಣಾಂತರದಿಂದ ಒದಗಿದರೂ ದೃಢವಾಗುವುದಿಲ್ಲ; ಅದು ದೃಢವಾಗುವುದು ಪರಮಾತ್ಮನ ಪ್ರಸಾದದಿಂದಲೇ. ಈ ಪ್ರಸಾದವನ್ನು ಪಡೆದುಕೊಳ್ಳುವುದೇ ಸಾಧನೆ. ಶ್ರವಣದಿಂದ ಪರೋಕ್ಷಜ್ಞಾನ ; ಮನನದಿಂದ ತತ್ತ್ವನಿಶ್ಚಯ ; ಧ್ಯಾನದಿಂದ ಇದರ ದಾರ್ಢ್ಯ. ಈ ದಾರ್ಢ್ಯದಿಂದಲೇ ಅಪರೋಕ್ಷಜ್ಞಾನವಾಗಿ, ಅದರಿಂದ ಪರಮಾತ್ಮನ ಪ್ರಸಾದ ಸಿದ್ಧವಾಗುತ್ತದೆ. ಮುಂದೆ ಲಿಂಗದೇಹ ಭಂಗ, ಸ್ವರೂಪಾನಂದಪ್ರಾಪ್ತಿ. ಶ್ರವಣ–ಮನನ–ಧ್ಯಾನಗಳಿಗೆ ಅಡ್ಡವಾಗಿ ಬರುವುದು ಪಾಪಗಳ ರಾಶಿ. ಹರಿಕಥಾಶ್ರವಣದಿಂದ ದುರಿತಗಳೆಲ್ಲ ನಾಶಗೊಳ್ಳುವುವೆಂದು ಹರಿದಾಸರ ನಂಬಿಕೆ ; ಹೀಗೆ ದುರಿತಗಳು ತೊಲಗಿದರೆ ಶ್ರವಣಾದಿ ಸಾಧನೆಗಳಲ್ಲಿ ಸೌಲಭ್ಯ. ಆದರೆ ಹಿಂದಣ ಪಾಪಗಳು ಮನಃಪ್ರಾವಣ್ಯವನ್ನು ಲೌಕಿಕದಲ್ಲೇ ತೊಡಗಿಸಬಹುದು; ಇದನ್ನು ಕಳೆದುಕೊಳ್ಳುವ ಉಪಾಯವೆಂದರೆ ಹರಿನಾಮಸ್ಮರಣೆ. ಪುರಂದರದಾಸರು

'ಶ್ರವಣದಿಂದ ಹೋಯಿತು ಬ್ರಹ್ಮಹತ್ಯಾ ಪಾಪ
ಸ್ಮರಣೆಯಿಂದ ಹೋಯಿತು ಸೇರಿದ್ದ ಪಾಪವು'

ಎಂದು ಸೂಚಿಸಿದ್ದಾರೆ. ಮತ್ತೆ "ಹರಿನಾಮಸ್ಮರಣೆಯೊಂದೇ ಸಾಲದೆ" ಎಂದು ಅದರ ಬಲವನ್ನೂ ಕಾಣಿಸಿದ್ದಾರೆ. ಹರಿಕಥಾಶ್ರವಣ ಮತ್ತು ಹರಿನಾಮಸ್ಮರಣಗಳೆರಡೂ ಕೂಡಿ ಖಂಡಸ್ಮೃತಿಯನ್ನು (ಎಂದರೆ ಮನನವನ್ನು) ಕೈಗೂಡಿಸಿ, ಮುಂದೆ ಅಖಂಡಸ್ಮೃತಿಗೆ (ಎಂದರೆ ಧ್ಯಾನಕ್ಕೆ) ನೆರವಾಗುತ್ತವೆ. ಪರಮಾತ್ಮನ ಪ್ರಸಾದಕ್ಕೆ ಹೀಗೆ ನಾಮಸ್ಮರಣೆ ಸುಲಭವಾದ ಉಪಾಯ. ಹಾಗೆಂದೇ

'ಕ್ಷಿಪ್ರ ಪ್ರಾಯಶ್ಚಿತ್ತವೊಂದಿಹುದು ಕೇಳಯ್ಯ
ಈ ಪೃಥಿವಿಯೊಳಗೆಲ್ಲ ನಿನ್ನ ನಾಮ'

ಎಂದು ವಿಜಯದಾಸರು ಹೇಳಿದರು. ನಾಮಸ್ಮರಣೆಯಿಂದ ಲೌಕಿಕ ವಿಚಾರದಲ್ಲಿ ವಿರಕ್ತಿಯೂ ಒದಗಿ, ಭಕ್ತಿಗೆ ಬಲವನ್ನು ಕೊಡುವುದೆಂದು ಅವರ ವಿವರಣೆ.

ಆದರೆ ನಾಮಸ್ಮರಣೆ ಮಾಡುವಾಗ ಮಾಹಾತ್ಮ್ಯಜ್ಞಾನವೂ ಅತ್ಯಧಿಕವಾದ ಸ್ನೇಹವೂ ಇರಬೇಕಾದುದಿದೆ. ಹರಿಯ ಸರ್ವೋತ್ತಮತ್ವ, ಸರ್ವಶಕ್ತಿತ್ವ, ಅಂತರ್ಯಾಮಿತ್ವ ಮೊದಲಾದ ಗುಣಗಳು ಮನದಟ್ಟಾಗಿದ್ದರೆ ಹರಿಯ ನಾಮ ಅವೆಲ್ಲವನ್ನೂ ಒಳಗೊಂಡು ಪ್ರಬಲವಾದ ಶಸ್ತ್ರವಾಗುತ್ತದೆ. ವಿಷ್ಣು ಸಹಸ್ರನಾಮದಲ್ಲಿ ಒಂದೊಂದು ಹೆಸರೂ 'ಶಸ್ತ್ರ'ವೆಂದು ಪ್ರಕ್ರಿಯೆ. ಬೃಹತೀ ಸಹಸ್ರದಲ್ಲಿ ಒಂದೊಂದು ಶಸ್ತ್ರವೂ (ಮೂವತ್ತಾರು ಅಕ್ಷರಗಳುಳ್ಳ ನಾಮ) ಭಗವದ್ರೂಪವಿಶೇಷವನ್ನು ರಹಸ್ಯವಾಗಿ ಪ್ರತಿಪಾದಿಸುವುವೆಂದು ಹೇಳಿದೆ ; ಶಸ್ತ್ರದ ಒಂದೊಂದು ಅಕ್ಷರವೂ ಸಾಲಿಗ್ರಾಮ ಶಿಲೆಯಂತೆ ಹರಿಸಾನ್ನಿಧ್ಯವನ್ನು ಒಳಗೊಂಡದ್ದೆಂದೂ ವಿವರಣೆಯಿದೆ. ಹೀಗೆ ಹರಿಯ ಹೆಸರನ್ನು ಹೇಳುವಾಗ ಮಾಹಾತ್ಮ್ಯಜ್ಞಾನದ ಅರಿವಿದ್ದರೆ ಸಾಧಕನಿಗೆ ಸಹಾಯವಾಗುತ್ತದೆ. ಇಲ್ಲಿ ನಾಮಸ್ಮರಣೆ ಮನನ, ಧ್ಯಾನಗಳಿಗೆ ಪೂರಕವಾಗುವ ಸಂಭವವಿದೆ.

ಆದರೆ ಭಾಗವತರ ಕಲ್ಪನೆಯಲ್ಲಿ ಹರಿಯ ಹೆಸರಿಗೇ ಸ್ವತಂತ್ರವಾದ ಒಂದು ಸಾಮರ್ಥ್ಯವಿದೆ. ಅದರ ಸ್ಮರಣೆಯ ಹಿನ್ನೆಲೆಯಲ್ಲಿ ತತ್ತ್ವನಿಶ್ಚಯವಾಗಲಿ, ಸದಾಚಾರವಾಗಲಿ, ಮುಕ್ತಿಯೋಗ್ಯತೆಯಾಗಲಿ ಇರಲೇಬೇಕೆಂಬ ನಿಯಮವಿರದು. ದ್ರೌಪದಿಯಾಗಲಿ, ಶಿವನಾಗಲಿ, ಹನುಮಂತನಾಗಲಿ, ಪ್ರಹ್ಲಾದನಾಗಲಿ, ನಾರದನಾಗಲಿ, ಅಂಬರೀಷನಾಗಲಿ ನಾಮಸ್ಮರಣೆ ಮಾಡಿದಾಗ ಹರಿಯ ಮಾಹಾತ್ಮ್ಯಜ್ಞಾನವಿದ್ದಿತು. ಆದರೆ ದುರಾಚಾರಿಯಾದ ಅಜಾಮಿಳನೂ ನಾರಾಯಣನೆಂಬ ಹೆಸರನ್ನು ಹೇಳಿದ ಮಾತ್ರದಿಂದ ಸದ್ಗತಿಯನ್ನು ಪಡೆದನೆಂದು ಕತೆಯಿದೆಯಷ್ಟೆ ? ನಾರಾಯಣನ ಹೆಸರನ್ನು ಹೇಳುವಾಗ ಅವನಿಗೆ ಹರಿಯ ಸ್ಮರಣೆಯಾಗಲಿ, ಹರಿಯಲ್ಲಿ ಮನಃಪ್ರಾವಣ್ಯವಾಗಲಿ ಎಳ್ಳಷ್ಟೂ ಇರಲಿಲ್ಲ, ಸದಾಚಾರದ ಬಲವಂತೂ ಮೊದಲೇ ಇರಲಿಲ್ಲ. ಆದರೂ ನಾಮೋಚ್ಚಾರಣೆಯ ಬಲದಿಂದಲೇ ಅವನ ದುರಿತಗಳೆಲ್ಲ ದೂರವಾದುವೆಂದು ಸೂಚನೆ. ಮತ್ತೆ, ಮನುಷ್ಯಸ್ವಭಾವದ ಸೌಲಭ್ಯವೇ ಇಲ್ಲದ ಆನೆ ಹರಿಯನ್ನು ನೆನೆದು ಸೊಂಡಿಲನ್ನೆತ್ತಿದುದೇ ಅದರ ಮುಕ್ತಿಗೆ ಕಾರಣವಾಯಿತೆಂಬ ಪ್ರಸಂಗವಿದೆಯಲ್ಲ ? ಭಗವದ್ಗೀತೆಯಲ್ಲಿ ಬರುವ 'ಅಪಿ ಚೇತ್

ಸುದುರಾಚಾರಃ' ಎಂಬ ಶ್ಲೋಕವನ್ನು ಭಾಗವತರು ತಮ್ಮ ಶ್ರದ್ಧೆಗೆ ಪ್ರಮಾಣವಾಗಿ ತೋರಿಸುತ್ತಾರೆ.

ದಿಟವಾಗಿ, ಇದು ಅವರ ತಾತ್ಪರ್ಯವಲ್ಲ. ಭಕ್ತಿಯ ಬಲದಿಂದಲೇ ನಾಮಸ್ಮರಣೆಯ ಪ್ರಭಾವ. 'ನಾಮ' ಎನ್ನುವ ಮಾತು ಸಂಸ್ಕೃತದಲ್ಲಿ 'ಮ್ನಾ ಅಭ್ಯಾಸೇ' ಎಂಬ ಧಾತುವಿನಿಂದ ನಿಷ್ಪನ್ನವಾಗಿ ಭಾವನಾವ್ಯಾಪಾರವನ್ನು ಸೂಚಿಸುತ್ತದೆ. ಹೆಸರು ವ್ಯಕ್ತಿಯ ಸಂಜ್ಞೆ, ಲಿಂಗ; ಹೆಸರಿನಲ್ಲಿ ಶಾಬ್ದೀಭಾವನಾ (ಉಚ್ಚಾರಣೆ), ಆರ್ಥೀಭಾವನಾ (ಮನನ, ಸ್ಮರಣ, ಚಿಂತನ) ಎರಡೂ ಇದ್ದಾಗಲೇ ಅದರ ಭಾವಕ ವ್ಯಾಪಾರ ಪರಿಪೂರ್ಣವಾಗುವುದು. ಹೆಸರನ್ನು ಹೇಳಿದಾಗ, ಭಗವದ್ಗುಣಗಳು ನೆನಪಿಗೆ ಬರಬೇಕೆಂದೇ 'ನಾಮಸ್ಮರಣೆ'ಯೆಂದು ಸಾಧನವನ್ನು ನಿರ್ದೇಶಿಸಿದ್ದಾರೆ; ಅದು ಕೇವಲ 'ನಾಮೋಚ್ಚಾರಣೆ'ಯಲ್ಲ. ಆದ್ದರಿಂದಲೇ ಪುರಂದರದಾಸರು 'ಸುಮ್ಮನೆ ದೊರಕುವುದೆ ಶ್ರೀ ರಾಮನ ದಿವ್ಯನಾಮವು' ಎಂದು ಕೇಳಿ, ಜನ್ಮಜನ್ಮಾಂತರದ ದುಷ್ಕರ್ಮ ಹೋಗಿರಬೇಕೆಂದೂ ಭಕ್ತಿರಸದಲ್ಲಿ ಚಿತ್ತ ಪರವಶವಾಗಿರಬೇಕೆಂದೂ ಅಧಿಕಾರವನ್ನು ಸೂಚಿಸುತ್ತಾರೆ.

ಸಮಾಜದಲ್ಲಿ ದುಷ್ಟ–ಶಿಷ್ಟ ವರ್ಗಗಳೆರಡೂ ಇದ್ದೇ ಇವೆಯಷ್ಟೆ. ಆದರೆ ಈ ಎರಡು ವರ್ಗಗಳೂ ಉದ್ಧಾರದ ಹಾದಿಯನ್ನು ಹಿಡಿಯಬೇಕಾದರೆ ನಾಮಸ್ಮರಣೆಯಂಥ ಸಾರ್ವಜನಿಕ ಹಾದಿಗಳ ನಿರ್ಮಾಣ ಅಗತ್ಯ ಎಂಬುದನ್ನು ಕೀರ್ತನಕಾರರು ಕಂಡುಕೊಂಡಿದ್ದರು. ನಾಮಸ್ಮರಣೆಯ ಪ್ರಯೋಜನಗಳನ್ನು ವಿವರವಾಗಿ ವರ್ಣಿಸಿ ಜನರ ಮನಸ್ಸನ್ನು ಅಲೌಕಿಕ ಚಿಂತನೆಯ ನೆಲೆಯಲ್ಲಿ ನಿಲ್ಲಿಸುವುದು ಅವರ ಆಶಯವಾಗಿತ್ತು. ಮೌಲ್ಯಾಧಾರಿತ ಸಮಾಜ ನಿರ್ಮಾಣದ ಮೊದಲ ಹಂತವಾಗಿ ಸಮಾಜದ ಜನರ ಮನಸ್ಸು ದುಷ್ಪ್ರವೃತ್ತಿಗಳಿಗೆ ಒಲಿಯದಂತೆ ಮಾಡಲು ನಾಮಸ್ಮರಣೆಯ ಮೂಲಕ ದೈವಚಿಂತನ ಪದ್ಧತಿಯನ್ನು ಬೆಳೆಸುವುದು ಹರಿದಾಸರ ಪದ್ಧತಿಯಾಗಿದೆ. ಪರಂಪರೆಯಿಂದಲೂ ದೈವ ಚಿಂತನವು ಮನುಷ್ಯನ ಉದ್ಧಾರಕ್ಕೆ ಹೇಗೆ ಕಾರಣವಾಗಿದೆಯೆಂಬುದನ್ನು ಪುರಂದರದಾಸರು ಹಲವಾರು ಪೌರಾಣಿಕ, ಐತಿಹಾಸಿಕ ಸಾಮಾಜಿಕ ಘಟನೆಗಳ ಮೂಲಕ ವಿವರಿಸಿದ್ದಾರೆ. ಮನುಷ್ಯನ ದೈಹಿಕ–ಮಾನಸಿಕ ಆರೋಗ್ಯಕ್ಕೆ ನಾಮಸ್ಮರಣೆ ಹೇಗೆ ಸಹಾಯಕವೆಂಬುದನ್ನು ಅವರು ಬಗೆಬಗೆಯ ನಿದರ್ಶನಗಳಿಂದ ತೋರಿಸಿಕೊಟ್ಟಿದ್ದಾರೆ. "ತಲೆ ಹುಳುಕ ನಾಯಿಯಂತೆ" ಬಯಲಾಸೆಗೆ ಸಿಕ್ಕಿ ನವೆಯುವ ಸಮಾಜದ ಜನಕ್ಕೆ 'ನಾಮಸ್ಮರಣೆ' ಒಂದು ಸಿದ್ಧೌಷಧವಾಗುತ್ತದೆಂಬುದು ಅವರ ನಂಬಿಕೆಯಾಗಿದೆ.

ಯಮುನಾಕಲ್ಯಾಣಿ ಏಕ

ಹರಿಸ್ಮರಣೆ ಮಾಡೊ ನಿರಂತರ ಪ

ಪರಗತಿಗೆ ಇದು ನಿಧಾನ ಅ

ದುರಿತಗಜಕ್ಕೆ ಕಂಠೀವರನೆನಿಸಿದ
ಶರಣಾಗತ ರಕ್ಷಕ ಪಾವನ ನೀ ೧

ಸ್ಮರಣೆಗೈದ ಪ್ರಹ್ಲಾದನ ರಕ್ಷಿಸಿದ
ದುರುಳ ಹಿರಣ್ಯಕನುದರವ ಸೀಳಿದ ೨

ತರುಣಿ ದ್ರೌಪದಿ ಮೊರೆಯಿಡಲಾಕ್ಷಣ
ಭರದಿಂದಕ್ಷಯವಿತ್ತ ಮಹಾತ್ಮನ ೩

ಅಂದು ಅಜಾಮಿಳ ಕಂದನ ಕರೆಯಲು
ಬಂದು ಸಲಹಿ ಆನಂದವ ತೋರಿದ ೪

ಶ್ರೀಶ ಪುರಂದರವಿಠ್ಠಲರಾಯನ
ಸೃಷ್ಟಿಗೊಡೆಯನ ಮುಟ್ಟಿ ಭಜಿಸಿ ನೀ ೫

ಪರಗತಿಗೆ ನಿಧಾನ—ಮೋಕ್ಷಕ್ಕೆ ಆಸರೆ (ನಿರ್ಧಾರ ಎಂದೂ ಪಾಠಾಂತರವಿದೆ).
ದುರಿತಗಜಕ್ಕೆ ಕಂಠೀರವ—ಪಾಪಗಳೆಂಬ ಆನೆಗೆ ಸಿಂಹದಂತಿರುವ.
ಕಂದನ—ತನ್ನ ಮಗನನ್ನು, ನಾರಾಯಣನೆಂಬ ಹೆಸರಿನವನನ್ನು.

೨

ಸೌರಾಷ್ಟ್ರ ಅಟ್ಟ

ಹರಿಯೆಂಬ ನಾಮಾಮೃತದ ಸುರುಚಿಯು ಪರಮ ಭಕ್ತರಿಗಲ್ಲದೆ ಪ

ಅರಿಯದ ಕಡುಮೂರ್ಖ ನೀಚಜನರಿಗೆಲ್ಲ ಹರುಷವಾಗಬಲ್ಲದೆ ಅ

ಅಂದಿಗೆ ಅರಳೆಲೆ ಇಟ್ಟರೆ ಕೋಡಗ ಕಂದನಾಗಬಲ್ಲುದೆ
ಹಂದಿಗೆ ಸಕ್ಕರೆ ತುಪ್ಪ ತಿನಿಸಲು ಗಜೇಂದ್ರನಾಗಬಲ್ಲುದೆ
ಚಂದಿರನ ಪೂರ್ಣ ಕಳೆಯನು ತೋರಲು ಅಂಧ ನೋಡಬಲ್ಲನೆ
ಇಂದಿರೆ ಅರಸನ ನಾಮದ ಮಹಿಮೆಯ ಮಂದಜ್ಞಾನಿ ಬಲ್ಲನೆ ೧

ಉರಗಕ್ಕೆ ಕ್ಷೀರವನೆರೆಯಲು ಆದರ ವಿಷವು ಹೋಗಬಲ್ಲುದೆ
ತ್ವರೆಯಿಂದ ನೀಲಿಯ ಕರದಲಿ ತೊಳೆಯಲು ಕರಿದು ಹೋಗಬಲ್ಲುದೆ
ಪರಿಪರಿ ಭಂಗಾರವಿಟ್ಟರೆ ದಾಸಿಯು ಅರಸಿಯಹಾಗಬಲ್ಲಳೆ
ಭರದಿಂದ ಶ್ವಾನನ ಬಾಲವ ತಿದ್ದಲು ಸರಳವಾಗಬಲ್ಲುದೆ ೨

ಮೋಡಕೆ ಮಯೂರ ಕುಣಿವಂತೆ ಕುಕ್ಕುಟ ನೋಡಿ ಕುಣಿಯಬಲ್ಲುವೆ
ಹಾಡಿನ ಸವಿಯನು ಬಧಿರನು ಕೇಳಿ ಹರುಷಪಡಲು ಬಲ್ಲನೆ
ಗೋಡೆಯ ಮುಂದೆ ನಾಟ್ಯವನಾಡಲು ನೋಡಿ ಸುಖಿಸಬಲ್ಲುದೆ
ರೂಢಿಗೊಡೆಯ ನಮ್ಮ ಪುರಂದರವಿಠಲನ ಮೂಢಜ್ಞಾನಿ ಬಲ್ಲನೆ ೩

ಅಂದಿಗೆ ಅರಳೆಲೆ—ಆಭರಣಗಳು, ಕಾಲಂದುಗೆ, ಜಡೆಬಿಲ್ಲೆ ಮುಂತಾದುವು.

ಕೋಡಗ—ಕೋತಿ.

ಕರಿದು—ಕಪ್ಪು.

ಕುಕ್ಕುಟ—ಕೋಳಿ.

ಬಧಿರ—ಕಿವುಡ.

ರೂಢಿಗೊಡೆಯ—ಲೋಕವ್ಯವಹಾರಕ್ಕೆ ನಿಯಾಮಕನಾದ.

ಅಠಾಣ | ಚಾಪು

ಸ್ಮರಣೆಯೊಂದೇ ಸಾಲದೆ, ಗೋವಿಂದನ
ಸ್ಮರಣೆ ಒಂದೇ ಸಾಲದೆ ಪ

ಪರಿಪರಿ ವಿಧವೆಲ್ಲ ಭ್ರಾಂತಿಯೆಂದು ತಿಳಿದು
ಪರಮಪುರುಷ ಹರಿಯು ನೆರೆ ನಂಬಿದವರಿಗೆ ಅ

ಪಾತಕಿಯಾದರೇನೋ ಸರ್ವಪ್ರಾಣಿ
ಘಾತಕಿಯಾದರೇನೊ
ನೀತಿಯ ಬಿಟ್ಟು ದುಷ್ಕರ್ಮಿಯಾದರೇನೋ
ಪ್ರೀತಿಯಿಂದಜಾಮಿಳನ ಸಲಹಿದ ಹರಿಯು ೧

ಕಡುಮೂರ್ಖನಾದರೇನೋ ದುಷ್ಕರ್ಮವ
ಹಿಡಿದಾತನಾದರೇನೊ
ಜಡನಾದರೇನಲ್ಪಜಾತಿಯಾದರೇನೋ
ಬಿಡದೆ ಪ್ರಹ್ಲಾದನ ಸಲಹಿದ ಹರಿಯು ೨

ಸಕಲ ತೀರ್ಥಕ್ಷೇತ್ರದಿ ಮಾಡಿದಂಥ
ನಿಖಿಳ ಪುಣ್ಯದ ಫಲವು
ಭಕುತಿ ಪೂರ್ವಕವಾಗಿ ಬಿಡದನುದಿನದಲಿ
ಪ್ರಕಟ ಪುರಂದರವಿಠಲನ ನಾಮ ೩

ಪರಿಪರಿ ವಿಧವೆಲ್ಲ—ಪ್ರಪಂಚದ ಹಲವು ಪ್ರಸಕ್ತಿಗಳೆಲ್ಲ.
ನೆರೆನಂಬಿದವರಿಗೆ—ಚೆನ್ನಾಗಿ (ಅನನ್ಯನೆಂದು) ಶ್ರದ್ಧೆಯಿಟ್ಟವರಿಗೆ.
ಜಡನಾದರೇನು—ಮೂರ್ಖನಾದರೇನು.

೪

ಆನಂದಭೈರವಿ ಅಟ್ಟ

ನಾರಾಯಣ ನಿನ್ನ ನಾಮದ ಸ್ಮರಣೆಯು
ಸಾರಾಮೃತವೆನ್ನ ನಾಲಿಗ್ಗೆ ಬರಲಿ ಪ

ಕೂಡುವಾಗಲಿ ನಿಂತಾಡುವಾಗಲಿ ಮತ್ತೆ
ಹಾಡುವಾಗಲಿ ಹರಿದಾಡುವಾಗಲಿ
ಖೋಡಿ ವಿನೋದದಿ ನೋಡದೆ ನಾ ಬಲು
ಮಾಡಿದ ಪಾಪ ಬಿಟ್ಹೋಡಿ ಹೋಗೋಹಾಂಗೆ ೧

ಊರಿಗೆ ಹೋಗಲಿ ಊರೊಳಗಿರಲಿ
ಕರಣಾರ್ಥಂಗಳೆಲ್ಲ ಕಾದಿರಲಿ
ವಾರಿಜನಾಭ ನರಸಾರಥಿ ನಿನ್ನನು
ಸಾರಿಸಾರಿಗೆ ನಾ ಬೇಸರದ್ಹಾಂಗೆ ೨

ಹಸಿದಿದ್ದಾಗಲಿ ಹಸಿವಿಲ್ಲದಾಗಲಿ
ಕಸವಿಸಿಯಿರಲಿ ಹರುಷಿರಲಿ
ವಸುದೇವಾತ್ಮಕ ಶಿಶುಪಾಲಕ್ಷಯ
ಅಸುರಾಂತಕ ನಿನ್ನ ಹೆಸರು ಮರೆಯದ್ಹಾಂಗೆ ೩

ಕಷ್ಟದಲಿರಲಿ ಉತ್ಕೃಷ್ಟದಲಿರಲಿ
ಎಷ್ಟಾದರೂ ಮತಿಗೆಟ್ಟಿರಲಿ
ಕೃಷ್ಣ ಕೃಷ್ಣಾ ಎಂದು ಶಿಷ್ಯರು ಪೇಳುವ
ಅಷ್ಟಾಕ್ಷರ ಮಹಾಮಂತ್ರದ ನಾಮದ ೪

ಕನಸಿನೊಳಾಗಲಿ ಕಳವಳಿಕಾಗಲಿ
ಮನಸುಗೊಟ್ಟಿರಲಿ ಮುನಿದಿರಲಿ
ಜನಕಜಾಪತಿ ನಿನ್ನ ಚರಣಕಮಲವನ್ನು
ಮನಸಿನೊಳಗೆ ಒಮ್ಮೆ ನೆನೆಸಿಕೊಳ್ಳೋ ಹಾಂಗೆ ೫

ಜ್ವರ ಬಂದಾಗಲಿ ಛಳಿ ಬಂದಾಗಲಿ
ಮರಳಿ ಮರಳಿ ಮತ್ತೆ ನಡುಗುವಾಗಲಿ
ಹರಿನಾರಾಯಣ ದುರಿತನಿವಾರಣೆಂದು
ಇರುಳು ಹಗಲು ನಿನ್ನ ಸ್ಮರಣೆ ಮರೆಯದ್ಹಾಂಗೆ ೬

ಸಂತತ ಹರಿ ನಿನ್ನ ಸಾಸಿರನಾಮವ
ಅಂತರಂಗದ ಒಳಗಿರಿಸಿ
ಎಂತೋ ಪುರಂದರವಿಠ್ಠಲರಾಯನೆ
ಅಂತ್ಯಕಾಲದಲ್ಲಿ ಚಿಂತಿಸೊಹಾಂಗೆ ೭

[ಹುಟ್ಟಿನಿಂದ ಸಾವಿನವರೆಗೆ ನಮ್ಮ ಸಾಮಾಜಿಕ ವ್ಯವಹಾರಗಳಲ್ಲಿ, ದೈನಂದಿನ ಜೀವನದಲ್ಲಿ ದೈವಚಿಂತನವು ಹಾಸುಹೊಕ್ಕಾಗಿ ನೆಯ್ದುಕೊಂಡು ಬರಬೇಕೆಂಬುದು ಪುರಂದರದಾಸರ ಆಶಯವಾಗಿದೆ. ಚಳಿ ಜ್ವರ ಹಸಿವು ಮೊದಲಾದವುಗಳು ದೇಹವನ್ನು ಕಾಡಿದಾಗ, ಕಷ್ಟ ಉತ್ಕೃಷ್ಟ ಸ್ಥಿತಿ ಬಂದಾಗ, ಪ್ರವಾಸದಲ್ಲಿದ್ದಾಗ, ಸಮಾಜದ ಜನರೊಂದಿಗೆ ಸಂಭಾಷಿಸುವಾಗ ದೈವಚಿಂತನ ಜೊತೆಗಿರಲೇಬೇಕೆಂದು ಅವರು ಪ್ರತಿಪಾದಿಸುತ್ತಾರೆ.]

ಕರಣಾರ್ಥಂಗಳೆಲ್ಲ—ಕರಣವೆಂದರೆ ಇಂದ್ರಿಯ ; ಐದು ಇಂದ್ರಿಯಗಳ ವಿಷಯಗಳು ಕರಣಾರ್ಥಗಳು ; ರೂಪ, ಶಬ್ದ, ರಸ, ಗಂಧ, ಸ್ಪರ್ಶ. ಇವು ಅನುಭವಕ್ಕೆ ಬರದಂತೆ ದೂರವಾಗಿರಲಿ (ಕಾದಿರಲಿ).

ನರಸಾರಥಿ—ಅರ್ಜುನನಿಗೆ ಸಾರಥಿ ; ಮನುಷ್ಯರಿಗೆ ಪ್ರೇರಕ, ನಿಯಾಮಕ.

ಕಸವಿಸಿ—ದೇಹ ಮನಸ್ಸುಗಳ ಬೇನೆ, ದುಗುಡ ; ನೆಮ್ಮದಿಯಿಲ್ಲದಿರುವುದು.

ಉತ್ಕೃಷ್ಟದಲಿ—ಸುಖಲೋಲುಪ್ತಿಯಲ್ಲಿ.

ಅಷ್ಟಾಕ್ಷರ ಮಹಾಮಂತ್ರ—'ಓಂ ನಮೋ ನಾರಾಯಣಾಯ' ಎನ್ನುವ ಮಂತ್ರ.

ಅಂತ್ಯಕಾಲದಲ್ಲಿ ಚಿಂತಿಸೋ ಹಾಂಗೆ—ಕಡೆಗಾಲದಲ್ಲಿ ಪರಮಾತ್ಮನ ಕಡೆ ಮನಃಪ್ರಾವಣ್ಯ ಒದಗಬೇಕಾದರೆ ಮೊದಲೇ ಮನಃಪ್ರಾವಣ್ಯದ ಸಂಸ್ಕಾರವಿರಬೇಕು. ಮತ್ತು ಕಡೆಗಾಲದಲ್ಲಿ ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿ ಹರಿಯ ಚಿಂತನೆ ಒದಗಬೇಕಾದರೆ ಪರಮಾತ್ಮನ ಅನುಗ್ರಹವಿರಬೇಕು. ಎರಡಕ್ಕೂ ಸಿದ್ಧತೆಯನ್ನು ಈಗಲೇ ಮಾಡಿಕೊಳ್ಳಬೇಕೆಂದು ಹರಿದಾಸರ ಆಶಯ.

ಕೇದಾರಗೌಳ ಚಾಪು

ಕೊಡು ಕಂಡ್ಯ ಹರಿಯೆ ನಿನ್ನ ನಾಮ
ಕೊಡು ಕಂಡ್ಯ ಹರಿಯೆ ಪ

ಕಾಡಲಿಲ್ಲ ಹರಿಯೆ, ಬಡವನೆಂದು ನಿನ್ನ ಅ

ಒಡಲು ತುಂಬದುಯೆಂದು ಬಳಲಿಸ ಬರಲಿಲ್ಲ
ಸಡಗರದಿಂ ಭಾಗ್ಯ ಬೇಡಲಿಲ್ಲ
ಮಡದಿ ಮಕ್ಕಳಿಗಾಗಿ ಕಡುಮೋಹ ಎನಗಿಲ್ಲ
ಬಿಡದೆ ನಿನ್ನ ಸ್ಮರಣೆ ಕೊಡು ಒಂದೆ ಸಾಕು ೧

ಸ್ನಾನ ಮೌನ ಜಪ ತಪಗಳು ಎನಗಿಲ್ಲ
ನಾನಾ ಯೋನಿಗಳಲ್ಲಿ ಬಳಲಿ ಬಂದೆ
ದೀನರಕ್ಷಕ ನೀನೆ ದಯದಿಂದಲೆನಗಿನ್ನು
ಧ್ಯಾನಶುದ್ಧಿಯನ್ನಿತ್ತು ಸಲಹಯ್ಯ ಹರಿಯೆ ೨

ಬಲೆಗೆ ಸಿಲುಕಿದ ಮೃಗದಂತೆ ಬಾಯ್ಬಿಡುತಲಿ
ಅಲಸಿ ಕೋಟಲೆ ಸಂಸಾರದಿಂದ
ತಲೆ ಹುಳುಕ ನಾಯಂತೆ ಬಯಲಾಸೆಗೆ ಸಿಲುಕಿದೆ
ಸಲಹೊ ಪುರಂದರವಿಠಲ ದೇವರ ದೇವ ೩

[ಹರಿದಾಸರು ಪ್ರಾಪಂಚಿಕ ಸಂಪತ್ತಿಗಾಗಿ, ಲೌಕಿಕ ಸುಖಕ್ಕಾಗಿ ಹರಿಸ್ಮರಣೆಯನ್ನು ಮಾಡಬಾರದು. ಧ್ಯಾನಶುದ್ಧಿಯನ್ನು ಪಡೆದುಕೊಂಡು, ಅದರ ಮೂಲಕ ಅಪರೋಕ್ಷ ಜ್ಞಾನವನ್ನು ಹೊಂದಬೇಕೆಂಬುದು ಅವರ ನಿರೀಕ್ಷೆಯಾಗಿರಬೇಕು. ವಿಷಯ ಭೋಗಗಳಲ್ಲಿ ದೋಷಬುದ್ಧಿ, ಸಂಸಾರದಲ್ಲಿ ವಿರಕ್ತಿ ಇವೆರಡೂ ನಾಮಸ್ಮರಣೆಯ ಫಲಗಳೆಂದು ಈ ಪದದ ತಾತ್ಪರ್ಯ.]

೬

ಶಂಕರಾಭರಣ ಆದಿ

ಹರಿಯ ನೆನೆಯಿರೋ
ನಮ್ಮ ಹರಿಯ ನೆನೆಯಿರೋ ಪ

ಬರಿಯ ಮಾತನಾಡಿ ಬಾಯ
ಬರಡುಮಾಡಿ ಕೆಡಲು ಬೇಡಿ ಅ

ನಿತ್ಯವಲ್ಲ ಈ ಶರೀರ ಅನಿತ್ಯವೆಂದು ನೋಡಿರಯ್ಯ
ಹೊತ್ತು ಕಳೆಯಬೇಡಿ ಕಾಲಮೃತ್ಯು ಬಾಹೊದೀಗಲೇ ೧

ಕಾಮ ಕ್ರೋಧಗಳನಂ ತೊರೆದು
ಕಾಮನಯ್ಯನ ಕಥೆಯ ಒರೆದು
ಪ್ರೇಮದಿಂದ ಭಜಿಸಿರಯ್ಯ
ಪಾಮರರಂತೆ ತಿರುಗದೆ ೨

ಹಾಳುಹರಟೆಯಾಡಿ ಮನವ
ಬೀಳುಮಾಡಿಕೊಳ್ಳಬೇಡಿ
ಏಳು ದಿನದ ಕಥೆಯ ಕೇಳಿ
ಏಳಿರೋ ವೈಕುಂಠಕ್ಕೆ ೩

ಮೆಟ್ಟಿ ಪುಣ್ಯಕ್ಷೇತ್ರವನು
ಸುಟ್ಟು ಹೋಗುವದಯ್ಯ ಪಾಪ
ಮುಟ್ಟಿ ಭಜಿಸಿರಯ್ಯ ಪುರಂದರ
ವಿಠಲನ ಚರಣವ ೪

[ನಾಮಸ್ಮರಣೆ, ಕಥಾ ಕಾಲಕ್ಷೇಪ ಮತ್ತು ತೀರ್ಥಯಾತ್ರೆಗಳ ವೈಶಿಷ್ಟ್ಯವನ್ನು ಈ ಕೀರ್ತನೆ ಚಿತ್ರಿಸುತ್ತದೆ.]

ಕಾಮನಯ್ಯ—ಮನ್ಮಥನ ತಂದೆ, ವಿಷ್ಣು.
ಬೀಳುಮಾಡಿಕೊಳ್ಳಬೇಡಿ—ಬರಡಾಗಿಸಬೇಡಿ ; ಹಾಳುಮಾಡಿಕೊಳ್ಳದಿರಿ.
ಏಳು ದಿನದ ಕಥೆ—ಭಾಗವತ. ಪರೀಕ್ಷಿದ್ರಾಜನಿಗೆ ಶುಕ್ರಾಚಾರ್ಯರು ಭಾಗವತ ಪುರಾಣವನ್ನು ಏಳು ದಿನಗಳ ಕಾಲ ಶ್ರವಣಮಾಡಿಸಿದರೆಂದು 'ಸಪ್ತಾಹ' ವೆನ್ನುವ ಹೆಸರು ವಾಡಿಕೆಗೆ ಬಂದಿತು.
ಮುಟ್ಟಿ—ಮನಮುಟ್ಟಿ, ಮನಸಾರೆ.

ಪೂರ್ವಿ　　　　　　　　　　　　　　ರೂಪಕ

ಮರೆಯಬೇಡ ಮನವೆ ನೀನು
ಹರಿಯ ಸ್ಮರಣೆಯಾ　　　　ಪ

ಯಾಗ ಯಜ್ಞ ಮಾಡಲೇಕೆ
ಯೋಗಿ ಯತಿಯು ಆಗಲೇಕೆ
ನಾಗಶಯನ ನಾರದವಂದ್ಯನ
ಕೂಗಿ ಭಜನೆ ಮಾಡೊ ಬೇಗ　　　　೧

ಸತಿಯು ಸುತರು ಹಿತರು ಎಂದು
ಮತಿಯಗೆಟ್ಟು ಕೆಡಲಿಬೇಡ
ಗತಿಯು ತಪ್ಪಿ ಹೋಗುವಾಗ
ಸತಿಯು ಸುತರು ಬಾಹೊರೇನೊ　　　　೨

ಹರಿಯ ಸ್ಮರಣೆ ಮಾತ್ರದಿಂದ
ಘೋರ ದುರಿತವೆಲ್ಲ ನಾಶ
ಪರಮಪುರುಷ ಪುರಂದರವಿಠಲ
ಪದವಿ ಕೊಡುವ ಪವನನಯ್ಯ　　　　೩

[ನಾಮಸ್ಮರಣೆ ಸುಲಭದ ದಾರಿ. ಇಲ್ಲಿ ಕರ್ಮಾನುಷ್ಠಾನದ, ಯೋಗಾಭ್ಯಾಸದ, ತೀವ್ರ ವಿರಕ್ತಿಯ ಅಗತ್ಯವಿರದು. ನಿತ್ಯಜೀವನದಲ್ಲಿ ತೊಡಗಿರುತ್ತಲೇ ಮಾಡಬಹುದಾದುದು. ಆದರೆ ಭಕ್ತಿಯ ಬೆಂಬಲವಿರಬೇಕೆಂದು ಸೂಚಿಸಲು 'ಭಜನೆ ಮಾಡೊ' ಎಂದಿದ್ದಾರೆ; ಕೂಗುವುದಷ್ಟೆ ಸಾಲದು.]

ಗತಿಯು ತಪ್ಪಿಹೋಗುವಾಗ—ಸಾವು ಒದಗುವಾಗ.
ಪದವಿ—ಮುಕ್ತಿ.
ಪವನನಯ್ಯ—ಮುಖ್ಯಪ್ರಾಣನಿಗೆ ಒಡೆಯನಾದ.

೮

ಮಧ್ಯಮಾವತಿ ಅಟ್ಟ

ದುರಿತವೆತ್ತಣದೊ ದುರ್ಗತಿಯೆಲ್ಲಿಹುದೊ
ಹರಿ ಹರಿ ಹರಿಯೆಂದು ಸ್ಮರಿಸುವ ಜನರಿಗೆ ಪ

ಸ್ನಾನವೇತಕೆ ಸಂಧ್ಯಾ ಜಪತಪವೇತಕೆ
ಮೌನವೇತಕೆ ಮಾಸವ್ರತವೇತಕೆ
ಮಾನಸದಲಿ ವಿಷ್ಣುಪಾದ ಧ್ಯಾನಿಸುವಂಥ
ಜ್ಞಾನವಂತರ ಸಂಗ ಸುಖದೊಳಿಪ್ಪವರಿಗೆ ೧

ತೀರ್ಥವೇತಕೆ ಕ್ಷೇತ್ರಯಾತ್ರೆಯು ಏತಕೆ
ಗೋತ್ರ ಧರ್ಮದ ಪುಣ್ಯ ಬಯಸಲೇಕೆ
ಸೂತ್ರದಿ ಜಗವೆಲ್ಲ ಮೋಹಿಸುವಾತನ
ಸ್ತೋತ್ರದಿಂ ಪಾಡಿ ಹಿಗ್ಗುವ ಭಾಗವತರಿಗೆ ೨

ಅಂಗದಂಡನೆಯೇಕೆ ಆತ್ಮಘಾತವೇಕೆ
ತಿಂಗಳ ಚಾಂದ್ರಾಯಣವೇತಕೆ
ಮಂಗಳ ಮಹಿಮ ಶ್ರೀ ಪುರಂದರವಿಠಲನ
ಹಿಂಗದರ್ಚನೆಯ ಮಾಡುವ ಭಕ್ತಜನರಿಗೆ ೩

ಗೋತ್ರ ಧರ್ಮ—ವಂಶಕ್ಕೆ ಅನುಗುಣವಾಗಿ ಮಾಡಬೇಕಾದ ವಿಧಿಗಳು.

ಸೂತ್ರದಿ...—'ಯಥಾ ಶಕುನಿಃ ಸೂತ್ರೇಣ ಪ್ರಬದ್ಧಃ' ಎಂಬ ಶ್ರುತಿವಾಕ್ಯದ, 'ಮಯಿ ಪ್ರೋತಮಿದಂ ಸರ್ವಂ ಸೂತ್ರೇ ಮಣಿಗಣಾ ಇವ', 'ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ' ಎಂಬ ಸ್ಮೃತಿವಾಕ್ಯಗಳ ಛಾಯೆ.

ಅಂಗ ದಂಡನೆ—ತಪಸ್ಸಿನಿಂದ ಶರೀರವನ್ನು ಬಳಲಿಸುವುದು (ಕಾಯಕ್ಲೇಶ).

ಆತ್ಮಘಾತ—ಪ್ರಾಯೋಪವೇಶ ಮೊದಲಾದ ವಿಧಿಗಳು.

ತಿಂಗಳ ಚಾಂದ್ರಾಯಣ—ಕೃಛ್ರ ಚಾಂದ್ರಾಯಣ ಮೊದಲಾದ ಕಷ್ಟಸಾಧ್ಯವಾದ ವ್ರತಗಳು.

ಹಿಂಗದೆ—ಕೊನೆಯಿಲ್ಲದೆ, ಎಡೆಬಿಡದೆ.

೯

ಧನ್ಯಾಸಿ ಅಟ್ಟ

ಕರುಣಿಸೋ ರಂಗ ಕರುಣಿಸೊ ಪ

ಇರುಳು ಹಗಲು ನಿನ್ನ ಸ್ಮರಣೆ ಒದಗುವಂತೆ ಅ

ರುಕುಮಾಂಗದನಂತೆ ವ್ರತವ ನಾನರಿಯೆ
ಶುಕ ಮುನಿಯಂತೆ ಸ್ತುತಿಸಲರಿಯೆ
ಬಕವೈರಿಯಂತೆ ಧ್ಯಾನವ ಮಾಡಲರಿಯೆ ದೇ
ವಕಿಯಂತೆ ಮುದ್ದಿಸಲರಿಯೆನೊ ಕೃಷ್ಣಾ ೧

ಗರುಡನಂತೆ ಪೊತ್ತು ತಿರುಗಲರಿಯೆನೋ
ಕರೆಯಲರಿಯೆ ಕರಿರಾಜನಂತೆ
ವರಕಪಿಯಂತೆ ಸೇವೆಯ ಮಾಡಲರಿಯೆನೊ
ಸಿರಿಯಂತೆ ನೆರೆದು ಮೋಹಿಸಲರಿಯೆನೊ ಕೃಷ್ಣಾ ೨

ಬಲಿಯಂತೆ ದಾನವ ಕೊಡಲರಿಯೆನೊ ಭಕ್ತಿ
ಛಲವನರಿಯೆ ಪ್ರಹ್ಲಾದನಂತೆ
ಒಲಿಸಲರಿಯೆ ಅರ್ಜುನನಂತೆ ಸಖನಾಗಿ
ಸಲಹಿಕೊಳ್ಳಯ್ಯ ಶ್ರೀಪುರಂದರವಿಠಲ ೩

ರುಕುಮಾಂಗದ—ರುಕ್ಮಾಂಗದ ; ಋತುಧ್ವಜನ ಮಗ. ವಿಂಧ್ಯಾವಳಿ ಅವನ ಹೆಂಡತಿ, ಧರ್ಮಾಂಗದ ಮಗ. ರುಕ್ಮಾಂಗದನು ವಿಷ್ಣುಭಕ್ತನಾಗಿದ್ದು ಏಕಾದಶೀವ್ರತ ನಿಷ್ಠೆಯಲ್ಲಿದ್ದವನು. ಇವನ ವ್ರತಸ್ಥೈರ್ಯವನ್ನು ಪರೀಕ್ಷಿಸಲೆಂದು ಬ್ರಹ್ಮನು ಮೋಹಿನಿಯನ್ನು ಕಳುಹಿಸಿದಾಗ, ತನ್ನ ಮಗ ಧರ್ಮಾಂಗದನ ಪ್ರಾಣವನ್ನೊಪ್ಪಿಸಲು ಸಿದ್ಧನಾದರೂ ಏಕಾದಶೀವ್ರತವನ್ನು ಭಂಗಮಾಡಲು ಒಪ್ಪಲಿಲ್ಲ. ಈ ಕಥೆ ನಾರದೀಯ ಪುರಾಣದಲ್ಲಿ ಬರುತ್ತದೆ.

ಶುಕಮುನಿ—ಕೃಷ್ಣದ್ವೈಪಾಯನ (ವ್ಯಾಸ) ಮುನಿಯಿಂದ ಘೃತಾಚಿ ಎಂಬ ಅಪ್ಸರೆಯಲ್ಲಿ ಹುಟ್ಟಿದವನು ; ನಾರದನಿಂದ ತತ್ತ್ವೋಪದೇಶವನ್ನು ಪಡೆದ ಯೋಗಿ; ಭಾಗವತ ಪುರಾಣವನ್ನು ರಾಜ ಪರೀಕ್ಷಿತನಿಗೆ ಶ್ರವಣಮಾಡಿಸಿದವನು.

ಬಕವೈರಿ—ಬಕಾಸುರನನ್ನು ಕೊಂದ ಭೀಮ; ಇನ್ನೊಂದು ಅವತಾರದಲ್ಲಿ ಹನುಮಂತ; ಧ್ಯಾನಕ್ಕೆ ಪ್ರಸಿದ್ಧನಾದವನು.

ವರಕಪಿ—ಹನುಮಂತ.

ಭಕಿ.ಛಲ—ದೃಢಭಕ್ತಿಯ ಹಟ.

ಪಂತುವರಾಳಿ ಅಟ್ಟ

ನಿನ್ನ ನಾಮವಿದ್ದರೆ ಸಾಕೊ ಪ

ಮುನಿದರೆ ಮುನಿ ನಿನ್ನಾಣೆ ಶ್ರೀರಾಮು ಅ

ಹೊದ್ದಿದ ಪಾಪವನೆಲ್ಲ ಛಿನ್ನ
ಛಿದ್ರವ ಮಾಡಿ ಖಂಡಿಸಿ ಬಿಡುವ
ಎದ್ದರೆ ಸಂಗಡ ಬರುವ ಎನ್ನ
ಮುದ್ದಿಸಿ ಮುಂದಕೆ ಮುಕ್ತಿಯ ಕೊಡುವ ೧

ಸಾರೆ ಸಂಗಡ ಬರುವ ಎನ್ನ
ಸೇರಿದ ಪಾಪವ ಕೋಪದಿ ತರಿವ
ಝಾಡಿಸಿ ಕರ್ಮವ ಕಳೆವ
ಎನ್ನ ಕೂಡಿಕೊಂಡು ವೈಕುಂಠಕೆ ನಡೆವ ೨

ಪರಮಾನಂದವನೀವ ನಿನ್ನ
ಸ್ಮರಣೆಯೆಂಬುದು ಎನ್ನ ಜೀವಕ್ಕೆ ಜೀವ
ವರವ ಕೊಡುವುದೊಂದು ಭಾವ
ಈ ಪರಿ ಪುಸಿಯಲ್ಲ ಶ್ರೀ ಪುರಂದರವಿಠಲ ೩

ಮುನಿದರೆ ಮುನಿ—ಸಿಟ್ಟಾದರೆ ಸಿಟ್ಟಾಗು.
ಹೊದ್ದಿದ—ಹೊಂದಿದ, ಪಡೆದುಕೊಂಡ.
ಎದ್ದರೆ ಸಂಗಡ ಬರುವ—ಪ್ರಾಣೋತ್ಕ್ರಮಣಸ್ಥಿತಿಯಲ್ಲಿ ಲಿಂಗದೇಹದೊಂದಿಗೇ ಬರುವ ಬಿಂಬರೂಪಿ.
ಮುದ್ದಿಸಿ ಮುಂದಕೆ...—ಕರುಣೆಯಿಂದ ಲಿಂಗದೇಹಭಂಗವಾದಮೇಲೆ ಮುಕ್ತಿಯನ್ನು ನೀಡುವ.
ಸಾರೆ ಸಂಗಡ ಬರುವ—ಅವನನ್ನು ಭಕ್ತಿಯಿಂದ ಸೇರಿದರೆ, ಭಕ್ತನೊಂದಿಗೇ ಸೇರುವ.
ಸ್ಮರಣೆ...—ಜೀವನ ಕರ್ತವ್ಯ ನಾಮಸ್ಮರಣೆ; ಮುಕ್ತಿಯನ್ನು ಕೊಡುವುದು ಪರಮಾತ್ಮನ ಮನಸ್ಸಿದ್ದಂತೆ (ಇಚ್ಛೆ, ಭಾವ).

೧೧

ಕಾನಡ

ನೀನ್ಯಾಕೋ, ನಿನ್ನ ಹಂಗ್ಯಾಕೋ ಪ

ನಿನ್ನ ನಾಮದ ಬಲವೊಂದಿದ್ದರೆ ಸಾಕೊ ಅ

ಆ ಮರ ಈ ಮರ ಧ್ಯಾನಿಸುತಿರುವಾಗ
ರಾಮ ರಾಮ ಎಂಬ ನಾಮವೆ ಕಾಯ್ತೊ ೧

ಬಾಲೆಯು ಸಭೆಯಲಿ ಸೀರೆಯು ಸೆಳೆವಾಗ
ಬಾಲಕೃಷ್ಣನೆಂಬ ನಾಮವೆ ಕಾಯ್ತೊ ೨

ಯಮನ ದೂತರು ಬಂದು ಅಜಾಮಿಳನೆಳೆವಾಗ
ನಾರಾಯಣನೆಂಬ ನಾಮವೆ ಕಾಯ್ತೊ ೩

ಕರಿ ಮಕರಿಗೆ ಸಿಕ್ಕಿ ಮೊರೆಯಿಡುತಿರುವಾಗ
ಆದಿಮೂಲನೆಂಬ ನಾಮವೆ ಕಾಯ್ತೊ ೪

ಪ್ರಹ್ಲಾದನ ಪಿತ ಬಾಧಿಸುತಿರುವಾಗ
ನಾರಸಿಂಹನೆಂಬ ನಾಮವೆ ಕಾಯ್ತೊ ೫

ಹಸುಳೆ ಆ ಧ್ರುವರಾಯ ಅಡವಿಗೆ ಪೋಪಾಗ
ವಾಸುದೇವನೆಂಬ ನಾಮವೆ ಕಾಯ್ತೊ ೬

ನಿನ್ನ ನಾಮಕೆ ಸರಿ ಯಾವುದು ಕಾಣೆನೊ
ಘನ್ನ ಮಹಿಮ ಸಿರಿ ಪುರಂದರವಿಠಲ ೭

ಆ ಮರ ಈ ಮರ... —ವಾಲ್ಮೀಕಿಯ ಸಾಧನೆಯನ್ನು ಕುರಿತು ಬಳಕೆಯಲ್ಲಿರುವ ಕಥೆಯೊಂದರ ಉಲ್ಲೇಖ ಇದು. ಬೇಡನಾಗಿದ್ದ ವಾಲ್ಮೀಕಿಯು ಸಪ್ತರ್ಷಿಗಳನ್ನು ಕಾಡಿ, ಅವರ ಮಾತಿನಿಂದ ವಿರಕ್ತಿಯನ್ನು ಪಡೆದು, ಅವರಿಂದ ಉಪದೇಶವನ್ನು ಬೇಡಿದಾಗ ಅವರು ಕಾಡಿನಲ್ಲಿದ್ದ ಮರಗಳನ್ನು ಅವನಿಗೆ ತೋರಿಸಿ 'ಆ ಮರ ಈ ಮರ, ಮರ ಮರಾ' ಎಂದು ಜಪ ಮಾಡುವಂತೆ ಹೇಳಿದರೆಂದೂ, 'ಮರಾ ಮರಾ' ಎಂದು ಮತ್ತೆ ಮತ್ತೆ ಹೇಳಿದುದು 'ರಾಮ ರಾಮ' ಎಂದಾಗಿ, ವಾಲ್ಮೀಕಿಯು ರಾಮಭಕ್ತನಾದನೆಂದೂ ಕಥೆ. ಆದರೆ ಈ ಕಥೆಗೆ ಆಧಾರವೇನೋ ತಿಳಿಯದು !

ಬಾಲೆಯ ಸಭೆಯಲ್ಲಿ... —ದ್ರೌಪದೀವಸ್ತ್ರಾಪಹರಣದ ಪ್ರಸಂಗ.

ಕರಿ ಮಕರಿಗೆ... —ಗಜೇಂದ್ರಮೋಕ್ಷದ ಪ್ರಸಂಗ,

ಕಲ್ಯಾಣಿ ತ್ರಿವಿಡೆ

ಒಂದೆ ನಾಮವು ಸಾಲದೆ ಶ್ರೀ ಹರಿಯೆಂಬ
ಒಂದೇ ನಾಮವು ಸಾಲದೆ ಪ

ಒಂದೇ ನಾಮವು ಭವ ಬಂಧನ ಬಿಡಿಸುವು-
ದೆಂದು ಶ್ರುತಿಗಳು ಆನಂದದಿ ಸ್ತುತಿಸುವ

ಉಭಯ ರಾಯರು ಸಮ್ಮತದಿ ಲೆತ್ತವನಾಡೆ
ಸಭೆಯೊಳು ಧರ್ಮಜ ಸತಿಯ ಸೋಲೆ
ನಭಕೆ ಕೈಯೆತ್ತಿ ದ್ರೌಪದಿ ಕೃಷ್ಣಾ ಎನ್ನಲು
ಅಂಬುಜಾಕ್ಷಿಗಕ್ಷಯವಸ್ತ್ರವನಿತ್ತಂಥ ೧

ಹಿಂದೊಬ್ಬ ಋಷಿಪುತ್ರನು ದಾಸಿಯ ಕೂಡೆ
ಸಂದೇಹವಿಲ್ಲದೆ ಹಲವು ಕಾಲ
ದಂದುಗದೊಳು ಸಿಲುಕಿನಿಂದಂತ್ಯಕಾಲದಿ
ಕಂದ ನಾರಗನೆಂದು ಕರೆಯಲಭಯವಿತ್ತ ೨

ಕಾಶಿಯ ಪುರದೊಳು ಈಶ ಭಕುತಿಯಿಂದ
ಸಾಸಿರ ನಾಮದ ರಾಮನೆಂಬ
ಶ್ರೀಶನ ನಾಮದ ಉಪದೇಶ ಸತಿಗಿತ್ತ
ವಾಸುದೇವ ಸಿರಿ ಪುರಂದರವಿಠಲನ ೩

ಉಭಯ ರಾಯರು—ಪಾಂಡವರೂ ಕೌರವರೂ.

ಲೆತ್ತ—ಪಗಡೆ.

ಹಿಂದೊಬ್ಬ...—ಅಜಾಮಿಳನ ಕಥೆ. ಅಜಾಮಿಳನು ಕಾನ್ಯಕುಬ್ಜದ ಬ್ರಾಹ್ಮಣನಾಗಿದ್ದನೆಂದೂ, ದುರಾಚಾರಿಯಾಗಿ ತೊಂದರೆಗೆ ಸಿಕ್ಕು, ಸಾವಿನ ಸಮಯದಲ್ಲಿ ತನ್ನ ಮಗನನ್ನು ನಾರಾಯಣ ಎಂಬ ಹೆಸರಿನವನನ್ನು, ಕರೆಯಲು

ನಾರಾಯಣನು ಒಲಿದು ಮುಕ್ತಿಯನ್ನು ಕೊಟ್ಟನೆಂದು ಕಥೆ. 'ನಾರಗ' ಎನ್ನುವುದು 'ನಾರಾಯಣ' ಎಂಬ ಮಾತಿನ ರೂಪಾಂತರವೆಂದು ಹೇಳುತ್ತಾರೆ. 'ನಾರಣ' ಎಂದೂ ಪಾಠವಿದೆ.

ಕಾಶಿಯ ಪುರದೊಳು ಈಶ—ಬ್ರಹ್ಮನ ಐದು ತಲೆಗಳಲ್ಲಿ ಒಂದನ್ನು ಚಿವುಟಿಹಾಕಿ ಬ್ರಹ್ಮಹತ್ಯಾದೋಷಕ್ಕೆ ಗುರಿಯಾದ ಈಶ್ವರನು ಕಾಶಿಯಲ್ಲಿ ಬಿಂದುಮಾಧವನ ಸೇವೆ ಮಾಡಿ ಬ್ರಹ್ಮಹತ್ಯಾದೋಷದಿಂದ ಮುಕ್ತನಾಗಿ, ಸಂತೋಷದಿಂದ ಹರಿಯ ಹಿರಿಮೆಯನ್ನು ಹಾಡಿ ಹೊಗಳಿದನೆಂದೂ ತನ್ನ ಹೆಂಡತಿಯಾದ ಪಾರ್ವತಿಗೆ ರಾಮನೆಂಬ ಒಂದು ನಾಮವು ಸಹಸ್ರನಾಮಗಳಿಗೆ ಸಮನಾದುದೆಂದು ('ಸಹಸ್ರನಾಮ ತತ್ತುಲ್ಯಂ ರಾಮನಾಮ') ಹೇಳಿದನೆಂದೂ ಹಿನ್ನೆಲೆಯ ಕಥೆ.

ಸೌರಾಷ್ಟ್ರ ಚಾಪು

ಗಂಗಾದಿಸಕಲತೀರ್ಥಂಗಳಿಗಧಿಕ ಶ್ರೀ ಹರಿಯ ನಾಮ ಪ

ಹಿಂಗದೆ ನೆನೆವರಿಗೆ ಮಂಗಳ ಫಲವೀವ ಹರಿಯ ನಾಮ ಅ

ಸ್ನಾನ ಜಪಂಗಳ ಸಾಧಿಸದವನಿಗೆ ಹರಿಯ ನಾಮ
ಜ್ಞಾನವನರಿಯದ ಮೂಢಾತ್ಮನಿಗೆ ಇದು ಹರಿಯ ನಾಮ ೧

ವೇದಶಾಸ್ತ್ರಂಗಳನೋದದ ಮನುಜಗೆ ಹರಿಯ ನಾಮ
ಸಾಧನಗಳ ನಾಲ್ಕು ಸಾಧಿಸದವನಿಗೆ ಹರಿಯ ನಾಮ ೨

ಕಾಲನ ದೂತರ ತರಿದು ಬಿಸಾಡುವುದು ಹರಿಯ ನಾಮ
ಲೋಲ ಶ್ರೀ ಪುರಂದರವಿಠಲನ ಒಲುಮೆಗೆ ಹರಿಯ ನಾಮ ೩

ಹಿಂಗದೆ— ಎಡಬಿಡದೆ, ಬೇಸರವಿಲ್ಲದೆ.

ಜ್ಞಾನವನರಿಯದ—ಗುರೂಪದೇಶದಿಂದ ಸಚ್ಛಾಸ್ತ್ರಶ್ರವಣ ಮಾಡಿ ಅದರಿಂದ ತತ್ತ್ವ ನಿಶ್ಚಯ ಪೂರ್ವಕವಾಗಿ ಬಂದಂಥ ಜ್ಞಾನವಿಲ್ಲದ.

ಸಾಧನೆಗಳ ನಾಲ್ಕು—ಹರಿಕಥಾಶ್ರವಣ, ಮನನ (ಖಂಡಸ್ಮೃತಿ), ಧ್ಯಾನ (ಅಖಂಡ ಸ್ಮೃತಿ), ನಿರವಧಿಕ ಸ್ನೇಹ (ಭಕ್ತಿ).

ಲೋಲ— ಭಕ್ತಿಗೆ ಸುಲಭವಾಗಿ ಒಲಿಯುವ.

ಮಧ್ಯಮಾವತಿ ಆದಿ

ನೆನೆಬೇಕು ನೆನೆಬೇಕು
ನೆನೆಯಬೇಕಮ್ಮ ಪ

ಮನದ ಚಪಲ ಬುದ್ಧಿ
ಇನ್ನೂ ಬಿಡದಮ್ಮ ಅ

ಎಡೆಬಿಡದಲೆ ನಿನ್ನ
ಒಡಲ ಚಿಂತಿಸುವಿ
ಕಡಲಶಯನನ ನಾಮ
ಬಿಡದೇ ಹಗಲಿರುಳು ೧

ಹೊತ್ತು ಹೋಯಿತು ಇನ್ನು
ವ್ಯರ್ಥವಾಗುವುದು
ಹತ್ತಿಲೆ ಇಹುದು ಕ
ಣ್ಣೆತ್ತಿ ನೋಡಿದರೆ ೨

ಇಂದಿರಾರಮಣ ಶ್ರೀ
ಪುರಂದರವಿಠಲ
ಮಂದರೋದ್ಧರನ ಆ
ನಂದಯೆಂದೆಣಿಸಿ ೩

ನೆನೆಬೇಕು—ನಾಮಸ್ಮರಣೆ ಮಾಡಬೇಕು.
ಹತ್ತಿಲೆ—ಹತ್ತಿರವೆ ; ಹೃದಯಕಮಲದಲ್ಲೆ.
ಕಣ್ಣೆತ್ತಿ ನೋಡಿದರೆ—ಒಳಗಣ್ಣಿಂದ ನೋಡಿದರೆ.

ಪೂರ್ವಕಲ್ಯಾಣಿ ಆದಿ

ವ್ಯರ್ಥವಲ್ಲವೆ ಜನ್ಮ ವ್ಯರ್ಥವಲ್ಲವೆ ಪ

ಅರ್ಥಿಯಿಂದ ಹರಿಯ ನಾಮ
ನಿತ್ಯ ಸ್ಮರಿಸದವನ ಜನ್ಮ ಅ

ಹರಿಯ ಸೇವೆ ಮಾಡದವನ
ಹರಿಯ ಗುಣಗಳೆಣಿಸದವನ
ಹರಿಯ ಕೊಂಡಾಡದವನ
ಹರಿಯ ತಿಳಿಯದವನ ಜನ್ಮ ೧

ದಾಸರೊಡನಾಡದವನ
ದಾಸರೊಡನೆ ಪಾಡದವನ
ದಾಸರ ಕೊಂಡಾಡದೆ ಹರಿ
ದಾಸನಾಗದವನ ಜನ್ಮ ೨

ಒಂದು ಶಂಖ ಉದಕ ತಂದು
ಚಂದದಿಂದ ಹರಿಗೆ ಅರ್ಪಿಸಿ
ತಂದೆ ಪುರಂದರವಿಠ್ಠಲನ್ನ
ಹೊಂದಿ ನೆನೆಯದವನ ಜನ್ಮ ೩

[ಮಾನವ ಜನ್ಮದ ಪರಮಪುರುಷಾರ್ಥವೆಂದರೆ ಪರಮಾತ್ಮನ ಪ್ರಸಾದವನ್ನು ಪಡೆದುಕೊಂಡು ಜೀವದ ಸ್ವರೂಪ ಗುಣಗಳನ್ನು ಮತ್ತೆ ಗಳಿಸಿಕೊಂಡು, ಲಿಂಗದೇಹ ವನ್ನು ಕಳೆದುಕೊಂಡು ಮುಕ್ತನಾಗಿ ಪರಮಾತ್ಮನ ಸನ್ನಿಧಿಯಲ್ಲಿ ಸೇವಾಭಾವದಿಂದ ನಿತ್ಯ ನೆಲಸುವುದು. ಮಾನವಜನ್ಮ ಒದಗಿರುವುದೇ ಈ ಪ್ರಯೋಜನದ ಸಾಧನೆಗೆಂಬ ಕಾರಣದಿಂದ ನಮ್ಮ ಶರೀರವನ್ನು ಸಾಧನಶರೀರವೆಂದು ಕರೆಯುತ್ತಾರೆ. 'ಮಾನವ ಜನ್ಮ ದೊಡ್ಡದು, ಇದ ಹಾನಿಮಾಡಬೇಡಿರಿ' ಎಂದು ದಾಸರು ಹೇಳಿರುವುದೂ ಇದೇ ಚೌಕಟ್ಟಿನಲ್ಲೇ. ಈ ಸಾಧನೆಗೆ ಅನುಕೂಲವಾಗುವಂತೆ, ಸತ್ಸಂಗ, ಹರಿಕಥಾ ಶ್ರವಣ, ಮಾಹಾತ್ಮ್ಯಜ್ಞಾನ, ನವವಿಧಭಕ್ತಿ ಇವನ್ನು ಮಾಡಬೇಕಾದುದು ಮನುಷ್ಯನ ಕರ್ತವ್ಯ.]

ಆನಂದಭೈರವಿ ಅಟ್ಟ

ಒಂದೇ ನಾಮದೊಳಡಗಿದವು ಅಡಗಿದವು ಪ

ಆನಂದದಿಂದುಸುರಿವೆ ಅಖಿಳ ವೇದಗಳು ಅ

ಒಂದೇ ನಾಮವು ಪ್ರಹ್ಲಾದನ ಕಾಯಿತು ಮ
ತ್ತೊಂದೆ ನಾಮವು ಅಜಾಮಿಳನ ಸಲಹಿತು
ತಂದೆ ತಾಯಿಯು ಬಿಟ್ಟ ಕಂದ ಧ್ರುವರಾಯಗೆ ಆ
ನಂದ ಪದವನಿತ್ತ ಅದ್ಭುತ ಗುಣವೆಲ್ಲ ೧

ಮತ್ಸ್ಯಾದ್ಯನಂತಾವತಾರ ಅಷ್ಟಾದಶ
ಸ್ವಚ್ಛಪುರಾಣದ ಅಮೃತಸಾರ
ಕಚ್ಛಪನಾಗಿ ಮೂಜಗಕೆ ಆಧಾರ
ಸ್ವೇಚ್ಛೆಯಿಂದಲಿ ತಾ ಮಾಳ್ಪ ವ್ಯಾಪಾರ ೨

ಒಬ್ಬರೀತಗೆ ಸಮರಿಲ್ಲ ಅಸಮರಿಲ್ಲ ತ
ನ್ನಬ್ಬರದಿಂದಲಿ ಸಲಹುವನೆಲ್ಲ
ಕಬ್ಬುಬಿಲ್ಲನ ಪಿತ ಪುರಂದರವಿಠಲ ವೈ
ದರ್ಭಿಯ ರಮಣನ ವರಸುಗುಣಗಳೆಲ್ಲ ೩

ಮತ್ಸ್ಯಾದ್ಯನಂತಾವತಾರ—ಮತ್ಸ್ಯವೇ ಮೊದಲಾದ ಹತ್ತು ಅವತಾರಗಳು ಪ್ರಸಿದ್ಧವಾದರೂ, ನಾರಾಯಣಾದಿ ನೂರು ರೂಪಗಳೂ, ವಿಶ್ವಾದಿ ಸಾವಿರ ರೂಪಗಳೂ, ಪರಾದಿ ಬಹು ರೂಪಗಳೂ, ಅಜಿತಾದಿ ಅನಂತ ರೂಪಗಳೆಂದು ಹೇಳುವ ವಾಡಿಕೆಯಿದೆ. ಇವೆಲ್ಲ ರೂಪಗಳೂ ಅವತಾರಗಳೆಂದೇ ಎಣಿಕೆ. ಎಲ್ಲ ಅವತಾರಗಳಲ್ಲೂ ಅವನು ಜ್ಞಾನಾನಂದಾದಿ ಅನಂತಗುಣಪರಿಪೂರ್ಣನೇ.

ಅಷ್ಟಾದಶಸ್ವಚ್ಛಪುರಾಣ—ಹದಿನೆಂಟು ಮಹಾಪುರಾಣಗಳು. ವಿಷ್ಣುಪುರಾಣದ ಎಣಿಕೆಯಂತೆ ಬ್ರಾಹ್ಮ, ಪಾದ್ಮ, ವೈಷ್ಣವ, ಶೈವ, ಭಾಗವತ, ನಾರದೀಯ,

ಮಾರ್ಕಂಡೇಯ, ಆಗ್ನೇಯ, ಭವಿಷ್ಯ, ಬ್ರಹ್ಮವೈವರ್ತ, ಲೈಂಗ, ಗಾರುಡ, ವಾರಾಹ, ಸ್ಕಾಂದ, ವಾಮನ, ಕೌರ್ಮ, ಮಾತ್ಸ್ಯ, ಬ್ರಹ್ಮಾಂಡ ಪುರಾಣಗಳು.

ಕಚ್ಛಪನಾಗಿ...—ಶ್ವೇತವರಾಹಕಲ್ಪದ ಚಾಕ್ಷುಷಮನ್ವಂತರದಲ್ಲಿ ಮೂರೂ ಲೋಕಗಳನ್ನು ಹೊತ್ತು ನಿಂತಿರುವ ವಿಷ್ಣುರೂಪ (ಕೂರ್ಮ, ಕಮಠ, ಧರಣೀಧರ).

ಸ್ವೇಚ್ಛೆಯಿಂದಲಿ...—ಸ್ವತಂತ್ರನಾಗಿ ಬ್ರಹ್ಮಾಂಡದ ಅಷ್ಟಮಹಾಕಾರ್ಯಗಳನ್ನೂ (ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ) ನಡೆಸುವನು.

ಸಮರಿಲ್ಲ ಅಸಮರಿಲ್ಲ—'ನ ಸಮಃ ನಾಭ್ಯಧಿಕಃ' ಎಂಬ ಆಚಾರ್ಯರ ಮಾತಿನ ಛಾಯೆ.

ತನ್ನಬ್ಬರದಿಂದಲಿ—ವೈಭವದಿಂದ, ವಿಜೃಂಭಣೆಯಿಂದ.

ಕಬ್ಬುಬಿಲ್ಲನ—ಮನ್ಮಥನ.

ವೈದರ್ಭಿಯ—ರುಕ್ಮಿಣಿಯ ; ವಿದರ್ಭರಾಜನಾದ ಭೀಷ್ಮಕನ ಮಗಳು.

೧೭

ಕೃಷ್ಣ ಎನಬಾರದೆ
ಕೃಷ್ಣನ್ನ ನೆನೆದರೆ
ಕಷ್ಟ ಒಂದಿಷ್ಟಿಲ್ಲ ಪ

ನರಜನ್ಮ ಬಂದಾಗ
ನಾಲಿಗೆ ಇರುವಾಗ
ಕೃಷ್ಣ ಎನಬಾರದೆ ಅ

ಮಲಗಿದ್ದು ಮೈ ಮುರಿ
ದೇಳುತ್ತಲೊಮ್ಮೆ
ಕೃಷ್ಣ ಎನಬಾರದೆ
ಸುಳಿದಾಡುತ ಮನೆ
ಯೊಳಗಾದರು ಒಮ್ಮೆ
ಕೃಷ್ಣ ಎನಬಾರದೆ ೧

ಸ್ನಾನ ಪಾನ ಜಪ
ತಪಗಳ ಮಾಡುತ
ಕೃಷ್ಣ ಎನಬಾರದೆ
ಶಾಲ್ಯಾನ್ನ ಷಡುರಸ
ತಿಂದು ತೃಪ್ತನಾಗಿ
ಕೃಷ್ಣ ಎನಬಾರದೆ ೨

ಗಂಧವ ಪೂಸಿ
ತಾಂಬೂಲವ ಮೆಲುವಾಗ
ಕೃಷ್ಣ ಎನಬಾರದೆ
ಚೆಂದುಳ್ಳ ಹಾಸಿಗೆ
ಯೊಳು ಕುಳಿತೊಮ್ಮೆ
ಕೃಷ್ಣ ಎನಬಾರದೆ ೩

ಕಂದನ್ನ ಬಿಗಿ ಬಿಗಿ
ದಪ್ಪಿ ಮುದ್ದಾಡುತ
ಕೃಷ್ಣ ಎನಬಾರದೆ

ಮಂದಗಾಮಿನಿಯೊಳು
ಸರಸವಾಡುತಲೊಮ್ಮೆ
ಕೃಷ್ಣ ಎನಬಾರದೆ ೪

ಮೇರೆ ತಪ್ಪಿ ಮಾತ
ನಾಡುವಾಗಲೊಮ್ಮೆ
ಕೃಷ್ಣ ಎನಬಾರದೆ
ದಾರಿಯು ನಡೆವಾಗ
ಭಾರವ ಹೊರುವಾಗ
ಕೃಷ್ಣ ಎನಬಾರದೆ ೫

ಪರಿಹಾಸ್ಯದ ಮಾತ
ನಾಡುತಲೊಮ್ಮೆ
ಕೃಷ್ಣ ಎನಬಾರದೆ
ಪರಿಪರಿ ಕೆಲಸದೊ
ಳೊಂದು ಕೆಲಸವೆಂದು
ಕೃಷ್ಣ ಎನಬಾರದೆ ೬

ದುರಿತ ರಾಶಿಗಳನು
ತರಿದು ಬಿಸಾಡುವ
ಕೃಷ್ಣ ಎನಬಾರದೆ
ಗರುಡಗಮನ ನಮ್ಮ
ಪುರಂದರವಿಠಲನ
ಕೃಷ್ಣ ಎನಬಾರದೆ ೭

[ನಾಮಸ್ಮರಣೆಗೆ ಒಂದು ನಿಗದಿಯಾದ ವೇಳೆ ಎಂಬುದಿಲ್ಲ. ಎದ್ದ ಕೂಡಲೇ ಈ ಕ್ರಿಯೆ ಆರಂಭಗೊಳ್ಳಬೇಕು ಎಂದು ಪುರಂದರದಾಸರು ಆಶಿಸುತ್ತಾರೆ. ಓಡಾಡುವಾಗ, ಕೆಲಸ ಮಾಡುತ್ತಿರುವಾಗ, ಶೃಂಗಾರದ ಸಂದರ್ಭಗಳಲ್ಲೂ ರಸಿಕತನದ ಸಂದರ್ಭಗಳಲ್ಲೂ ವೈಭವ ಸಂಭ್ರಮಗಳ ಸಂದರ್ಭಗಳಲ್ಲೂ ನಾಮಸ್ಮರಣೆ ಅಗತ್ಯ ಎನ್ನುತ್ತಾರೆ. ಹಾಸ್ಯದ ಸಂದರ್ಭದಲ್ಲಿರಲಿ ಮೇರೆ ತಪ್ಪಿ ಮಾತನಾಡುವ ಸಂದರ್ಭದಲ್ಲಿ ಕೂಡ ನಾಮಸ್ಮರಣೆ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.]

ಕಾಂಬೋದಿ ಝಂಪೆ

ಅಂಜಲೇತಕೆ ಜೀವ ಅನುಗಾಲವು ಪ

ಕಂಜನಾಭನ ಮತವ ಕೈಗೊಂಡ ಬಳಿಕ ಅ

ನಾರಾಯಣ ಎಂಬ ನಾಲ್ಕು ಅಕ್ಷರದಿಂದ
ಘೋರ ದುರಿತಗಳನ್ನು ಕೊಲಿಸಲಿಬಹುದು
ಶ್ರೀರಾಮನಾಮವೆಂಬ ಸಿಂಗಾಣಿ ತಕ್ಕೊಂಡು
ವೈರಿ ಷಡ್ವರ್ಗವನು ವಧೆ ಮಾಡಬಹುದು ೧

ಶ್ರೀ ಕೇಶವ ಎಂಬ ಸಿದ್ಧಮಂತ್ರಗಳಿಂದ
ಬೇಕಾದ ದೋಷಗಳ ಬೇಯಿಸಬಹುದು
ವೈಕುಂಠಪತಿಯೆಂಬ ವಜ್ರವನೆ ತಕ್ಕೊಂಡು
ನೂಕಿ ಬಹ ಯಮಭಟರ ನುಗ್ಗು ಮಾಡಬಹುದು ೨

ಹರಿ ವಾಸುದೇವನೆಂಬ ಅಮೃತಪಾನವ ಮಾಡಿ
ಜರೆ ಮರಣ ಜನನಗಳ ಜಯಿಸಬಹುದು
ಹರುಷದಲಿ ಕೈಪಿಡಿದು ಪುರಂದರವಿಠಲನ
ಸರಸ ಸದ್ಗತಿಯನ್ನು ಸರಿಗಾಣಬಹುದು ೩

ಸಿಂಗಾಣಿ—ಸಿಂಗಾಡಿ, ಬಿಲ್ಲು ; ಕೊಂಬಿನಿಂದ ಮಾಡಿದ ಆಯುಧವಿಶೇಷ.

ವೈರಿಷಡ್ವರ್ಗ—ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಅರಿಷಡ್ವರ್ಗ.

ಸಿದ್ಧಮಂತ್ರ—ಸಿದ್ಧಿಯನ್ನು ಒದಗಿಸಿಕೊಡುವ ಮಂತ್ರ.

ಬಹ—ಬರುವ.

ಸರಸ ಸದ್ಗತಿ—ಯೋಗ್ಯತಾನುಸಾರವಾಗಿ ಆನಂದಾನುಭವವುಳ್ಳ ಮುಕ್ತಿ.

ಕಾಂಬೋದಿ ಝಂಪೆ

ವಿಧಿ ನಿಷೇಧ ನಿನ್ನವರಿಗೆಂತೊ ಹರಿಯೆ ಪ

ವಿಧಿ ನಿನ್ನ ಸ್ಮರಣೆ ನಿಷೇಧ ವಿಸ್ಮೃತಿಯೆಂಬ
ವಿಧಿಯನೊಂದನೆ ಬಲ್ಲರಲ್ಲದೆ ಮತ್ತೊಂದು ಅ

ಮಿಂದದ್ದೆ ಗಂಗಾದಿ ಪುಣ್ಯತೀರ್ಥಂಗಳು
ಬಂದದ್ದೆ ಪುಣ್ಯಕಾಲ ಸಾಧು ಜನರು
ನಿಂದದ್ದೆ ಗಯ ವಾರಣಾಸೀ ಕುರುಕ್ಷೇತ್ರ
ಸಂದೇಹವೇಕೆ ಮದ್ದಾನೆ ಪೋದುದೆ ಬೀದಿ ೧

ಕಂಡಕಂಡದ್ದೆಲ್ಲ ನಿನ್ನ ಮೂರ್ತಿಗಳು ಭೂ
ಮಂಡಲ ಶಯನವೆ ದಂಡ ಪ್ರಣಾಮ
ತಂಡತಂಡದ ಕ್ರಿಯೆಗಳೆಲ್ಲ ನಿನ್ನಯ ಪೂಜೆ
ಮಂಡೆ ಬಾಗಿಸಿ ನಮಿಪ ಭಾಗವತ ಜನಕೆ ೨

ನಡೆವ ನಡೆಗಳು ಎಲ್ಲ ಲಕ್ಷ ಪ್ರದಕ್ಷಿಣೆ
ನುಡಿವ ನುಡಿಗಳು ಎಲ್ಲ ಗಾಯತ್ರಿ ಮಂತ್ರ
ಕಂಡ ವಿಷಯಸುಖವೆಲ್ಲ ಇಂದ್ರಿಯಾಗ್ನಿಲಿ ಹೋಮ
ದೃಢ ಪ್ರಾಜ್ಞರೇನ ಮಾಡಿದರದೇ ಮರಿಯಾದೆ ೩

ಕೆಟ್ಟು ಹೋದದ್ದೆಲ್ಲ ಸಂಚಿತ ಕರ್ಮವು
ಸುಟ್ಟು ಹೋದದ್ದೆಲ್ಲ ಆಗಾಮಿ ಕರ್ಮ
ನಷ್ಟವಾದದ್ದೆಲ್ಲ ಪ್ರಾರಬ್ಧ ಕರ್ಮವು
ಶೆಟ್ಟಿ ತಾ ಬೀಡು ಬಿಟ್ಟಿದ್ದೆ ಪಟ್ಟಣವು ೪

ಎಲ್ಲಿ ಕುಳಿತರೆ ಅಲ್ಲಿ ಪ್ರಾಯೋಪವೇಶ ಮ
ತ್ತೆಲ್ಲಿ ಪೋದರೆ ಮನಸು ಅಲ್ಲೆ ಸಮಾಧಿ
ಚೆಲ್ವ ಶ್ರೀ ಪುರಂದರವಿಠಲರಾಯನ್ನ
ಬಲ್ಲವರಿಗೆಲ್ಲಿಹುದೊ ಪಾಪಪುಣ್ಯದ ಲೇಪ ೫

ಭೂಮಂಡಲಶಯನವೆ—ನೆಲದ ಮೇಲೆ ಮಲಗುವುದೆ.

ತಂಡತಂಡದ ಕ್ರಿಯೆಗಳೆಲ್ಲ—ಬಗೆಬಗೆಯ ಕೆಲಸಗಳೆಲ್ಲ.

ಕಂಡ ವಿಷಯಸುಖವೆಲ್ಲ...—ಭಗವದ್ಗೀತೆಯ (4, 26) 'ಶಬ್ದಾದೀನ್ ವಿಷಯಾನನ್ಯ ಇಂದ್ರಿಯಾಗ್ನಿಷು ಜುಹ್ವತಿ' ಎಂಬ ಮಾತಿನ ಛಾಯೆ.

ದೃಢಪ್ರಾಜ್ಞರೇನ ಮಾಡಿದರದೇ ಮರಿಯಾದೆ—ಭಗವದ್ಗೀತೆಯ (3, 21) 'ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ, ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ' ಎಂಬ ಮಾತಿನ ಛಾಯೆ.

ಕೆಟ್ಟು ಹೋದದ್ದೆಲ್ಲ—ಮೂರು ತೆರನಾದ ಕರ್ಮಗಳು: ಸಂಚಿತ (ಪೂರ್ವಜನ್ಮಗಳಿಂದ ಕೂಡಿಟ್ಟುಬಂದುದು), ಆಗಾಮಿ (ಕರ್ಮಗಳ ಫಲವನ್ನು ಮುಂದೆ ಕೊಡ ತಕ್ಕುವು), ಪ್ರಾರಬ್ಧ (ಫಲ ಕೊಡಲು ಆಗಲೆ ತೊಡಗಿರುವ ಕರ್ಮಗಳು).

ಪ್ರಾಯೋಪವೇಶ—ಸಾಮಾನ್ಯವಾಗಿ (ಪ್ರಾಯೇಣ) ಸಾವಿಗೆ ಕಾರಣವಾಗುವಂಥ ಉಪವಾಸ (ಅನಶನ)ವನ್ನು ಕೈಗೊಂಡು ಕುಳಿತುಕೊಳ್ಳುವುದು (ಉಪವೇಶ, ಸ್ಥಿತಿ).

ಸಮಾಧಿ—ಮನಸ್ಸನ್ನು ಚೆನ್ನಾಗಿ (ಸಮ್ಯಕ್, ಎಂದರೆ ಅತ್ತಿತ್ತ ಹೋಗದಂತೆ) ಒಂದೇ ವಸ್ತುವಿನಲ್ಲಿ ಇಡುವುದು (ಆಧೀಯತೆ).

ಕಾಂಬೋದಿ ಆದಿ

ಎಂತು ನಿನ್ನ ಪೂಜೆ ಮಾಡಿ ಮೆಚ್ಚಿಸುವೆನೊ ಪ

ಚಿಂತಾಯಕನೆ ನಿನ್ನ ನಾಮ ಎನಗೊಂದು ಕೋಟಿ ಅ

ಪವಿತ್ರೋದಕದಿ ಪಾದ ತೊಳೆವೆನೆಂತೆಂದರೆ
ಪಾವನವಾದ ಗಂಗೆ ಪಾದೋದ್ಭವೆ
ನವಕುಸುಮವ ಸಮರ್ಪಿಸುವೆನೆಂದರೆ ಉದು
ಭವಿಸಿಹನು ಅಜ ನಿನ್ನ ಪೊಕ್ಕಳ ಪೂವಿನಲಿ ೧

ದೀಪವನು ಬೆಳಗುವೆನೆ ನಿನ್ನ ಕಂಗಳು ಸಪ್ತ
ದ್ವೀಪಂಗಳೆಲ್ಲವನು ಬೆಳಗುತಿಹವೋ
ಆಪೋಶನವನಾದರೀವೆನೆಂತೆಂಬೆನೆ
ಆಪೋಶನವಾಯಿತೇಳು ಅಂಬುಧಿಯು ೨

ಕಾಣಿಕೆಯಿತ್ತಾದರು ಕೈಮುಗಿವೆನೆಂಬೆನೆ
ರಾಣಿವಾಸವು ಸಿರಿದೇವಿ ನಿನಗೆ
ಮಾಣದೆ ಮನದೊಳು ನಿನ್ನ ನಾಮ ಸ್ಮರಣೆ
ಧ್ಯಾನವನು ದಯ ಮಾಡೊ ಪುರಂದರವಿಠಲ ೩

ಚಿಂತಾಯಕ—ತನ್ನ ಸಂಕಲ್ಪದಿಂದ (ಚಿಂತೆ) ಇಡೀ ಬ್ರಹ್ಮಾಂಡವನ್ನು ಹರಡುವವನು (ಆಯಕ).

ಕೋಟಿ—ವಾದ ವಿಚಾರ, ಸಮಸ್ಯೆ, ಅಪರಿಮಿತ.

ಸಪ್ತದ್ವೀಪಗಳು—ಜಂಬೂ, ಪ್ಲಕ್ಷ, ಕುಶ, ಕ್ರೌಂಚ, ಶಾಲ್ಮಲೀ, ಶಾಕ, ಪುಷ್ಕರ ಎಂಬ ಏಳು ದ್ವೀಪಗಳು; ಭರತಖಂಡವಿರುವುದು ಜಂಬೂ ದ್ವೀಪದಲ್ಲಿ.

ಬೆಳಗುತಿಹವೋ—'ತಸ್ಯ ಭಾಸಾ ಸರ್ವಮಿದಂ ವಿಭಾತಿ', 'ವಿಶ್ವತಶ್ಚಕ್ಷುಃ' ಮೊದಲಾದ ಶ್ರುತಿವಚನಗಳ ಛಾಯೆ.

ಏಳು ಅಂಬುಧಿಯು—ಲವಣ, ಇಕ್ಷು, ಸುರೆ, ಸರ್ಪಿ, ದಧಿ, ಕ್ಷೀರ, ಜಲ ಎಂಬ ಏಳು ಸಮುದ್ರಗಳು.

ಆಪೋಶನವಾಯಿತು—ಮಹಾ ಪ್ರಳಯದಲ್ಲಿ.

ಮಾಣದೆ—ಒಣಗಿಹೋಗದೆ ; ಅಳಿಸಿಹೋಗದಂತೆ.

ಜೀವನ ಸೂತ್ರ

"ಮಾನವ ಜನ್ಮ ದೊಡ್ಡದು. ಇದ ಹಾಳು ಮಾಡಲಿ ಬೇಡಿ ಹುಚ್ಚಪ್ಪಗಳಿರಾ" ಈ ಮಾತು ಪುರಂದರದಾಸರಿಗೆ ಬದುಕಿನ ಬಗೆಗೆ ಇರುವ ಗಾಢವಾದ ಪ್ರೀತಿಯನ್ನೂ ಅವರ ಅಪ್ಪಟ ಮಾನವತಾವಾದವನ್ನೂ ತೋರಿಸಿಕೊಡುತ್ತದೆ. ವ್ಯಕ್ತಿ ಜೀವನದ ನೂರಾರು ಬಗೆಗಳನ್ನೂ ವ್ಯಕ್ತಿಯ ಜೀವಶಕ್ತಿಗಿರುವ ಅಖಂಡ ಸಾಧ್ಯತೆಗಳನ್ನು ಅವರು ಬಲ್ಲವರಾಗಿದ್ದಾರೆ. ಸಣ್ಣತನ, ಆಲಸ್ಯ, ಮಾತ್ಸರ್ಯ ಮುಂತಾದ ಅವಗುಣಗಳನ್ನು ಕೊಡವಿಕೊಂಡರೆ ಈ ಮಾನವ ಅತ್ಯದ್ಭುತವಾದುದನ್ನು ಸಾಧಿಸಬಲ್ಲ ತ್ರಿವಿಕ್ರಮ ಶಕ್ತಿಯನ್ನು ಪಡೆಯಬಲ್ಲನೆಂಬುದು ಅವರ ಭಾವನೆಯಾಗಿದೆ. ಜನ್ಮಾಂತರಗಳಲ್ಲಿ ಮತ್ತು ಜನ್ಮದ ಹಲವಾರು ಅವಸ್ಥೆಗಳಲ್ಲಿ ನಂಬುಗೆಯುಳ್ಳ ಪುರಂದರದಾಸರು ದೈವ ಸೃಷ್ಟಿಯಲ್ಲೇ ಲೌಕಿಕ ನೆಲೆಯಲ್ಲಿ ಮಾನವ ಜನ್ಮ ದೊಡ್ಡದು ಎಂದು ಒಪ್ಪಿಕೊಳ್ಳುತ್ತಾರೆ. ಮಾನವ ಜನ್ಮದಂಥ ಬೆಲೆ ಬಾಳುವ ದೊಡ್ಡ ಆಸ್ತಿಗೆ ಹಕ್ಕುದಾರನಾದ ಮಾನವ ಅದನ್ನು ಸರಿಯಾಗಿ ರೂಢಿಸಿಕೊಳ್ಳಬೇಕೆಂದೂ ಅವನ ಉಪೇಕ್ಷೆಯಿಂದ ಈ ಸಂಪತ್ತು ನಶಿಸಬಾರದೆಂದೂ ಅವರು ಆಶಿಸುತ್ತಾರೆ. ದೊಡ್ಡದಾಗಿ ಬದುಕುವ ಭಾವಶ್ರೀಮಂತಿಕೆಯನ್ನು ಅವರು ವ್ಯಕ್ತಿಯಲ್ಲಿ ಕಾಣಬಯಸುತ್ತಾರೆ. ಆದರೆ ಇಂಥ ಶ್ರೀಮಂತವಾದ, ಅಸಂಖ್ಯ ಸಾಧ್ಯತೆಗಳಿಂದ ಮೆರೆಯಬಲ್ಲ ಮಾನವ ಜನ್ಮದ ಘನತೆಯನ್ನು ನಮ್ಮ ಸಮಾಜದ ಜನ ಉಳಿಸಿಕೊಂಡು ಬರುವ ಕಾಳಜಿಯನ್ನೇ ತೋರುತ್ತಿಲ್ಲ ಎಂಬ ಕೊರಗೂ ಅವರನು ಬಾಧಿಸಿದೆ. ನಮ್ಮ ಜನ ಹುಚ್ಚಪ್ಪಗಳು. ಈ ದೊಡ್ಡದಾದ ಮಾನವ ಜನ್ಮವನ್ನು ಹಾಳುಮಾಡುತ್ತಿದ್ದಾರೆ ಎಂಬ ಅನುಭವಜನ್ಯವಾದ ಕೊರಗೂ ಪುರಂದರದಾಸರನ್ನ ಬಾಧಿಸಿದೆ. 'ಹುಚ್ಚಪ್ಪ' ಎಂಬ ಮಾತಿಗೆ ಮರುಳು ಹಿಡಿದವರು ಹುಚ್ಚರು ಮತಿವಿಕಲರು ಬುದ್ಧಿಹೀನರು ಎಂಬರ್ಥಗಳ ಜೊತೆಗೆ ಚಂಚಲ ಬುದ್ಧಿಯ ಮಂಗಗಳು ಎಂಬರ್ಥವೂ ಘಟಿಸುತ್ತದೆ. ಪುಚ್ಛ ಎಂದರೆ ಬಾಲ. ಪುಚ್ಛಯ್ಯ> ಪುಚ್ಚಯ್ಯ>ಹುಚ್ಚಯ್ಯ ಎಂಬ ರೂಪಾಂತರಗಳನ್ನು ಪಡೆದು ಬಾಲದಯ್ಯ ಎಂದರೆ ಕಪಿ ಎಂಬ ಅರ್ಥವನ್ನೂ ಈ ಶಬ್ದ ಸೂಚಿಸುತ್ತದೆ. ಮಾನವರನ್ನೇ ಬಲು ಮಟ್ಟಿಗೆ ಹೋಲುವ, ಬಹುಶಃ ಮಾನವರಿಗೆ ಪೂರ್ವಪುರುಷರಾದ ಈ ಪ್ರಾಣಿಗಳ ಸ್ವಭಾವ ನಮ್ಮ ಸಮಾಜದಲ್ಲಿ ಚಿತ್ರವಿಚಿತ್ರ ವ್ಯಾಖ್ಯಾನಗಳಿಗೆ ಒಳಗಾಗಿದೆ. ಕಪಿಯ ಕಾರ್ಯಗತಿ, ಕಾರ್ಯ ವಿಧಾನ, ಕಾರ್ಯಕ್ಷಮತೆ, ಗಡಸುತನಗಳು ಮೆಚ್ಚತಕ್ಕವಾದರೂ ಸ್ತಿಮಿತವಿಲ್ಲದ ಅದರ ಹಾರಾಟವನ್ನು ಸಮಾಜದ ಜನ ಆಕ್ಷೇಪಿಸುತ್ತಾರೆ. 'ಕಪಿಬುದ್ಧಿ' ಎಂಬ ಮಾತೇ ಚಾಂಚಲ್ಯ ಅಸ್ಥಿರತೆ ಅವಾಂತರ ಅನಾಹುತ ಮೊದಲಾದ ಅವಗುಣಗಳನ್ನು ಮೇಳವಿಸಿಕೊಂಡಿದೆ. ತನ್ನ ಮಂಗಚೇಷ್ಟೆಯಿಂದ ಇಂಥ ಅಮೌಲ್ಯ ಆಸ್ತಿಯನ್ನು ಜನತೆ ಹಾಳುಮಾಡಿಕೊಳ್ಳಲು ಬಿಡಬಾರದು ಎಂಬ ಭಾವನೆಯಿಂದ ಪುರಂದರದಾಸರು ಹೀಗೆ ಎಚ್ಚರಿಕೆ ನೀಡಬೇಕಾಯಿತು. ಅಂದರೆ ಪುರಂದರದಾಸರ ಈ ಒಂದೇ ಸಾಲು ಮಾನವ ಸಮಾಜದ ಬಗೆಗೆ ಅವರಿಗೆ ಇರುವ

ಅಪಾರ ಗೌರವವನ್ನೂ ಅದರ ಗುಣಮಟ್ಟವನ್ನೂ ಉಳಿಸಿಕೊಂಡು ಬರಬೇಕೆಂಬ ಅವರ ಮೌಲ್ಯಪ್ರಜ್ಞೆಯನ್ನೂ ಪರಿಚಯಿಸಿಕೊಡುತ್ತದೆ.

'ಮಾನವ ಜನ್ಮ ದೊಡ್ಡದು' ಎಂದ ಮೇಲೆ ಅಂಥ ಜನ್ಮವನ್ನು ನಡೆಸಲು ಬೇಕಾದ ಸಾಮಾಜಿಕ ಸಾಂಸ್ಕೃತಿಕ ಧಾರ್ಮಿಕ ಪರಿಕರಗಳೂ ಶುದ್ಧವಾಗಿರಬೇಕು. ಪುರಂದರದಾಸರ ಸಮಾಜ ಪ್ರಜ್ಞೆ ಇಂಥ ದೊಡ್ಡ ಗುಣಗಳನ್ನು ಗುರುತಿಸುತ್ತದೆ, ಮಾರಕವಾದ ಅವಗುಣಗಳ ಕಳೆಯನ್ನು ಕೀಳ ಬಯಸುತ್ತದೆ. ತಾವು ಮೆಚ್ಚುವ ಮತ್ತು ನಿರಾಕರಿಸುವ ಎರಡು ಭಾವಗಳನ್ನೂ ಸಮಾನಾಂತರವಾಗಿ ಎತ್ತಿ ತೋರಿಸುತ್ತ, ಒಮ್ಮೊಮ್ಮೆ ಬೇರೆ ಬೇರೆಯಾಗಿಸುತ್ತ, ಒಮ್ಮೊಮ್ಮೆ ಎರಡನ್ನೂ ಒಳ ಬೆರಸುತ್ತ, ಒಂದರ ವಿರುದ್ಧ ಒಂದನ್ನು ಎತ್ತಿಕಟ್ಟುತ್ತ ಎರಡೂ ಶಕ್ತಿಗಳ ಮುಖಬೆಲೆ, ಒಳಬೆಲೆಗಳನ್ನು ಪತ್ತೆಹಚ್ಚುವ ಕಾರ್ಯದಲ್ಲಿ ಪುರಂದರದಾಸರು ತೊಡಗುತ್ತಾರೆ. ಸಮಾಜದಲ್ಲಿ ವ್ಯಕ್ತಿ ಅನುಸರಿಸಬೇಕಾದ 'ಜೀವನಸೂತ್ರ'ಗಳನ್ನು ನಮ್ಮ ಮುಂದೆ ಇಡುತ್ತಾರೆ.

ಎಚ್ಚರದ ನಡೆ, ದಾನಶೀಲತೆ, ಧರ್ಮಾಸಕ್ತಿ, ಗರ್ವಹೀನತೆ, ನಯ ವಿನಯ ಗೌರವಭಾವ, ಕಾರ್ಯಶ್ರದ್ಧೆ, ದೈವಚಿಂತನ, ಮಾನವಂತಿಕೆ, ಪರರ ಗೊಡವೆಗೆ ಹೋಗದ ಸಾತ್ತ್ವಿಕತೆ, ಬಂದದ್ದುಂಡು ಸುಖಿಸುವ ಸಂತೃಪ್ತ ಮನೋಧರ್ಮ, ಸಜ್ಜನಸ್ನೇಹ, ಭೂತದಯಾಪರತೆ, ಸತ್ಯ, ಶೌಚ, ತೀರ್ಥಕ್ಷೇತ್ರ ಸಂದರ್ಶನ, ಅಧಿಕಾರ ಹೊನ್ನು ಪರಹೆಣ್ಣುಗಳಿಗೆ ಮಣಿಯದ ಆತ್ಮಸ್ಥೈರ್ಯ, ಮತಸಹಿಷ್ಣುತೆ, ಸೌಶೀಲ್ಯ ಈ ಮೊದಲಾದ ಸದ್ಗುಣಗಳ ಪಾಲನೆಯೇ ನಮ್ಮ 'ಜೀವನ ಸೂತ್ರ'ವಾಗಬೇಕೆಂದು ಪುರಂದರದಾಸರು ಆಶಿಸುತ್ತಾರೆ. "ಹೋಗದೂರಿನ ಹಾದಿ ಕೇಳಿ ಮಾಡುವುದೇನು ?" ಇದು ಪುರಂದರದಾಸರೇ ಸೃಷ್ಟಿಸಿರುವ ಒಂದು ಗಾದೆ. ಅಂದರೆ ಅನನುಸರಣೀಯವಾದ ತಾತ್ತ್ವಿಕ ಘೋಷಣೆಗಳಿಂದ ಪ್ರಯೋಜನವಿಲ್ಲ ಎಂಬುದನ್ನು ಕಂಡುಕೊಂಡ ದಾಸರು ಖಚಿತವಾದ ನಿಲುವುಗಳಿಂದ ತಮ್ಮ ಸಾಮಾಜಿಕ ಧೋರಣೆಯನ್ನು ಅರಿವಿಗೆ ತರುತ್ತಾರೆ. ಈ ಸುಗುಣಗಳ ವಿರುದ್ಧ ದಿಕ್ಕಿನಲ್ಲೂ ಸಂಚಾರಮಾಡಿ ಅಲ್ಲಿಯ ಹುಳುಕುಗಳನ್ನೆಲ್ಲ ಬಯಲಿಗೆ ಎಳೆದಿದ್ದಾರೆ. 'ಎನ್ನದು–ತನ್ನದು ಎಂದು ಭೇದವ ಮಾಳ್ಪ' ಕುನ್ನಿ ಮನವ ನೆಚ್ಚಿ ಕೆಡಬೇಡ ಎಂದು ಎಚ್ಚರಿಸುತ್ತಾರೆ. 'ಹಮ್ಮು ಮಾಡಲಿಬೇಡಿ' ಎಂದು ಅದರ ಅನಾಹುತಗಳನ್ನು ವಿವರಿಸುತ್ತಾರೆ. ಕಂಟಕಿಗಳಿಂದ ಸಮಾಜಕ್ಕೆ ಆಗುವ ಕೇಡನ್ನು ವಿವರಿಸುತ್ತಾರೆ. 'ನೀತಿ–ನೇರಿಲ್ಲದ ಕೂಟ'ವನ್ನು ಅವರು ತಿರಸ್ಕರಿಸುತ್ತಾರೆ. ಬದುಕಿನ ತೋರಿಕೆಯ ವೈಭವಗಳಿಗೆ ಮರುಳಾಗಿ ಬದುಕನ್ನು ಹಾಳುಮಾಡಿಕೊಳ್ಳುವವರ ಬಗೆಗೆ ಅನುತಾಪ ವ್ಯಕ್ತಪಡಿಸುತ್ತಾರೆ. ಕಂದರ್ಪನ ಅಟ್ಟುಳಿಗೆ ಕಳವಳಿಸುವವರನ್ನು ಹಂಗಿಸುತ್ತಾರೆ. ಮಾನಭಂಗ, ಕುಚೋದ್ಯ, ಕುಮಂತ್ರಗಳಲ್ಲಿ ತೊಡಗುವವರಿಂದ ದೂರವಿರಲು ಬಯಸುತ್ತಾರೆ. ಹೀಗೆ ವಿಧಿ–ನಿಷೇಧಗಳೆರಡರ ಹಿನ್ನೆಲೆಯಲ್ಲಿ ಸಾರಭೂತವಾದ ಬದುಕಿನ 'ಜೀವನ ಸೂತ್ರ'ಗಳನ್ನು ಹರಡುತ್ತಾರೆ.

ಈ ಭಾಗದಲ್ಲಿ ಬದುಕಿನಲ್ಲಿ ಉತ್ತಮಿಕೆಯನ್ನು ರೂಢಿಸಿಕೊಳ್ಳಲು ಅಗತ್ಯವೆನಿಸಿದ ಕೆಲವು ಮೂಲಸೂತ್ರಗಳನ್ನು ಆಯ್ದು ಸಾದರಪಡಿಸಲಾಗಿದೆ. ಈ ಮೂಲ ಸೂತ್ರಗಳನ್ನು ಮೂರು ಮುಖ್ಯ ರೂಪಗಳಲ್ಲಿ ದಾಸರು

ಕಾಣಿಸಿದ್ದಾರೆ. ಮೊದಲನೆಯದು 'ಬೇಕು'ಗಳು ಅಥವಾ 'ವಿಧಿ'ಗಳು. ಇವು ಉತ್ತಮ ಮೌಲ್ಯಗಳನ್ನು ಎತ್ತಿ ಹಿಡಿಯುವುದರ ಜೊತೆಗೆ ನಡವಳಿಕೆಯ ಒಂದು ಚೌಕಟ್ಟನ್ನು ಹಾಕಿಕೊಡುತ್ತವೆ. 'ಬೇಕು' 'ಕಂಡ್ಯ' 'ಎಚ್ಚರಿಕೆ' 'ಬೇಡು' 'ಮಾಡೊ', 'ಪಾಡೊ'—ಇಂಥ ಮಾತುಗಳನ್ನು ಮೇಲಿಂದ ಮೇಲೆ ಬಳಸಿ ವೈಚಾರಿಕ ಜಾಗೃತಿಯನ್ನು ನೀಡಲು ಪುರಂದರದಾಸರು ಯತ್ನಿಸಿದ್ದಾರೆ. ಎರಡನೆಯದು 'ನಿಷೇಧ ಕ್ರಮ' ಅಥವಾ 'ಬೇಡ'ಗಳ ವಿಚಾರ. ಒಳಿತನ್ನು ಸೂಚಿಸಲು ಮೊದಲ ವರ್ಗದ ಕೀರ್ತನೆಗಳು ಪ್ರಯತ್ನಿಸಿದರೆ ಈ ಎರಡನೆಯವು ನಾವು ವರ್ಜಿಸಬೇಕಾದ 'ಕಳೆ'ಯ ಭಾಗವನ್ನು ಕುರಿತು ಪ್ರಸ್ತಾಪಿಸುತ್ತವೆ. 'ಬೇಡ' (ಕೋತಿಹಾಗೆ ಕುಣಿದಾಡಬೇಡ, ಹಮ್ಮು ಮಾಡಬೇಡ, ನಾಡ ಜೀವನ ನೆಚ್ಚಿ ಕೆಡಬೇಡ.) 'ಬಾರದು' (ಹತ್ತು ಮಂದಿಗಂಜದವನ ಸ್ನೇಹಿಸಬಾರದು, ಮಾನಭಂಗವ ಮಾಡಿ ಮತ್ತೆ ಉಪಚಾರಗಳ ಏನು ಮಾಡಿದರಲ್ಲಿ ಇರಬಾರದಯ್ಯ) ಏಕೆ, ಏನು, ಬಾರದೆ (ಸತ್ಯಶೌಚವಿಲ್ಲದಾಚಾರವೇಕೆ ? ಹೀನಗುಣವುಳ್ಳವಗೆ ಹಿರಿಯತನ ಬಂದರೇನು ?) ಮೂರನೆಯವು ಸಮಾಜದ ವಿಭಿನ್ನ ಜಾತಿಮತಗಳ ನಡುವೆ ಇರಬೇಕಾದ ಸೌಹಾರ್ದ ಭಾವವನ್ನು ವಿವರಿಸುತ್ತವೆ.

ಪಂತುವರಾಳಿ ಅಟ್ಟ

ಮಾನವಜನ್ಮ ದೊಡ್ಡದು, ಇದ
ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರಾ ಪ

ಕಣ್ಣು ಕೈ ಕಾಲ್ ಕಿವಿ ನಾಲಿಗೆ ಇರಲಿಕ್ಕೆ
ಮಣ್ಣು ಮುಕ್ಕಿ ಮರುಳಾಗುವರೆ
ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತ
ಉಣ್ಣದೆ ಉಪವಾಸ ಇರುವರೆ ಖೋಡಿ ೧

ಕಾಲನ ದೂತರು ಕಾಲ್‌ಪಿಡಿದೆಳೆವಾಗ
ತಾಳು ತಾಳೆಂದರೆ ತಾಳುವರೆ
ಧಾಳಿ ಬಾರದ ಮುನ್ನ ಧರ್ಮವ ಗಳಿಸಿರೊ
ಸುಳ್ಳಿನ ಸಂಸಾರ ಸುಳಿಗೆ ಸಿಕ್ಕಲುಬೇಡಿ ೨

ಏನು ಕಾರಣ ಯದುಪತಿಯನು ಮರೆತಿರಿ
ಧನ ಧಾನ್ಯ ಸತಿಸುತರು ಕಾಯುವರೆ
ಇನ್ನಾದರು ಏಕೋಭಾವದಿ ಭಜಿಸಿರೊ
ಚೆನ್ನ ಶ್ರೀ ಪುರಂದರವಿಠ್ಠಲರಾಯನ ೩

[ಬದುಕನ್ನು ಗಾಢವಾಗಿ ಪ್ರೀತಿಸುವ ಸಮಾಜ ಚಿಂತಕರಿಗೆ ಆ ಬದುಕಿನ ಸುತ್ತಣ ಪೊಳ್ಳುಗಳತ್ತ ಬೆರಳು ಮಾಡಬೇಕೆನ್ನಿಸುವುದೂ ಸಹಜ. "ಧಾಳಿ ಬಾರದ ಮುನ್ನ ಧರ್ಮವ ಗಳಿಸಿರೊ" ಎಂಬ ಮಾತು ದೇಹದ ಮೇಲೆ ಮನಸ್ಸಿನ ಧಾಳಿ ಆಗಾಗ ನಡೆಯುತ್ತಿರುತ್ತದೆನ್ನುವ ಪೂರ್ವಸೂಚನೆಯನ್ನೂ ಎರಚುತ್ತದೆ.]

ಧನ್ಯಾಸಿ ಆದಿ

ಈಸಬೇಕು ಇದ್ದು ಜಯಿಸಬೇಕು ಪ

ಹೇಸಿಗೆ ಸಂಸಾರದಲ್ಲಿ ಆಸೆ ಲೇಶ ಇಡದ ಹಾಗೆ ಅ

ತಾಮರಸ ಜಲದಂತೆ
ಪ್ರೇಮವಿಟ್ಟು ಭವದೊಳು
ಸ್ವಾಮಿ ರಾಮ ಎನುತ ಪಾಡಿ
ಕಾಮಿತ ಕೈ ಗೊಂಬರೆಲ್ಲ ೧

ಗೇರು ಹಣ್ಣಿನಲ್ಲಿ ಬೀಜ
ಸೇರಿದಂತೆ ಸಂಸಾರದಿ
ಮೀರಿ ಆಸೆ ಮಾಡದಂತೆ
ಧೀರಕೃಷ್ಣನ ಭಕುತರೆಲ್ಲ ೨

ಮಾಂಸದಾಸೆಗೆ ಮತ್ಸ್ಯ ಸಿಲುಕಿ
ಹಿಂಸೆ ಪಟ್ಟ ಪರಿಯಂತೆ
ಮೋಸ ಹೋಗದಹಾಗೆ ಜಗ
ದೀಶ ಪುರಂದರವಿಠಲನ ನೆನೆದು ೩

[ಬದುಕನ್ನು ಒಂದು ಸವಾಲು ಎಂಬಂತೆ ಸ್ವೀಕರಿಸಿ ಜೀವನ ಪ್ರವಾಹದಲ್ಲಿ ಈಜಿ ಪಾರಾಗುತ್ತೇನೆ ಎಂಬ ಆತ್ಮವಿಶ್ವಾಸ ಪ್ರತಿಯೊಬ್ಬನಲ್ಲೂ ಬರಬೇಕು ಎಂಬುದು ಈ ಕೀರ್ತನೆಯ ಆಶಯ.]

ತಾಮರಸ ಜಲದಂತೆ—ತಾವರೆ ಎಲೆ ನೀರಿನಲ್ಲಿ ಬೆಳೆದರೂ ನೀರಿಗೆ ಅಂಟದೆ ಒಂದು ಹನಿ ನೀರನ್ನೂ ಇಂಗಿಸಿಕೊಳ್ಳದೆ ಹೊರಚೆಲ್ಲುತ್ತದೆ. ಅಂಥ ನಿರ್ಲಿಪ್ತಸ್ಥಿತಿ, ಇದ್ದೂ ಇಲ್ಲದಂತೆ ಬಾಳುವ ರೀತಿ.

ಕಾಂಬೋದಿ ಅಟ್ಟ

ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ ಪ

ಪದುಮನಾಭನ ಪಾದಭಜನೆ ಸುಖವಯ್ಯ ಅ

ಕಲ್ಲಾಗಿ ಇರಬೇಕು ಕಠಿಣ ಭವ ತೊರೆಯೊಳಗೆ
ಬಿಲ್ಲಾಗಿ ಇರಬೇಕು ಬಲ್ಲವರೊಳು
ಮೆಲ್ಲನೇ ಮಾಧವನ ಮನದಿ ಮೆಚ್ಚಿಸಬೇಕು
ಬೆಲ್ಲವಾಗಿರಬೇಕು ಬಂಧುಜನರೊಳಗೆ ೧

ಬುದ್ಧಿಯಲಿ ತನುಮನವ ತಿದ್ದಿಕೊಳುತಿರಬೇಕು
ಮುದ್ದಾಗಿ ಇರಬೇಕು ಮುನಿ ಯೋಗಿಗಳಿಗೆ
ಮಧ್ವ ಮತಾಬ್ಧಿಯಲಿ ಮೀನಾಗಿ ಇರಬೇಕು
ಶುದ್ಧನಾಗಿರಬೇಕು ಕರಣತ್ರಯಂಗಳಲಿ ೨

ವಿಷಯಭೋಗದ ತೃಣಕೆ ಉರಿಯಾಗಿ ಇರಬೇಕು
ನಿಶಿ ಹಗಲು ಶ್ರೀ ಹರಿಯ ಭಜಿಸಬೇಕು
ವಸುಧೆಯೊಳು ಪುರಂದರವಿಠಲನ ನಾಮವ
ಹಸನಾಗಿ ನೆನೆನೆನೆದು ಸುಖಿಯಾಗಬೇಕು ೩

[ಬದುಕಿನ ವಿವಿಧ ರಂಗಗಳಲ್ಲಿ ಹೇಗೆ ವರ್ತಿಸಬೇಕು ಎಂಬುದರ ಸೋದಾಹರಣ ನಿರೂಪಣೆ ಇಲ್ಲಿದೆ. ಬದುಕಿನ ಸವಾಲುಗಳ ಪ್ರವಾಹದಲ್ಲಿ ಕೊಚ್ಚಿಹೋಗದೆ ಕಲ್ಲಿನಂತೆ ಸ್ಥಿರವಾಗಿ ಕಾಲೂರಿ ನಿಲ್ಲಬೇಕು. ಸುತ್ತಮುತ್ತಣ ಜನತೆಯ ಮಧ್ಯೆ ಇದ್ದಾಗ ಬಿಲ್ಲಾಗಿ ಇರಬೇಕು. ಅಂದರೆ ಬಿಲ್ಲಿನಂತೆ ಬಾಗುವ ವಿನಯಶೀಲಪ್ರವೃತ್ತಿ ಬೆಳೆಸಿಕೊಳ್ಳಬೇಕು. ಕಾಮವೆಂಬ ಹುಲ್ಲಿನ ಪಾಲಿಗೆ ಬೆಂಕಿಯಾಗಬೇಕು. ಸದಾ ತನ್ನ ಮನಸ್ಸು ದೇಹಗಳನ್ನು ಪರಿಷ್ಕರಿಸುತ್ತಲೇ ಇರಬೇಕು.]

ಮತಾಬ್ಧಿ—ಮತವೆಂಬ ಸಮುದ್ರ.
ತೃಣ—ಹುಲ್ಲು.
ನಿಶಿ—ರಾತ್ರಿ.
ಕರಣತ್ರಯ—ತ್ರಿಕರಣ ; ಮನಸ್ಸು, ವಾಕ್, ಕಾಯ.
ವಸುಧೆ—ಭೂಮಿ.

ಸಾವೇರಿ | ಅಟ್ಟ

ಧರ್ಮವೇ ಜಯವೆಂಬ ದಿವ್ಯಮಂತ್ರ ಪ

ಮರ್ಮವನರಿತು ಮಾಡಲಿಬೇಕು ತಂತ್ರ ಅ

ವಿಷವಿಕ್ಕಿದವಗೆ ಷಡ್ರಸವನುಣಿಸಲಿಬೇಕು
ದ್ವೇಷ ಮಾಡಿದವನ ಪೋಷಿಸಲಿಬೇಕು
ಪುಸಿ ಮಾಡಿ ಕೆಡಿಸುವವನ ಹಾಡಿ ಹರಸಲಿಬೇಕು
ಮೋಸ ಮಾಡುವನ ಹೆಸರು ಮಗನಿಗಿಡಬೇಕು ೧

ಹಿಂದೆ ನಿಂದಿಪರನ್ನು ವಂದಿಸುತಲಿರಬೇಕು
ಬಂಧನದೊಳಿಟ್ಟವರ ಬೆರೆಯಬೇಕು
ಕೊಂದ ವೈರಿಯ ಮನೆಗೆ ನಡೆದು ಹೋಗಲಿಬೇಕು
ಕುಂದೆಣಿಸುವವರ ಗೆಳೆತನ ಮಾಡಬೇಕು ೨

ಕೊಂಡೊಯ್ದು ಬಡಿಯುವರ ಕೊಂಡಾಡುತಿರಬೇಕು
ಕಂಡು ಸಹಿಸದವರ ಕರೆಯಬೇಕು
ಪುಂಡರೀಕಾಕ್ಷ ಶ್ರೀಪುರಂದರವಿಠ್ಠಲನ
ಕೊಂಡಾಡಿ ತಾ ಧನ್ಯನಾಗಬೇಕು ೩

[ಸತ್ಪುರುಷನ ಮೂಲಭೂತ ಲಕ್ಷಣಗಳನ್ನು ಈ ಪದ ಮನಗಾಣಿಸುತ್ತದೆ. ವೈರದಿಂದ ವೈರ ಶಮನವಾಗುವುದಿಲ್ಲ ಎಂಬುದನ್ನು ವಿವೇಕಿಗಳು ಬಲ್ಲರು. ನಮ್ಮ ಸುತ್ತ ವಿಷಜಂತುಗಳು ದ್ವೇಷಿಗಳು ಹುಸಿಗಾರರು ವಂಚಕರು ಬೆನ್ನಹಿಂದಾಡಿಕೊಳ್ಳುವವರು ಪೀಡಕರು ಅಸೂಯಾಪರರು ಇದ್ದಾರೆ ನಿಜ. ಅಂಥವರೊಂದಿಗೆ ಯಾವ ಬಗೆಯಲ್ಲಿ ಸ್ಪಂದಿಸಬೇಕು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. 'ಮೋಸ ಮಾಡಿದವನಿಗೆ ಮಗನ ಹೆಸರು ಇಡಬೇಕು' ಎಂಬ ಮಾತಂತೂ ಸಂಪನ್ನ ವ್ಯಕ್ತಿಯ ಸಹನಶೀಲತೆಯ ಶ್ರೇಷ್ಠ ಮಾದರಿಯಾಗಿ ನಿಲ್ಲುತ್ತದೆ.]

ಷಡ್ರಸ—ಕಷಾಯ, ಮಧುರ, ಲವಣ, ಕಟು, ತಿಕ್ತ, ಆಮ್ಲ ಎಂಬ ಆರು ರಸಗಳು.

೨೫

ನಾದನಾಮಕ್ರಿಯೆ ಆದಿ

ನರನಾದ ಮೇಲೆ ಹರಿನಾಮ ಜಿಹ್ವೆಯೊಳಿರಬೇಕು ಪ

ಭೂತದಯಾಪರನಾಗಿರಬೇಕು
ಪಾತಕವೆಲ್ಲ ಕಳೆಯಲಿಬೇಕು
ಮಾತು ಮಾತಿಗೆ ಹರಿಯೆನ್ನಬೇಕು ೧

ಆರುವರ್ಗವನಳಿಯಲಿಬೇಕು
ಮೂರು ಗುಣಂಗಳ ಮೀರಲಿಬೇಕು
ಸೇರಿ ಬ್ರಹ್ಮನೊಳಿರಬೇಕು ೨

ಅಷ್ಟ ಮದಂಗಳ ತುಳಿಯಲಿಬೇಕು
ದುಷ್ಟರ ಸಂಗವ ಬಿಡಬೇಕು
ಕೃಷ್ಣ ಕೇಶವ ಎನಬೇಕು ೩

ವೇದ ಶಾಸ್ತ್ರವನೋದಲಿಬೇಕು
ಭೇದ ಅಹಂಕಾರವ ನೀಗಲಿಬೇಕು
ಮಾಧವ ಸ್ಮರಣೆಯೊಳಿರಬೇಕು ೪

ಶಾಂತಿ ಕ್ಷಮೆ ದಮೆ ಪಿಡಿಯಲಿಬೇಕು
ಭ್ರಾಂತಿ ಕ್ರೋಧವ ಕಳೆಯಲಿಬೇಕು
ಶಾಂತರ ಸಂಗದೊಳಿರಬೇಕು ೫

ಗುರುವಿನ ಚರಣಕ್ಕೆರಗಲಿಬೇಕು
ತರಣೋಪಾಯವನರಿಯಲಿಬೇಕು
ವಿರಕ್ತಿ ಮಾರ್ಗದಲಿರಬೇಕು ೬

ಬಂದದ್ದುಂಡು ಸುಖಿಸಲಿಬೇಕು
ನಿಂದಾಸ್ತುತಿಗಳ ತಾಳಲಿಬೇಕು
ತಂದೆ ಪುರಂದರವಿಠಲ ಎನಬೇಕು ೭

ಆರು ವರ್ಗ—ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗ.

ಮೂರು ಗುಣಂಗಳು—ಸತ್ತ್ವ, ರಜಸ್ಸು, ತಮಸ್ಸು.

ಅಷ್ಟಮದಂಗಳು—ಧನಮದ, ಕುಲಮದ, ವಿದ್ಯಾಮದ, ರೂಪಮದ, ಯೌವನ ಮದ, ಬಲಮದ, ತಪೋಮದ, ಸಿದ್ಧಿಮದ.

ಭೇದ ಅಹಂಕಾರ—ತನ್ನವರು, ಬೇರೆಯವರು ಎನ್ನುವ ಭೇದ ; ತಾನು, ತನ್ನದು ಎನ್ನುವ ಅಹಂಕಾರ.

ತರಣೋಪಾಯ—ಸಂಸಾರವನ್ನು ದಾಟುವ ದಾರಿ.

ವಿರಕ್ತಿ ಮಾರ್ಗ—ಈ ದೇಹ ಗಾಳಿಗಿಕ್ಕಿದ ಸೊಡರು, ಸಂಸಾರದಲ್ಲಿ ಸಾರವಿರದು ಎಂಬ ಭಾವ.

ಬಂದದ್ದುಂಡು ಸುಖಿಸಲಿಬೇಕು, ನಿಂದಾಸ್ತುತಿಗಳ ತಾಳಲಿಬೇಕು—'ಯದೃಚ್ಛಾಲಾಭ ಸಂತುಷ್ಟಃ ದ್ವಂದ್ವಾತೀತಃ' ಎನ್ನುವ ಗೀತಾ ವಾಕ್ಯದ ಛಾಯೆ.

೨೬

ಕಾಂಬೋದಿ　　　　　　　　　　　　　　　　　　　　　ಝಂಪೆ

ಇಂತು ಶ್ರುತಿ ಸ್ಮೃತಿಗಳಲಿ ಸಾರುತಿದೆ ಕೋ　　ಪ

ಕಂತುಪಿತನ ಗುಣಗಳನು ತಿಳಿಯಬೇಕು　　ಅ

ಮನವ ಸಿರಿ ನರಹರಿಯ ಚರಣಕರ್ಪಿಸಬೇಕು
ತನುವ ತೊಂಡರಿಗಡ್ಡ ಕೆಡಹಬೇಕು
ವನಿತೆಯರ ಚೆಲುವಿಕೆಗೆ ಮರುಳಾಗದಿರಬೇಕು
ಘನತೆಯಲಿ ಹರಿಚರಣ ಸ್ಮರಿಸುತಿರಬೇಕು　　೧

ಕಂದರ್ಪನಟ್ಟುಳಿಗೆ ಕಳವಳಿಸದಿರಬೇಕು
ಇಂದ್ರಿಯಂಗಳನು ನಿಗ್ರಹಿಸಬೇಕು
ಚಂದ ಲೀಲೆಗಳಿಗೆ ಮನವೊಲಿಸದಿರಬೇಕು
ಇಂದಿರೇಶನ ಪದದ ಪಥವರಿಯಬೇಕು　　೨

ಒಂಟಿಯಲಿ ಮುನಿಗಳಾಶ್ರಮದಿ ನೆಲಿಸಲಿಬೇಕು
ಹೆಂಟೆ ಭಂಗಾರ ಸಮ ತಿಳಿಯಬೇಕು
ಕಂಟಕರ ಭಯಗಳನು ನೀಗುತ್ತಲಿರಬೇಕು ವೈ
ಕುಂಠ ಪುರಂದರವಿಠಲನೊಲಿಸಬೇಕು　　೩

ಕಂತುಪಿತ—ಮನ್ಮಥನ ತಂದೆ, ವಿಷ್ಣು.

ತೊಂಡರಿಗೆ—ಭಕ್ತರಿಗೆ.

ಅಡ್ಡ ಕೆಡಹಬೇಕು—ನಮಸ್ಕಾರ ಮಾಡಿಸಬೇಕು.

ಕಂದರ್ಪ—ಮನ್ಮಥ.

ಅಟ್ಟುಳಿ—ಬಾಧೆ.

ಹೆಂಟೆ ಭಂಗಾರ ಸಮ...—ಮಣ್ಣಿನ ಹೆಂಟೆ ಮತ್ತು ಬಂಗಾರದ ಬಿಲ್ಲೆ ಎರಡೂ ಒಂದೇ ಎನ್ನುವಷ್ಟರಮಟ್ಟಿಗೆ ದೃಷ್ಟಿ ಬಲಿಯಬೇಕು.

೨೭

ಕಾಂಬೋದಿ ಆದಿ

ಏನು ಇಲ್ಲವೊ ಎರಡು ದಿನದ ಸಂಸಾರ ಪ

ದಾನ ಧರ್ಮವ ಮಾಡು ಇದನರಿತು ಮನುಜ ಅ

ಹಸಿದು ಬಂದವರಿಗೆ ಅಶನವೀಯಲುಬೇಕು
ಶಿಶುಗಳಿಗೆ ಪಾಲ್ಬೆಣ್ಣೆ ನಡೆಸಬೇಕು
ಹಸನಾದ ಭೂಮಿಯನು ಧಾರೆಯೆರೆಯಲುಬೇಕು
ಭಾಷೆ ಕೊಟ್ಟರೆ ಮಾತು ನಿಜವಿರಲಿಬೇಕು ೧

ಕಳ್ಳತನವನು ಮಾಡಿ ಒಡಲ ಹೊರೆಯಲಿಬೇಡ
ಸುಳ್ಳನಾಗಿ ನೀನು ತಿರುಗಬೇಡ
ಒಳ್ಳೆ ಜನಗಳ ನಿಂದೆಯನು ನೀನು ಮಾಡಬೇಡ
ಒಳ್ಳೆಯವನೆಂದರೆ ಹಿಗ್ಗಬೇಡ ೨

ದೊರೆತನವು ಬಂದಾಗ ಕೆಟ್ಟು ನುಡಿಯಲಿ ಬೇಡ
ಸಿರಿ ಬಂದ ಕಾಲಕ್ಕೆ ಮೆರೆಯಬೇಡ
ಪರಮ ಪಾವನ ನಮ್ಮ ಪುರಂದರವಿಠಲನ
ಚರಣ ಸೇವೆಯ ಮಾಡಿ ಸುಖಿಯಾಗೊ ಮನುಜ ೩

ಅಶನ—ಆಹಾರ.
ಭಾಷೆ ಕೊಟ್ಟರೆ...—ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು.

೨೮

ಕಾಂಬೋದಿ ಝಂಪೆ

ಇರಬೇಕು ಹರಿದಾಸ ಸಂಗ, ಇರಬೇಕು
ಪರಮ ಜ್ಞಾನಿಗಳ ದಯ ಸಂಪಾದಿಸಬೇಕು ಪ

ಅತಿ ಜ್ಞಾನಿಯಾಗಬೇಕು, ಹರಿಕಥೆಯ ಕೇಳಬೇಕು
ಯತಿಗಳ ಪಾದಕ್ಕೆ ಎರಗಬೇಕು
ಸತಿಸುತರಿರಬೇಕು, ಮಮತೆ ಬಿಟ್ಟಿರಬೇಕು
ಮತಿಯ ಬಿಡದೆ ಹರಿಯ ಪೂಜಿಪರ ಸಂಗ ೧

ನಡೆ ಯಾತ್ರೆ ಎನಬೇಕು ನುಡಿ ನೇಮವಿರಬೇಕು
ಬಿಡದೆ ಹರಿಯ ಪೂಜೆ ಮಾಡಬೇಕು
ಅಡಿಗಡಿಗೆ ಶ್ರೀ ಹರಿಗಡ್ಡಬೀಳಲಿಬೇಕು
ಬಿಡದೆ ಹರಿಭಜನೆಯನು ಮಾಡುವರ ಸಂಗ ೨

ಹರಿಯೆ ಪರನೆನಬೇಕು, ಸುರಹರ ವಿರಂಚಿಗಳ
ಪರಿಯ ತಿಳಿಯಬೇಕು ತಾರತಮ್ಯದಿಂದ
ಅರಿಯದಿದ್ದರೆ ಗುರುಹಿರಿಯರನು ಕೇಳಬೇಕು
ಪರಮಾನಂದದಿ ಓಲಾಡುವರ ಸಂಗ ೩

ಷಟ್ಕರ್ಮ ಮಾಡಬೇಕು, ವೈಷ್ಣವನೆನಬೇಕು
ವಿಷ್ಣುದಾಸರ ದಾಸನಾಗಬೇಕು
ದುಷ್ಟಸಂಗವ ಬಿಟ್ಟು ಶಿಷ್ಟಮಾರ್ಗವ ಪಿಡಿದು
ಎಷ್ಟು ಕಷ್ಟ ಬಂದರು ವಿಷ್ಣು ಭಜಕರ ಸಂಗ ೪

ಏಕಾಂತವಿರಬೇಕು, ಲೋಕವಾರ್ತೆ ಬಿಡಬೇಕು
ಲೋಕೈಕನಾಥನ ಭಜಿಸಬೇಕು
ಸಾಕು ಸಂಸಾರೆಂದು ಕಕುಲಾತಿ ಬಿಡಬೇಕು
ಶ್ರೀಕಾಂತ ಪುರಂದರವಿಠಲದಾಸರ ಸಂಗ ೫

ನಡೆ ಯಾತ್ರೆ—ನಡೆಯುವಾಗ ಯಾತ್ರೆಯೆಂಬ ಭಾವನೆಯಿರಬೇಕು. ವ್ಯಾಸರಾಯ ಸ್ವಾಮಿಗಳ "ನಡೆ ಶ್ರೀ ಹರಿಯ ಯಾತ್ರೆ" ಎಂಬ ಮಾತನ್ನು ಗಮನಿಸಬೇಕು. ಇದು ಬಿಂಬಾನುಸಂಧಾನದ ಪ್ರಕಾರ.

ಸುರ ಹರ ವಿರಂಚಿಗಳ ಪರಿಯ...—ತಾರತಮ್ಯ ಕ್ರಮದಿಂದ ಜೀವನಿಗೆ ಬಿಂಬ ರೂಪರಾದ ದೇವತೆಗಳೆಲ್ಲರಿಗೂ ಹರಿಯೇ ಬಿಂಬರೂಪವಾಗಿರುವ ತತ್ತ್ವವನ್ನು ತಿಳಿಯಬೇಕು.

ಷಟ್ಕರ್ಮ—ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ.

ಕಕುಲಾತಿ—ಕಕ್ಕುಲತೆ, ಪ್ರೀತಿ.

ನಾದನಾಮಕ್ರಿಯೆ ಚಾಪು

ಇರಬೇಕು ಇಲ್ಲದಿರಬೇಕು
ಹರಿದಾಸರು ಸಂಸಾರದೊಳಗೆ ಪ

ಮಕ್ಕಳು ಮತಿವಂತರಾದರೆ ಮನೆಯಲ್ಲಿ
ಅಕ್ಕರೆಯಿಂದಲಿ ಕೂಡಿರಬೇಕು
ಚಿಕ್ಕತನದಿ ಬುದ್ಧಿ ಭೇರುಂಡನಾದರೆ
ಗಕ್ಕನೆ ಅಲ್ಲಿಂದ ಹೊರಗಾಗಬೇಕು ೧

ಕುಲಸತಿಯಾದರೆ ಕೂಡಿರಬೇಕು
ಸುಲಭದಿಂದಲಿ ಸ್ವರ್ಗ ಸೂರಾಡಬೇಕು
ಕಲಹಗಂಟಿ ಸತಿ ಕರ್ಕಶೆಯಾದರೆ
ಹಲವು ಪರಿಯಿಂದ ಹೊರಗಾಗಬೇಕು ೨

ದುಷ್ಟರ ಕಂಡರೆ ದೂರವಿರಬೇಕು
ಶಿಷ್ಟರ ಕಂಡರೆ ಕೈಮುಗಿಯಬೇಕು
ಧಿಟ್ಟ ಶ್ರೀ ಪುರಂದರವಿಠ್ಠಲರಾಯನ
ಗಟ್ಟಿಯಾಗಿ ನಿರುತ ನೆರೆನಂಬಬೇಕು ೩

ಭೇರುಂಡ—ಎರಡು ತಲೆ ಹಕ್ಕಿ ; ಬುದ್ಧಿಭೇದವಾದರೆ ; ಮನಸ್ಸು ಒಡೆದರೆ.

ಗಕ್ಕನೆ—ಬೇಗನೆ.

ಕುಲಸತಿ—ಗರತಿ.

ಆನಂದಭೈರವಿ ಅಟ್ಟ

ಎಚ್ಚರದಲಿ ನಡೆ ಮನವೆ, ಮುದ್ದು
ಅಚ್ಯುತನ ದಾಸರ ಒಡಗೂಡಿ ಬರುವೆ ಪ

ಅನ್ನದಾನವ ಮಾಡೋದಿಲ್ಲಿ, ಮೃ
ಷ್ಟಾನ್ನವ ತಂದು ಮುಂದಿಡುವರು ಅಲ್ಲಿ
ಅನ್ಯಾಯ ಮಾಡುವುದಿಲ್ಲಿ, ನಿನ್ನ
ಬೆನ್ನ ಚರ್ಮವ ಸೀಳಿ ತಿನಿಸುವರಲ್ಲಿ ೧

ತಂದೆ ತಾಯ್ಗಳ ಪೂಜೆಯಿಲ್ಲಿ, ದೇ
ವೇಂದ್ರನ ಸಭೆಯ ತೋರುವರೊ ನಿನಗಲ್ಲಿ
ತಂದೆ ತಾಯ್ಗಳ ಬಯ್ವುದಿಲ್ಲಿ, ಹುಲ್ಲು
ದೊಂದೆಯ ಕಟ್ಟಿ ಸುಡಿಸುವರೊ ಅಲ್ಲಿ ೨

ಆಲಯ ದಾನವು ಇಲ್ಲಿ, ವಿ
ಶಾಲ ವೈಕುಂಠದೊಳಿಡುವರೊ ಅಲ್ಲಿ
ಆಲಯ ಮುರಿಯುವುದಿಲ್ಲಿ, ನಿನ್ನ
ಶೂಲದ ಮರವನೇರಿಸಿ ಕೊಲ್ವರಲ್ಲಿ ೩

ಅತ್ತೆ ಮಾವನ ಸೇವೆಯಿಲ್ಲಿ, ಮತ್ತೆ
ಉತ್ತಮ ಪತಿವ್ರತೆಯೆಂಬುವರಲ್ಲಿ
ಅತ್ತೆ ಮಾವನ ಬಯ್ವುದಿಲ್ಲಿ, ನಿನ್ನ
ಕತ್ತು ಗರಗಸದಲ್ಲಿ ಕೊಯ್ಯುವರಲ್ಲಿ ೪

ಗಂಡನ ಭಕ್ತಿಯು ಇಲ್ಲಿ, ನಮ್ಮ
ಪುಂಡರೀಕಾಕ್ಷನು ಒಲಿಯುವನಲ್ಲಿ
ಗಂಡನ ನಿಂದಿಪುದಿಲ್ಲಿ, ನಿನ್ನ
ಖಂಡ ಖಂಡವ ಕತ್ತರಿಸುವರಲ್ಲಿ ೫

ಮದ್ದಿಟ್ಟು ಕೊಲ್ಲುವುದಿಲ್ಲಿ, ಒ
ದ್ದೊದ್ದು ಹದ್ದು ಕಾಗೆಗೆ ಹಾಕುವರಲ್ಲಿ
ಕ್ಷುದ್ರಬುದ್ಧಿಯ ಮಾಡೋದಿಲ್ಲಿ, ದೊಡ್ಡ
ಗುದ್ದಲಿ ಕಾಸಿ ಬೆನ್ನೊಳು ಎಳೆವರಲ್ಲಿ ೬

ಯಾಚಕರ ಮನ್ನಿಪುದಿಲ್ಲಿ, ನಿನ್ನ
ಯೋಚನೆಯಿಲ್ಲದೆ ಸಲುಹುವರಲ್ಲಿ
ಯಾಚಕರನು ಬಯ್ವುದಿಲ್ಲಿ, ನಿನ್ನ
ನಾಚಿಕೆ ತೆಗೆದು ನಾಲಗೆ ಸೀಳ್ವರಲ್ಲಿ ೭

ಧರ್ಮವ ಮಾಡುವುದಿಲ್ಲಿ, ಸು
ಧರ್ಮ ಸಭೆಯ ತೋರುವರು ಮುಂದಲ್ಲಿ
ಕರ್ಮ ಯೋಚನೆಗಳು ಇಲ್ಲಿ, ನಿನಗೆ
ನಿರ್ಮಿಸಿಹನು ಕ್ರಿಮಿ ತಿನ್ನುವುದಲ್ಲಿ ೮

ಹೆಣ್ಣು ಹೊನ್ನನು ಬಯಸೋದಿಲ್ಲಿ, ನಿನ್ನ
ಕಣ್ಣಿಗೆ ಸುಣ್ಣವ ತುಂಬುವರಲ್ಲಿ
ಘನ ಸುಜ್ಞಾನವು ಇಲ್ಲಿ, ಪ್ರ
ಸನ್ನ ಪುರಂದರವಿಠಲ ಪಾಲಿಪನಲ್ಲಿ ೯

[ವ್ಯಕ್ತಿ, ಲೋಕದಲ್ಲಿ ನಡೆದುಕೊಳ್ಳುವ ರೀತಿಗೆ ಅನುಗುಣವಾಗಿ ಸ್ವರ್ಗಸುಖ, ನರಕ ಯಾತನೆಗಳು ಸಿದ್ಧಗೊಳ್ಳುತ್ತವೆಂಬುದನ್ನು ವಿವರವಾಗಿ ಇಲ್ಲಿ ಚಿತ್ರಿಸಲಾಗಿದೆ. ಪುರಂದರದಾಸರು ಪ್ರತಿಪಾದಿಸುವ ಲೋಕಶೀಲಗಳೆಂದರೆ ಅನ್ನದಾನ, ಗೃಹದಾನ, ಧನದಾನ, ಧರ್ಮ ಕಾರ್ಯಾಚರಣೆ, ಗುರುಹಿರಿಯರಲ್ಲಿ ಭಕ್ತಿ ಇಡುವಿಕೆ. ಇವೆಲ್ಲ ಸ್ವರ್ಗ ಸಂಪತ್ತನ್ನು ತಂದುಕೊಡುವಂಥವು. ಇದಕ್ಕೆ ವಿರುದ್ಧವಾಗಿ ಮನೆಮುರುಕ ಬುದ್ಧಿ, ಗುರುಹಿರಿಯರ ನಿಂದನೆ, ವಿಷಪ್ರಾಶನ, ಅನ್ಯಸ್ತ್ರೀ ಮತ್ತು ಅನ್ಯರ ವಿತ್ತ ಹರಣ, ಅನ್ಯಾಯ ಕಾರ್ಯಾಚರಣೆ, ಕ್ಷುದ್ರ ಬುದ್ಧಿ ಮೊದಲಾದುವುಗಳಿಗೆ ಪ್ರತಿಯಾಗಿ ಘೋರ ನರಕದ ಉಗ್ರ ಚಿತ್ರಗಳನ್ನು ಕಾಣಿಸಿದ್ದಾರೆ. ದಾಸರ ಶೀಲಸಂವರ್ಧನೆಯ ಕಾಳಜಿ ಇಲ್ಲಿ ಕಾಣುತ್ತದೆ.]

ಬೊಂದೆ—ಕಂತೆ, ಕಟ್ಟು.

ಸೌರಾಷ್ಟ್ರ ಅಟ್ಟ

ನಾರಾಯಣನೆಂಬ ನಾಮವ ಮನದಲಿ
ನೆನೆಯುತಿರೆಚ್ಚರಿಕೆ ಪ

ನೀರ ಮೇಲಣ ಗುಳ್ಳೆಯಂತಿಹ ಡಿಂಬವ
ನಂಬದಿರೆಚ್ಚರಿಕೆ ಅ

ಪರರ ಪಾತಕಗಳ ನಾಲಗೆಯೊಳು
ಉಚ್ಚರಿಸದಿರೆಚ್ಚರಿಕೆ
ಗುರುಹಿರಿಯರ ಸೇವೆ ಮಾಡದೆ ಉದರವ
ಪೊರೆಯದಿರೆಚ್ಚರಿಕೆ
ಹರಿದಿನದುಪವಾಸವಿರುಳು ಜಾಗರವ ನೀ
ಮರೆಯದಿರೆಚ್ಚರಿಕೆ
ನರಹರಿಯಂಘ್ರಿಯ ಸ್ಮರಿಸದೆ ನರಸ್ತುತಿ
ತರವಲ್ಲ ಎಚ್ಚರಿಕೆ ೧

ಹೀನ ಮಾನಿನಿಯರ ಧ್ಯಾನಕಾನನದೊಳು
ನರಳದಿರೆಚ್ಚರಿಕೆ
ನಾನೆಂಬ ಅಹಂಕಾರ ಮಾಡಿ ನರಕದೊಳು
ನರಳದಿರೆಚ್ಚರಿಕೆ
ಜಾಹ್ನವಿ ಸ್ನಾನ ಸಂಧ್ಯಾನುಷ್ಠಾನ ಸುಜ್ಞಾನ
ಕೇಳೆಚ್ಚರಿಕೆ
ಜಾನಕಿ ರಮಣನ ಧ್ಯಾನವೆ ಧರ್ಮಸಂತಾನ
ಮುಂದೆಚ್ಚರಿಕೆ ೨

ಮಡದಿ ಮಕ್ಕಳು ಎಂಬ ಕಡುಮೋಹಕೆ ಸಿಲುಕಿ
ಕೆಡಬೇಡೆಚ್ಚರಿಕೆ
ನಡೆನುಡಿ ನಡೆವಾಗ ಗಿಡವೆಲ್ಲ ನೆಂಟರು
ಕಡೆಗಿಲ್ಲ ಎಚ್ಚರಿಕೆ
ಕೊಡುಗಯ್ಯ ಮಾಡದೆ ಮಡಗಿದ ಧನ
ಸಂಗಡ ಬಾರದೆಚ್ಚರಿಕೆ
ದೃಢಭಕ್ತಿಯಿಂದಲಿ ಪುರಂದರವಿಠಲನ
ನೆರೆನಂಬು ಎಚ್ಚರಿಕೆ ೩

ಡಿಂಬ—ದೇಹ.

ಹರಿದಿನ—ಏಕಾದಶಿ ; ಜಾಗರ—ರಾತ್ರಿಯವೇಳೆ ಹರಿಸ್ಮರಣೆಮಾಡುತ್ತ ಎಚ್ಚರ ವಾಗಿರುವುದು.

ಧ್ಯಾನಕಾನನದೊಳು—ಚಿಂತನೆಯ ಕಾಡಿನಲ್ಲಿ.

ನಡೆನುಡಿ ನಡೆವಾಗ—ನಿಮ್ಮ ಮಾತು ನಡೆಯುತ್ತಿರುವಾಗ, ನಿಮ್ಮ ನಡತೆಯ ಕೈ ಮೇಲಾಗಿರುವಾಗ, ಎಂದರೆ ನಿಮಗೆ ಅನುಕೂಲವಾದ ಕಾಲದಲ್ಲಿ, ಎಲ್ಲರೂ, ಕಡೆಗೆ ಗಿಡಮರಗಳೂ, ನಿಮಗೆ ನೆಂಟರೇ ; ನೆರವಿಗಾಗಿ ನಿಮ್ಮನ್ನು ಆಶ್ರಯಿಸುವವರೇ.

ಮಡಗಿದ—ಕೂಡಿಟ್ಟ.

ಸೌರಾಷ್ಟ್ರ ಅಟ್ಟ

ಎಚ್ಚರಿಕೆ ಭಾಗ್ಯ ಯಾರಿಗೂ ಸ್ಥಿರವಲ್ಲ
ನಿಶ್ಚಯವೆಚ್ಚರಿಕೆ ಪ

ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕ್ಕೆ
ಮೆಚ್ಚು ಕೇಳೆಚ್ಚರಿಕೆ ಅ

ಬಲ್ಲಿದ ನೀನೆಂದು ಬಡವರ ಬಾಯನು
ಬಡಿಯ ಬೇಡೆಚ್ಚರಿಕೆ
ಎಳ್ಳಷ್ಟು ತಪ್ಪಲು ಯಮನವರು ನರಕಕೆ
ಎಳೆದೊಯ್ವರೆಚ್ಚರಿಕೆ ೧

ಮಾಡು ದಾನ ಧರ್ಮ ಪರ ಉಪಕಾರವ
ಮರೆಯದಿರೆಚ್ಚರಿಕೆ
ನೋಡಿ ನಡೆಯುವಂಥ ಪುಣ್ಯವಂತರ ನೋಡು
ನಟನೆ ಬೇಡೆಚ್ಚರಿಕೆ ೨

ಮೂಢರ ಒಡನಾಡಿ ಮುಂದುಗಾಣದೆ ನೀನು
ಮುನಿಯದಿರೆಚ್ಚರಿಕೆ
ಕೇಡನೆಣಿಸದಿರು ನಂಬಿದ ಠಾವಿಗೆ ಕೆಡುವೆ
ನೀನೆಚ್ಚರಿಕೆ ೩

ಬಾಳುವಾಗ ಸಿರಿ ಸ್ಥಿರವಾಗಿ ಇಹುದೆಂದು
ಬೆಡಗು ಬೇಡೆಚ್ಚರಿಕೆ
ಹಾಳು ಬದುಕಿಗಾಗಿ ಹಲವರ ಕೂಡಣ
ಹಗೆಯು ಬೇಡೆಚ್ಚರಿಕೆ ೪

ಕಾಲನವರು ಬಂದು ಯಾವಾಗ ಎಳೆವರೊ
ಕಾಣದು ಎಚ್ಚರಿಕೆ
ಶ್ರೀಲೋಲ ಪುರಂದರವಿಠಲನ ಸ್ಮರಣೆಯ
ಮರೆಯದಿರೆಚ್ಚರಿಕೆ ೫

[ಜಾಗಟೆ ಹೊಡೆದಂತೆ 'ಎಚ್ಚರಿಕೆ' ಎಂಬ ಸದ್ದು ಕೀರ್ತನೆಯ ಎಲ್ಲ ಸಾಲುಗಳಲ್ಲೂ ಅನುರಣನಗೊಳ್ಳುವಂತೆ ಮಾಡಿ ಈ ಕವಿತೆ ಬದುಕಿನ ಸತ್ ಶೀಲಗಳನ್ನು ನಿರೂಪಿಸುತ್ತ ಸಾಗುತ್ತದೆ.]

೩೩

ಯಮುನಾ ಕಲ್ಯಾಣಿ ಆದಿ

ಹರಿಕಥಾ ಶ್ರವಣಮಾಡೋ, ಪಾಡೋ
ಹರಿಕಥಾ ಶ್ರವಣಮಾಡೋ ಪ

ಪಥಾ ವೈಕುಂಠಕಿದು ನೋಡೊ ಅ

ಸರಸಿಜನಾಭನ ಸರ್ವದಾ ಹೊಗಳುತ
ದುರಿತ ದೂರಕೀಡ್ಯಾಡೋ ೧

ಜ್ಞಾನ ಭಕುತಿ ವೈರಾಗ್ಯವೀವ ನಮ್ಮ
ಆನಂದತೀರ್ಥರ ಪಾಡೋ ೨

ಪರಮ ಪುರುಷ ಶ್ರೀ ಪುರಂದರವಿಠಲನ
ಚರಣಕಮಲದಲಿ ಕೂಡೋ ೩

ದುರಿತ ದೂರಕೀಡ್ಯಾಡೊ—ಪಾಪಗಳನ್ನು ಕಿತ್ತು ದೂರ ಬಿಸಾಡು.

ಜ್ಞಾನ ಭಕುತಿ ವೈರಾಗ್ಯವೀವ—ಸಾಧನಾತ್ರಯವೆಂದು ಹರಿದಾಸರಲ್ಲಿ ಪ್ರಸಿದ್ಧವಾಗಿರುವುದು ಹರಿಯ ಮಾಹಾತ್ಮ್ಯಜ್ಞಾನ, ಹರಿಯಲ್ಲಿ ಏಕಾಂತಭಕ್ತಿ ಅಥವಾ ನಿರತಿಶಯಸ್ನೇಹ, ಮತ್ತು ವಿಷಯಸುಖಗಳಲ್ಲಿ ವಿರಕ್ತಿ ಇವು ಮೂರು ; ಈ ಮೂರರಲ್ಲಿ ಶಕ್ತಿಯನ್ನು ಕೊಡುವುದು ಜ್ಞಾನವೇ. ಅದಕ್ಕಾಗಿಯೇ ಶ್ರೀಪಾದರಾಜರು

'ಭಕ್ತಿಬೇಕು ವಿರಕ್ತಿಬೇಕು ಸರ್ವಶಕ್ತಿಬೇಕು
ಮುಕ್ತಿಯ ಮುಂದೆ ಬಯಸುವವಗೆ'

ಎಂದು ಹಾಡಿದರು. ಇವು ಮೂರನ್ನೂ ಯೋಗ್ಯರಾದ ಜೀವರಿಗೆ ನೀಡುವವನು ಪರಮಾತ್ಮನ ಪರಮಾಪ್ತನಾದ ಮುಖ್ಯಪ್ರಾಣ (ಆನಂದತೀರ್ಥ) ; ಪರಮಾತ್ಮನ ಸಂಕಲ್ಪಾನುಸಾರವಾಗಿ.

ನಾದನಾಮಕ್ರಿಯೆ ಆದಿ

ಯಾಕೆ ಮೂರ್ಖನಾದ್ಯೋ ಮನುಜ
ಯಾಕೆ ಮೂರ್ಖನಾದ್ಯೋ ಪ

ಯಾಕೆ ಮೂರ್ಖನಾದ್ಯೋ ನೀನು
ಕಾಕುಬುದ್ಧಿಯನ್ನು ಬಿಟ್ಟು
ಲೋಕನಾಥನನ್ನು ನೆನೆ ಕಂಡ್ಯ ಮನುಜ ಅ

ಸಾಧು ಸಜ್ಜನ ಸಂಗ ಮಾಡು
ಭೇದಾಭೇದ ತಿಳಿದು ನೋಡು
ವಾದ ಬುದ್ಧಿ ಮಾಡುವರೇನೋ ಮನುಜ ೧

ದಾನ ಧರ್ಮವನ್ನು ಮಾಡು
ಜ್ಞಾನದಿಂದ ತಿಳಿದು ನೋಡು
ಹೀನ ಬುದ್ಧಿ ಮಾಡುವರೇನೋ ಮನುಜ ೨

ಮಕ್ಕಳು ಹೆಂಡಿರು ತನ್ನವರೆಂದು
ರೊಕ್ಕವನ್ನು ಗಳಿಸಿಕೊಂಡು
ಸೊಕ್ಕಿನಿಂದ ತಿರುಗುವರೇನೋ ಮನುಜ ೩

ಅಂತಕನ ದೂತರು ಬಂದು
ಕಂತೆ ಕಟ್ಟು ಹೊರಡು ಎಂದು
ನಿಂತರೆಲ್ಲರು ಬಿಡಿಸುವರೇನೋ ಮನುಜ ೪

ಅರಿಷಡ್ವರ್ಗದ ಆಟವ ಬಿಟ್ಟು
ಪುರಂದರವಿಠಲನ ಧ್ಯಾನದೊಳಿಟ್ಟು
ಪರಗತಿ ದಾರಿಯ ನೋಡೋ ಮನುಜ ೫

ಕಾಕುಬುದ್ಧಿ—ಕೆಟ್ಟಮನಸ್ಸು.
ಭೇದಾಭೇದ—ಪಂಚಭೇದ (ಜೀವಜೀವಕ್ಕೆ, ಜೀವಜಡಕ್ಕೆ, ಜಡಜಡಕ್ಕೆ, ಜೀವ ಈಶರಿಗೆ, ಜಡಈಶರಿಗೆ) ; ಮತ್ತು ಹರಿಯಲ್ಲಿ ಅಭೇದ (ಸ್ವಗತಭೇದವಿಲ್ಲದಿರುವುದು, ಎಣೆಯಾಗಲಿ ಮಿಗಿಲಾಗಲಿ ಇಲ್ಲದಿರುವುದು).
ವಾದಬುದ್ಧಿ—ವಿವಾದ ಬೆಳೆಸುವ ಪ್ರವೃತ್ತಿ.
ಅರಿಷಡ್ವರ್ಗ—ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ.

ಮೋಹನ ಅಟ್ಟ

ವಿಷಯದ ವಿಚಾರ ಬಿಡು, ವಿಹಿತ ಕರ್ಮವ ಮಾಡು
ವೈರಾಗ್ಯ ಭಾಗ್ಯವ ಬೇಡು ಪ

ವಿಷವೆಂದು ಕಾಮ ಕ್ರೋಧಗಳೆಲ್ಲನೀಡಾಡು
ಮಸಣಮನವೇ ಮಾಧವನ್ನ ಕೊಂಡಾಡು ಅ

ಅನುದಿನವು ಹರಿಕಥೆಯ ಕೇಳಿ ಸಂತೋಷಪಡು
ವಿನಯದಿ ಸಜ್ಜನರ ಕೂಡು
ಮನಮುಟ್ಟಿ ದುರಾಚಾರ ಮಾಳ್ಪರನು ನೀ ಕಾಡು
ಹಣ ಹೊನ್ನು ಪರ ಹೆಣ್ಣು ಹೆಂಚೆಂದು ನೋಡು ೧

ವೇದಶಾಸ್ತ್ರಾರ್ಥ ತತ್ವದ ವಿಚಾರ ಮಾಡು
ಮಾಧವನ ಭಕ್ತಿ ಬೇಡು
ಪಾದದಿಂದಲಿ ತೀರ್ಥ ಯಾತ್ರೆಗಳ ನೀ ಮಾಡು
ಖೇದಪಡದನುದಿನದಿ ಸಂತೋಷ ಕೂಡು ೨

ನಂಬದಿರು ಈ ದೇಹ ಅಂಬುಗುಳ್ಳೆಯಂತೆ
ನಂಬಿ ನೀ ಕೆಡಲಿಬೇಡ
ಕೊಂಬುವರು ಬಂದರೆ ಕೊಡರೊಂದು ರುವ್ವಿಯನು
ಅಂಬುಜಾಕ್ಷ ಪುರಂದರವಿಠಲನ್ನ ನೆನೆ ಮನವೆ ೩

ಮಸಣಮನ—ಸ್ಮಶಾನದಂತೆ ಅಸಹ್ಯವಾದ, ಭೀಕರವಾದ ಮನಸ್ಸು.
ಹೆಂಚೆಂದು—ಹೆಂಚು ಮನೆಗೆ ಚಾವಣಿಯಾಗಿ ಹೊದಿಸುವ ಸೂರು ; ಹೆಂಚಿನ ಚೂರೆಂದರೆ ತೀರ ನಿಕೃಷ್ಟವಾದ ವಸ್ತು ; ಯಾವ ಕೆಲಸಕ್ಕೂ ಬಾರದ್ದು.
ಅಂಬುಗುಳ್ಳೆ—ನೀರಿನ ಗುಳ್ಳೆ.
ರುವ್ವಿ—ಕಾಸು. ದೇಹವನ್ನು ಮಾರಿದರೆ ಒಂದು ಕಾಸೂ ಬಾಳುವುದಿಲ್ಲ ; ಯಮ ದೂತರು (ಕೊಂಬುವರು) ಬಂದು ಪ್ರಾಣವನ್ನು ಸೆಳೆದುಕೊಂಡು ಹೋಗುವಾಗ ದೇಹದ ಬೆಲೆಯೆಂದು ಒಂದು ಕಾಸನ್ನೂ ಕೊಟ್ಟುಹೋಗುವುದಿಲ್ಲ.

ಕಾಂಬೋದಿ ಝಂಪೆ

ಗರುವವ್ಯಾತಕೊ ನಿನಗೆ ಪಾಮರ ಮನುಜನೆ
ಧರೆಯೊಳಗೆ ಕುರುಪತಿಗೆ ಸರಿಯೆನ್ನಬಹುದೆ ಪ

ಬಲದಲ್ಲಿ ಹಲಧರನೆ, ಛಲದಲ್ಲಿ ರಾವಣನೆ
ಕುಲದಲ್ಲಿ ವಶಿಷ್ಠ ಗೌತಮನೆ
ನೆಲೆಯಲ್ಲಿ ಭೃಗುಮುನಿಯೆ ನೇಮದಲ್ಲಿ ಗಾಂಗೇಯನೆ
ಒಲುಮೆಯಲಿ ವಾಲ್ಮೀಕಿ ಮುನಿಯೇನೊ ನೀನು ೧

ಹಠದಲ್ಲಿ ಪ್ರಹ್ಲಾದನೆ ದಿಟದಲ್ಲಿ ಧ್ರುವರಾಯನೆ
ಶಠರೊಳಗೆ ವಿಶ್ವಾಮಿತ್ರನೆ ನೀನು
ವಿಟರೊಳಗೆ ಮನ್ಮಥನೆ ವೀರರೊಳಗೆ ಪಾರ್ಥನೆ
ಕುಟಿಲತನದಲ್ಲಿ ಶಕುನಿಯೇ ನೀನು ೨

ದಾನದೊಳು ಕರ್ಣನೇ ಗಾನದೊಳು ನಾರದನೆ
ಜ್ಞಾನದಲಿ ವ್ಯಾಸ ಶುಕಮುನಿಯೆ ನೀನು
ದೀನರಕ್ಷಕ ನಮ್ಮ ಪುರಂದರವಿಠಲನ್ನ
ಧ್ಯಾನದೊಳು ಇದ್ದು ಭವ ನೀಗು ಮನುಜ ೩

[ಮನುಷ್ಯನ 'ಅಹಂಕಾರ ಪ್ರಜ್ಞೆ'ಯನ್ನು ತೀವ್ರವಾಗಿ ಖಂಡಿಸುವ ಒಂದು ಕೀರ್ತನೆ ಇದು. ನಾನು ಪರಾಕ್ರಮಿ, ಮಹಾದಾನಿ, ಮಹಾಜ್ಞಾನಿ ಎಂದು ಕೊಚ್ಚಿಕೊಳ್ಳುವವರನ್ನು ಮಾತ್ರವಲ್ಲದೆ ಎಂಥೆಂಥ ದುಷ್ಟರೋ ಆಗಿಹೋಗಿರುವ ನಮ್ಮ ದೇಶದಲ್ಲಿ ಅಂಥ ದುಷ್ಟರ ಮಟ್ಟಕ್ಕೆ ಬರಲಾಗದ ಇಂದಿನ ದುಷ್ಟರ ಗರ್ವದಲ್ಲಿ ಅರ್ಥವಿಲ್ಲ ಎಂದು ಛೇಡಿಸಿರುವ ಬಗೆ ಹೊಸತು.]

ಕುರುಪತಿ—ದುರ್ಯೋಧನ.
ಹಲಧರ—ಬಲರಾಮ.
ಗಾಂಗೇಯ—ಭೀಷ್ಮ.
ಪಾರ್ಥ—ಅರ್ಜುನ.
ಭವ—ಸಂಸಾರ.

೩೮

ನೀಲಾಂಬರಿ | ರೂಪಕ

ನೆಚ್ಚಬೇಡ ನೀ ನೆಚ್ಚಬೇಡ ಪ

ನೆಚ್ಚಬೇಡ ಕುಲಧರ್ಮ ಬಿಟ್ಟು ನಡೆಯಬೇಡ ಅ

ದೇಹಿಯೆಂದರೆ ನಾಸ್ತಿಯೆನ್ನಬೇಡ ಈ
ದೇಹ ಸ್ಥಿರವೆಂದು ನಂಬಬೇಡ
ದೀನತನದಲ್ಲಿ ದ್ರವ್ಯ ಗಳಿಸಬೇಡ
ದೀನನಾಥನ ನೀ ಮರೆಯಬೇಡ ೧

ಹಿರಿಯರಿಲ್ಲದ ಮನೆಗೆ ಹೋಗಬೇಡ
ಲಂಡತನವ ನೀ ಮಾಡಬೇಡ
ಪರಿಪರಿಯ ನಿಂದೆ ನೀ ಮಾಡಬೇಡ
ಪರಮಾತ್ಮನ ನೀ ಮರೆಯಬೇಡ ೨

ನೆಂಟರಿಲ್ಲದ ನಾಡಿಗೆ ನೀ ಹೋಗಬೇಡ
ಉಂಟೆಂದು ಒಬ್ಬರ ಕೂಡೆ ಹೇಳಬೇಡ
ಕಂಟಕನಾಗಿ ನೀ ತಿರುಗಬೇಡ ನರ
ಕಂಠೀರವನ ನೀ ಮರೆಯಬೇಡ ೩

ಅಂತರಂಗದ ಮಾತು ಅಗಲಿ ಕೆಡಬೇಡ
ಪಂಕ್ತಿಯೊಳು ಪರಭೇದ ಮಾಡಬೇಡ ನಿ
ನ್ನಂಗವನೆ ನೋಡಿ ಹಿಗ್ಗಬೇಡ
ಜಗದಂತರ್ಯಾಮಿಯ ನೀ ಮರೆಯಬೇಡ ೪

ತಂದೆತಾಯಿಗೆ ಕೇಡ ನೀ ನೆನೆಯಬೇಡ
ಎಂದಿಗೂ ಹುಸಿ ಮಾತನಾಡಬೇಡ
ಸಂದೇಹ ಬೇಡ ಸರ್ವೋತ್ತಮನಾದ
ತಂದೆ ಶ್ರೀ ಪುರಂದರವಿಠಲನ ಮರೆಯಬೇಡ ೫

ದೇಹಿಯೆಂದರೆ ನಾಸ್ತಿಯೆನ್ನಬೇಡ—ಬೇಡಿದವರಿಗೆ ಇಲ್ಲವೆನ್ನಬೇಡ.

ದೀನತನದಲ್ಲಿ—ಸ್ವಾಭಿಮಾನವನ್ನು ತೊರೆದು.

ಲಂಡತನ—ನೀಚತನ.

ನರಕಂಠೀರವ—ನರಸಿಂಹ.

ಅಂತರಂಗದ ಮಾತು ಅಗಲಿ—ಗುಟ್ಟಾಗಿಡಬೇಕಾದ ಮಾತನ್ನು ರಟ್ಟುಮಾಡಿ.



ಕಲ್ಯಾಣಿ ಅಟ್ಟ

ಧರ್ಮ ದೊರಕುವುದೆ, ದುಷ್ಕರ್ಮಿಗೆ ದುರ್ಮಾರ್ಗ ಮನುಜನಿಗೆ ಪ

ಧನವಿದ್ದರೇನಯ್ಯ ಮನವಿಲ್ಲದವನಿಗೆ
ಮನವಿದ್ದರೇನಯ್ಯ ಧನವಿಲ್ಲವು
ಧನವು ಮನವು ಎರಡುಳ್ಳ ಸತ್ಪುರುಷರಿಗೆ
ಅನುಕೂಲಳಾದಂಥ ಸತಿಯಿಲ್ಲವಯ್ಯ ೧

ಬಾಡಿಗೆ ಮನೆಯಂತೆ ಪೋಪ ದೇಹವ ಕಂಡು
ಮಾಡುವರು ಸತಿಪತಿ ಭೋಗವನು ಈ
ಬೀಡು ಬಿಟ್ಟು ಮತ್ತಾಬೀಡು ಸೇರುವ
ನಾಡಜೀವವ ನೆಚ್ಚಿ ಕೆಡಬೇಡ ಮನುಜ ೨

ನಾಳೆ ಮಾಡುವ ಧರ್ಮವಿಂದೆ ಗೈಯಲಿಬೇಕು
ನಾಳ್ಯಾರೊ ನೀನ್ಯಾರೊ ನುಡಿ ಮಾನವಾ, ಯಮ
ನೂಳಿಗದವರು ಬಾರೆಂದು ಸೆಳೆವಾಗ
ನಾಳೆ ಮಾಡೇನೆಂದರೆ ಬಾರದಯ್ಯ ೩

ನಿನ್ನ ಕಣ್ಣ ಮುಂದೆ ಪೋಪ ಜೀವರ ಕಂಡು
ಇನ್ನು ನಿನಗೆ ನಾಚಿಕೆಯಿಲ್ಲವೆ
ಎನ್ನದು ತನ್ನದು ಎಂದು ಭೇದವ ಮಾಳ್ಪ
ಕುನ್ನಿ ಮನವ ನೆಚ್ಚಿ ಕೆಡಬೇಡ ಮನುಜ ೪

ಹಿಂದಿನ ಜನ್ಮದ ಕರ್ಮವ ನೆನೆಸಿಕೊ
ಮುಂದಿನ ಗತಿಗೆ ದಾರಿಯ ನೋಡಿಕೋ
ತಂದೆ ಪುರಂದರವಿಠಲನ ಚರಣವ
ಎಂದೆಂದಿಗೂ ಮರೆಯಲಿ ಬೇಡ ಮನುಜ ೫

[ದೇಹವನ್ನು 'ಬಾಡಿಗೆ ಮನೆ'ಗೆ ಹೋಲಿಸಿರುವ ರೀತಿ ಸೊಗಸಾಗಿದೆ. ಜನ್ಮಾಂತರಗಳ ಅಲೆತದಿಂದ ಪಾರಾಗಲು ಮಾನವನು ನಾಯಿಯಂತೆ ಡೊಂಕು ಬುದ್ಧಿಗಳನ್ನು ಬಿಟ್ಟು ಧರ್ಮ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು, ಆಲಸ್ಯವನ್ನು ತೊಡೆದುಹಾಕಬೇಕು, ತಾತ್ಕಾಲಿಕ ಸುಖ–ಶಾಶ್ವತ ಸುಖಗಳ ನಡುವೆ ಇರುವ ಕಂದರವನ್ನು ಅರಿತುಕೊಳ್ಳಬೇಕು.]

ನಾಡ ಜೀವ—ಅಲೆಮಾರಿ ಜೀವ.

ಕಾಂಬೋದಿ ಝಂಪೆ

ಮಾನಭಂಗವ ಮಾಡಿ ಮತ್ತೆ ಉಪಚಾರಗಳ
ಏನು ಮಾಡಿದರಲ್ಲಿ ಇರಬಾರದಯ್ಯ ಪ

ಕುಂದುಗಳನೆತ್ತಿ, ಕುಚೋದ್ಯ ಕುಮಂತ್ರಗಳ
ನೊಂದೊಂದು ವರ್ಣಗಳನೆತ್ತಿ ಜರೆದು
ಮುಂದೆ ಭಂಗಿಸಿ ಹಿಂದೆ ಉಂಬಳಿಯ ನೀಡುವುದು
ಮುಂದಲೆಯ ಕೊಯ್ದು ಮುಡಿಗೆ ಹುವ್ವ ಮುಡಿಸಿದಂತೆ ೧

ನಗೆಗೇಡು ಮಾಡಿ ನಾಲ್ವರ ಮುಂದೆ ಮೊಗಗೆಡಿಸಿ
ಮಗುಳೆ ಬಾರೆಂದು ಮನ್ನಿಸಿ ಲಾಲಿಸಿ
ಮಿಗಿಲಾದ ವಸ್ತ್ರಗಳ ಭೂಷಣಂಗಳನೀಯೆ
ತೊಗಲ ಮೂಗು ಹರಿದು ಚಿನ್ನದ ಮೂಗನಿತ್ತಂತೆ ೨

ಅರ್ಥ ಹೋದರೆ ಪ್ರಾಣ, ಪ್ರಾಣ ಹೋದರೆ ಮಾನ
ವ್ಯರ್ಥವಾಗದ ಹಾಗೆ ಕಾಯಬೇಕು
ಕರ್ತ ಶ್ರೀ ಪುರಂದರವಿಠ್ಠಲರಾಯನ
ಚಿತ್ತದಲಿ ನೆನೆನೆನೆದು ಸುಖಿಯಾಗಬೇಕು ೩

[ಆತ್ಮಗೌರವಕ್ಕೆ ಅಪಚಾರವಾದ ಸಂದರ್ಭಗಳಲ್ಲಿ ವ್ಯಕ್ತಿಯ ಪ್ರತಿಕ್ರಿಯೆ ಹೇಗಿರಬೇಕು ಎಂಬುದರ ಸೂಚನೆ ಇಲ್ಲಿದೆ. ಸದಾ ದೋಷಗಳನ್ನು ಹುಡುಕುವ, ಒಮ್ಮೆ ಅವಮಾನಪಡಿಸಿ ಅನಂತರ ಉಪಚಾರ ಮಾಡುವ, ಸಾರ್ವಜನಿಕವಾಗಿ ಅವಮಾನಿಸಿ ಖಾಸಗಿಯಾಗಿ ಗೌರವಿಸುವ ಜನರ ಸಹವಾಸದಿಂದ ದೂರ ಇರಬೇಕೆಂದು ದಾಸರು ಎಚ್ಚರಿಕೆ ನೀಡಿದ್ದಾರೆ.]

ಉಂಬಳಿ—ಜಹಗೀರು, ಕೊಡುಗೆ.

ಮಗುಳೆ—ಮತ್ತೆ.

ಅರ್ಥ ಹೋದರೆ ಪ್ರಾಣ...—ಹಣ ಹೋದರೂ ಪ್ರಾಣ ಉಳಿಯಬೇಕು; ಪ್ರಾಣ ಹೋದರೂ ಮಾನ ಉಳಿಯಬೇಕು.

ಸೌರಾಷ್ಟ್ರ ಅಟ್ಟ

ಕೈಮೀರಿ ಹೋದ ಮಾತಿಗೆ ಹುಡುಕಾಡಬಾರದು ಪ

ಮಾತು ಕೇಳದ ಮಕ್ಕಳ ಹೆಸರು ತೆಗೆಯಬಾರದು
ತನ್ನ ಪ್ರೀತಿಯಿಲ್ಲದ ಪತಿಯ ಕಂಡು ಹಿಗ್ಗಬಾರದು ೧

ಜಾರತ್ವ ಮಾಡೋ ಪತ್ನಿಯ ಕೂಡಿ ಆಳಬಾರದು
ವೈರತ್ವ ಮಾಳ್ಪರ ಸೊಲ್ಲು ಕೇಳಬಾರದು ೨

ದುಷ್ಟೆ ಕರ್ಕಶಿ ಸ್ತ್ರೀಯಳ ಹೆಸರು ತೆಗೆಯಬಾರದು
ಹತ್ತು ಮಂದಿಗಂಜದವನ ಸ್ನೇಹಿಸಬಾರದು ೩

ಪಂಕ್ತಿಯಲ್ಲಿ ಪರಪಂಕ್ತಿ ಮಾಡಬಾರದು
ಮಂಕು ಜೀವನಾಗಿ ಮುಕ್ತಿ ಬೇಡಬಾರದು ೪

ಆಚಾರಹೀನನ ಮನೆಯೊಳೂಟ ಮಾಡಬಾರದು
ವಿಚಾರ ಇಲ್ಲದ ಸಭೆಯೊಳು ಕೂಡಬಾರದು ೫

ಪರಪುರುಷರಿದ್ದೆಡೆಯೊಳೊಬ್ಬಳಿರಲು ಬಾರದು
ಪುರಂದರವಿಠಲನ ಧ್ಯಾನ ಮರೆಯಬಾರದು ೬

[ಮಾನವನ ನಡವಳಿಕೆಗಳು ಯಾವ ಜಾಡನ್ನು ಹಿಡಿಯಬಾರದೆಂಬುದನ್ನು ನಿಷೇಧ ರೂಪದಲ್ಲಿ ಪುರಂದರದಾಸರು ದಿಗ್ದರ್ಶಿಸಿದ್ದಾರೆ. ಕುಟುಂಬದಲ್ಲಿ ಗೃಹಸೌಖ್ಯವನ್ನೂ ಹೊರಗೆ ಸಮಾಜಸೌಖ್ಯವನ್ನೂ ಕಾಪಾಡಲು ನಾವೇ ಇಂಥ ಕಟ್ಟುಪಾಡುಗಳನ್ನು ಹಾಕಿಕೊಳ್ಳುವುದು ವಿಹಿತ. 'ಮಂಕು ಜೀವನಾಗಿ ಮುಕ್ತಿ ಬೇಡಬಾರದು' ಎಂಬ ಮಾತಂತೂ ದಾಸರ ಕ್ರಿಯಾಪೂರ್ಣ ಚಿಂತನಶೀಲತೆಯನ್ನು ವ್ಯಕ್ತಪಡಿಸುತ್ತದೆ.]

ಬಿಲಹರಿ ಆದಿ

ನಾರಾಯಣ ಎನಬಾರದೆ ನಿಮ್ಮ
ನಾಲಿಗೆಯೊಳು ಮುಳ್ಳು ಮುರಿದಿಹುದೆ ಪ

ವಾರಣಾಸಿಗೆ ಪೋಗಿ ದೂರ ಬಳಲಲೇಕೆ
ನೀರ ಕಾವಡಿ ಪೊತ್ತು ತಿರುಗಲೇಕೆ
ಊರೂರು ತಪ್ಪದೆ ದೇಶಾಂತರವೇಕೆ
ದಾರಿಗೆ ಸಾಧನವಲ್ಲವೆ ಹರಿ ನಾಮ ೧

ನಿತ್ಯ ಉಪವಾಸವಿದ್ದು ಹಸಿದು ಬಳಲಲೇಕೆ
ಮತ್ತೆ ಚಳಿಯೊಳು ಗಂಗೆ ಮುಳುಗಲೇಕೆ
ಹಸ್ತವ ಪಿಡಿದು ಮಾಡುವ ಜಪತಪವೇಕೆ
ಮುಕ್ತಿಗೆ ಸಾಧನವಲ್ಲವೆ ಹರಿನಾಮ ೨

ಸತಿಸುತರನು ಬಿಟ್ಟು ಯತಿಗಳಾಶ್ರಮವೇಕೆ
ವ್ರತಕೃಚ್ಛ್ರ ನೇಮ ನಿಷ್ಠೆಗಳೇತಕೆ
ಪೃಥಿವಿಯೊಳಗೆ ನಮ್ಮ ಪುರಂದರವಿಠಲನ
ಅತಿಭಕುತಿಯಿಂದೊಮ್ಮೆ ನೆನೆದರೆ ಸಾಲದೆ ೩

[ಉಪವಾಸ, ಜಪ ತಪ, ತೀರ್ಥಯಾತ್ರೆ, ದೇವರ ಪೂಜೆಗೆ ನೀರ ಕಾವಡಿ ಹೊರುವ ನೇಮ, ಆಶ್ರಮವಾಸ, ಕೃಚ್ಛ್ರಾದಿ ತಪಸ್ಸಿನ ಆಚರಣೆ—ಇಂಥ ಸುತ್ತು ಬಳಸು ದಾರಿಯಲ್ಲಿ ತೊಳಲಾಡುವುದರ ಬದಲು ದೈವವನ್ನು ನಂಬಿ ಏಕೆ ನಡೆದುಕೊಳ್ಳಬಾರದು ಎಂದು ದಾಸರು ಆಕ್ರೋಶ ವ್ಯಕ್ತಪಡಿಸಿದ್ದಾರೆ.]

ಕಾವಡಿ—ಹೆಗಲ ಮೇಲೆ ಹೊರುವ ಅಡ್ಡೆ.
ಕೃಚ್ಛ್ರ ವ್ರತ—ಸಾಂತಪನಾದಿ ವ್ರತ, ದೇಹವನ್ನು ಸೊರಗಿಸುವ ಕಠಿಣ ವ್ರತಾಚರಣೆ.

ಕಲ್ಯಾಣಿ ಆದಿ

ಸತ್ಯವೆಂಬುದೆ ಸ್ನಾನ ಉಪವಾಸ ಜಪ ನೇಮ ಅ ಪ

ಸತ್ಯದಲಿ ಮಾಡುವ ಕರ್ಮ ವ್ಯರ್ಥ ಅ

ಅಪ್ಪಳಿಸಿ ಪರರ ಒಡವೆಗಳ ತಂದುಂಡು ತಾ
ಒಪ್ಪದಿಂದುಪವಾಸ ವ್ರತವ ಮಾಡಿ
ತಪ್ಪದಲೆ ಸ್ವರ್ಗವನು ಸೂರೆಗೊಂಬುವೆನೆಂಬೆ
ಸರ್ಪಗಳು ಮಾಡಿದ ಅಪರಾಧವೇನಯ್ಯ ೧

ಬಿಡದೆ ಮದಮತ್ಸರಾಹಂಕಾರದಲಿ ಮುಳುಗಿ
ಒಡನೆ ಬೆರಳುಗಳೆಣಿಸಿ ಮೌನದಿಂದ
ತಡೆಯದಲೆ ಪರಲೋಕ ಸೂರೆಗೊಂಬುವೆನೆಂಬೆ
ಬಡ ಬಕನು ಮಾಡಿದ ಅಪರಾಧವೇನಯ್ಯ ೨

ಪರಸತಿಯು ಪರಧನವು ಪರನಿಂದೆ ಪರಹಿಂಸೆ
ಪರಮ ಪಾತಕದ ಕಾರಣವೆಂದು ತಿಳಿದು
ಧರೆಗಧಿಕ ಪುರಂದರವಿಠ್ಠಲನ ಚರಣವನು
ನೆರೆ ಭಜಿಸಿ ಸುಖಿಯಾಗಿ ಬಾಳೆಲವೊ ಮನುಜ ೩

ಅಪ್ಪಳಿಸಿ...ಅಪರಾಧವೇನಯ್ಯ—ಸರ್ಪಗಳು ಅನ್ಯರ ಸಂಪತ್ತನ್ನು ಕಾಯುತ್ತಿರುತ್ತವೆ ಎಂಬುದು ಒಂದು ಪ್ರತೀತಿ. ಮನುಷ್ಯನೂ ಹಾಗೆ ಪರರ ಸಂಪತ್ತನ್ನು ಲೂಟಿ ಹೊಡೆದು ಆ ಹಣದಲ್ಲೇ ವ್ರತಾಚರಣೆ ಮಾಡಿ ಸ್ವರ್ಗದ ಭ್ರಮೆ ಇರಿಸಿಕೊಂಡರೆ ಪಾಪ ಆ ಬಡ ಹಾವುಗಳಿಗೇಕೆ ಸ್ವರ್ಗ ಸಿಕ್ಕಬಾರದು ?

ಬಿಡದೆ...—ಬಕಧ್ಯಾನವೆಂದು ಪ್ರಸಿದ್ಧವಾಗಿರುವ ರೀತಿ. ಮೀನುಗಳಿಗೇ ಆಸೆಪಟ್ಟು, ಅವು ಬರುವುದನ್ನೇ ಕಾಯುತ್ತ, ಅಲುಗಾಡದೆ ನಿಂತಿರುವ ಕೊಕ್ಕರೆ ಧ್ಯಾನ ಮಗ್ನವಾಗಿರುವಂತೆಯೇ ತೋರುತ್ತದೆ ; ಆದರೆ ಅದರ ಧ್ಯಾನ ಮೀನುಗಳ ಮೇಲಷ್ಟೆ.

ಶಂಕರಾಭರಣ ಅಟ್ಟ

ಹರಿಯ ನೆನೆಯದ ನರಜನ್ಮವೇಕೆ ನರ
ಹರಿಯ ಕೊಂಡಾಡದ ನಾಲಿಗೆಯೇಕೆ ಪ

ಸತ್ಯಶೌಚವಿಲ್ಲದಾಚಾರವೇಕೆ
ನಿತ್ಯ ನೇಮವಿಲ್ಲದ ಜಪತಪವೇಕೆ
ಭಕ್ತಿಲಿ ಮಾಡದ ಹರಿಪೂಜೆಯೇಕೆ
ಉತ್ತಮರಿಲ್ಲದ ಸಭೆಯು ತಾನೇಕೆ ೧

ವೇದವನೋದದ ವಿಪ್ರ ತಾನೇಕೆ
ಕಾದಲರಿಯದ ಕ್ಷತ್ರಿಯನೇಕೆ
ಕ್ರೋಧವ ಬಿಡದ ಸಂನ್ಯಾಸಿ ತಾನೇಕೆ
ಆದರವಿಲ್ಲದ ಅಮೃತಾನ್ನವೇಕೆ ೨

ಸಾಲದಿ ಹೂಳಿದ ಸಂಸಾರವೇಕೆ
ಬಾಲಕರಿಲ್ಲದ ಭಾಗ್ಯವಿದ್ದೇಕೆ
ವೇಳೆಗೆ ಒದಗದ ನಂಟರಿದ್ದೇಕೆ, ಅನು
ಕೂಲವಿಲ್ಲದ ಸತಿ ಸಂಗ ತಾನೇಕೆ ೩

ಮಾತಾಪಿತರ ಪೊರೆಯದ ಮಕ್ಕಳೇಕೆ
ಮಾತು ಕೇಳದ ಸೊಸೆಗೊಡವೆತಾನೇಕೆ
ನೀತಿನೇರಿಲ್ಲದ ಕೂಟ ತಾನೇಕೆ ಅ
ನಾಥನಾದ ಮೇಲೆ ಕೋಪವದೇಕೆ ೪

ಅಳಿಸಿ ಅಳಿದು ಪೋಪ ಮಕ್ಕಳಿದ್ದೇಕೆ
ತಿಳಿದು ಬುದ್ಧಿಯ ಪೇಳದ ಗುರುವೇಕೆ
ನಳಿನನಾಭ ನಮ್ಮ ಪುರಂದರವಿಠಲನ
ಚೆಲುವಮೂರ್ತಿಯ ನೋಡದ ಕಂಗಳೇಕೆ ೫

[ಬದುಕಿನಲ್ಲಿ ನಾವು ಮಾಡುವ ಪ್ರತಿಯೊಂದು ಕಾರ್ಯವೂ ಒಂದು ಖಚಿತ ಉದ್ದೇಶದ ಸಫಲತೆಗಾಗಿ ಮೀಸಲಾಗಿದೆ ಎಂಬ ಅರಿವು ಮೂಡಬೇಕಾದದ್ದು ಅತ್ಯಗತ್ಯ. ತನ್ನ ಪಾಲಿನ ಕಾರ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಲು ಸಾಧ್ಯವಾಗದಿದ್ದರೆ ಅದರ ಬಗೆಗೆ ಸುಮ್ಮನೆ ಮಾತನಾಡಿ ಪ್ರಯೋಜನವಿಲ್ಲ ಎಂಬ ಭಾವ ಈ ಕೀರ್ತನೆಯದು.]

ಶೌಚ—ಪರಿಶುದ್ಧತೆ, ನೈರ್ಮಲ್ಯ.

ಅಳಿಸಿ ಅಳಿದು ಪೋಪ ಮಕ್ಕಳು—ತಾಯ್ತಂದೆಗಳನ್ನು ಸಂಕಟಕ್ಕೆ ಸಿಲುಕಿಸಿ, ತಾವೂ ಹಾಳಾಗುವ ಮಕ್ಕಳು.

೪೫

ಕಾಂಬೋದಿ | ಝಂಪೆ

ಮಾತಿಗೆ ಬಾರದ ವಸ್ತು ಬಹಳಿದ್ದರೇನು
ಹೋತಿನ ಕೊರಳೊಳಗೆ ಮೊಲೆ ಇದ್ದರೇನು ಪ

ತಾನು ಉಣ್ಣದ ದ್ರವ್ಯ ತಾಳ್ಯುದ್ದ ಇದ್ದರೇನು
ದಾನವಿಲ್ಲದ ಮನೆಯು ದೊಡ್ಡದಾದರೇನು
ಹೀನ ಗುಣವುಳ್ಳವಗೆ ಹಿರಿಯತನ ಬಂದರೇನು
ಶ್ವಾನನ ಮೊಲೆಯೊಳಗೆ ಹಾಲಿದ್ದರೇನು ೧

ಹೋಗದೂರಿನ ದಾರಿ ಕೇಳಿ ಮಾಡುವುದೇನು
ಯೋಗಿಯು ಕೂಡ ಪರಿಹಾಸ್ಯವೇನು
ರಾಗದಲಿ ಪುರಂದರವಿಠಲನ್ನ ನೆನೆಯದವ
ಯೋಗಿಯಾದರೇನವನು ಭೋಗಿಯಾದರೇನು ೨

ತಾಳ್ಯುದ್ದ—ತಾಳೆಯ ಉದ್ದ ; ತಾಳೆಮರದಷ್ಟು ಎತ್ತರವಾಗಿ.

ಶ್ವಾನ—ನಾಯಿ.

ರಾಗದಲಿ—ಪ್ರೀತಿಯಿಂದ, ಅಕ್ಕರೆಯಿಂದ.

ಯೋಗಿಯಾದರೇನು…—ಬಗೆಬಗೆಯಾದ ಯೋಗಾಭ್ಯಾಸಗಳನ್ನೇ ಮಾಡಲಿ, ಪ್ರಾಪಂಚಿಕ ಸುಖಗಳನ್ನೇ ಅನುಭವಿಸುತ್ತಿರಲಿ, ಏನು ಪ್ರಯೋಜನ ?

ನಾದನಾಮಕ್ರಿಯೆ ಏಕ

ಜಂಗಮರು ನಾವು ಜಗದೊಳು ಪ

ಜಂಗಮರು ನಾವು ಲಿಂಗಾಂಗಿಗಳು
ಮಂಗಳವಂತರು ಭವಿಗಳೆಂತೆಂಬಿರಿ ಅ

ಹರ ಗುರುದೈವ ಕೇಶವ ನಮ್ಮ ಮನೆದೈವ
ವರದ ಮೋಹನ ಗುರು ಶಾಂತೇಶ
ಹರ ಗುರು ದ್ರೋಹ ಮಾಡಿದ ಪರವಾದಿಯು
ರೌರದ ನರಕದಿ ಮುಳುಗುವುದೆ ಸಿದ್ಧ ೧

ವಿಭೂತಿ ನಮಗುಂಟು ವಿಶ್ವೇಶ ನಮಗುಂಟು
ಶೋಭನ ನಾಮ ಮುದ್ರೆಗಳುಂಟು
ಶ್ರೀ ಭಾಗೀರಥಿಯುಗಣಿತ ಮಜ್ಜನವುಂಟು
ಸೌಭಾಗ್ಯವೀವ ಮಹಂತನ ಮಠದವರು ೨

ವಿರಕ್ತರು ನಾವು ಶೀಲವಂತರು ನಾವು
ವೀರಭದ್ರ ಪ್ರಿಯಭಕ್ತರು ನಾವು
ಕಾರಣಕರ್ತ ಶ್ರೀಪುರಂದರವಿಠಲನ
ಕಾರುಣ್ಯಕೆ ಮುಖ್ಯ ಪಾತ್ರರು ನಾವು ೩

ಜಂಗಮರು—ವೀರಶೈವಸಂಪ್ರದಾಯದ ವಿರಕ್ತರು.

ಲಿಂಗಾಂಗಿಗಳು—ಇಷ್ಟಲಿಂಗವನ್ನು ಮೈಮೇಲೆ ಧರಿಸಿದವರು ; ನೂರೊಂದು ಸ್ಥಳ ಗಳಲ್ಲಿ ನಲವತ್ತುನಾಲ್ಕು ಅಂಗಸ್ಥಳಗಳು, ಐವತ್ತೇಳು ಲಿಂಗಸ್ಥಳಗಳು ; ಅಂಗ ದಿಂದ ಪ್ರಾರಂಭವಾಗಿ ಲಿಂಗದಲ್ಲಿ ಪರಿವರ್ತನವಾಗುವುದು ಸಾಧನೆ. ಹೀಗೆ ಸಿದ್ಧಿಯನ್ನು ಪಡೆದವರು ಲಿಂಗಾಂಗಿಗಳು. ಲಿಂಗನೊಂದಿಗೆ ಅಂಗನು ಬೆರೆಯುವುದು ಲಿಂಗಾಂಗ ಸಾಮರಸ್ಯವೆನಿಸಿಕೊಳ್ಳುತ್ತದೆ.

ಮಂಗಳವಂತರು—ಶುಭವನ್ನು ಹೊಂದಿದವರು ; ಸಂಸ್ಕಾರ ಪಡೆದವರು.

ಭವಿ—ಸಾಮಾನ್ಯಮನುಷ್ಯ ; ದೀಕ್ಷೆಯನ್ನು ಪಡೆಯದವನು.

ವಿಭೂತಿ—ಕ್ರಿಯಾ ಭಸಿತ.

ಶೀಲವಂತರು—'ಆಚಾರವೇ ಶೀಲ ; ಕೊಲ್ಲದಿಪ್ಪುದು ಸದಾಚಾರ, ಅದುವೆ, ಶೀಲ' ಶಿವಾಗಮಗಳು ಗಣಾಚಾರದಲ್ಲಿ ಅರವತ್ತುನಾಲ್ಕು ಶೀಲಗಳನ್ನು ಹೇಳುತ್ತವೆ ; ಅವು ಕಾಯಿಕ, ವಾಚಿಕ, ಮಾನಸಿಕ ಪರಿಶುದ್ಧಿಗೆ ಸಂಬಂಧಿಸಿದುವು.

ವೀರಭದ್ರ—ರುದ್ರನ ಕ್ರೋಧದಿಂದ ಹುಟ್ಟಿ, ದಕ್ಷನನ್ನು ಸಂಹರಿಸಿ ಅವನ ಯಜ್ಞವನ್ನು ಧ್ವಂಸಮಾಡಿದವನು.

ಮುಖಾರಿ ಝಂಪೆ

ಹೊಲೆಯ ಹೊರಗಿಹನೆ ಊರೊಳಗಿಲ್ಲವೆ
ಹರಿಯ ಭಕ್ತರು ಪೇಳಿ ಮತ್ತಿದನು ಪ

ಶೀಲವನು ಕೈಕೊಂಡು ನಡೆಸದಾತನೆ ಹೊಲೆಯ
ಹೇಳಿದ ಹರಿಕತೆಯ ಕೇಳದವ ಹೊಲೆಯ
ಆಳಾಗಿ ಅರಸಂಗೆ ಕೇಡು ಬಗೆವವ ಹೊಲೆಯ
ಸೂಳೆಯನು ಕಾಮಿಸುವ ಶುದ್ಧ ಹೊಲೆಯ ೧

ಕೊಂಡ ಸಾಲಗಳನ್ನು ತಿದ್ದದಾತನೆ ಹೊಲೆಯ
ಲಂಡತನದಲಿ ನಡೆವ ನರ ಭಂಡ ಹೊಲೆಯ
ಉಂಡ ಮನೆಗೆರಡನನ್ನು ಬಗೆವಾತನೇ ಹೊಲೆಯ
ಪೆಂಡತಿಯ ಇಚ್ಛೆಯವ ಹೇಡಿ ಹೊಲೆಯ ೨

ಇದ್ದಾಗ ದಾನಧರ್ಮವ ಮಾಡದವ ಹೊಲೆಯ
ಮದ್ದಿಕ್ಕಿ ಕೊಲ್ಲುವವ ಮಾರಿ ಹೊಲೆಯ
ಬದ್ಧವಹ ನಯನುಡಿಯು ಇಲ್ಲದಾತನೆ ಹೊಲೆಯ
ಶುದ್ಧ ತಾನೆಂಬಾತ ಶುಂಠ ಹೊಲೆಯ ೩

ಆಸೆ ಮಾತನು ಕೊಟ್ಟು ಭಾಷೆ ತಪ್ಪುವ ಹೊಲೆಯ
ಲೇಸು ಉಪಕಾರಗಳ ಮಾಡದವ ಹೊಲೆಯ
ಮೋಸದಲಿ ಜೀವನವ ಮುನಿದು ಕೆಡಿಸುವ ಹೊಲೆಯ
ಹುಸಿಯ ಬೊಗಳುವನೊಬ್ಬ ಹುಚ್ಚ ಹೊಲೆಯ ೪

ಅರಿತು ಆಚಾರವನು ನಡೆಸದಾತನೆ ಹೊಲೆಯ
ಪರಸತಿಗೆ ಅಳುಕಿದವ ಪಾಪಿ ಹೊಲೆಯ
ಗುರುಹಿರಿಯರನು ಕಂಡು ನಮಿಸದಾತನೆ ಹೊಲೆಯ
ಪುರಂದರವಿಠಲನ ನೆನೆಯದವ ಹೊಲೆಯ ೫

[ಹೊಲೆತನ ಎನ್ನುವುದು ಪುರಂದರದಾಸರ ದೃಷ್ಟಿಯಲ್ಲಿ ಅಪೂರ್ಣತೆ, ಅಸಾಮರ್ಥ್ಯ, ಸಣ್ಣತನ ಮುಂತಾದ ದೈಹಿಕ-ಮಾನಸಿಕ ಕೊರತೆಗಳಿಂದ ಹುಟ್ಟಿಬರುವ ವಸ್ತು. ಶೀಲದ್ರೋಹ, ರಾಜದ್ರೋಹ, ಮನೆಮುರುಕುತನ, ಆಡಿದ ಮಾತಿಗೆ ತಪ್ಪುವಿಕೆ, ಸುಳ್ಳುಗಾರಿಕೆ ಮುಂತಾದ ದುರ್ಗುಣಸಂಪನ್ನರೇ ಪುರಂದರದಾಸರ ದೃಷ್ಟಿಯಲ್ಲಿ 'ಹೊಲೆಯರು'. ಅವರ ಉಗಾಭೋಗವೊಂದು ಇದನ್ನೇ ಸಮರ್ಥಿಸುತ್ತದೆ.

ಹೊಲೆಯ ಬಂದನೆಂದು ಒಳಗೆ ದೇವರಮಾಡಿ
ಗಣಗಣ ಗಂಟೆಯ ಬಾರಿಸುವರಯ್ಯಾ
ತನುವಿನ ಕೋಪವು ಹೊಲೆಯಲ್ಲವೆ
ಪರಧನ ಪರಸತಿ ಹೊಲೆಯಲ್ಲವೆ
ಹೊರಗಿದ್ದ ಹೊಲೆಯನ ಒಳಗೆ ಬಚ್ಚಿಟ್ಟರೆ
ಇದಕೇನು ಮದ್ದೋ ಪುರಂದರವಿಠಲ.]



ರೇಗುಪ್ತಿ ಅಟ್ಟ

ಆವ ಕುಲವಾದರೇನು ಆವನಾದರೇನು ಆತ್ಮ
ಭಾವವರಿತವೇಲೆ ಪ

ಹಸಿ ಕಬ್ಬು ಡೊಂಕಿರಲು ಅದರ
ರಸ ತಾನು ಡೊಂಕೇನೊ
ವಿಷಯಾಸೆಗಳ ಬಿಟ್ಟು
ಹಸನಾದ ಗುರುಭಕ್ತಿ ಮಾಡೋ ೧

ನಾನಾ ವರ್ಣದ ಆಕಳು ಅದು
ನಾನಾ ವರ್ಣದ ಕ್ಷೀರವೇನೋ
ಹೀನ ಕರ್ಮಗಳನ್ನು ಬಿಟ್ಟು ಹಿಗ್ಗಿ
ಜ್ಞಾನ ಒಲಿಸಿರೊ ೨

ಕುಲದ ಮೇಲೆ ಹೋಗಬೇಡ ಮನುಜಾ
ಕುಲವಿಲ್ಲ ಜ್ಞಾನಿಗಳಿಗೆ
ವರದ ಪುರಂದರವಿಠಲನ ಪಾದವ
ಸೇರಿ ಮುಕ್ತನಾಗೋ ೩

[ಕುಲ, ಮತ, ಜಾತಿಗಳು ಮುಖ್ಯವಲ್ಲ ; ಭಕ್ತಿಯ ಭಾವ, ಜ್ಞಾನ ಇವೇ ಮುಖ್ಯ. ಯಾವ ಕುಲದವರೇ ಆಗಲಿ ಭಕ್ತಿ, ಜ್ಞಾನಗಳಿದ್ದರೆ ಅವರು ಮಾನ್ಯರೇ. ಅವಕ್ಕೆ ಕುಲ ಕಾರಣವಾಗುವುದಿಲ್ಲ. ವಿಷಯದ ಆಸೆ ಬಿಡುವುದು, ಗುರುಭಕ್ತಿ ಮಾಡುವುದು, ಕೆಟ್ಟ ಕೆಲಸಗಳನ್ನು ಮಾಡದಿರುವುದು, ಜ್ಞಾನವನ್ನು ಪಡೆದುಕೊಳ್ಳುವುದು ಇವು ಅಧ್ಯಾತ್ಮದಲ್ಲಿ ಆಸಕ್ತರಾದವರಿಗೆ ಮುಖ್ಯ.]

ಸುರಟಿ ಅಟ್ಟ

ಕೊಡುವ ಕರ್ತ ಬೇರೆ ಇರುತಿರೆ
ಬಿಡು ಬಿಡು ಚಿಂತೆಯನು ಪ

ಒಡೆಯನಾಗಿ ಮೂರ್ಜಗವನು ಪಾಲಿಪ
ಬಡವರುದ್ಧಾರಕ ಭಕ್ತರ ಪ್ರಿಯನು ಅ

ಕಲ್ಲಿನೊಳಗೆ ಇರುವ ಕಪ್ಪೆಗೆ
ಅಲ್ಲೆ ಉದಕ ಕೊಡುವ
ಎಲ್ಲ ಕೋಟಿ ಜೀವರಾಶಿಗಳನೆ ಕಾಯ್ವ
ವಲ್ಲಭ ಶ್ರೀಹರಿ ಎಲ್ಲೆಲ್ಲಿರುತಿರೆ ೧

ಆನೆಗೈದುಮಣದ ಆಹಾರವ
ತಾನೆ ತಂದು ಕೊಡುವ
ದೀನರೊಡೆಯ ಶ್ರೀನಿವಾಸ ದಯಾನಿಧಿ
ಮಾನದಿಂದ ಕಾಯುವ ಭಾನುಕೋಟಿ ತೇಜ ೨

ಸರಸಿಜಾಕ್ಷ ತನ್ನ ಸೇರಿದ
ಜನರನು ಬಿಡನಣ್ಣ
ಪರಮ ದಯಾನಿಧಿ ಭಕ್ತರ ಸಲಹುವ
ಪುರಂದರವಿಠಲನು ಪುಷ್ಪಶರನ ಪಿತ ೩



ಸಂಸಾರ ಚಿತ್ರಗಳು

ಸಮಾಜದಲ್ಲಿ ಸಂಸಾರಿಯಾದವನು ನಿರ್ದಿಷ್ಟ ಗೊತ್ತುಗುರಿಗಳಿಂದ ಕೂಡಿದ ಅರ್ಥಪೂರ್ಣ ಕೌಟುಂಬಿಕ ಜೀವನವನ್ನು ನಡೆಸಬೇಕೆಂದು ಪುರಂದರ ದಾಸರು ಬಯಸುತ್ತಾರೆ. ಆದರೆ ಸಾಂಸಾರಿಕ ಜಂಜಡಗಳಲ್ಲೇ ಮುಳುಗಿ ಹೋಗುವ ವ್ಯಕ್ತಿ ದೊಡ್ಡದೇನನ್ನೂ ಸಾಧಿಸಲಾರ ಎನ್ನುತ್ತಾರೆ. ಹುಟ್ಟಿ ನಿಂದ ಸಾವಿನವರೆಗೆ ವ್ಯಕ್ತಿಯ ಜೀವನ ಚಕ್ರ ಹೇಗೆ ಹೇಗೆ ಸಾಗುತ್ತದೆಂಬು ದನ್ನು ಪರಿಪಿಡಿಯಿಂದ ವಿವರಿಸಿದ್ದಾರೆ. ಹುಟ್ಟುತ್ತಲೇ ಮಗು ಹಸಿದು ನೀರಡಿಸಿ ಕಣ್ಣು ತೆರೆದು ಗೋಳಾಡಿ ಬಯಸಿದುದನ್ನೆಲ್ಲ ಪಡೆದು 'ಪ್ರಪಂಚ ವಿದು ಸ್ಥಿರ' ಎಂದು ನಂಬಿ ಮರುಳಾಗುತ್ತದಂತೆ. ಏಕೆಂದರೆ ಅದರ ಹಸಿವು ತೃಷೆಗಳನ್ನು ಅಡಗಿಸಿ ತಾಯಿ ತಂದೆ ಹಾಡಿ ತೂಗುತ್ತಾರೆ. 'ಬಾಲತನದಿ ಬಹು ನೊಂದೆನೋ, ನಾನಾ ಲೀಲೆಯಿಂದಲಿ ಕಾಲ ಕಳೆದೆನೋ' ಎಂದು ದುಃಖಿಸುತ್ತಾರೆ. ಪ್ರಾಯದ ವಿಷಯದಲ್ಲಿ ಅದರ ಅಬ್ಬರಕ್ಕೆ ಸಮಸಾಟಿ ಯಾದ ರಂಜಿತ ಭಾಷೆಯನ್ನೇ ಬಳಸಿ ಪ್ರಾಯದ ವಿವಿಧ ವಿಶ್ವರೂಪದರ್ಶನ ಮಾಡಿಸಿದ್ದಾರೆ. ಪ್ರಾಯದಲ್ಲಿ ವಿವೇಕ ಮೂಡದಿದ್ದರೆ ಎಲ್ಲ ದುಷ್ಟ ಸತ್ತ್ವ ಗಳೂ ವ್ಯಕ್ತಿಯ ಮೇಲೆ ಆಕ್ರಮಣ ನಡೆಸಿ ಅವನನ್ನು ಹಾಳುಗೆಡಿಸುತ್ತವೆ. ಈ ವಿಚಾರವನ್ನು ಪುರಂದರದಾಸರು ಸೊಗಸಾಗಿ

'ಪ್ರಾಯ ಬಂದಿತಲ್ಲ
ಮೈಯೊಳು ಮಾಯ ತುಂಬಿತಲ್ಲ'

ಎಂದು ಪ್ರಾಯದ ಆಕ್ರಮಣಶೀಲ ನಡಿಗೆಯನ್ನು ಗುರುತಿಸಿದ್ದಾರೆ. ಚಿನ್ನದ ನಾಣ್ಯದಂತೆ ಚಲಾವಣೆಗೆ ಬರುವ ತರುಣ ಈ ಮಾಯೆಯಿಂದಾಗಿ ಏನೆಲ್ಲ ಅನ್ಯಾಯಗಳನ್ನು ಮಾಡಹೋಗಿ ಕೊನೆಗೆ 'ಸಲ್ಲದ ನಾಣ್ಯ'ವಾಗುತ್ತಾನೆ. 'ಉದಯವಾದರೆ ಊಟದ ಚಿಂತೆ ಅದರ ಮೇಲೆ ಭೋಗದ ಚಿಂತೆ ಹದಿ ನಾಲ್ಕು ಲೋಕವಾಳಬೇಕೆಂಬ ಚಿಂತೆ' ಅವನನ್ನು ಕಾಡುತ್ತದೆ. ಕಂದರ್ಪ ಬಾಧೆಯಿಂದ ಮಾನಿನಿಯರ ವಶನಾಗಿ ಮಂದಮತಿಯಿಂದ ಆ ತರುಣ ಮರುಳಾಗುತ್ತಾನೆ. ಹೊಟ್ಟೆಯ ಆಸೆಗಾಗಿ ಪರರ ದೂಷಣೆ ಮಾಡುತ್ತ ಪರರ ಪಾಪಗಳನ್ನು ಪರಿಪರಿಯಲ್ಲಿ ಆಡಿಕೊಳ್ಳುತ್ತ, ನರರ ಸ್ತುತಿ ಮಾಡುತ್ತ, ನೆರೆಮನೆಯವರ ಭಾಗ್ಯವನ್ನು ನೋಡಿ ಸೈರಿಸಲಾರದೆ ಅಸೂಯೆ ತಾಳುತ್ತ ಹೋಗುತ್ತಾನೆ. ಪರರ ಸೇವೆಯ ಮಾಡಿ ಪರರನ್ನೇ ಕೊಂಡಾಡಿ ನಾಟಕ ವಾಡುತ್ತಾನೆ.

'ಹಸಿವು ತೃಷೆಗಳು ಬಹುಬಾಧಿಸಲು
ಬಹು ಹುಸಿಯನಾಡಿದೆನಯ್ಯ'

ಎಂಬಂತೆ ನುಡಿಮಾಲಿನ್ಯಕ್ಕೂ ಸಿದ್ಧನಾಗುತ್ತಾನೆ. ಹೀಗೆ ನಿಜ ವೃತ್ತಿಯನ್ನು ಬಿಟ್ಟು ದುರಾನ್ನವನ್ನು ಉಂಡು ಹೊಟ್ಟೆ ಹೊರೆಯುತ್ತ ಸಂಸಾರಿಯು ಬಾಧೆ ಪಡುವುದನ್ನು ಪುರಂದರದಾಸರು

'ಗಳೆಯ ತುದಿಯ ಮಾಂಸಕೆ ಬಂದೆರಗುತ
ಸಿಲುಕಿದ ಮೀನಿನಂತಾದೆಯಲ್ಲೋ'

ಎಂಬ ಅದ್ಭುತ ಉಪಮೆಯಿಂದ ಚಿತ್ರಿಸುತ್ತಾರೆ. ಬದುಕಿನಲ್ಲಿ ಬರುವ ಎಲ್ಲ ತೋರಿಕೆಯ ಸುಖಗಳ ಹಿಂದೆ ಅಸುಖವಿದ್ದೇ ಇದೆ ಎಂಬ ದ್ವಂದ್ವವನ್ನು ಈ ಚಿತ್ರ ಸೊಗಸಾಗಿ ಮೂಡಿಸುತ್ತದೆ.

ಬಗೆಬಗೆಯ ಆಸೆಗಳು ವ್ಯಕ್ತಿಯನ್ನು ತಿನ್ನುವ ಕಾಲವೆಂದರೆ ತಾರುಣ್ಯ ತಾನೆ. ಈ ವಯಸ್ಸಿನಲ್ಲಿ ವ್ಯಕ್ತಿ ಬಾಲೆಯರ ಬಯಸಿ ಮರುಳಾಗುತ್ತಾನೆ. ಸ್ತ್ರೀ ಚಾಪಲ್ಯ ಅವನನ್ನು ಹಣ್ಣು ಮಾಡುತ್ತದೆ.

'ಜ್ವರದ ಮೇಲತಿಸಾರ ಬಂದೆರಗಿದಂದದಲಿ
ನಿರುತ ಕಾಮಕ್ರೋಧ ವಿಷಯಗಳಲಿ
ತರುಣಿಯರಿಗೊಡವೆ ಬಂಗಾರ ಬೇಕೆಂದೆನುತ
ಪರಸೇವೆಯೊಳು ನಾನು ಕಡುನೊಂದೆ'

ಕಾಮ ಕ್ರೋಧಾದಿಗಳು ವ್ಯಕ್ತಿ ಜೀವನದಲ್ಲಿ ಪ್ರವೇಶವಾಗುವ ಬಗೆಯನ್ನು 'ಜ್ವರದ ಮೇಲೆ ಅತಿಸಾರ ಬಂದ ಹಾಗೆ' ಎಂಬ ಗಾದೆಯ ಮಾತಿನಿಂದ ಸಮರ್ಥವಾಗಿ ಚಿತ್ರಿಸಿದ್ದಾರೆ. 'ಪರರ ಸತಿಗೆ ಪರರ ಅನ್ನಕೆ ತಿರುಗಿ ತಿರುಗಿ ಚಪಲನಾದೆ' ಎಂಬ ಮಾತೂ ಈ ಸ್ಥಿತಿಯನ್ನೇ ವಿವರಿಸುತ್ತದೆ. ಪರಸ್ತ್ರೀ ವ್ಯಾಮೋಹ ಸಂಸಾರಿಯನ್ನು ಕಾಡುವ ಬಗೆಯನ್ನು ಬಗೆಬಗೆಯಾಗಿ ವರ್ಣಿಸಿ ಖಂಡಿಸಿದ್ದಾರೆ. ಅನ್ಯಸ್ತ್ರೀಯರ ಲಾವಣ್ಯದ ಕಡೆಗೆ ಕಣ್ಣು ಹರಿಸುತ್ತ ಅವರ ಕೂಟವನ್ನು ಬಯಸುವ ವ್ಯಕ್ತಿ ಉರಿಯುತ್ತಿರುವ ಕಿಚ್ಚನ್ನೇ ತನಗೆ ತುಂಬ ಹಿತ ಎಂದು ಭಾವಿಸಿ ಅದನ್ನು ಮುತ್ತುವ ಪತಂಗಕ್ಕೆ ಹೋಲಿಸಿದ್ದಾರೆ.

ಹೆಂಡತಿ ಮಕ್ಕಳು, ನಂಟರು ಇಷ್ಟರು ಸಂಸಾರಿಯ ಜೀವನದಲ್ಲಿ ವಹಿಸುವ ಪಾತ್ರವನ್ನು ಪುರಂದರದಾಸರು ಸಮರ್ಥವಾಗಿ ಚಿತ್ರಿಸುತ್ತಾರೆ. ಅವರೆಲ್ಲರ ಪಾತ್ರಗಳೂ ಈತನ ಜೀವನದ ಸ್ಥಿತಿಗತಿಗಳನ್ನೇ ಅವಲಂಬಿಸಿ ರೂಪುಗೊಳ್ಳುತ್ತವೆ. ಅವನು

'ಶಕ್ತನಾದರೆ ನಂಟರೆಲ್ಲ ಹಿತರು
ಅಶಕ್ತನಾದರೆ ನೋಡಲವರೆ ವೈರಿಗಳು'

ಎಂಬ ಮಾತು ಇದನ್ನು ಸ್ಪಷ್ಟಪಡಿಸುತ್ತದೆ. ಈ ಪೋಷಕ ಪಾತ್ರಗಳು ನಮ್ಮ ಏಳಿಗೆಯ ದಿನಗಳಲ್ಲಿ ಜಿಗಳೆಗಳಂತೆ ನಮಗೆ ಅಂಟಿಕೊಂಡು ರಕ್ತ ಹೀರುತ್ತವೆ. ಇಳಿತದ ದಿನಗಳಲ್ಲಿ ಆಕ್ಷೇಪಿಸಿ ದೂರ ಸರಿಯುತ್ತವೆ. ಕಷ್ಟ ಕಾಲದಲ್ಲಿ ಯಾರೂ ನಮಗೆ ಆಗುವುದಿಲ್ಲ ಎಂಬುದನ್ನು ಪುರಂದರದಾಸರು ಹಲವಾರು ಬಿಡಿಚಿತ್ರಗಳಲ್ಲಿ ಕಾಣಿಸಿದ್ದಾರೆ. ಇವನು 'ಸಲ್ಲದ ನಾಣ್ಯ'ವಾದ ಕೂಡಲೇ 'ಒಡನೆ ತಿರುಗುವ ಗೆಳೆಯರು' ವೈರ ಸಾಧಿಸುತ್ತಾರೆ. ಮಡದಿ ಮಕ್ಕಳು ಮನ ಸಂಕಟದಿ ಮುಸುಗುಟ್ಟುತ್ತಾರೆ. ನೆಂಟರಿಷ್ಟರು ಹರಿದು ತಿನ್ನುತ್ತಾರೆ. ಮಡದಿ ಮಕ್ಕಳ ಪ್ರಪಂಚಕ್ಕೆ ದುಡಿದುಡಿದು ಹಾಕಿದ ಜೀವ ಸಮಾಜದಲ್ಲಿ ತನ್ನ ವೈಭವವನ್ನು ಮೆರೆಯಲು ಯೋಗ್ಯತೆಗೆ ಮೀರಿ ಖರ್ಚು ಮಾಡುತ್ತಾನೆ. ಮುಂದೆ ಸಾಲಗಾರರ ಕೈಲಿ ಸಿಕ್ಕಿ ನರಳುತ್ತಾನೆ. ಈ ದ್ವಂದ್ವ ಗುಣವನ್ನು ಪುರಂದರದಾಸರು ಈ ಮದುವೆಯ ನಿದರ್ಶನವನ್ನೇ ತೆಗೆದುಕೊಂಡು

'ಮಗನ ಮದುವೆಯೆಂದು
ಸಾಲವನು ನೀ ಮಾಡಿ
ಸುಗುಣೆಯೆನ್ನಿಸಿಕೊಳ್ಳಲು ವೆಚ್ಚವ ಮಾಡಿ
ಸಾಲಗಾರರು ಬಂದು ಹಗರಣ ಪಡಿಸಿದರೆ
ಒಗೆಬಗೆಯೊಳವರ ಕಾಲ್ಗೆರಗಿ ಬಿದ್ದಿರುವೆ'

ಎಂಬ ಮಾತಿನಿಂದ ಮನಗಾಣಿಸುತ್ತಾರೆ. ದುಂದುಗಾರಿಕೆಯ ಚಟಕ್ಕೆ ಬಿದ್ದ ಸಂಸಾರಿಗಳ ಪಾಡನ್ನು ಈ ಮಾತು ಸಮರ್ಪಕವಾಗಿ ಧ್ವನಿಸುತ್ತದೆ. ದುಂದಿನಿಂದ ಮೆರೆಸಿದ ಜನರೇ ಅವನನ್ನು ಹಳ್ಳಕ್ಕೆ ತಳ್ಳುತ್ತಾರೆ. ಆಗಿನ ಅವನ ಸ್ಥಿತಿ 'ನಗುವವರ ಮುಂದೆ ಇಷ್ಟು ತಗುಲಿ ಬೀಳುವವನ ಸ್ಥಿತಿ'.

ವಯಸ್ಸು ಸಾಗಿದಂತೆ, ಮುಪ್ಪು ಅಡರಿದಂತೆ ಬದುಕಿನ ಎಲ್ಲ ಚರ್ಯೆಗಳ ಹಿಂದಿನ ಉದ್ದೇಶ ಜೀವಕ್ಕೆ ಮನದಟ್ಟಾಗುತ್ತದೆ. ಎಲ್ಲ ಕಡೆಗಳಿಂದಲೂ ಹೊಡೆತಗಳೇ ಬೀಳುತ್ತ ಹೋಗುವ ಸ್ಥಿತಿಯನ್ನು ಪುರಂದರದಾಸರು ಒಂದು ಅದ್ಭುತ ಶಬ್ದಚಿತ್ರದಿಂದ ವಿವರಿಸುತ್ತಾರೆ :

'ಅಲ್ಲವ (ಶುಂಠಿ) ತಿಂದ ಇಲಿಯಂತೆ
ಗಲ್ಲ ತಿವಿಸಿಕೊಂಡು ಗಾರು ಪಟ್ಟೆನು'

ಬೋನಿಗೆ ಸಿಕ್ಕಿಬಿದ್ದ ಇಲಿಯನ್ನು ಬೋನು ಇಟ್ಟವರು ಕೊಲ್ಲುವ ಪರಿ ಇಲ್ಲಿ ಚಿತ್ರಿತವಾಗಿದ್ದು ಬದುಕಿನಲ್ಲಿ ಬಹಳ ಕಡೆಗಳಿಂದ ಘಾಸಿಪಡುವ ಸಂಸಾರಿಗನ ಯಾತನೆಯನ್ನು ಅನನ್ಯವಾಗಿ ಧ್ವನಿಸುತ್ತದೆ. ಅದರಷ್ಟೇ ಸೊಗಸಾದ ಇನ್ನೊಂದು ಚಿತ್ರ—'ಎದೆ ನೀರು ಬತ್ತಿತು' ಎಂಬ ಮಾತಿನಲ್ಲಿದೆ. ಹೃದಯದ ಚೈತನ್ಯದ ಚಿಲುಮೆಯೇ ಒಣಗಿ ಹೋಗುವ ದಾರುಣ ಸ್ಥಿತಿಯ ಚಿತ್ರಣ ಇದು.

ಬದುಕಿನಲ್ಲಿ ನಮ್ಮ ಬಯಕೆಗಳೆಲ್ಲಾ 'ನೆರವೇರದ ಆಸೆ'ಗಳಾಗಿಯೇ ಉಳಿಯುತ್ತವೆ ಎಂಬುದು ಪುರಂದರದಾಸರ ಭಾವನೆ.

'ಹಾರೈಸಿದೆಲ್ಲವು
ಹಳವಂಡವಾದ ಮೇಲೆ ಇನ್ನೇನಿನ್ನೇನು'

ಎಂಬ ಮಾತಿನಿಂದ ಇದು ಸ್ಪಷ್ಟವಾಗುತ್ತದೆ. ನಮ್ಮ ತುದಿಮೊದಲಿಲ್ಲದ ಆಸೆಗಳು, ಅವು ಕೇವಲ ಹಳವಂಡ. 'ಹಳವಂಡ' ಅಶಾಂತಿ, ಗಲಿಬಿಲಿ ಕಳವಳಗಳನ್ನೂ, ಭ್ರಮಾಲೋಕದ ಹಗಲುಗನಸುಗಳನ್ನೂ, ಮರೀಚಿಕೆಯನ್ನೂ ಸೂಚಿಸುವ ಒಂದು ಅರ್ಥಪೂರ್ಣ ಶಬ್ದ.

ಹೀಗೆ ಬದುಕಿನ ಸವಿ ಚಿತ್ತಾರಗಳನ್ನು ರಂಜನೀಯವಾಗಿ ರೂಪಿಸುತ್ತಲೇ ಅವುಗಳ ಇತಿಮಿತಿಗಳನ್ನೂ ಧ್ವನಿಸಿ ಸಂಸಾರಿಯ ನಡವಳಿಕೆಯನ್ನು ವ್ಯಾಖ್ಯಾನಿಸಿದ್ದಾರೆ. 'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ' ಎಂಬ ಕೀರ್ತನೆಯಂತೂ ಎಲ್ಲ ಸಂಸಾರಿಗಳ ವರ್ತನೆಯನ್ನು ಸಮೀಕರಿಸಿ ಹೇಳಿರುವ ಮಾತಾಗಿದೆ. ಜಗತ್ತಿನಲ್ಲಿರುವ ಎಲ್ಲ ಮನುಜರೂ ಸಂಸಾರದ ವ್ಯವಹಾರಎಂಬ ದೊಡ್ಡ ಹಗರಣ (ನಾಟಕ)ದಲ್ಲಿನ ಪಾತ್ರಧಾರಿಗಳು ಎಂದು ಅವರು ವಿಡಂಬಿಸಿದ್ದಾರೆ.

ಕಾಂಬೋದಿ ಅಟ್ಟ

ಸಂಸಾರವೆಂಬಂಥ ಭಾಗ್ಯವಿರಲಿ ಪ

ಕಂಸಾರಿ ನೆನೆವೆಂಬ ಸೌಭಾಗ್ಯವಿರಲಿ ಅ

ತಂದೆ ನೀನೆ ಕೃಷ್ಣ ತಾಯಿ ಇಂದಿರೆದೇವಿ
ಪೊಂದಿದ ಅಣ್ಣನು ವನಜಸಂಭವನು
ಇಂದುಮುಖಿ ಸರಸ್ವತೀದೇವಿಯೇ ಅತ್ತಿಗೆಯು
ಎಂದೆಂದಿಗೂ ವಾಯುದೇವರೇ ಗುರುವು ೧

ಭಾರತೀ ದೇವಿಯೇ ಗುರುಪತ್ನಿಯು ಎನಗೆ
ಗರುಡ ಶೇಷಾದಿಗಳೆ ಗುರುಪುತ್ರರು
ಹರಿದಾಸರೆಂಬುವರೆ ಇಷ್ಟ ಬಾಂಧವರೆನಗೆ
ಹರಿಭಜನೆ ನಡೆಯುತಿಹ ಸ್ಥಳವೇ ಮಂದಿರವು ೨

ಸರುವಾಭಿಮಾನವನು ತ್ಯಜಿಸುವುದೆ ಸುಸ್ನಾನ
ಹರಿಯ ನಾಮವೆ ಇನ್ನು ಅಮೃತಪಾನ
ವರದ ಪುರಂದರವಿಠಲ ನಿನ್ನ ಪಾದ ಧ್ಯಾನ
ಕರುಣಿಸಿ ಅನವರತ ಕರ ಪಿಡಿದು ಕಾಯೊ ೩

[ಪುರಂದರದಾಸರು ಊಹಿಸಿಕೊಂಡಿರುವ ಸಂಸಾರ ದೈವಗಳೊಂದಿಗೆ ಬೆಸೆದುಕೊಂಡ ಸಂಸಾರವಾಗಿದೆ. ಈ ದೈವ ಸಂಸಾರದಲ್ಲಿ ಮಗನ ಪಾತ್ರ ವಹಿಸಬಯಸುವ ಕವಿ ತುಂಬು ಸಂಸಾರದಲ್ಲಿ ವಿಷ್ಣುವನ್ನು ತಂದೆಯಾಗಿ ಲಕ್ಷ್ಮಿಯನ್ನು ತಾಯಿಯಾಗಿ ಬ್ರಹ್ಮನನ್ನು ಅಣ್ಣನಾಗಿ ಸರಸ್ವತಿಯನ್ನು ಅತ್ತಿಗೆಯಾಗಿ ವಾಯು ಭಾರತಿಯರನ್ನು ಗುರು–ಗುರುಪತ್ನಿಯರಾಗಿ ಗರುಡ ಶೇಷಾದಿಗಳನ್ನು ಗುರುಸೋದರರಾಗಿ, ಹರಿದಾಸರನ್ನು ನಂಟರಾಗಿ ಪಡೆಯಬಯಸುತ್ತಾನೆ. ಹರಿಭಜನೆ ನಡೆಯುವ ದೈವ ಮಂದಿರವೇ ಅವನ ಕುಟುಂಬದ ವಾಸದ ಮನೆಯಾಗುತ್ತದೆ. ಎಲ್ಲ ಬಗೆಯ ಅಭಿಮಾನಗಳ ಕೊಳೆಯನ್ನು ತೊಳೆದುಕೊಳ್ಳುವುದೇ ಅವನ ಸ್ನಾನಕ್ರಿಯೆಯ ಉದ್ದೇಶ. ಹರಿನಾಮಪಾನವೇ ಅವನ ಅಮೃತ ಆಹಾರ. ಹೀಗೆ ಸಂಸಾರವನ್ನು ಒಂದು ಪವಿತ್ರವಾದ ನೆಲೆಯಲ್ಲಿ ನಿಲ್ಲಿಸ ಬಯಸುತ್ತಾರೆ ಪುರಂದದಾಸರು.]

ನೆನವು—ಸ್ಮರಣೆ.
ವನಜಸಂಭವ—ಬ್ರಹ್ಮ.
ಅನವರತ—ಎಡೆಬಿಡದೆ.

ಪೀಲು (ನಾದನಾಮಕ್ರಿಯೆ) ಆದಿ

ಮತಿಗೆಟ್ಟು ಕಾಲವ ಕಳೆಯಬೇಡ, ಸ
ದ್ಗತಿ ಕೊಡುವ ಹರಿಯ ನಂಬಲೊ ಮೂಢ ಪ

ಕೋತಿಯಂತೆ ಕುಣಿದಾಡಬೇಡ, ಸು
ನೀತಿ ಮಾರ್ಗವ ಪಿಡಿಯಲೊ ಗಾಢ ಅ

ಹಾಳು ಕೇರಿಯೊಳು ತಿರುಗುವ ಹಂದಿಯಂತೆ
ಬಳಲುತ್ತ ನಾನಾ ಜನ್ಮವೆತ್ತಿ ಬಂದಿ
ಬಾಳುವ ಕಾಲಕ್ಕೆ ಮದವೇರಿ ನಿಂದಿ, ಮುಂದೆ
ಮೂಳ ಮುಪ್ಪಿನಲ್ಲಿ ಅವಿಚಾರಗೊಂಡಿ ೧

ಮಡದಿ ಮಕ್ಕಳ ಪ್ರಪಂಚಕ್ಕಾಗಿ, ದುಡಿ
ದುಡಿದು ಹಾಕಿದೆಯೊ ಮುದಿಕೋಣನಾಗಿ
ಮಡಿದು ಪೋಪಾಗ ಯಾರಿಲ್ಲವಾಗಿ, ಇನ್ನು
ದೃಢದಿ ನಿನ್ನೊಳು ನೀನು ತಿಳಿಯೊ ಗೂಗಿ ೨

ರಾಯರು ಏರೋದು ಮದಗಜವಂತೆ, ಮತ್ತೆ
ಆಯುದಿ ನಡೆಯೋದು ಬಾಳೆ ಸುಳಿಯಂತೆ
ಹೇಯ ಸಂಸಾರ ಸ್ಥಿರವಲ್ಲವಂತೆ, ನಮ್ಮ
ಜೀಯ ಪುರಂದರವಿಠಲ ದಯಮಾಡನಂತೆ ೩

ಮೂಳ ಮುಪ್ಪಿನಲ್ಲಿ ಅವಿಚಾರಗೊಂಡಿ—ತಿಳಿಗೇಡಿಯಾದ ಮುದಿತನದಲ್ಲಿ ಯುಕ್ತಾಯುಕ್ತವಿವೇಚನೆ ತಪ್ಪುತ್ತದೆ.

ಗೂಗಿ—ಗೂಬೆ.

ರಾಯರು ಏರೋದು ಮದಗಜವಂತೆ—ಆನೆಯನ್ನು ಏರಿ ನಡೆಯುವವರಿಗೆ ಒಂದು ಬಗೆಯ ಠೀವಿ ಇರುತ್ತದೆ. ಆದರೆ ಏರಿದ ಆನೆ ಮದಗಜವಾದರೆ ಅದು

ತನ್ನಿಚ್ಛೆ ಬಂದತ್ತ ಸವಾರನನ್ನು ಎಳೆದುಕೊಂಡು ಹೋಗುತ್ತದೆ. ಹಾಗೆಯೇ ಅರಿಷಡ್ವರ್ಗಗಳಲ್ಲಿ ಒಂದಾದ 'ಮದ' ಎಂಬ ಮದ್ದಾನೆಯನ್ನು ಏರಿಹೊರಟರೆ ವ್ಯಕ್ತಿಗೆ ಆಗಬಹುದಾದ ಅಪಾಯವನ್ನು ಇಲ್ಲಿ ಸೂಚಿಸುತ್ತಿದ್ದಾರೆ.

ಆಯದಿ ನಡೆಯೋದು ಬಾಳೆಸುಳಿಯಂತೆ—ಆಯ ಎಂದರೆ ಸ್ಥಿರತೆ, ಸಮಚಿತ್ತತೆ. ಆದರೆ ನಮ್ಮ ಆಯ ಬಾಳೆಸುಳಿಯಂಥದು. ಬಿರುಗಾಳಿಗೆ ಸಿಕ್ಕಿದಾಗ ಬಾಳೆಯ ಸುಳಿ ನಲುಗುತ್ತದೆ, ಎಲೆ ಹರಿಯುತ್ತದೆ ಅಥವಾ ವಕ್ರವಾಗಿ ಹೊರಟು ಕೊಳ್ಳುತ್ತದೆ. ಅದೇ ರೀತಿ ವ್ಯಕ್ತಿ ಶೀಲ ಇತ್ಯಾದಿ ಮಾರ್ಗಗಳಲ್ಲಿ ನೇರವಾಗಿ ನಡೆಯಲು ಸಾಧ್ಯವಿಲ್ಲದಂತಹ ಸನ್ನಿವೇಶಗಳು ಎದುರಾದಾಗ ದಾರಿತಪ್ಪುತ್ತಾನೆ.



ಶಂಕರಾಭರಣ ಅಟ್ಟ

ರಕ್ಷಿಸು ಲೋಕನಾಯಕನೆ, ರಕ್ಷಿಸು ಪ

ಎಷ್ಟೆಷ್ಟು ಜನ್ಮವ ಕಳೆದೆನೊ, ಇ
ನ್ನೆಷ್ಟು ಜನ್ಮವ ಕಳೆವೆನೊ
ಕಷ್ಟವ ಪಡಲಾರೆ ಕೃಷ್ಣ ಕೃಪೆಯನಿಟ್ಟು
ಇಷ್ಟವ ಪಾಲಿಸೊ ಇಭರಾಜವರದನೆ ೧

ಬಾಲತನದಿ ಬಹು ನೊಂದೆನೊ, ನಾನಾ
ಲೀಲೆಯಿಂದಲಿ ಕಾಲಕಳೆದೆನೊ
ಲೋಲಲೋಚನ ಎನ್ನ ಮೊರೆ ಕೇಳುತ ಬೇಗ
ಜಾಲವ ಮಾಡದೆ ಪಾಲಿಸೊ ನರಹರಿ ೨

ಮುದುಕನಾಗಿ ಚಿಂತೆ ಪಡುವೆನೊ, ನಾ
ಕದಡು ದುಃಖ ಪಡಲಾರೆನೊ
ಉದಧಿಶಯನ ಶ್ರೀ ಪುರಂದರವಿಠಲ
ಮುದದಿಂದ ರಕ್ಷಿಸೊ ಖಗರಾಜ ಗಮನ ೩

ಇಭರಾಜವರದ—ಗಜೇಂದ್ರನನ್ನು ಸಲಹಿದವನು.

ಜಾಲ—ಮೋಸ, ಕಪಟ.

ಕದಡು—ಕಳವಳ, ಕ್ಷೋಭೆ.

ಉದಧಿಶಯನ—ಕ್ಷೀರಸಾಗರದಮೇಲೆ ಮಲಗಿದವನು.

ಖಗರಾಜಗಮನ—ಗರುಡವಾಹನ.

ಕಲ್ಯಾಣಿ ಅಟ್ಟ

ದಾರಿಯೇನಿದಕೆ ಮುರಾರಿ ನೀ
ಕರುಣದಿ ಕೈ ಹಿಡಿಯದಿದ್ದರೆ ಪ

ಕಷ್ಟ ಕರ್ಮಂಗಳು ಎಷ್ಟಾದರು ಮಾಳ್ಪೆ
ಇಷ್ಟು ಲಕ್ಷಿಪನಲ್ಲ ಗುರುಹಿರಿಯರ
ದುಷ್ಟರ ಸಂಗವ ಬಹಳ ಮಾಡಿದರಿಂದ
ಶ್ರೇಷ್ಠರ ಸೇವೆಯೆಂದರೆ ಆಗದೆನಗೆ ೧

ಪರರ ದೂಷಣೆಮಾಡಿ ಪರರ ಪಾಪಂಗಳ
ಪರಿಪರಿಯಲಿ ಆಡಿಕೊಂಬೆ ನಾನು
ಹರಿನಾಮಾಮೃತವನು ಹೇಳಿ ಕೇಳದೆ ಹಾಳು
ಹರಟೆಯಿಂದ ಹೊತ್ತು ಕಳೆಯುವ ಎನಗೆ ೨

ಪಾತಕ ಕರ್ಮಗಳ ಮಾಡಿದಜಾಮಿಳಗೆ
ಪ್ರೀತಿಯಿಂದಲಿ ಮುಕ್ತಿ ಕೊಡಲಿಲ್ಲವೆ
ನೂತನವೇಕಿನ್ನು ಸೂರ್ಯಾಂತರ್ಗತ ಜಗ
ಜ್ಯೋತಿಯಾದ ಶ್ರೀ ಪುರಂದರವಿಠಲ ೩

ನೂತನವೇಕಿನ್ನು—ಹಿಂದೆ ಆರ್ತರನ್ನು ಸಲಹಿ, ಈಗ ಸಲಹದೆ ಇರುವುದು ಹೊಸ ಪರಿ ; ಇದೇನು ಕಾರಣ ?

ಸೂರ್ಯಾಂತರ್ಗತ ಜಗಜ್ಯೋತಿ—ಸೂರ್ಯನಲ್ಲಿ ಅಂತರ್ಯಾಮಿಯಾಗಿರುವ ನಾರಾಯಣನೇ ಪ್ರಕಾಶಕ ; ಬಿಂಬನಾಗಿ ನಾರಾಯಣ ಇರುವುದರಿಂದ ಸೂರ್ಯ ಬೆಳಗುತ್ತಿರುವುದು. (‘ಧ್ಯೇಯಃ ಸದಾ ಸವಿತೃಮಂಡಲ ಮಧ್ಯವರ್ತೀ ನಾರಾಯಣಃ’).

ಪಂತುವರಾಳಿ ಅಟ್ಟ

ಎನ್ನ ಮನದ ಡೊಂಕ ತಿದ್ದಿಸೊ ಹೇ ಶ್ರೀನಿವಾಸ ಪ

ಇನ್ನು ಸಂಶಯವೇಕೆ ನಿನ್ನ ಚರಣದಲ್ಲಿ ಸೇರಿಸೊ ಅ

ಉದಯವಾದರೆ ಊಟದ ಚಿಂತೆ
ಅದರ ಮೇಲೆ ಭೋಗದ ಚಿಂತೆ
ಹದಿನಾಲ್ಕು ಲೋಕವಾಳಬೇಕೆಂಬ ಚಿಂತೆ
ಇದು ಪುಣ್ಯ ಇದು ಪಾಪವೆಂದು
ಹೃದಯದಲಿ ಭಯವಿಲ್ಲದೆ
ಮದನ ಮೋಹನ ನಿನ್ನ ಪಾದವ ನಂಬಿದೆ ದೀನದಯಾಳೊ ೧

ನೆರೆಮನೆಯ ಭಾಗ್ಯ ನೋಡಿ ಸೈರಿಸ
ಲಾರದಸೂಯನಾಗಿ ಹರಿಸ್ಮರಣೆಗೆ ವಿಮುಖನಾದೆ
ನರರ ಸ್ತುತಿಯ ಮಾಡಿದೆ
ಪರರ ಸತಿಗೆ ಪರರ ಅನ್ನಕೆ
ತಿರುಗಿ ತಿರುಗಿ ಚಪಲನಾದೆ
ಗುರು ಹಿರಿಯರ ದೂಷಿಸಿ ಮರುಳಾದೆ ದೀನಶರಣ್ಯ ೨

ಅಗಣಿತ ಸುಖ ಬಂದರೆ ಧನಿಕ ನಾನೆಂಬೆ
ಮಿಗೆ ಹಾನಿಗೆ ಹರಿಯ ದೂಷಿಸಿ
ನೆಗೆದು ಪತಂಗ ಕಿಚ್ಚಲಿ ಬೀಳುವ
ಬಗೆಯಾದೆನು ಪುರಂದರವಿಠಲ ಖಗರಾಜಸುವಾಹನ ೩

[ಮನಸ್ಸಿನ ಡೊಂಕುಗಳು ಬಹು ಬಗೆಯಾದವು. ಅನ್ನ, ಭೋಗ, ಅಧಿಕಾರ, ಕಾಮ, ಅಸೂಯೆ, ಗುರುದೂಷಣೆ, ಹಾನಿಬಂದಾಗ ದೈವನಿಂದೆ—ಈ ಜಾಲದಲ್ಲಿ ಸಿಕ್ಕಿ ಕೊಳ್ಳುವ ಮನಸ್ಸು ಅಂಕುಡೊಂಕುಗಳಲ್ಲೇ ಸಾಗಬಯಸುತ್ತದೆ.]

ಖಗರಾಜಸುವಾಹನ—ಗರುಡವಾಹನ, ವಿಷ್ಣು.

೫೫

ಆರಭಿ — ಅಟ್ಟ

ಪಾಪಿಗಳೊಳಗೆಲ್ಲ ನಾನು ವೆಗ್ಗಳನೆಂದು ತಿಳಿಯಲಿಲ್ಲ, ದಯಾ
ರೂಪ ಕೃಪಾಂಬುಧಿ ನೀನಲ್ಲದಿಲ್ಲವೆಂದು ಅರಿಯಲಿಲ್ಲ ಪ

ಕಾಲ್ಗಳಿಂದಲಿ ತೀರ್ಥಯಾತ್ರೆಯು ನಾನಂತು ಮಾಡಲಿಲ್ಲ, ಹರಿ
ಪಾಲ್ಗಡಲಶಾಯಿ ನಿನ್ನ ದಿವ್ಯ ಕಥೆಯನ್ನು ಕೇಳಲಿಲ್ಲ
ಕೂಳ್ಗಳಾಸೆಯಿಂದ ನಿನ್ನ ನೈವೇದ್ಯವನುಣ್ಣಲಿಲ್ಲ, ಇಂಥ
ಸಾಲ್ಗಳ ಪಾಪದಿಂ ಎನ್ನ ಪಾಲಿಪ ಸ್ವಾಮಿ ನೀನೆಯಲ್ಲ ೧

ಕಣ್ಣುಗಳಿಂದ ನಿನ್ನ ದಿವ್ಯಮೂರ್ತಿಯ ನೋಡಲಿಲ್ಲ, ಶ್ರುತಿ
ಸನ್ನುತ ಮಹಿಮೆಯ ಅನುದಿನ ನಾನು ಕೊಂಡಾಡಲಿಲ್ಲ
ಹೆಣ್ಣು ಹೊನ್ನು ಮೆಚ್ಚಿ ನಿನ್ನ ದಾಸರ ದಾಸ್ಯಮಾಡಲಿಲ್ಲ, ಮುನಿ
ಸನ್ನುತ ವರ ಪಾದಪದ್ಮಯುಗಂಗಳ ಸ್ಮರಿಸಲಿಲ್ಲ ೨

ಕರದಿಂದ ನಿನ್ನ ಸುಮೂರ್ತಿ ಪೂಜೆಯನು ಮಾಡಲಿಲ್ಲ, ಇಹ
ಪರ ಎರಡನು ಬಿಟ್ಟು ವಿಷಯದೊಳನುದಿನ ಬಾಳ್ವೆನಲ್ಲ
ಗುರುಹಿರಿಯರ ಮಾತು ಕೇಳದೆ ನಾ ಬಲು ಕೆಟ್ಟೆನಲ್ಲ, ಹರಿ
ಪರಮಪುರುಷ ನೀನಲ್ಲದೆ ಜಗದೊಳು ಕಾವರಿಲ್ಲ ೩

ಹೊಟ್ಟೆಯಾಸೆಗಾಗಿ ದುಷ್ಟರ ಸೇವೆಗೆ ನಿಂತೆನಲ್ಲ, ಯಮ
ಕುಟ್ಟಿಕೊಲ್ಲದ ಹಾಗೆ ನೀನೆ ರಕ್ಷಿಸಬೇಕು ಸಿರಿಯ ನಲ್ಲ
ಅಷ್ಟ ತತ್ತ್ವೇಶರ ಸ್ವಾಮಿ ನೀನಲ್ಲದೆ ಬೇರೆ ಇಲ್ಲ, ಇನ್ನು
ದುಷ್ಟಕೃತ್ಯಕೆ ಮನವೆರಗದಂದದಿ ಮಾಡು ಶ್ರೀ ಗೋಪಾಲ ೪

ಜಗದೊಳಗೆನ್ನಂಥ ಪಾಪಿಗಳಿನ್ಯಾರು ಇಲ್ಲವಲ್ಲ, ಹರಿ
ಸುಗುಣ ಪೂರ್ಣ ನಿನ್ನಂಥ ಕೃಪಾಂಬುಧಿ ಜಗದೊಳಿಲ್ಲ
ನಿಗಮಗೋಚರ ನಿನ್ನ ಮಹಾಮಹಿಮೆಯ ನಾನು ತಿಳಿಯಲಿಲ್ಲ
ಜಗದ್ಗುರುವಿನ ಗುರುವೆ ಪುರಂದರವಿಠಲ ನೀನಲ್ಲದಿಲ್ಲ ೫

[ಇಹ, ಪರ ಎರಡನ್ನೂ ಬಿಟ್ಟು ವಿಷಯ ಸುಖದಲ್ಲೇ ಮಗ್ನವಾಗಿರುವ ಜೀವಿಯ ಆರ್ತನಾದ ಇಲ್ಲಿದೆ. ತನ್ನ ಎಲ್ಲ ದೌರ್ಬಲ್ಯಗಳನ್ನೂ ಮುಚ್ಚುಮರೆಯಿಲ್ಲದೆ ಘೋಷಿಸಿಕೊಂಡು ಪರಿಹಾರ ಬೇಡುವ ಬಗೆ ಇಲ್ಲಿ ಚಿತ್ರಿತವಾಗಿದೆ.]

ಅಷ್ಟೂ ತತ್ತ್ವೇಶ್ವರ—ದೇಹದಲ್ಲಿರುವ ಎಲ್ಲ ತತ್ತ್ವಾಭಿಮಾನಿದೇವತೆಗಳ.

ಜಗದ್ಗುರುವಿನ ಗುರು—ಜಗದ್ಗುರುವೆಂದರೆ ಮುಖ್ಯಪ್ರಾಣ ; ಅವನಿಗೆ ಬೋಧಪ್ರದನಾದವನು.

ಅಂಕದೊಳು—ತೊಡೆಯ ಮೇಲೆ.

ಮಂಕಾದ ಹರಿಣ—ಬೇಡನ ಬಿಲ್ಲಿನ ಝಂಕಾರಕ್ಕೆ ಮನಸೋತು ಅಲ್ಲೇ ನಿಂತ ಜಿಂಕೆ.

ಗಳೆ—ಮೀನನ್ನು ಹಿಡಿಯಲು ಬಳಸುವ ಕೋಲು.

ನಾರೇರ—ನಾರಿಯರ.

ಸೊಂಪಳಿದಳಿ—ಸಂತೋಷ ಕುಗ್ಗಿದ ದುಂಬಿ.

ಮೂಷಕ—ಇಲಿ.

೫೭

ಕಲ್ಯಾಣಿ ಅಟ್ಟ

ಸಂದಿತಯ್ಯ ಪ್ರಾಯವು ಸಂದಿತಯ್ಯ ಪ

ಒಂದು ದಿನವು ಸುಖವು ಇಲ್ಲ ಕುಂದಿಹೋದೆ ಕಷ್ಟದಿಂದ
ಬಂಧನವನು ಬಿಡಿಸುತೆನ್ನ ತಂದೆ ನೀನೆ ರಕ್ಷಿಸಯ್ಯ ಅ

ತಂದೆಯುದರದಿ ಮೂರು ತಿಂಗಳು ಸಂದು ಹೋಯಿತು ತಿಳಿಯದೆ
ಬೆಂದೆ ನವಮಾಸದೊಳು ಗರ್ಭದಿ ನಿಂದು ತಾಯಿಯ ಗರ್ಭದೆ
ಕುಂದಿತಾಯುವು ಒಂದು ವರುಷ ಇಂದಿರೇಶನೆ ಕೇಳು ದುಃಖವ
ಬಂಧನದೊಳಗೆ ನಿಂದೆನನುದಿನ ಮುಂದೆ ಮೋಕ್ಷದ ಮಾರ್ಗ ಕಾಣದೆ ೧

ಕತ್ತಲೆಯೊಳಿರಲಾರೆನೆನುತಲಿ ಹೊತ್ತೆ ಹರಕೆಯ ನಿನ್ನೊಳು
ನಿತ್ಯದಲಿ ಮಲಮೂತ್ರ ಬಾಲ್ಯದಿ ಹೊತ್ತುಗಳೆದೆನು ಎನ್ನೊಳು
ಮತ್ತೆ ಹದಿನಾರರ ಪ್ರಾಯದಿ ಉಕ್ಕಿ ನಡೆದನು ಧರೆಯೊಳು
ಹತ್ತಿ ಸಂಸಾರದ ಮಾಯೆಯು ಸಿಕ್ಕಿದೆನು ಭವಬಲೆಯೊಳು ೨

ಎಡೆಬಿಡದೆ ಅನುದಿನದಿ ಪಾಪದ ಕಡಲೊಳಗೆ ನಾ ಬಿದ್ದೆನೋ
ದಡವ ಕಾಣದೆ ದುಃಖದೊಳು ಬೆಂದೊಡಲೊಳಗೆ ನಾ ನೊಂದೆನೋ
ಬಿಡದೆ ನಿನ್ನಯ ಧ್ಯಾನವೆಂದೆಂಬ ಹಡಗವೇರಿಸು ಎಂದೆನೋ
ದೃಢದಿ ನಿನ್ನಯ ಪಾದ ಸೇರಿಸೊ ಒಡೆಯ ಪುರಂದರವಿಟ್ಠಲ ೩

ಶಂಕರಾಭರಣ ಅಟ್ಟ

ಕರುಣಿಸಿ ಕೇಳು ಕಂದನ ಮಾತನು
ಗರುಡವಾಹನನೆ ಗಂಗೆಯು ಪೆತ್ತ ಹರಿಯೆ ಪ

ಇತ್ತ ಬಾರೆಂಬರಿಲ್ಲ ಇರವು ಕೇಳುವರಿಲ್ಲ
ಹತ್ತಿರ ಕುಳ್ಳಿರಿಸಿ ಆದರಿಪರಿಲ್ಲ
ತತ್ತರಪಡುತ್ತೇನೆ ತಾವರೆ ಜಲದಂತೆ
ಚಿತ್ತ ಭ್ರಮಿಸಿ ಕಣ್ಣು ಕತ್ತಲಾಯಿತು ಹರಿಯೆ ೧

ಇಂದಿಗಶನವಿಲ್ಲ ನಿಂದಿರೆ ನೆರಳಿಲ್ಲ
ಒಂದು ಸುತ್ತಿಗೆ ತುಂಡು ಅರಿವೆಯಿಲ್ಲ
ಬಿಂದು ಮಾತ್ರ ಮಂಡೆಗೆ ಎಣ್ಣೆ ಮೊದಲಿಲ್ಲ
ಬಂದೆಯಾ ಎಂಬುವರಿಲ್ಲ ಭವಣೆ ಕೇಳು ಹರಿಯೇ ೨

ಎಳ್ಳುಕಾಳಷ್ಟಾದರೆನಗಾಶ್ರಯವಿಲ್ಲ
ಅಲ್ಲವ ತಿಂದಿಲಿಯಂತೆ ಕೊರಗಿ
ಗಲ್ಲ ತಿವಿಸಿಕೊಂಡು ಗಾರು ಪಟ್ಟೆನು ಇಂಥ
ಸಲ್ಲದ ನಾಣ್ಯವ ಮಾಡುವರೆ ಹರಿಯೆ ೩

ನಖಶಿಖಪರಿಯಂತ ನಾನಾ ಹಿಂಸೆಯು ಪಟ್ಟೆ
ಸುಖವೆಂಬುದು ಕಾಣೆ ಸ್ವಪ್ನದಲು
ಮುಖವನರಿಯದ ರಾಜ್ಯಕೆನ್ನ ಎಳೆತಂದು
ಕಕಮಕ ಮಾಡುವುದುಚಿತವೆ ಹರಿಯೆ ೪

ಇಷ್ಟು ದಿವಸ ನಿಮ್ಮ ಇರವ ನಾನರಿಯದೆ
ಮುಟ್ಟಿ ಪೂಜಿಸಲಿಲ್ಲ ಮುರವೈರಿಯೆ
ಕಷ್ಟವ ಪಡಿಸದೆ ಕರುಣಿಸಿ ನಿನ್ನ ಸೇವೆ
ಕೊಟ್ಟು ರಕ್ಷಿಸು ಗುರು ಪುರಂದರವಿಠಲ ೫

ಗಂಗೆಯ ಪೆತ್ತ—ತ್ರಿವಿಕ್ರಮಾವತಾರದಲ್ಲಿ.

ಇರವು ಕೇಳುವರಿಲ್ಲ—ಹೇಗಿರುವೆಯೆಂದು ವಿಚಾರಿಸುವವರಿಲ್ಲ.

ಭವಣೆ—ಬವಣೆ.

ಅಲ್ಲವ ತಿಂದಿಲಿಯಂತೆ...—ಬೋನಿನೊಳಗೆ ಅಲ್ಲ (ಶುಂಠಿ) ಮೊದಲಾದ ವಾಸನೆಯ ಪದಾರ್ಥಗಳನ್ನು ಇರಿಸಿ ಇಲಿಗಳನ್ನು ಆಕರ್ಷಿಸಿ ಹಿಡಿಯುತ್ತಾರೆ. ಹಿಡಿದ ಮೇಲೆ ತಿವಿದು ತಿವಿದು ಗಾರು ಪಡಿಸುತ್ತಾರೆ. ಜೀವದ ಸ್ಥಿತಿಯೂ ಅದೇ.

ಸಲ್ಲದ ನಾಣ್ಯವ ಮಾಡುವರೆ—ಚಲಾವಣೆಯಲ್ಲಿರುವ ತನಕ ನಾಣ್ಯಕ್ಕೆ ಬೆಲೆ. ಅದನ್ನು ಚೆನ್ನಾಗಿ ಸವೆಸಿಹಾಕಿದರೆ ಯಾರೂ ಕೊಳ್ಳುವುದಿಲ್ಲ. ಹಾಗೆಯೇ ವ್ಯಕ್ತಿ ಸಮಾಜದಲ್ಲಿ ಅನಾಥಪ್ರಜ್ಞೆಯಿಂದ ನರಳಿ ಘನತೆ ಕಳೆದುಕೊಳ್ಳುತ್ತಾನೆ.

ಶಂಕರಾಭರಣ ಆದಿ

ಬಾರಯ್ಯ ರಂಗ ಬಾರಯ್ಯ ಕೃಷ್ಣ
ಬಾರಯ್ಯ ಸ್ವಾಮಿ ಬಾರಯ್ಯ ಪ

ಮೊದಲಿಂದ ಬರಬಾರದೆ ನಾ ಬಂದೆ
ತುದಿ ಮೊದಲಿಲ್ಲದೆ ಹೊಂದಿದೆ ಅಪನಿಂದೆ
ಇವ ಗೆದ್ದು ಕಳೆದು ಪೋಪುದು ಹ್ಯಾಂಗೆ ಮುಂದೆ
ಪದುಮನಾಭ ತಪ್ಪು ಕ್ಷಮಿಸಯ್ಯ ತಂದೆ ೧

ಹೆಣ್ಣು ಹೊನ್ನು ಮಣ್ಣಿನಾಸೆಯೊಳಿದ್ದು
ಪುಣ್ಯಪಾಪಂಗಳ ನಾನರಿಯದಿದ್ದು
ಅನ್ಯಾಯವಾಯಿತು ಇದಕೇನು ಮದ್ದು
ನಿನ್ನ ಧ್ಯಾನವ ಕೊಡು ಹೃದಯದೊಳಿದ್ದು ೨

ಇಂದೆನ್ನ ಪೂರ್ವ ಪಾಪಂಗಳ ಕಳೆದು
ಮುಂದೆನ್ನ ಜನ್ಮ ಸಫಲವನ್ನು ಗೈದು
ತಂದೆ ಪುರಂದರವಿಠಲ ನೀ ಒಲಿದು
ಎಂದೆಂದಿಗಾನಂದ ಸುಖವನ್ನು ಸುರಿದು ೩

ಮೊದಲಿಂದ ಬರಬಾರದೆ—ಜೀವರ ಸ್ವರೂಪಜ್ಞಾನವನ್ನು ಮರೆಮಾಚಿ, ಸ್ವರೂಪಾನಂದವನ್ನು ತಪ್ಪಿಸಲು 'ಆದ್ಯಪರಾಧ ಅನ್ಯಥಾಜ್ಞಾನ'ವೇ ಕಾರಣ ; ಅದರಿಂದ ಹರಿಯವಿಸ್ಮರಣೆ. ಇದಿರದಿದ್ದರೆ ಜೀವರು ಸಂಸಾರಾವಸ್ಥೆಗೆ ಬರುತ್ತಿರಲಿಲ್ಲ.

ಮುಂದೆನ್ನ ಜನ್ಮ ಸಫಲವನ್ನು—ಜನ್ಮಸಾಫಲ್ಯವನ್ನು ; ಲಿಂಗದೇಹದ ಸಂಬಂಧವಾಗುವುದು (ಜನ್ಮ) ಜೀವರ ಸ್ವರೂಪದ ಉದ್ಧಾರಕಾಗಿ ; ಇದೇ ಜನ್ಮದ ಫಲ. ಇದು ಒದಗುವುದು ಬಿಂಬಾಪರೋಕ್ಷದಿಂದ ಅದಕ್ಕೆ ಸಾಧನೆಯಾಗಿ ಏಕಾಂತ ಭಕ್ತಿಯ ಅಗತ್ಯವಿದೆ. ಇದನ್ನು ನೀಡಬೇಕಾದವನೂ ಪರಮಾತ್ಮನೇ.

ಎಂದೆಂದಿಗಾನಂದ—ಮುಕ್ತರ ಆನಂದ ; ಅಪ್ರಾಕೃತವಾದದ್ದು.

೬೦

ಬಿಲಹರಿ | ಅಟ್ಟ

ಬರಿದೆ ಹೋಯಿತು ಹೋಯಿತು ಹೊತ್ತು ಪ

ನರಜನ್ಮ ಸ್ಥಿರವೆಂದು ನಾನಿದ್ದೆನೊ ರಂಗ ಅ

ಆಸೆ ಎಂಬುದು ಎನ್ನ ಕ್ಲೇಶಪಡಿಸುತಿದೆ
ಘಾಸಿಯಾದೆನೊ ಹರಿ ಶೇಷಶಾಯಿ
ವಾಸುದೇವನೆ ನಿನ್ನ ಧ್ಯಾನವ ಮಾಡದೆ
ನಾಶವಾಯಿತು ಜನ್ಮ ಮೋಸಹೋದೆನು ಕೃಷ್ಣ ೧

ಸತಿಸುತರೆಂದೆಂಬ ಅತಿ ಭ್ರಾಂತಿಗೊಳಗಾಗಿ
ಮತಿಹೀನನಾದೆನೊ ಚ್ಯುತಿದೂರನೆ
ಸತತ ವಿಷಯದಿಂದ ಹತನಾದೆ ಮನವೆನ್ನ
ಗತಿಗೆಡಿಸುತಿದೆ ಲಕ್ಷ್ಮೀಪತಿ ಸರ್ವೋತ್ತಮನೆ ೨

ಪರರ ಸೇವೆಯ ಮಾಡಿ ಪರರನ್ನೆ ಕೊಂಡಾಡಿ
ಮರುಳುತನದಲಿ ಮತಿಹೀನನಾದೆ
ನೆರೆನಂಬಿದೆನೊ ನಿನ್ನ ಕರುಣದಿಂದಲಿ ಎನ್ನ
ಮರೆಯದೆ ಸಲಹಯ್ಯ ಸಿರಿಪುರಂದರವಿಠಲ ೩

ಚ್ಯುತಿದೂರನೆ—ನಾಶವಿಲ್ಲದವನೆ ; ಅಚ್ಯುತನೆ.
ಸತತ—ಎಂದೆಂದೂ ಇರುವ.

೬೧

ಕಾಂಬೋದಿ — ಝಂಪೆ

ಇನ್ನಾದರೂ ಹರಿಯ ನೆನೆ ಕಂಡ್ಯ ಮನುಜ ಪ

ಮುನ್ನಾದ ದುಃಖವು ನಿಜವಾಗಿ ತೊಲಗುವುದು ಅ

ಊರೂರ ನದಿಗಳಲಿ ಬಾರಿಬಾರಿಗೆ ಮುಳುಗಿ
ತೀರದಲಿ ಕುಳಿತು ನೀ ಹಣೆಗೆ ನಿತ್ಯ
ನೀರಿನಲಿ ಮಟ್ಟಿಯನು ಕಲೆಸಿ ಬರೆಯುತ ಮೂಗು
ಬೇರನ್ನು ಹಿಡಿದು ಮುಸುಗಿಕ್ಕಲೇನುಂಟು ೧

ನೂರಾರು ಕರ್ಮಂಗಳನ್ನು ದಂಭಕೆ ಮಾಡಿ
ಆರಾರಿಗೋ ಹಲವು ದಾನಕೊಟ್ಟು
ದಾರಿದ್ರ್ಯವನು ಪಡೆದು ತಿರಿದುಂಬುವುದಕೀಗ
ದಾರಿಯಾಯಿತೆ ಹೊರತು ಬೇರೆ ಫಲವುಂಟೆ ೨

ನಾಡಾಡಿ ದೈವಗಳ ಚಿನ್ನ ಬೆಳ್ಳಿಗಳಿಂದ
ಮಾಡಿಕೊಂಡದರ ಪೂಜೆಯನು ಮಾಡೆ
ಕಾಡಕಳ್ಳರು ಬಂದು ಅವುಗಳನು ಕೊಂಡೊಯ್ಯೆ
ಮಾಡಿಕೊಂಡಿರ್ದುದಕೆ ಬಾಯ ಬಡುಕೊಳ್ಳುವೆಯೊ ೩

ಮಗನ ಮದುವೆಯು ಎಂದು ಸಾಲವನು ನೀ ಮಾಡಿ
ಸಂಗುಣಿಯೆನ್ನಿಸಿಕೊಳ್ಳಲು ವೆಚ್ಚಮಾಡಿ
ಹಗರಣವ ಪಡಿಸಿದರೆ ಸಾಲಗಾರರು ಬಂದು
ಬಗೆಬಗೆಯೊಳವರ ಕಾಲ್ಗೆರಗಿ ಬಿದ್ದಿರುವೆ ೪

ಕೆಟ್ಟ ಈ ಬದುಕುಗಳ ಮಾಡಿದರೆ ಫಲವೇನು
ಥಟ್ಟನೆ ಶ್ರೀಹರಿಯ ಪಾದವನು ನಂಬು
ದಿಟ್ಟ ಶ್ರೀ ಪುರಂದರವಿಠ್ಠಲಯೆಂದೆನಲು
ಸುಟ್ಟುಹೋಗುವುವಯ್ಯ ಕಷ್ಟರಾಶಿಗಳು ೫

ಮುನ್ನಾದ—ಪ್ರಾಚೀನ ಕರ್ಮವು.
ಮಟ್ಟಿಯನು—ಮಣ್ಣನ್ನು (ಗೋಪೀಚಂದನವನ್ನು).
ಮೂಗುಬೇರು—'ನಾಸಿಕಾಗ್ರ'ವೆಂಬ ಸಂಸ್ಕೃತಪದದ ಕನ್ನಡ ರೂಪ. ಈ ಸಾಲು ಪ್ರಾಣಾಯಾಮದ ವಿಧಿಯನ್ನು ಉಲ್ಲೇಖಿಸುತ್ತದೆ.
ನಾಡಾಡಿ ದೈವಗಳು—ನಾಡಿನಲ್ಲಿ ಬಳಕೆಯಲ್ಲಿರುವ ಗ್ರಾಮದೇವತೆಗಳು.

೬೨

ಕಾಂಬೋದಿ — **ಅಟ್ಟ**

ಋಣವೆಂಬ ಪಾತಕವು ಬಹು ಬಾಧೆಪಡಿಸುತಿದೆ ಪ

ಗುಣನಿಧಿಯೆ ನೀನೆನ್ನ ಋಣವ ಪರಿಹರಿಸೊ ಅ

ಒಡಲಿನಾಸೆಗೆ ಪರರ ಒಡವೆಗಳನೆ ತಂದು
ಬಿಡದೆ ವೆಚ್ಚವ ಮಾಡಿ ತೋಷ ಪಡುವೆ
ಕೊಡುವ ವೇಳೆಗೆ ಅವರ ಕೆಡು ನುಡಿಗಳನು ನುಡಿವೆ
ಕಡು ಮಹಾ ಪಾತಕವ ಪರಿಹರಿಸೊ ಹರಿಯೆ ೧

ಕೊಟ್ಟವರು ಬಂದೆನ್ನ ನಿಷ್ಠೂರಗಳನಾಡಿ
ಕೆಟ್ಟ ಬೈಗಳ ಬೈದು ಮನದಣಿಯಲು
ದಿಟ್ಟತನವನು ಬಿಟ್ಟು ಕಳೆಗುಂದಿದೆನಯ್ಯ
ಸೃಷ್ಟಿಗೊಡೆಯನೆ ಎನ್ನ ಋಣವ ಪರಿಹರಿಸೊ ೨

ಆಳಿದೊಡೆಯನ ಮಾತು ಕೇಳಿ ನಡೆಯಲಿಬಹುದು
ಊಳಿಗವ ಮಾಡಿ ಮನ ದಣಿಯಬಹುದು
ಕಾಳಗವ ಪೊಕ್ಕು ಕಡಿದಾಡಿ ಜಯಿಸಲಿಬಹುದು
ಪೇಳಲಳವಲ್ಲ ಋಣದವಗೊಂದು ಸೊಲ್ಲ ೩

ಹರಿವ ಹಾವನು ತೆಗೆದು ಶಿರಕೆ ಸುತ್ತಲುಬಹುದು
ಉರಿವ ಉರಿಯೊಳು ಪೊಕ್ಕು ಕುಣಿಯಬಹುದು
ಮುರಿವ ಮಾಳಿಗೆಗೆ ಕೈಯೊಡ್ಡಿ ನಿಲ್ಲಿಸಬಹುದು
ಧರೆಯೊಳಗೆ ಋಣದವನ ಜಯಿಸಲಳವಲ್ಲ ೪

ಹೆತ್ತ ಸೂತಕ ಮತ್ತೆ ಹತ್ತುದಿನ ಪರಿಯಂತ
ಮೃತ್ಯು ಸೂತಕವು ಹನ್ನೊಂದು ದಿವಸ
ಮತ್ತೆ ಋಣ ಸೂತಕವು ಜನ್ಮ ಜನ್ಮಾಂತರದಿ
ಎತ್ತ ಪೋದರು ಬಿಡದೆ ಬೆನ್ನಟ್ಟಬಹುದು. ೫

ಅವನ ಒಡವೆಗಳಿಂದ ದಾನ ಧರ್ಮವ ಮಾಡೆ
ಅವನಿಗಲ್ಲದೆ ಪುಣ್ಯ ಇವನಿಗುಂಟೆ ?
ಅವನ ದ್ರವ್ಯಗಳಿಂದ ತೀರ್ಥಯಾತ್ರೆಯಂ ಮಾಡೆ
ಇವನ ಜೀವನವು ಬಾಡಿಗೆ ಎತ್ತಿನಂತೆ ೬

ಬಂಧು ಜನಗಳ ಮುಂದೆ ಬಹು ಮಾನವು ಹೋಗಿ
ಅಂದವಳಿದೆನು ನಾನು ನೊಂದು ಋಣದಿ
ಇಂದಿರೆಯ ಅರಸ ಶ್ರೀ ಪುರಂದರವಿಠ್ಠಲನೆ
ಇಂದೆನ್ನ ಋಣವ ಪರಿಹರಿಸಯ್ಯ ದೊರೆಯೆ ೭

೬೩

ಕಾಂಬೋದಿ — ಆದಿ

ಆರು ಮುನಿದರೇನು ನಮಗಿನ್ನಾರು ಒಲಿದರೇನು ಪ

ಕ್ಷೀರಸಾಗರಶಯನ ಮುಕುಂದನ ಕರುಣವುಳ್ಳ ಹರಿದಾಸರಿಗೆ ಅ

ಹಡೆದ ತಾಯಿ ತಂದೆ ಅಣ್ಣ ತಮ್ಮಂದಿರು ಅಹಿತ ಮಾಡಿದರೇನು
ಮಡದಿ ಮಕ್ಕಳು ಮನ ಕಂಟಕದಿ ಮುನಿಸುಗುಟ್ಟಿದರೇನು
ಒಡನೆ ತಿರುಗುವ ಗೆಳೆಯರು ನಮ್ಮೊಳು ವೈರ ಬೆಳೆಸಿದರೇನು
ಕಡಲಶಯನನ ಕಾರುಣ್ಯರೂಪನ ಕರುಣವುಳ್ಳ ಹರಿದಾಸರಿಗೆ ೧

ಊರನಾಳುವ ದೊರೆಗಳು ನಮ್ಮನು ಹೊರಗೆ ಹಾಕಿದರೇನು
ಘೋರಾರಣ್ಯದಿ ತಿರುಗುವ ಮೃಗಗಳು ಅಡ್ಡಗಟ್ಟಿದರೇನು
ಮಾರಿಯು ಹಿಂಡು ಮಸಣಿಯ ದಂಡು ಮೈಗೆ ಮುತ್ತಿದರೇನು
ವಾರಿಜನಾಭನ ವಸುದೇವತನಯನ ಒಲುಮೆಯುಳ್ಳ ಹರಿದಾಸರಿಗೆ ೨

ಕಾನದೊಳಗಿನ ಕಾಲಸರ್ಪವು ಕಾಲಿಗೆ ಸುತ್ತಿದರೇನು
ಜೇನಿನ ದಂಡು ಕ್ರಿಮಿ ಕೀಟಗಳು ಚರ್ಮಕೆ ಮುತ್ತಿದರೇನು
ಭಾನು ಮಂಗಳ ಬುಧ ಶನಿಗಳ ವರಬಲವು ತಪ್ಪಿದರೇನು
ದೀನನಾಥ ಶ್ರೀಪುರಂದರವಿಠಲನ ಧ್ಯಾನವುಳ್ಳ ಹರಿದಾಸರಿಗೆ ೩

[ಹರಿ–ದಾಸನಾದವನು ಸಮಾಜದ ನಿಂದೆ ಸ್ತುತಿಗಳಿಗೆ ಲಕ್ಷ್ಯ ಮಾಡುವವನಲ್ಲ. ಗೃಹ ತ್ಯಾಗ, ಸೋದರರ ಕಪಟ, ಗೆಳೆಯರ ವೈರ, ರಾಜ್ಯತ್ಯಾಗ, ವನವಾಸ, ಗ್ರಹಚಾರ ಇವು ಯಾವುದಕ್ಕೂ ಹೆದರದೆ ಸಟೆದು ನಿಲ್ಲಬಲ್ಲ ಶಕ್ತಿ ಆ ಜೀವಕ್ಕಿದೆ.]

ಸೌರಾಷ್ಟ್ರ ಅಟ್ಟ

ಹತ್ತಿಗಿಡದ ಕೊನೆ ಹಗೆಯಾಗಿ ಬಡಿದ ಮೇ
ಲಿನ್ನೇನಿನ್ನೇನು ಸ
ಮಸ್ತರು ಹಗೆಯಾಗಿ ಸಾಧಿಸಿದ ಮೇ
ಲಿನ್ನೇನಿನ್ನೇನು ಪ
ಗಂಡುಮಕ್ಕಳೆಂಬೋರು ಪುಂಡರಾದ ಮೇ
ಲಿನ್ನೇನಿನ್ನೇನು
ಭಂಡು ಸಂಸಾರವು ಬಯಲಿಗೆ ಬಿದ್ದ ಮೇ
ಲಿನ್ನೇನಿನ್ನೇನು ೧
ನಗುವರ ಮುಂದಿಪ್ಪ ತಗಲಿ ಬಿದ್ದ ಮೇ
ಲಿನ್ನೇನಿನ್ನೇನು
ನಗುವವರಿಗೆ ನಾಲ್ಕು ನಾಲಿಗೆಯಾದ ಮೇ
ಲಿನ್ನೇನಿನ್ನೇನು ೨
ಮಾಡಿದ ಗಣಪತಿ ಮಂಗನಾದ ಮೇ
ಲಿನ್ನೇನಿನ್ನೇನು
ನೀಡಿದ ಮಕ್ಕಳು ಬಿಡದೆ ಕಚ್ಚಿದ ಮೇ
ಲಿನ್ನೇನಿನ್ನೇನು ೩
ಬಾವಿ ತೋಡಿದರೆ ಬೇತಾಳ ಹೊರಟ ಮೇ
ಲಿನ್ನೇನಿನ್ನೇನು
ಕಾವ ಬೇಲಿ ಎದ್ದು ಹೊಲವ ಮೆದ್ದ ಮೇ
ಲಿನ್ನೇನಿನ್ನೇನು ೪
ಹಾರೈಸಿದೆಲ್ಲವು ಹಳವಂಡವಾದ ಮೇ
ಲಿನ್ನೇನಿನ್ನೇನು
ಆರೈದು ಕೇಳಯ್ಯ ಪುರಂದರವಿಠಲ
ಇನ್ನೇನಿನ್ನೇನು ೫

[ಹಾರೈಸಿದ್ದೆಲ್ಲ ಹಳವಂಡವಾಗುವುದು, ಬಯಲ ಮರೀಚಿಕೆಯಾಗುವುದು ತುಂಬ ಯಾತನಾಮಯವಾದ ಒಂದು ಅನುಭವ. ದುರದೃಷ್ಟವು ಅಂಟಿಕೊಂಡಾಗ ಬಾಧಿತ ವ್ಯಕ್ತಿಗೆ ಎಲ್ಲೆಡೆಗಳಿಂದ ಏಟು ಬೀಳತೊಡಗುವುದುಂಟು. ಸದುದ್ದೇಶದಿಂದ ಮಾಡಿದ ಕಾರ್ಯಗಳೂ ದುಷ್ಫಫಲ ನೀಡುತ್ತವೆ—ವ್ಯಕ್ತಿ ತತ್ತರಿಸುವಂತೆ ಸಣ್ಣಪುಟ್ಟ ಸಂಗತಿಗಳೂ ಬೃಹದಾಕಾರವಾಗಿ ಬೆಳೆದು ಬಾಧಿಸುತ್ತವೆ.]

ಬಿಲಹರಿ ಅಟ್ಟ

ಹೆತ್ತ ತಾಯಿತಂದೆಗಳ ಚಿತ್ತವ ನೋಯಿಸಿ
ನಿತ್ಯ ದಾನವ ಮಾಡಿ ಫಲವೇನು
ಸತ್ಯ ಸದಾಚಾರ ಇಲ್ಲದವನು ಜಪ
ಹತ್ತು ಸಾವಿರ ಮಾಡಿ ಫಲವೇನು ೧

ತನ್ನ ಸತಿಸುತರು ಬಂಧುಗಳ ನೋಯಿಸಿ
ಚಿನ್ನದಾನವ ಮಾಡಿ ಫಲವೇನು
ಬಿನ್ನಣದಿಂದಲಿ ದೇಶದೇಶವ ತಿರುಗಿ
ಅನ್ನದಾನವ ಮಾಡಿ ಫಲವೇನು ೨

ಗೋಪ್ಯ ಗುಣ ಗುಟ್ಟು ಇಲ್ಲದ ಹೆಣ್ಣಿಗೆ
ರೂಪ ಯವ್ವನವಿದ್ದು ಫಲವೇನು
ತಾಪತ್ರಯದಿ ಸಂಸಾರ ಕೆಡಿಸುವಂಥ
ಪಾಪಿ ಮಗನು ಇದ್ದು ಫಲವೇನು ೩

ತಾಂಡವ ಧನದಿಂದ ತಂದೆ ಮಾತು ಕೇಳದ
ತೊಂಡ ಮಗನು ಇದ್ದು ಫಲವೇನು
ಭಂಡು ಮಾಡಿ ಅತ್ತೆ ಮಾವನ ಬೈವ
ಪುಂಡು ಸೊಸೆಯಿದ್ದು ಫಲವೇನು ೪

ಸ್ನಾನಕ್ಕೆ ಪಾನಕ್ಕೆ ಆಗುವ ತಿಳಿನೀರು
ಕಾನನದೊಳಗಿದ್ದು ಫಲವೇನು
ಆನಂದಮೂರುತಿ ಪುರಂದರವಿಠಲನ
ನೆನೆಯದ ತನುವಿದ್ದು ಫಲವೇನು ೫

ತಾಂಡವ ಧನದಿಂದೆ...—ದಿಕ್ಕುಗೆಟ್ಟು ಕುಣಿಯುವ ಕುರುಡು ಕಾಂಚಾಣದ ಬಲದಿಂದ ತಂದೆಯ ಮಾತನ್ನೇ ಲಕ್ಷ್ಯಮಾಡದ ತೊಂಡ (ಪೋಲಿ) ಮಗ.

ಪಂತುವರಾಳಿ ಏಕ

ನಗೆಯು ಬರುತಿದೆ ಎನಗೆ ನಗೆಯು ಬರುತಿದೆ ಪ

ಜಗದೊಳಿರುವ ಜಾಣರೆಲ್ಲ ಹಗರಣ ಮಾಡುವುದನೆ ಕಂಡು ಅ

ಪರರ ವನಿತೆಯೊಲುಮೆಗೊಲಿದು
ಹರುಷದಿಂದ ಅವಳ ಬೆರೆದು
ಹರಿವ ನೀರೊಳಗೆ ಮುಳುಗಿ
ಬೆರಳನೆಣಿಸುತಿಹರ ಕಂಡು ೧

ಪತಿಯು ಸೇವೆ ಬಿಟ್ಟು ಪರ
ಪತಿಯ ಕೂಡೆ ಸರಸವಾಡಿ
ಸತತ ಮೈಯ ತೊಳೆದು ಹಲವು
ವ್ರತವ ಮಾಳ್ಪ ಸತಿಯ ಕಂಡು ೨

ಹೀನ ಗುಣವ ಮನದೊಳಿಟ್ಟು
ತಾನು ವಿಷದಪುಂಜನಾಗಿ
ಮೌನಿ ಪುರಂದರವಿಠಲನ್ನ
ಧ್ಯಾನ ಮಾಡುವವನ ಕಂಡು ೩

[ಜಗತ್ತಿನ ಎಲ್ಲರೂ ಒಂದಲ್ಲ ಒಂದು ಬಗೆಯ ಹಗರಣ (ನಾಟಕ) ದಲ್ಲಿ ಪಾತ್ರಧಾರಿಗಳೇ ಆಗಿದ್ದಾರೆ. ವ್ರತ, ಆಚಾರ, ಧ್ಯಾನ ಇವು ಬಹಿರಂಗ ವೇಷ ಭೂಷಣಗಳು. ಆದರೆ ಅವರ ಮನಸ್ಸು ಪರವನಿತೆಯರಲ್ಲಿ ಆಸಕ್ತವಾಗಿರುತ್ತದೆ. ಮನಸ್ಸಿನಲ್ಲಿ ಹೀನ ಗುಣ ಇರುತ್ತದೆ. ಒಳಗೆ ವಿಷ ತುಂಬಿಕೊಂಡಿರುತ್ತದೆ. ಹೀಗೆ ಅಂತರಂಗ–ಬಹಿರಂಗ ಎರಡೂ ರಂಗಗಳಲ್ಲಿ ಆಯಾ ಸಂದರ್ಭಕ್ಕೆ ತಕ್ಕ ವೇಷ ಹಾಕುವ ಹಗರಣಿಗರನ್ನು ಕಂಡು ಪುರಂದರದಾಸರು ನಗುತ್ತಿದ್ದಾರೆ.]

ಬೆರಳನೆಣಿಸುತಿಹರ—ಜಪ ಮಾಡುತ್ತಿರುವವರನ್ನು.

ಮೌನಿ—ಹೃದಯದೊಳಗೇ ಪ್ರೇರಕನಾಗಿ, ನಿಯಾಮಕನಾಗಿ ಆದರೆ ಕೇವಲ ಸಾಕ್ಷಿಯಾಗಿ (ಮೌನಿ) ಇರುವ ಬಿಂಬರೂಪಿ ಪರಮಾತ್ಮ.

ಕಾಂಬೋದಿ ಝಂಪೆ

ಶಕ್ತನಾದರೆ ನಂಟರೆಲ್ಲ ಹಿತರು ಅ ಪ

ಶಕ್ತನಾದರೆ ನೋಡಲವರೆ ವೈರಿಗಳು ಅ

ಕಮಲ ಅರ್ಕನಲಿರುವ ಕಡುನಂಟತನದಿಂದ
ವಿಮಲ ಜಲದೊಳಗೆ ಓಲಾಡುತಿಹುದು
ಕ್ರಮುಗೆಟ್ಟು ನೀರಿಂದ ಕಡೆಗೆ ಬೀಳಲು ರವಿಯು
ಅಮಿತ ಕಿರಣಗಳಿಂದ ಕಂದಿಹೋಗುವುದು ೧

ವನಸುತ್ತಿ ಸುಡುವಾಗ ವಾಯು ಬೀಸಲು ಉರಿಯು
ಘನ ಪ್ರಜ್ವಲಿಸುತಿಹುದು ಗಗನಕಡರಿ
ಮನೆಯೊಳಿಹ ದೀಪಕೆ ಮಾರುತನು ಸೋಂಕಿದರು
ಘನಶಕ್ತಿಯುಡುಗಿ ತಾ ನಂದಿಹೋಗುವುದು ೨

ವರದ ಶ್ರೀ ಪುರಂದರವಿಠಲನು ಒಲಿದಿರಲು
ಸರುವ ಜನರೆಲ್ಲ ಮೂಜಗದಿ ಹಿತರು
ಕರಿಯು ಕಾಯಿದ ಹರಿಯು ಕರುಣ ತಪ್ಪಿದಮೇಲೆ
ಮೊರೆಯ ಹೊಕ್ಕರು ಕಾಯ್ವ ಹಿತವರಾರಯ್ಯ ೩

[ನಮಗೆ ಆಶ್ರಯ ನೀಡುವ ಶಕ್ತಿ ಇರುವ ತನಕ ನಮ್ಮನ್ನು ಎಲ್ಲಾ ಆಶ್ರಯಿಸುತ್ತಾರೆ. ಆದರೆ ವ್ಯಕ್ತಿಯಲ್ಲಿ ಈ ಗುಣ ಕಾರಣಾಂತರದಿಂದ ಕುಂಠಿತಗೊಂಡರೆ ಹಿಂಬಾಲಕರ ದಂಡು ನಮ್ಮನ್ನು ನಿರಾಕರಿಸುವುದಲ್ಲದೆ ತುಚ್ಛವಾಗಿಯೂ ಕಾಣುತ್ತದೆ.]

ಕಮಲ ಅರ್ಕನಲಿರುವ...—ತಾವರೆಗೂ ಸೂರ್ಯನಿಗೂ ಎಲ್ಲಿಲ್ಲದ ನಂಟು. ಅದು ನೀರಲ್ಲಿ ಹುಟ್ಟಿ ಅರಳಿರುವ ತನಕ ಸೂರ್ಯ ಅದನ್ನು ರಮಿಸುತ್ತಾನೆ. ಆದರೆ ಆ ಹೂವು ನೀರಿನ ನಂಟನ್ನು ಬಿಟ್ಟು ನೀರಿಂದ ಉದುರಿ ಬಿದ್ದರೆ ಅದೇ ಸೂರ್ಯನು ಆ ಹೂವನ್ನು ನಿರ್ದಾಕ್ಷಿಣ್ಯವಾಗಿ ಒಣಗಿಸುತ್ತಾನೆ.

ಸರುವ—ಸರ್ವ, ಎಲ್ಲ.

ಕರಿಯು ಕಾಯಿದ—ಗಜೇಂದ್ರಮೋಕ್ಷ ಸಂದರ್ಭ.

ಮುಖಾರಿ ಝಂಪೆ

ಏನು ಮಾಡಿದರೇನು ಭವ ಹಿಂಗದು
ದಾನವಾಂತಕ ನಿನ್ನ ದಯವಾಗದನಕ ಪ

ಅರುಣೋದಯದಲೆದ್ದು ಅತಿಸ್ನಾನಗಳ ಮಾಡಿ
ಬೆರಳೆಣಿಸಿದೆ ಆದರ ನಿಜವರಿಯದೆ
ಚರಣ ಸಾಷ್ಟಾಂಗವನು ಮಾಡಿ ನಾ ದಣಿದೆನೊ
ಹರಿ ನಿನ್ನ ಕರುಣಕಟಾಕ್ಷವಾಗದನಕ ೧

ಶ್ರುತಿಶಾಸ್ತ್ರ ಪುರಾಣಗಳನೋದಿ ಬೆಂಡಾದೆ
ಅತಿಶೀಲಗಳನೆಲ್ಲ ಮಾಡಿ ದಣಿದೆ
ಗತಿಯು ಪಡೆವೆನೆಂದು ಕಾಯ ದಂಡಿಸಿದೆನೊ
ರತಿಪತಿಪಿತ ನಿನ್ನ ದಯವಾಗದನಕ ೨

ಧ್ಯಾನವನು ಮಾಡಿದೆನು ಮೌನವನು ತಾಳಿದೆನು
ನಾನು ಪುರುಷಾರ್ಥಕೆ ಮನವನಿಕ್ಕಿ
ಅನಾಥ ಬಂಧು ಶ್ರೀ ಪುರಂದರವಿಠಲನ
ಧ್ಯಾನಿಸುವರೊಡಗೂಡಿ ನೆಲೆಗಾಣದನಕ ೩

ಪುರುಷಾರ್ಥಕೆ—ಜನ್ಮಸಾಫಲ್ಯಕ್ಕೆ.

ಮುಖಾರಿ ಅಟ್ಟ

ಯಾಕೆನ್ನೊಳಿನಿತು ಕೃಪೆಯಿಲ್ಲ ಹರಿಯೆ ಪ

ಕಾಕುಮಾಡದೆ ಕಾಯೊ ಭವದೊಳಗೆ ಬಳಲಿದೆನು ಅ

ಕಂದರ್ಪ ಬಾಧೆಯಿಂ ಮಾನಿನಿಯ ವಶನಾಗಿ
ಮಂದಮತಿಯಿಂದ ಬಲು ಮರುಳಾದೆನೊ
ಸಂದಿತೈ ಯೌವನವು ಬುದ್ಧಿ ಬಂದಿತು ಈಗ
ಸಂದೇಹ ಪಡದೆ ನೀ ಕರುಣಿಸೈ ಎನ್ನ ೧

ಹೆಂಡತಿಯು ಕಡೆಗಣ್ಣಿನಿಂದ ನೋಡುವಳೀಗ
ಹಿಂಡು ಮಕ್ಕಳು ಎನ್ನ ಕಾಡುತಿಹರು
ಮುಂಡವೋಚಿದೆ ನಾನು ಇನ್ನಾರು ಗತಿ ಎನಗೆ
ಪುಂಡರೀಕಾಕ್ಷ ನೀ ಕರುಣಿಸೈ ಎನ್ನ ೨

ಅಟ್ಟವೇಲೆ ಒಲೆಯು ಉರಿವಂತೆ ಎನಗೀಗ
ಕೆಟ್ಟಮೇಲೆ ಅರಿವು ಬಂದಿತಯ್ಯ
ನೆಟ್ಟನೆ ಪುರಂದರವಿಠಲನೆ ಕೈ ಬಿಡದೆ
ದೃಷ್ಟಿಯಿಂದಲಿ ನೋಡಿ ಪರಿಪಾಲಿಸಯ್ಯ ೩

ಕಾಕುಮಾಡದೆ—ನನ್ನನ್ನು ಕೆಟ್ಟವನೆಂದೆನಿಸದೆ.
ಕಂದರ್ಪ ಬಾಧೆಯಿಂ—ಕಾಮಪರವಶನಾಗಿ.
ಸಂದಿತೈ—ಹೋಯಿತು.
ಮುಂಡವೋಚಿದೆ—ವಿಧವೆಯರಂತೆ ತಲೆಯಮೇಲೆ ಸೆರಗೆಳೆದುಕೊಂಡೆ.
ಅಟ್ಟಮೇಲೆ—ಅಡುಗೆಯಾದಮೇಲೆ.
ದೃಷ್ಟಿಯಿಂದಲಿ—ಉದ್ಧರಿಸಬೇಕೆಂಬ ಕರುಣಾದೃಷ್ಟಿಯಿಂದ.

ಬಿಲಹರಿ ಅಟ್ಟ

ಕಾಯಬೇಕೆನ್ನ ಗೋಪಾಲ, ಒಂದು
ಪಾಯವನರಿಯೆನು ಭಕುತರ ಪಾಲ ಪ

ಹಲವು ಜನ್ಮಗಳೆತ್ತಿ ಬಂದೆ, ಮಾಯಾ
ಬಲವೆಂಬುದರಿಯದೆ ಭವದೊಳು ನೊಂದೆ
ಬಲು ಭಯವಾಯಿತು ಮುಂದೆ, ನೀನು
ಸುಲಭನೆಂದು ಕೇಳಿ ಶರಣೆಂದೆ ತಂದೆ ೧

ವಿತ್ತದೊಳಗೆ ಮನವಿಟ್ಟು, ನಿನ್ನ
ಉತ್ತಮ ನಾಮದ ಸ್ಮರಣೆಯ ಬಿಟ್ಟು
ಮತ್ತನಾದೆ ಮತಿಗೆಟ್ಟು, ಇದ
ಚಿತ್ತದಲಿ ತಿಳಿದು ಬಲು ದಯವಿಟ್ಟು ೨

ಉರುತರ ಪಾಪಂಗಳೆಲ್ಲ, ಅನ್ಯ
ನರರೇನ ಬಲ್ಲರು ಯಮ ಧರ್ಮ ಬಲ್ಲ
ನರಕಕ್ಕೆ ಒಳಗಾದೆನಲ್ಲ, ಸಿರಿವರ
ನಾರಾಯಣ ಪುರಂದರವಿಠಲ ೩

ಮಾಯಾಬಲ—'ಆದ್ಯಪರಾಧ ಅನ್ಯಥಾಜ್ಞಾನ, ದ್ವಿತೀಯಂ ಹರಿಯ ವಿಸ್ಮರಣೆ' ; ಇದರಿಂದ ಅಹಂಕಾರ ಮಮಕಾರಗಳು ಒದಗುವುದು ; ತಾನೇ ಸ್ವತಂತ್ರ ಕರ್ತೃ, ಭೋಕ್ತೃ ಎಂದು ತಿಳಿಯುವುದು. ಇದೇ ಮಾಯೆಯ ಬಲ.

ಸುಲಭ—ಕೇವಲ ಭಕ್ತಿಗೆ ವಶನಾಗುವವನು.

ಉರುತರ ಪಾಪಂಗಳು—ಘೋರವಾದ ಪಾಪಗಳು.

ಭೈರವಿ ತ್ರಿವಿಡೆ

ಕೆಟ್ಟೆನಲ್ಲೋ ಹರಿಯೆ ಪ

ಸಿಟ್ಟು ಮಾಡಿ ಎನ್ನ ಬಿಟ್ಟು ಕಳೆಯಬೇಡ ಅ

ಬಂದೆನು ನಾ ತಂದೆ ತಾಯಿಗಳುದರದಿ
ಒಂದು ಅರಿಯದೆ ಬಾಲಕ ತನದೊಳು
ಮುಂದುವರಿದ ಯೌವನದೊಳು ಸತಿಸುತ
ರಂದವ ನೋಡುತ ನಿನ್ನ ನಾ ಮರೆತೆನೊ ೧

ಸ್ನಾನ ಸಂಧ್ಯಾನವು ಹೀನವಾಯಿತು ಬಹು
ಮಾನವಿಲ್ಲದೆ ಕುಲಹೀನರಾಶ್ರಯದಿಂದ
ಜ್ಞಾನಿಗಳೊಡನಾಟವಿಲ್ಲದೆ ಮನದೊಳು
ದಾನಧರ್ಮದ ಬಟ್ಟೆಗಾಣದೆ ಮರೆತೆನೊ ೨

ಮೊದಲೆ ಬುದ್ಧಿಯು ಹೀನವದರೊಳು ವೃದ್ಧಾಪ್ಯ
ಕದನವು ದಶದಿಕ್ಕಿನುದಯದ ರಾಯರ
ಎದೆನೀರು ಬತ್ತಿತು ಅದರಿಂದ ನಿನ್ನಯ
ಪದಪದ್ಮಯುಗಳದ ತುದಿಯ ನಾ ಮರೆತೆನೊ ೩

ಮೂಢನಾದೆನೊ ನಿನ್ನ ಬೇಡಿಕೊಳ್ಳದೆ ನಾನು
ಕಾಡೊಳಗಾಡುವ ಕಪಿಯಂತೆ ಜೀವಿಸಿ
ಗೂಡೊಳಗಿರುತಿಹ ಗೂಬೆಯ ತೆರನಂತೆ
ಮಾಡದೆ ನಿನ್ನಯ ಸ್ಮರಣೆಯ ಮರೆತೆನೊ ೪

ಬುದ್ಧಿಹೀನನು ನಾನು ಉದ್ಧರಿಸೆಲೋ ದೇವ
ಮುದ್ದು ಶ್ರೀ ಪುರಂದರವಿಠಲನೆ ಎನ್ನ
ಬುದ್ಧಿಯೊಳಡಗಿದ್ದು ತಿದ್ದಿಟ್ಟು ನಡೆಸಯ್ಯ
ಪೊದ್ದುವೆ ನಿನ್ನಯ ಚರಣಾರವಿಂದವ ೫

ಬಟ್ಟೆಗಾಣದೆ—ದಾರಿಗಾಣದೆ (ವರ್ತ್ಮ ಎಂಬುದರ ತದ್ಭವ ಬಟ್ಟೆ).
ಪೊದ್ದುವೆ—ಹೊಂದುವೆ.

೭೩

ಶಂಕರಾಭರಣ ಅಟ್ಟ

ಹೆಣ್ಣು ಕೊಟ್ಟತ್ತೆಮಾವಂದಿರ ಮನೆಯಲ್ಲಿ
ಸೇರಿಯಿರುವರೆ ಎಲೆ ಮನುಜ ಪ

ಬಂದ ಮೊದಲು ಇತ್ತ ಬನ್ನಿ ಕುಳ್ಳಿರೆಂದು ಬಲು ಉಪಚರಿಸುವರು
ಅಂದಿನ ಮರುದಿನ ಬಂದ ಸ್ನೇಹಿತರನ್ನ ಕಂಡಂತೆ ಕಾಣುವರೊ
ಬಂದ ಮೂವರಲ್ಲಿ ಪರದೇಶಿಯ ಕಂಡಂತೆ ಸಡ್ಡೆ ಮಾಡದೆ ಇಹರೊ
ಮುದದಿಂದ ನಾಲ್ಕು ದಿವಸ ಇದ್ದರೆ ಮಾನಭಂಗಮಾಡಿ ಮಾತಾಡುವರೋ ೧

ಐದನೆ ದಿನದಲಿ ಆಕಳು ಬರಲಿಲ್ಲ ಅರಸಿತರಬೇಕೆಂಬರೊ
ಇಂದೆಮ್ಮೆಗೆ ಕಲಗಚ್ಚನಿಕ್ಕದೆ ಎಲ್ಲಿ ಹೋದಿರೆಂಬರೊ
ಬೀದಿಯಲ್ಲಿ ಕಸ ಬೆಟ್ಟದಂತೆ ಬಿದ್ದಿದೆ ಭೇದವೆ ನಿಮಗೆಂಬರೊ
ಹಾದಿಯಲಿ ಬೆಳೆದಿರುವ ಹುಲ್ಲುಗಳ ಕಿತ್ತು ತರಬಾರದಿತ್ತೆ ಎಂಬರೊ ೨

ಷಷ್ಠಿಯ ದಿನದಲ್ಲಿ ಅಟ್ಟಡಿಗೆಲ್ಲ ಆರಿಹೋಯಿತು ಎಂಬರೊ
ಎಷ್ಟೆಂತ ನಿಮ್ಮ ಭಾನಸ ಪಳಬಾರದೆ ಎಂಬರೊ
ಅಷ್ಟಮ ಶನಿಯಿದು ಬಿಟ್ಟುಹೋಗದು ನಮಗೆ ಆಳವಿಲ್ಲ ಎಂತೆಂಬರೊ
ಇಷ್ಟು ಬಿಟ್ಟು ಶ್ರೀ ಪುರಂದರವಿಠಲನ ಇಹಪರವಿರಿಸಿಕೊಳ್ಳೊ ಮನುಜ ೩

ಬಂದ ಮೂವರಲ್ಲಿ...—ಮನೆಗೆ ಹೊರಗಿನವರು ಬಂದಾಗ ಅಳಿಯನ ಬಗೆಗೆ ಸಡ್ಡೆ (ಶ್ರದ್ಧೆ) ತೋರುವುದಿಲ್ಲ. (ಅವರೆಲ್ಲರ ಎದುರಿಗೆ ಅವಮಾನವಾಗುತ್ತದೆ ಎಂಬ ಭಾವ).

ಪರದೇಶಿ—ದಿಕ್ಕಿಲ್ಲದವನು.

ಅರಸಿ—ಹುಡುಕಿ.

ಭೇದವೆ—'ನನ್ನ ಮನೆಯಲ್ಲ, ನಿಮ್ಮಮನೆ' ಎಂಬ ಒಡಕು ಬುದ್ಧಿಯೋ ?

ಷಷ್ಠಿಯ ದಿನದಲ್ಲಿ—ಆರನೆಯ ದಿನ.

ಅಟ್ಟಡಿಗೆ—ಬೇಯಿಸಿದ ಅಡುಗೆ.

ಭಾನಸ—'ಭಾಂದಸ' ಎನ್ನುವ ಮಾತಿನ ಕನ್ನಡರೂಪ ; ಮುಡಿವಂತಿಗೆ, ಹೀಗೆಯೇ ಆಗಬೇಕೆಂಬ ಹಟಮಾರಿತನ.

ಆಳವಿಲ್ಲ—ಸುಧಾರಿಸಲು ಶಕ್ತಿಯಿಲ್ಲ.

೭೪

ಬೇಹಾಗು ಆದಿ

ಮಡಿ ಮಡಿ ಮಡಿಯೆಂದಡಿಗಡಿಗ್ಹಾರುತಿ
ಮಡಿ ಮಾಡುವ ಬಗೆ ಬೇರುಂಟು ಪ

ಪೊಡವಿ ಪಾಲಕನ ಪಾದ ಧ್ಯಾನವನು
ಬಿಡದೆ ಮಾಡುವುದು ಅದು ಮಡಿಯು ಅ

ಬಟ್ಟೆಯ ನೀರೊಳಗದ್ದಿ ಒಣಗಿಸಿ
ಉಟ್ಟುಕೊಂಡರೆ ಅದು ಮಡಿಯಲ್ಲ
ಹೊಟ್ಟೆಯೊಳಗಿನ ಕಾಮಕ್ರೋಧವ
ಬಿಟ್ಟು ನಡೆದರೆ ಅದು ಮಡಿಯು ೧

ಇಚ್ಛೆಯಿಂದ ಮಲ ಮೂತ್ರ ಶರೀರವ
ನೆಚ್ಚಿ ತೊಳೆಯಲು ಅದು ಮಡಿಯೆ
ಅಚ್ಯುತಾನಂತನ ನಾಮವ ನೆನೆದು
ಸಂಚಿತಕಳೆವುದು ಅದು ಮಡಿಯು ೨

ಹಸಿದು ಭೂಸುರರು ಮಧ್ಯಾಹ್ನ ಕಾಲದಿ
ಕುಸಿದು ಮನೆಗೆ ಬಳಲುತ ಬರಲು
ಹುಸಿಯುತನದಿ ಗತಿಯಿಲ್ಲವೆಂದು ತಾ
ಹಸನಾಗಿ ಉಂಬುವುದೆ ಹೊಲೆ ಮಡಿಯು ೩

ದಶಮಿ ದ್ವಾದಶಿ ಪುಣ್ಯ ಕಾಲದಲಿ
ವಸುದೇವ ಸುತನನು ಪೂಜಿಸದೆ
ದೋಷಕಂಜದೆ ಪರರನ್ನವ ಭುಂಜಿಸಿ ಯಮ
ಪಾಶಕೆ ಬೀಳ್ವುದು ಅದು ಮಡಿಯೆ ೪

ಹಿರಿಯರ ಗುರುಗಳ ಹರಿದಾಸರುಗಳ
ಚರಣಕೆರಗಿ ಬಲು ಭಕುತಿಯಲಿ
ಪರಿಪಾಲಿಸು ಎಂದು ಪುರಂದರವಿಠಲನ
ಇರುಳು ಹಗಲು ನೆನೆವುದೆ ಮಡಿಯು ೫

ಸಂಚಿತ—ಕರ್ಮಗಳಲ್ಲಿ ಒಂದು ಬಗೆ ; ಜನ್ಮಾಂತರಗಳಿಂದ ಅನುಸರಿಸಿ ಬಂದದ್ದು.
ಪುಣ್ಯಕಾಲದಲಿ—ಸಂಕ್ರಮಣ, ಗ್ರಹಣ ಇತ್ಯಾದಿ ಕಾಲಗಳಲ್ಲಿ.

ಭಾಗ ೨

ಸಮಾಜ ಚಿಂತನ

ಬೂಟಕತನ
ಸ್ವಭಾವ ವಿಶ್ಲೇಷಣೆ
ಹೆಣ್ಣು ಹೊನ್ನು ಮಣ್ಣು

ಬೂಟಕತನ

'ಹೊತ್ತುಹೊತ್ತಿಗೆ ಹಲವು ಲಂಪಟತನದಲಿ ಚಿತ್ತಚಂಚಲ'ವಾಗುತ್ತದೆ ಎಂದು ಪುರಂದರದಾಸರು ಒಂದು ಸಂದರ್ಭದಲ್ಲಿ ಹೇಳಿದ್ದಾರೆ. ಈ 'ಲಂಪಟತನ'ದ ಹೊರಗಿನ ಮುಖವಾಡವೇ ಬೂಟಕತನ. ಬೂಟಕತನ ಎಂದರೆ ವಂಚನೆ, ಕಪಟ, ಒಳಗೊಂದು ಹೊರಗೊಂದುತನ. ಬೂಟಕತನವನ್ನು 'ಬಯಲಡಂಭ' ಎಂದು ಪುರಂದರದಾಸರೇ ವ್ಯಾಖ್ಯಾನಿಸಿದ್ದಾರೆ. ಬೂಟಕರನ್ನು ಅವರು 'ನಾಟಕದ ಸ್ತ್ರೀ'ಗೆ ಹೋಲಿಸಿರುವುದು ಸೂಕ್ತವಾಗಿದೆ. ನಾಟಕಗಳಲ್ಲಿ ಸ್ತ್ರೀ ಪಾತ್ರ ಮಾಡುವವರು ಪುರುಷರೇ ತಾನೆ. ಹಾಗೆಯೇ ಸಮಾಜದಲ್ಲಿ ತಮ್ಮ ಮೆರೆತಗಳಿಂದ ಪ್ರಸಿದ್ಧರಾಗಬಯಸುವ ವ್ಯಕ್ತಿಗಳಿರುತ್ತಾರೆ. ಇಂಥವರು ಬೆಳ್ಳಕ್ಕಿಯಂತೆ ತಪೋಭಂಗಿಯಲ್ಲಿ ನಿಲ್ಲುತ್ತಾರೆ. ಆದರೆ ಬೇಟೆ ಇವರ ಉದ್ದೇಶ. ಮುಂದೆ ಭಲಾ ಎನ್ನುತ್ತಾರೆ, ಹಿಂದೆ ಆಡಿಕೊಳ್ಳುತ್ತಾರೆ. ಅವರ ತುದಿನಾಲಗೆ ಬೆಲ್ಲ, ಎದೆ ಕತ್ತರಿ. ತಾವು ಹೊರಗಿನ ಲೋಕಕ್ಕೆ ಚೆನ್ನಾಗಿ, ಸಂಭಾವಿತರಂತೆ, ಜ್ಞಾನಿಗಳಂತೆ, ನಿಸ್ಪೃಹರಂತೆ ಕಾಣಿಸಿಕೊಳ್ಳಲು ಈ ಜನ ಅಬ್ಬರದ ಪ್ರಚಾರದಲ್ಲಿ ತೊಡಗುತ್ತಾರೆ. ಇಂಥವರಿಂದ ಸಮಾಜಕ್ಕೂ ಹಿತವಿಲ್ಲ, ಆತ್ಮೋದ್ಧಾರವೂ ಸಾಧ್ಯವಿಲ್ಲ. ಅಂತರಂಗ ಬಹಿರಂಗಗಳಿಗೆ ನಂಟು ಬೆಸೆಯಲಾಗದೆ ಹೀಗೆ ಸಿಡಿದುಹೋಗುತ್ತಿರುವ ವ್ಯಕ್ತಿಗಳ ಇಬ್ಬಂದಿತನವನ್ನು ದಾಸರು ಹತ್ತಾರು ನಿದರ್ಶನಗಳಿಂದ ಸ್ಪಷ್ಟಪಡಿಸಿದ್ದಾರೆ. ಸಮಾಜವು ಬಯಸುವ ಆದರ್ಶಗಳ ಎತ್ತರಕ್ಕೆ ಏರುವ ಸಾಮರ್ಥ್ಯ ಇಲ್ಲದವರು ತಮ್ಮ ಮಿತಿಯನ್ನು ತಿಳಿದು ಸುಮ್ಮನಿದ್ದರೆ ಒಳ್ಳೆಯದು. ಆದರೆ ಲೌಕಿಕ ಪ್ರಯೋಜನಗಳಿಗಾಗಿ, ತಮ್ಮ ಸಿದ್ಧಿ ದೊಡ್ಡದೆಂದು ಬಾಯಿಬಡಿಯಲು ಹೋಗುವ ಜನರ ಈ ದ್ವಂದ್ವ ನೀತಿಯಿಂದ ಸಮಾಜಕ್ಕೆ ಹೆಚ್ಚಿನ ಅಪಾಯವಿದೆ.

ಬೂಟಕರ ಒಂದು ದೊಡ್ಡ ಕೊರತೆಯೆಂದರೆ ನಡೆ–ನುಡಿಗಳ ನಡುವೆ ಅವರು ಸೃಷ್ಟಿಸುವ ದೊಡ್ಡ ಕಂದಕ. ಸಮಾಜದಲ್ಲಿ ಪೂಜ್ಯಸ್ಥಾನದಲ್ಲಿರುವ ಸಂನ್ಯಾಸಿಗಳಿಗೂ ಈ ಜಾಡ್ಯವಿದೆಯಲ್ಲ ಎಂದು ಮರುಗಿ ಪುರಂದರದಾಸರು 'ಕಾವಿಯನುಟ್ಟು ತಿರುಗುವಿರಲ್ಲ, ಕಾಮವ ಬಿಡಲಿಲ್ಲ' ಎಂದು ಆಪಾದಿಸುತ್ತಾರೆ. ಸ್ವಾಮಿಗಳೇ ಇಂಥವರಾದ ಮೇಲೆ ಇನ್ನು ಅನುಯಾಯಿಗಳನ್ನು ಕೇಳಬೇಕೆ ? ಮುಹೂರ್ತವನ್ನು ನಿಶ್ಚಯಿಸಲಾಗದವನು ಪುರೋಹಿತನಾಗಿ ಮೆರೆಯುಬಯಸುತ್ತಾನೆ. ಕಂಡ ನಾರಿಗೆ ಇಚ್ಛೈಸುವ ಲಂಡ, ಪುರಾಣ ಕಥನ ಮಾಡುತ್ತಾನೆ. ನಿತ್ಯ ಕಾಗೆಯ ಹಾಗೆ ಇವರು ಕೊಳದಲ್ಲಿ ಮಿಾಯುತ್ತಾರೆ. ಸ್ನಾನಮಾಡಿ 'ರೋಗ ಬಂದ ಎಮ್ಮೆಯ ಹಾಗೆ' ಮೈಗೆಲ್ಲ ನಾಮ ವಿಭೂತಿ ಗಂಧಗಳ ಬರೆ ಎಳೆದುಕೊಳ್ಳುತ್ತಾರೆ. ಕೈಯಲ್ಲಿ ಜಪಮಣಿ, ಬಾಯಲ್ಲಿ ಮಂತ್ರ, ಮುಖಕ್ಕೆ ಮುಸುಕು ಹಾಕಿ ಹೊರಗೆ ಸಾತ್ತ್ವಿಕರಂತೆ ಕಾಣಿಸಿಕೊಳ್ಳುವ ಇವರು ಪರಸ್ತ್ರೀ, ಪರಧನಗಳನ್ನು ಕುರಿತು ಚಿಂತಿಸುವ ಜನ. ತೀರ್ಥಯಾತ್ರೆಯಲ್ಲಿ ಮೈತೊಳೆಯುವ ಈ ಜನ ಮನಸ್ಸನ್ನೇ ತೊಳೆದುಕೊಳ್ಳುವುದಿಲ್ಲ. ವ್ರತ ನೇಮಗಳ ಹೆಸರಿನಲ್ಲಿ ಕೆಲವು

ಬಗೆಯ ಹಣ್ಣು, ತರಕಾರಿಗಳನ್ನು ತಿನ್ನುವುದನ್ನು ನಿಲ್ಲಿಸುತ್ತಾರೆಯೇ ಹೊರತು ಆಕಾಂಕ್ಷೆಗಳನ್ನು ಹತ್ತಿಕ್ಕುವ ದೃಢ ಮನಸ್ಸು ಮಾಡುವುದಿಲ್ಲ, ಅತ್ತ ಯಾತ್ರೆ ಹೋಗುತ್ತಾರೆ. ಇತ್ತ ಮಾತೆಪಿತರನ್ನು ಬಳಲಿಸುತ್ತಾರೆ, ನೆಂಟರನ್ನು ಮನೆಗೆ ಬರಮಾಡಿಕೊಳುತ್ತಾರೆ, ಕುಂಟಸುದ್ದಿಯನ್ನು ಹರಟುತ್ತಾರೆ.

"ಸಟೆಯನ್ನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ"

ಎಂದು ಪುರಂದರದಾಸರು ಇಬ್ಬಂದಿತನದ ವ್ಯಕ್ತಿಗಳ ವರ್ತನೆಯನ್ನು ಖಂಡಿಸುತ್ತಾರೆ. ಒಂದುಕಡೆ ಆತ್ಮಸಂಪತ್ತಿನ ಕೊರತೆಯ ಪೊಳ್ಳುತನ, ದೊಡ್ಡದನ್ನು ಸಾಧಿಸಲು ಬೇಕಾದ ಸಾಧನ ಸಾಮಗ್ರಿಯ ಅಭಾವ. ಇನ್ನೊಂದು ಕಡೆ ಯಾವ ಹೊಂದಾಣಿಕೆಗೂ ಬಗ್ಗದ ಉನ್ನತ ಆದರ್ಶಗಳು, ಜೀವನ ಮೌಲ್ಯಗಳು. ಇವೆರಡರ ನಡುವಣ ಅಂತರ ಎರಡು ಧ್ರುವಗಳಷ್ಟು ದೂರದ್ದು. ಆದರೆ ಕೀಳುದರ್ಜೆಯ ಮಾಲಿಗೆ ಉತ್ತಮ ಸರಕಿನ ಬೆಲೆಯನ್ನು ಗಿಟ್ಟಿಸಿಕೊಳ್ಳಲು ಅದ್ಭುತವಾದ ಜಾಹೀರಾತಿನ ತಂತ್ರವನ್ನು ಬಳಸುವುದು ವ್ಯಾಪಾರಿಗಳ ತಂತ್ರವಾಗಿರುವಂತೆ ಈ ಬೂಟಕವೃತ್ತಿಯ ಜನ ಸಂತತವಾಗಿ ನಟನೆಯನ್ನು ಮಾಡುವುದರ ಮೂಲಕ ತಮ್ಮ ಒಳಗಿನ ಪೊಳ್ಳುಗಳನ್ನು ಮುಚ್ಚಿಕೊಳ್ಳಲು ನೋಡುತ್ತಾರೆ.

ಮಧ್ಯಮಾವತಿ ಆದಿ

ಎಲ್ಲಾನು ಬಲ್ಲೆನೆಂಬುವಿರಿಲ್ಲ, ಅವಗುಣ ಬಿಡಲಿಲ್ಲ ಪ

ಸೊಲ್ಲಿಗೆ ಶರಣರ ಕಥೆಗಳ ಪೇಳುತ
ಅಲ್ಲದ ನುಡಿಯನು ನುಡಿಯುವಿರಲ್ಲ ಅ

ಕಾವಿಯನುಟ್ಟು ತಿರುಗುವಿರಲ್ಲ ಕಾಮವ ಬಿಡಲಿಲ್ಲ
ನೇಮನಿಷ್ಠೆಗಳ ಮಾಡುವಿರಲ್ಲ ತಾಮಸ ಬಿಡಲಿಲ್ಲ
ತಾವೊಂದರಿಯದೆ ಆಗಮ ತಿಳಿಯದೆ
ಶ್ವಾನನ ಕುಳಿಯಲಿ ಬೀಳುವಿರಲ್ಲ ೧

ಗುರುಗಳ ಸೇವೆ ಮಾಡಿದಿರಲ್ಲ ಗುರುತಾಗಲಿಲ್ಲ
ಪರಿಪರಿ ದೇಶವ ತಿರುಗಿದಿರಲ್ಲ ಪೊರೆಯುವರಿನ್ನಿಲ್ಲ
ಅರಿವೊಂದರಿಯದೆ ಆಗಮ ತಿಳಿಯದೆ
ನರಕ ಕೂಪದಲಿ ಬೀಳುವಿರಲ್ಲ ೨

ಬ್ರಹ್ಮಜ್ಞಾನಿಗಳು ಎನಿಸುವಿರಲ್ಲ ಹಮ್ಮು ಬಿಡಲಿಲ್ಲ
ಸುಮ್ಮನೆ ಯಾಗವ ಮಾಡುವಿರಲ್ಲ ಸುಳ್ಳನು ಬಿಡಲಿಲ್ಲ
ಗಮ್ಮನೆ ಪುರಂದರವಿಠಲನ ಪಾದಕೆ
ಹೆಮ್ಮೆ ಬಿಟ್ಟು ನೀವೆರಗಲೆ ಇಲ್ಲ ೩

ಅಲ್ಲದ ನುಡಿ...—ಹೇಳುವುದು ಭಕ್ತರ ಕಥೆ, ಆಡುವುದು ಅಶ್ಲೀಲ ಮಾತುಗಳು.
ತಾಮಸ—ತಾಮಸ ಪ್ರವೃತ್ತಿ, ಕೊಳಕು ಬುದ್ಧಿ.
ಶ್ವಾನನ ಕುಳಿ—ತಿಪ್ಪೆಗುಂಡಿ.
ಗುರುತು—ಹರಿಯು ಜೀವನಿಗೆ ಬಿಂಬರೂಪಿಯೆಂಬ ಅರಿವು ; ಪ್ರತ್ಯಭಿಜ್ಞೆ.
ಅರಿವು—ಹರಿಸರ್ವೋತ್ತಮನೆಂಬ ತಿಳುವಳಿಕೆ.
ಗಮ್ಮನೆ—ಬೇಗನೆ.

ಯದುಕುಲಕಾಂಬೋದಿ ಆದಿ

ಮರುಳಾಟವೇಕೋ ಮನುಜ, ಕೂಗಾಟವೇಕೊ ಪ

ಸರುವ ದುರ್ಗುಣಗಳನ್ನು ಶರೀರದಿ ಬಚ್ಚಿಟ್ಟುಕೊಂಡು ಅ

ಮೃತ್ತಿಕೆ ಶೌಚ ಮಾಡದವಗೆ ಮತ್ತೆ ಸ್ನಾನ ಮಂತ್ರವೇಕೆ
ಹೊತ್ತು ಕಟ್ಟದವಗೆ ಅಗ್ನಿ ಹೋತ್ರವೇತಕೆ
ತುತ್ತು ಒಡಕನಿಗೆ ಪರ ತತ್ವದ ವಿಚಾರವೇಕೆ
ಕರ್ತೃ ಕೃಷ್ಣನ ನೆನೆಯದವನ ಉತ್ತಮ ಗುಣವೇತಕೆ ೧

ಮೂಲಮಂತ್ರ ವರಿಯದವಗೆ ದೇವತಾರ್ಚನೆಯೇಕೆ
ಸಾಲಿಗ್ರಾಮ ಅಭಿಷೇಕವಿಲ್ಲದ ತೀರ್ಥವೇತಕೆ
ಸೂಳೆಗಾರನಿಗೆ ತುಳಸಿಮಾಲೆಯ ಶೃಂಗಾರವೇಕೆ
ಮಾಲೋಲನ ನೆನೆಯದವನ ನಾಲಿಗೆಯೇತಕೆ ೨

ಹಸಿವು ತೃಷೆಯು ಕಟ್ಟದವಗೆ ಹುಸಿಯ ವೈರಾಗ್ಯವೇಕೆ
ವಿಷಯ ಮೆಚ್ಚಿದವಗೆ ಪರದ ಕುಶಲವೇತಕೆ
ಪುಸಿಯ ಜಪ ಮಾಡುವವಗೆ ಮುಸುಕಿನ ಡಂಭಕವೇಕೆ
ಬಿಸಜನಾಭಗರ್ಪಿಸದ ಅಶನವೇತಕೆ ೩

ಊರ್ಧ್ವಪುಂಡ್ರವಿಲ್ಲದವನ ಮುಖವ ಎತ್ತಿ ನೋಡಲೇಕೆ
ಶುದ್ಧ ಸಾತ್ವಿಕಗೆ ಪರರ ಸುದ್ದಿಯೇತಕೆ
ಕದ್ದು ಹೊಟ್ಟೆ ಹೊರೆಯುವವಗೆ ಶುದ್ಧ ಶೀಲವೃತ್ತಿಯೇಕೆ
ಮಧ್ವಮತವ ಪೊಂದದವನ ಪದ್ಧತಿಯೇತಕೆ ೪

ಕಂಡ ನಾರಿಗಿಚ್ಛೈಸುವ ಲಂಡಗೆ ಪುರಾಣವೇಕೆ
ಭಂಡು ಮಾತಿನ ಕವಿಯ ಬಹು ಪಾಂಡಿತ್ಯವೇತಕೆ
ಪುಂಡರೀಕಾಕ್ಷ ನಮ್ಮ ಶ್ರೀ ಪುರಂದರವಿಠ್ಠಲನ್ನ
ಕಂಡು ಕಂಡು ಭಜಿಸದವಗೆ ಉದ್ದಂಡತನವೇತಕೆ ೫

ಕಾಪಿ (ಸುಪ್ಪಿಮಟ್ಟು) ಏಕ

ಮಲವ ತೊಳೆಯಬಲ್ಲರಲ್ಲದೆ
ಮನವ ತೊಳೆಯಬಲ್ಲರೆ ಪ

ಹಲವು ತೀರ್ಥಂಗಳಲಿ ಮುಳುಗಿ
ಹಲುಬಿದರೆ ಫಲವೇನು ಅ

ಭೋಗ ವಿಷಯ ಫಲವನುಂಡು ರಾಗ ಲೋಭದಿಂದ ಮತ್ತ
ನಾಗಿ ಮೆರೆಯುತಿರೆ ಅವನ ಭಾಗ್ಯವಂತನೆಂಬರೆ
ಯೋಗಿಯಂತೆ ಜನರು ಮೆಚ್ಚುವಂತೆ ಹೋಗಿ ನೀರಿನಲ್ಲಿ
ಕಾಗೆಯಂತೆ ಮುಳುಗೆ ಮಾಘಸ್ನಾನ ಫಲವು ಬಾಹೋದೆ ೧

ಪರರ ಕೇಡು ಬಯಸಿ ಗುರುಹಿರಿಯರನ್ನು ನಿಂದಿಸುತ್ತ
ಪರಮಸೌಖ್ಯವೆಂದು ಪರಸ್ತ್ರೀಯರನ್ನು ಬಯಸುತ್ತ
ಪರಮನಿಷ್ಠ ಮೌನಿಯಂತೆ ಧರೆಯಮೇಲೆ ಡಂಭ ತೋರಿ
ಹರಿವ ನೀರಿನ ತೀರದಿ ಕುಳಿತರೇನು ಬಕ ಧ್ಯಾನದಿ ೨

ಕಾಸುವೀಸಕ್ಕಾಗಿ ಹರಿಯದಾಸನೆಂದು ತಿರುಗಿ ತಿರುಗಿ
ದೇಶದೇಶಗಳಲಿ ತೊಳಲಿ ಕಾಶಿಯಾತ್ರೆ ಪೋಗಲು
ಆಶಾಪಾಶ ಬಿಡದೆ ಮನಸು ಹೇಸಿ ವಿಷಯ ಬಯಸುವಂಥ
ವೇಷಧಾರಿಗಳಿಗೆ ಕಾಶಿಯಾತ್ರೆ ಫಲವು ಬಾಹೋದೆ ೩

ತಂದೆತಾಯಿ ತಿರಿದು ತಿನಲು ಒಂದು ದಿನ ಕೇಳಲಿಲ್ಲ
ಮಂದಗಮನೆಯರೊಡನೆ ಆನಂದದಿಂದಲಿರುವರು
ತಂದೆ ಸತ್ತಮೇಲೆ ನೂರುಮಂದಿ ವಿಪ್ರರಿಗುಣಿಸಿ ತಮ್ಮ
ತಂದೆ ತೃಪ್ತನಾದನೆಂಬರು ಮಂದಮತಿಯ ಜನಗಳು ೪

ಏನು ಓದಲೇನು ಫಲ ಏನು ಕೇಳಲೇನು ಫಲ
ಜ್ಞಾನದಿಂದ ಅಚ್ಯುತನ ಧ್ಯಾನವಿಲ್ಲದವರಿಗೆ
ಮೌನ ನೇಮ ನಿಷ್ಠೆ ಯಾಕೆ ಹೀನಚಿತ್ತನಾದಮೇಲೆ
ಶ್ರೀನಿವಾಸ ಪುರಂದರವಿಠಲನು ಮೆಚ್ಚುವನೆ ಮರುಳೆ ೫

ಗೌಳಪಂತು ಚಾಪು

ಯಾವ ಕರ್ಮವೋ ಇದು
ಯಾವ ಪುಣ್ಯವೋ ಪ

ಸತ್ತವನು ಎತ್ತಹೋದ
ಸತ್ತು ತನ್ನ ಜನ್ಮಕ್ಹೋದ
ಸತ್ತವನು ಉಂಬುವನೆಂದು
ನಿತ್ಯ ಪಿಂಡ ಇಕ್ಕಿದರೆ ೧

ಎಳ್ಳು ದರ್ಭೆ ಕೈಲಿ ಪಿಡಿದು
ಪಿತೃತೃಪ್ತಿಯೆಂದು ಬಿಡಲು
ಎಳ್ಳು ಮೀನು ನುಂಗಿಹೋಯಿತು
ದರ್ಭೆ ನೀರೊಳು ಹರಿದುಹೋಯಿತು ೨

ಎಡಕ್ಕೆ ಬಲಕ್ಕೆ ಎಂದು ಕೇಳಿ
ಎಡಕ್ಕೆ ತೋರಿಸಿ ಬಲಕ್ಕೆ ತೋರಿಸಿ
ಕಡು ದೇವತೆಯನೆ ಬರಿಸಿ
ಕಠಿನವಸ್ತು ಕೇಳಿರುತಾರೆ ೩

ಮಂತ್ರಾಕ್ಷತೆಯು ಕೈಲಿ ಕೊಟ್ಟು
ಸ್ವರ್ಗವನ್ನು ಹೋಗೆಂದರೆ
ಮಂತ್ರವೆಲ್ಲೊ ಅಕ್ಷತೆಯೆಲ್ಲೊ
ಅವರೆಲ್ಲೊ ಇವರೆಲ್ಲೊ ೪

ಹೇಳುವನು ಅಜ್ಞಾನಿ
ಕೇಳುವನು ಅವಿವೇಕಿ
ಹೇಳುವ ಕೇಳುವ ಇಬ್ಬರ ಸೊಲ್ಲ
ಪುರಂದರವಿಠಲ ಬಲ್ಲ ೫

೭೯

ಪೂರ್ವಿ ಆದಿ

ಛೀ ಛೀ ಏತರ ಜನ್ಮ
ತಿಳಿಯೋ ನೀತಿ ಧರ್ಮ
ನೀತಿ ತಪ್ಪಿ ನಡೆವ ಮನುಜನ
ಬಾಯಲಿ ಬಿತ್ತೋ ಬೂದಿ ಪ

ಪುರಾಣ ಹೇಳುವ ಪುಂಡ
ಅವ ಮದ್ಯದ ಹರವಿಯ ಕೊಂಡ
ಮುಂದುಗಾಣದೆ ಮೋಕ್ಷವ ಬೊಗಳುವ
ಬರಿಯ ಮಾತಿನ ಭಂಡ ೧

ತೀರ್ಥಯಾತ್ರೆಯನೆಲ್ಲ ತಿರುಗಿ ಸೊರಗಿದೆನಲ್ಲ
ತೀರ್ಥದಲಿ ಮುಳುಗಿದ್ದೊಂದೆ
ಮನವ ತೊಳೆಯಲಿಲ್ಲ ೨

ವೇದವೋದಿದೆ ವ್ಯರ್ಥ
ನೀತಿ ತಿಳಿಯಲಿಲ್ಲೊ ಅರ್ಥ
ವೇದವೋದಿದೆ ಭೇದ ತಿಳಿದು
ಪುರಂದರವಿಠಲನ ಭಜಿಸಲಿಲ್ಲ ೩

ಮದ್ಯದ ಹರವಿಯ ಕೊಂಡ—ಹೆಂಡದ ಪಾತ್ರೆಯ ಕುಣಿ.
ಭೇದ—ಪರಮಾತ್ಮನು ಸ್ವಾಮಿಯೆಂದೂ ಜೀವಾತ್ಮನು ದಾಸನೆಂದೂ ಭೇದ.

ಮುಖಾರಿ ಝಂಪೆ

ಚಿತ್ತಶುದ್ಧಿ ಇಲ್ಲದವ ಅವ ಜ್ಞಾನಿಯೆ ಪ

ಪಾತಕಗಳನರಿಯದವ ಮನುಜನೆ ಕೃಷ್ಣ ಅ

ಬಂಧನದೊಳಿಹ ವ್ಯಾಘ್ರ ಬಹು ತಪಸಿ ಎನಬಹುದೆ
ಸಿಂಧುವಿನೊಳಿಹ ನೊರೆ ಶೀತಕಿರಣನೆ
ಅಂಧಕನು ಕಣ್ಣ ಮುಚ್ಚಲದು ಧ್ಯಾನವೇ
ಮಂದಮತಿಯಾಗಿರಲು ಬಲು ಶೌರ್ಯವೇ ೧

ಶ್ವಾನ ಬೂದಿಯೊಳಿರಲು ಶಿವಭಕ್ತನೆನಬಹುದೆ
ಕಾನನದೊಳಿಹ ಕಾಗೆ ವನವಾಸಿಯೇ
ಗಾಣ ತಿರುಗಲು ಎತ್ತು ದೇಶಯಾತ್ರೆ ಎನಬಹುದೆ, ಬಕ
ಧ್ಯಾನವನು ಮಾಡಲು ಮೋಕ್ಷವೆ ಕೃಷ್ಣ ೨

ತೋಳ ಅಡವಿಯ ತಿರುಗೆ ದಿಗಂಬರ ಎನಬಹುದೆ
ಗಾಳಿಯುಂಬ ಭುಜಗ ಉಪವಾಸಿಯೆ
ಆಲದಲಿ ಜಡೆಯಿರಲು ಅದು ತಪಸಿ ಎನಬಹುದೆ
ಕಾಲದಲ್ಲಿಹ ಗೂಗೆ ಹಿರಿಯದಾಗಬಹುದೆ ೩

ಮಾರಿ ಮನೆಯೊಳಗಿರಲು ಮತ್ತೆ ಸಹಕಾರಿಯೆ
ಊರ ಒಳಗಿನ ಕಳ್ಳ ಅವ ನಂಟನೇ
ಜಾರೆಯೆಂದೆನಿಸುವಳ ಕುಲಗರತಿ ಎನಬಹುದೆ ಸಂ
ಸಾರದೊಳು ಎಚ್ಚರವಿಲ್ಲದವ ಮನುಜನೇ ೪

ಮಂಡೂಕ ಕೂಗಲದು ಮಂತ್ರವೆಂದೆನಬಹುದೆ
ಗುಂಡು ನೀರೊಳಗಿರಲು ಅದು ಸ್ನಾನವೆ
ಪುಂಡರೀಕಾಕ್ಷ ಸಿರಿ ಪುರಂದರವಿಠಲನ್ನ
ಕಂಡು ಭಜಿಸದವನು ಅವ ಮನುಜನೇ ೫

ಸಿಂಧು—ಸಮುದ್ರ.
ಭುಜಗ—ಹಾವು.

ಕಾಂಬೋದಿ ಅಟ್ಟ

ಏನು ವ್ರತವೇನು ಸಾಧನಗಳೇನೊ ಪ

ಸ್ವಾನುಭವದ ಜ್ಞಾನಿ ಹೀನ ಮಾನವನೇ ಅ

ಶಾಕವ್ರತವೆನುತ ಫಲ ಶಾಕಗಳ ಬಿಡುವಂತೆ
ಬೇಕಾದ ಆಕಾಂಕ್ಷೆ ಬಿಡಬಾರದೆ
ಸಾಕೆನಿಸದೆ ರತಿಗೆ ಸತತ ಮನ ಕೊಡುವಂತೆ
ಶ್ರೀಕಾಂತನೊಳು ಮನವನಿಡಬಾರದೆ ೧

ನೇಮಗಳ ಮಾಡಿ ಪರಪಾಕವನು ಬಿಡುವಂತೆ
ಕಾಮ ಕ್ರೋಧಂಗಳನು ಬಿಡಬಾರದೆ
ತಾಮಸರ ಕಣ್ಣಿಂದ ನೋಡೆನೆಂಬುವ ನಿಷ್ಠೆ
ನೇಮವನು ಪರಸತಿಯೊಳಿಡಬಾರದೆ ೨

ಹೇಸಿ ದುರ್ಗಂಧಗಳಿಗೋಸರಿಸುವಂದದಲಿ
ಆಶಪಾಶಾದಿಗಳ ಬಿಡಬಾರದೆ
ಈಶ ಶ್ರೀ ಪುರಂದರವಿಠ್ಠಲನ ಸೇವೆಯೋ
ಲೇಸೆನುತ ಸಂತೋಷಿಸಲಿಬಾರದೆ ೩

ಶಾಕ ವ್ರತ—ಕೆಲವೊಮ್ಮೆ ಕೆಲವೊಂದು ತರಕಾರಿ ತಿನ್ನದಿರುವ ನಿಯಮ.
ಪರಪಾಕ ನೇಮ—ಬೇರೆಯವರು ಮಾಡಿದ ಅಡುಗೆಯನ್ನು ಉಣ್ಣದಿರುವ ನಿಯಮ.
ತಾಮಸರ—ಕೆಳಜಾತಿಯವರನ್ನು ನೋಡದಿರುವ ನಿಯಮ.
ಓಸರಿಸುವ—ಅಸಹ್ಯಪಡುವ.

೮೨

ಮೊಹನ ತ್ರಿವಿಡೆ

ಏನೇನು ಮಾಡಿದರೇನು ಫಲವಯ್ಯ ಪ

ಭಾನುಕೋಟಿತೇಜ ಶ್ರೀನಿವಾಸನ ಭಜಿಸದೆ ಅ

ಹಲವು ಓದಿದರೇನು ಕುಲವ ಕೇಳಿದರೇನು
ಜಲದೊಳಗೆ ಮುಳುಗಿ ಕುಳಿತಿದ್ದರೇನು
ಛಲವಾಗಿ ಮುಸುಕಿಟ್ಟು ಬೆರಳನೆಣಿಸಿದರೇನು
ಚೆಲುವ ದೇವನೊಳು ಎರಕವಿಲ್ಲದ ತನಕ ೧

ಅನ್ನ ತೊರೆದು ಅರಣ್ಯ ಚರಿಸಿದರೇನು
ಉನ್ನತ ವ್ರತಗಳಾಚರಿಸಿದರೇನು
ಚೆನ್ನೆಗಾತಿಯರ ಸಂಗಬಿಟ್ಟು ಇದ್ದರೇನು
ಗಾನಲೋಲನಲ್ಲಿ ಎರಕವಿಲ್ಲದನಕ ೨

ಬತ್ತಲೆ ತಿರುಗಿ ಅವಧೂತನೆನಿಸಿದರೇನು
ತತ್ತ್ವವಾಕ್ಯಂಗಳ ಪೇಳಿದರೇನು
ಚಿತ್ತಜನಯ್ಯ ಶ್ರೀ ಪುರಂದರವಿಠಲನ್ನ
ಚಿತ್ತದೊಳಿರಿಸಿ ಒಲಿಸಿಕೊಳ್ಳದ ತನಕ ೩

ಪೂರ್ವಿ ಅಟ್ಟ

ಧರ್ಮಕ್ಕೆ ಕೈ ಬಾರದೀ ಕಾಲ, ಪಾಪ
ಕರ್ಮಕ್ಕೆ ಮನ ಸೋಲದೀ ಕಾಲ ಪ

ದಂಡ ದ್ರೋಹಕೆ ಉಂಟು, ಪುಂಡು ಪೋಕರಿಗುಂಟು
ಹೆಂಡತಿ ಮಕ್ಕಳಿಗಿಲ್ಲೀ ಕಾಲ
ದಿಂಡೇರಿಗುಂಟು ಜಗಭಂಡರಿಗುಂಟು
ಅಂಡಲೆವರಿಗಿಲ್ಲವೀ ಕಾಲ ೧

ಮತ್ತೆ ಸುಳ್ಳರಿಗುಂಟು ನಿತ್ಯ ಹಾದರಕುಂಟು
ಉತ್ತಮರಿಗಿಲ್ಲವೀ ಕಾಲ
ತೊತ್ತೇರಿಗುಂಟು ತಾಟಕಿಗುಂಟು
ಹೆತ್ತತಾಯಿಗಿಲ್ಲವೀ ಕಾಲ ೨

ಹುಸಿ ದಿಟವಾಯಿತು ರಸ ಕಸವಾಯಿತು
ಸೊಸೆ ಅತ್ತೆಯ ದಂಡಿಸೋದೀ ಕಾಲ
ಬಿಸಜಾಕ್ಷ ಪುರಂದರವಿಠಲನ ಮನದಲ್ಲಿ
ಸ್ತುತಿಸುವವರಿಗಿಲ್ಲವೀ ಕಾಲ ೩

ಮನ ಸೋಲದು—ಮನಸ್ಸು ಒಲಿಯದು.

ದಿಂಡೇರು—ನಯನಾಜೂಕಿಲ್ಲದ ಒರಟು ಹೆಂಗಸರು.

ಅಂಡಲೆವರು—ಬೀದಿ ಬೀದಿ ತಿರುಗುವ ಬಡವರು.

ತೊತ್ತೇರು—ತೊತ್ತುಗಳು, ಸೇವಕಿಯರು.

ಬಿಸಜಾಕ್ಷ—ತಾವರೆಯ ಕಣ್ಣುಳ್ಳವ.

ನಾದನಾಮಕ್ರಿಯೆ ಆದಿ

ಅದರಿಂದೇನು ಫಲ ಇದರಿಂದೇನು ಫಲ, ನಮ್ಮ
ಪುರಂದರವಿಠಲನ ನಾಮವ ನೆನೆಯದೆ ಪ

ಹೃದಯದ ಮಲವನು ತೊಳೆಯಲಾರದೆ ವ್ಯರ್ಥ
ಉದಯಾಸ್ತಮಾನ ನೀರೊಳು ಮುಳುಗುವರು
ಅದಕಿಂತ ಸರ್ವದಾ ನೀರೊಳಗಿರುತಿಪ್ಪ
ಮುದಿಕಪ್ಪೆ ಮಾಡಿದ ತಪ್ಪೇನಯ್ಯ ೧

ಹಲವು ಕಾಲ ಕಲ್ಲು ನೀರೊಳಗಿದ್ದರೇನು
ಬಲು ನೆನೆದಮೃತಶಿಲೆಯಾಗುವುದೆ
ಕರದಲಿ ಜಪಮಾಲೆ ಮಣಿಗಳನೆಣಿಸುತ
ಪರನಿಂದೆ ಬಾಯಲಿ ಮಾಡುವರಯ್ಯ ೨

ಸ್ನಾನವ ಮಾಡುವರು ಆಸನ ಹಾಕುವರು
ಮೌನದಿ ಚಪ್ಪಾಳಿಟ್ಟು ಹಕ್ಕಿ ಬೆದರುವಂತೆ
ಕಣ್ಣನ್ನು ಮುಚ್ಚುವರು ಮೂಗನ್ನೆ ಹಿಡಿವರು
ಚೆನ್ನಾಗಿ ಮನವ ನಿಲ್ಲಿಸಲರಿಯರು ವ್ಯರ್ಥ ೩

ನೇಮವನು ತಾಳುವರು ದಾನವ ಮಾಡುವರು
ಕಾಮಕ್ರೋಧ ಮದ ಮತ್ಸರ ಬಿಡದೆ ಇಂಥ
ನಾಯಿ ಕುನ್ನಿಗಳ ಕಂಡೊಳಗಿಟ್ಟುಕೊಂಡರೆ
ಕಾಶಿಯಲಿ ಮುಳುಗಿದ ಫಲವೇನಯ್ಯ ೪

ಮೂರು ಜೋಡಿ ವನಮಾಲೆಯು ಕೊರಳೊಳು
ಜೋಗಿಣಿಯ ಕವಡೆಯ ಸರದಂತೆ
ಮೂರಾರು ಪುರಾಣ ತಿರುವಿ ಹಾಕುವರು
ಮಾರಪಿತನ ಮನಮುಟ್ಟಿ ಭಜಿಸದೆ ವ್ಯರ್ಥ ೫

ಹಸಿವಾಯಿತೇಳು ದೇವರ ತೊಳೆಯೆಂಬರು
ಹಸನಾಗಿ ಮನಮುಟ್ಟಿ ಪೂಜಿಸರು
ಹೊಸ ಹಾವಿನ ಬುಟ್ಟಿಯಂತೆ ಮುಂದಿಟ್ಟುಕೊಂಡು
ವಸುಧೆಯೊಳ್ಗಾರುಡಿಯಾಟವಾಡುವರು ೬

ಪರಧನ ಪರಸತಿ ಪರನಿಂದೆಗಳುಕುತ
ತೊರೆಯೊಳು ಮಿಂದರೆ ದುರಿತಪೋಗುವುದೆ
ಸರ್ವವ ತೊರೆದು ಹರಿಯ ಧ್ಯಾನಮಾಡಲು
ವರವ ಕೊಡುವ ನಮ್ಮ ಪುರಂದರವಿಠಲ ೭

೮೫

ಪೂರ್ವಿಕಲ್ಯಾಣಿ   ಅಟ್ಟ

ಹರಿ ಕೊಟ್ಟ ಕಾಲಕ್ಕೆ ಉಣಲಿಲ್ಲ ಪ

ಹರಿ ಕೊಡದ ಕಾಲಕ್ಕೆ ಬಾಯಿ ಬಿಡುವೆಯಲ್ಲೊ ಪ್ರಾಣಿ ಅ

ಹತ್ತು ಸಾವಿರ ಹೊನ್ನು ತಿಪ್ಪೇಲಿ ಹೂಳಿಟ್ಟು
ಮತ್ತೆ ಉಪ್ಪಿಲ್ಲದೆ ಉಂಡೆಯಲ್ಲೊ ಪ್ರಾಣಿ
ಹತ್ತುಸಾವಿರ ಹೊನ್ನು ತಿಪ್ಪೇಲಿ ಪೋಪಾಗ
ಮೃತ್ತಿಕೆ ಬಾಯಲ್ಲಿ ಬಿತ್ತಲ್ಲೊ ಪ್ರಾಣಿ ೧

ಹುಗ್ಗಿಯು ತುಪ್ಪವು ಅಗ್ಗವಾಗಿರಲಿಕ್ಕೆ
ಗುಗ್ಗರಿಯನ್ನವ ತಿಂದೆಲ್ಲೊ ಪ್ರಾಣಿ
ಹೆಗ್ಗಳದ ಭಾಗ್ಯವು ಘಳಿಗೇಲಿ ಪೋಪಾಗ
ಬುಗ್ಗೆಯ ಹೊಯ್ಕೊಂಡು ಹೋದೆಯಲ್ಲೊ ಪ್ರಾಣಿ ೨

ನೆಂಟರಿಷ್ಟರು ಬಂದು ಮನೆ ಮುಂದೆ ಕುಳಿತಿರೆ
ಕುಂಟ ಸುದ್ದಿಯನಾಡಿದೆಯಲ್ಲೋ ಪ್ರಾಣಿ
ಕಂಟಕ ಯಮನವರು ಕುಂಠಿಸುತ್ತೆಳೆವಾಗ
ನಂಟ ಶ್ರೀ ಪುರಂದರವಿಠಲನು ಪ್ರಾಣಿ ೩.

['ನಿಧಿಯ ಮೇಲಿದ್ದು ನಿಧಿಯನರಿಯದಂತೆ' ಎಂಬ ವ್ಯಾಸರಾಯ ಸ್ವಾಮಿಗಳ ಪದವೊಂದರ ಛಾಯೆ ಇಲ್ಲಿ ಕಾಣುತ್ತದೆ.]

ಮೃತ್ತಿಕೆ—ಮಣ್ಣು.
ಹೆಗ್ಗಳ—ಹಿರಿಮೆ ; ಸಿರಿ.
ಬುಗ್ಗೆಯ ಹೊಯ್ಕೊಂಡು—ಕೆನ್ನೆಗೆ ಹೊಡೆದುಕೊಂಡು.
ಕುಂಟಸುದ್ದಿ—ಕಾಡುಹರಟೆ.

೮೬

ಬೇಹಾಗು ಏಕ

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದೇನು ಫಲ ಪ

ಕುಟಿಲವ ಬಿಡದಿಹ ಮನುಜರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ ೧

ಕಪಟತನದಲಿ ಕಾಡುತ ಜನರನು
ಜಪವನು ಮಾಡಿದರೇನು ಫಲ
ಕುಪಿತತನುವನು ಬಿಡದೆ ನಿರಂತರ
ಜಪವನು ಮಾಡಿದರೇನು ಫಲ ೨

ಮಾತಾಪಿತರನು ಬಳಲಿಸಿದಾತನು
ಯಾತ್ರೆಯ ಮಾಡಿದರೇನು ಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ ೩

ಪತಿಗಳ ನಿಂದಿಪ ಸತಿಯರು ಬಹು ವಿಧ
ವ್ರತಗಳ ಮಾಡಿದರೇನು ಫಲ
ಅತಿಥಿಗಳೆಡೆಯಲಿ ಭೇದವ ಮಾಡುತ
ಗತಿಯನು ಬಯಸಿದರೇನು ಫಲ ೪

ಹೀನ ಗುಣಂಗಳು ಹಿಂಗದೆ ಗಂಗೆಯ
ಸ್ನಾನವ ಮಾಡಿದರೇನು ಫಲ
ಶ್ರೀನಿಧಿ ಪುರಂದರವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ ೫

[ಹೊರಗಿನ ಪ್ರಯತ್ನಗಳಿಂದ, ರೂಢಮೂಲವಾಗಿರುವ ಆಂತರಿಕ ಸ್ವಭಾವಗಳನ್ನು ಚಿವುಟಿಹಾಕುವುದು ಸಾಧ್ಯವಿಲ್ಲ. ಬೇವಿನ ಕಹಿ ಬೆಲ್ಲದಲ್ಲಿರಿಸಿದರೆ ಹೋಗುವುದಿಲ್ಲ. ಹಾಲು ಸಾತ್ತ್ವಿಕವಾದ ಆಹಾರವೇ; ಆದರೆ ಅದನ್ನು ಕುಡಿದ ಹಾವು ಸಾತ್ತ್ವಿಕವಾಗುವುದಿಲ್ಲ.]

ಬೇಹಾಗು ಅಟ್ಟ

ಮರೆಯದಿರೆಲೆ ಮನ ಇಲ್ಲಿ, ಯಮ
ಪುರಿಗೆ ಒಯ್ದು ಬಾಧಿಸುವರೊ ಅಲ್ಲಿ ಪ

ಪರನಾರಿಯರ ಸಂಗವಿಲ್ಲಿ, ಉಕ್ಕು
ಎರೆದ ಸತಿಯ ತಕ್ಕೈಸುವರಲ್ಲಿ
ಗುರು ಹಿರಿಯರ ನಿಂದೆ ಇಲ್ಲಿ, ಬಾಯ
ತೆರೆಸಿ ಸೀಸವ ಕಾಯ್ಸಿ ಹೊಯ್ಯುವರಲ್ಲಿ ೧

ಉಂಡ ಮನೆಯ ಕೊಂಬೋದಿಲ್ಲಿ, ಎದೆ
ಗುಂಡಿಗೆಯನು ಸೀಳಿ ಕೊಲುತಿಹರಲ್ಲಿ
ಗಂಡನ್ನ ದಣಿಸುವುದಿಲ್ಲಿ, ಯಮ
ಕುಂಡದೊಳಗೆ ಹಾಕಿ ಸುಡಿಸುವರಲ್ಲಿ ೨

ಚಾಡಿಗಳ ಹೇಳುವುದಿಲ್ಲಿ, ನುಡಿ
ದಾಡುವ ನಾಲಗೆ ಕೀಳುವರಲ್ಲಿ
ಬೇಡಿದರಿಗೆ ಧರ್ಮಕ್ಕಿಲ್ಲಿ, ಇದ್ದು
ನೀಡದಿರಲು ಒದ್ದು ನೂಕುವರಲ್ಲಿ ೩

ಪುಸಿ ಠಕ್ಕು ಠವಳಿಗಳಿಲ್ಲಿ, ಕಟ್ಟಿ
ಎಸೆದು ಕೊಲ್ಲುವರು ನಿನ್ನವರು ಕೇಳಲ್ಲಿ
ಅಶನ ಪ್ರಭೇದಗಳಿಲ್ಲಿ, ಮಾಡೆ
ಬಿಸಿಯ ಕೆಂಡವ ತಂದು ತಿನಿಸುವರಲ್ಲಿ ೪

ಸಿರಿಮದದೊಳಗಿಹುದಿಲ್ಲಿ, ಸೊಕ್ಕು
ಮುರಿದು ನಿನ್ನ ಹಲ್ಲು ಕಳಚುವರಲ್ಲಿ
ಪುರಂದರವಿಠಲನ್ನ ಇಲ್ಲಿ, ನೆನೆಯೆ
ಸ್ಥಿರವಾದ ಮುಕುತಿಯ ಪಡಕೊಂಬಿ ಅಲ್ಲಿ ೫

ಉಕ್ಕು ಎರೆದ ಸತಿಯ ತಕ್ಕೈಸುವರಲ್ಲಿ—ನರಕದಲ್ಲಿ ಕಾದ ಉಕ್ಕಿನ ಸ್ತ್ರೀಯನ್ನು ಆಲಿಂಗಿಸುವಂತೆ ಮಾಡಲಾಗುತ್ತದೆ.

ಪುಸಿ ಠಕ್ಕು ಠವಳಿ—ಸುಳ್ಳು, ಮೋಸ, ವಂಚನೆ.

ಅಶನ ಪ್ರಭೇದ—ಪಂಕ್ತಿಭೇದ.

ಪಡಕೊಂಬಿ—ಪಡೆದುಕೊಳ್ಳುವೆ.

ಸ್ವಭಾವ ವಿಶ್ಲೇಷಣೆ

ಈ ಭಾಗದ ಪದಗಳಲ್ಲಿ ಪುರಂದರದಾಸರು ಸಮಾಜದ ಜನರ ನಡವಳಿಕೆಯ ವಿಶ್ವಕೋಶವನ್ನೇ ನಮ್ಮ ಮುಂದೆ ಇರಿಸಿದ್ದಾರೆ. ಇವರಲ್ಲಿ ಸಮಾಜದ ಸ್ತಂಭಗಳಂತೆ ಮೆರೆಯಬಲ್ಲ ಸಚ್ಚಾರಿತ್ರ್ಯ ಉಳ್ಳವರೊ, ಧೀರರೊ ಸಾಹಸಿಗಳೊ ಪರೋಪಕಾರಿಗಳೊ, "ನಾನಿನ್ನ ಧ್ಯಾನದೊಳಿರಲು ಮಿಕ್ಕ ಹೀನ ಮಾನವರೇನ ಮಾಡಬಲ್ಲರೋ" ಎಂಬ ಆತ್ಮಸ್ಥೈರ್ಯ ಉಳ್ಳವರೊ, ದಿಟ್ಟನಾಗಿ ಕೈಯನೆತ್ತಿಕೊಡುವವರೊ ಇಲ್ಲವೆಂದಲ್ಲ. ವ್ಯರ್ಥ ವಾಗಿ ಹೊತ್ತು ಕಳೆಯದ ಈ ಬಗೆಯ ನಿತ್ಯನೇಮಿಗಳಿಗೆ ಪರರ ಉಪದ್ರವ ವನ್ನು ಬಿಡಿಸಿ ಕಾಪಾಡುವ ಮನಸ್ಸು ಇರುತ್ತದೆ. ಆದರೆ ಇವರೆಲ್ಲ ಅಲ್ಪ ಸಂಖ್ಯಾತರು. ಋಜುಮಾರ್ಗದಲ್ಲಿ ನಡೆಯ ಬಯಸುವ ಇಂಥವರ ಹೆಜ್ಜೆ-ಸಪ್ಪಳ ಸಮಾಜದಲ್ಲಿ ಕೇಳಿಬರುವುದು ಅಪರೂಪ. ಏಕೆಂದರೆ ಇವರ ಹೆಜ್ಜೆಸಪ್ಪಳದ ಕ್ಷೀಣಧ್ವನಿಯನ್ನು ಉಡುಗಿಸಬಲ್ಲ ಅಬ್ಬರಗಾರರ ದೊಡ್ಡ ಗುಂಪೇ ಇದೆ. ಇವರಲ್ಲಿ 'ಮನದೊಳಗಿನ ತಾಮಸ ಮಾಣದ' ಬೊಬ್ಬೆಗಾರ ರಿದ್ದಾರೆ. ತಮ್ಮಿಂದ ಸಮಾಜಕ್ಕೆ ಉಪಕಾರ 'ತೊಟಕಾದರೂ' ಇಲ್ಲದವರು, ಪರ ನಿಂದಕರು, ಬಿಟ್ಟಿ ಸೇವೆಯ ಮಾಡಿಸಿಕೊಂಡು ಬೆದರಿಸಿ ಬಿಡುವ ಕನಿಷ್ಠರು, ನಮ್ಮ ಮಧ್ಯೆ ಸಾಕಷ್ಟಿದ್ದಾರೆ. ಗೊಣಗಾಟ, ಶೋಷಣೆ ಇವರ ಮುಖ್ಯ ಕಸುಬು. ಹಂಬಲಿಸಿ ಹಾಳುಹರಟೆಗಳಲ್ಲಿ ಹೊತ್ತು ಕಳೆಯುವವರು, ಬಾಯಮಾತಿಗೆ ಮರುಳಾಗುವವರು, ಒಡನೆ ಹಂಗಿಸು ವವರು—ಈ ವರ್ಗದವರು ಬಾಯಿಮಾತಿನ ಚಾಪಲ್ಯಕ್ಕೆ ಮನಸೋತವರು. ಎಲ್ಲರನ್ನೂ ಆಡಿಕೊಳ್ಳುತ್ತ ಉತ್ತಮ ಕಾರ್ಯಕ್ಕೆ ಕಲ್ಲುಹಾಕುವುದು ಇವರ ಕಸುಬು. ಇನ್ನು ಕೆಲವರು ತಾವು ಮಾಡುತ್ತಿರುವ ವೃತ್ತಿಯಲ್ಲಿ ಮನಸ್ಸು ತೊಡಗಿಸಲಾರದ ಅಸಮರ್ಥರು. ಈ ಗುಂಪಿನಲ್ಲಿ ಆಸೆಬಿಡದ ಸಂನ್ಯಾಸಿ ಗಳು, ಹಾಡಲು ಅರಿಯದ ಪ್ರೌಢರು, ಸಂಗೀತದ ಸ್ವಾರಸ್ಯವನ್ನು ತಿಳಿಯಲಾಗದ ಬಧಿರರು, ರಣಕೆ ಮುಂದಾಗಿ ನಡೆಯಲಾರದ ಮಹಾ ಕ್ಷತ್ರಿಯ ಪುಂಗವರು, ಕಡುದೀನರನ್ನು ಶೋಷಿಸುವ ವ್ಯಾಪಾರಿಗಳು ಮುಂತಾದವರು ಸೇರುತ್ತಾರೆ. ತಮ್ಮ ಅಸಮರ್ಥತೆಯಿಂದಾಗಿ ತಾವು ಮಾಡುತ್ತಿರುವ ವೃತ್ತಿಗೂ ತಮಗೂ ಕೂಡಿಯೇ ಅನ್ಯಾಯ ಮಾಡುವ ವಂಚಕರು ಇವರು. ಸಮಾಜದಲ್ಲಿ ಮೌಲ್ಯಗಳ ಪತನವಾಗುವುದು ಇಂಥವ ರಿಂದ. ಕೆಲವರು ಕೌಟುಂಬಿಕ ಕ್ಷೇತ್ರದವರು. ಇವರಲ್ಲಿ ತಾಯಿಗೆ ಅನ್ನವನ್ನು ಇಕ್ಕದವರು, ಹೆಂಡತಿಯ ಮಾತಿನಂತೆ ಕುಣಿಯುವವರು, ಪ್ರೇಮವಿಲ್ಲದೆ ಬಂಧುಗಳ ಮಧ್ಯೆ ವಾಸಿಸುವವರು ನೆರೆಮನೆಯವರ ಸುಖ ಕಂಡು ಕರುಬುವವರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇನ್ನು ಕೆಲವರು ವಿಕಾರಗೊಂಡ ಮನಸ್ಸಿನ ಹುಚ್ಚು ಮುಖಗಳನ್ನು ಪ್ರದರ್ಶಿಸುವವರು. 'ಇವರಿಗೆ ಸಂದುಗೊಂದಿನ ಬಯಕೆ' ಹೋಗಿರುವುದಿಲ್ಲ. ಇವರ ಅತೃಪ್ತಿ ಬೇರೆ ಬೇರೆ ವಿಕಾರ ರೂಪಗಳಲ್ಲಿ ಕಾಣಿಸಿಕೊಂಡು ಸಮಾಜಕ್ಕೆ ಕಂಟಕಪ್ರಾಯ

ವಾಗುತ್ತವೆ. ಒಡಲಲ್ಲಿ ಕ್ಲೇಶವಿರಿಸಿಕೊಂಡು ಇವರು ತೀರ್ಥ ಯಾತ್ರೆ ಮಾಡಲು ಹೋಗುತ್ತಾರೆ. ಸ್ವಸ್ಥ ಮನಸ್ಸಿಲ್ಲದೆ ಕಂಡಕಂಡ ದೈವಗಳಿಗೆ ಕೈಮುಗಿಯುತ್ತಾರೆ. ಏರ್ಪಾಟಾಗಿದ್ದ ಮದುವೆಯನ್ನು ಕೆಡಿಸಿ ಮುದದಿಂದ ನಲಿಯುತ್ತಾರೆ. ತಲೆಕೆಳಗಾಗಿ ನಿಂತು ತಪಸ್ಸು ಮಾಡುವಂಥ ಘೋರ ನಾಟಕದ ಪಾತ್ರಧಾರಿಗಳೂ ಆಗುತ್ತಾರೆ, ಎಣ್ಣೆ ಹಚ್ಚಿಕೊಂಡು ಮರಳಲ್ಲಿ ಉರುಳಾಡುವ ಡಾಂಭಿಕತನವನ್ನೂ ತೋರುತ್ತಾರೆ. 'ಭಂಟನಾಗಿ ದಣಿಯ ಗಂಟಲ ಪಿಡಿವ' ಸ್ವಾಮಿದ್ರೋಹಿಗಳೂ ಸಮಯ ಸಾಧಕರೂ ಇಲ್ಲಿದ್ದಾರೆ.

ಒಟ್ಟಿನಲ್ಲಿ ಈ ಸಮಾಜದ ಜನ ಬಗೆಬಗೆಯ ಭ್ರಮೆಗಳಿಗೆ ಅಂಟಿಕೊಂಡು ತೊಳಲಾಡುತ್ತಿರುವ ಜನ. 'ಕನ್ನಡಿಯೊಳಗಿನ ಗಂಟಿಗೆ ಕನ್ನ ಇಕ್ಕುವ ಕಳ್ಳರು' ಎಂಬ ಒಂದು ಸೊಗಸಾದ ರೂಪಕದಿಂದ ಪುರಂದರದಾಸರು ನಮ್ಮೆಲ್ಲರ ಸ್ವಭಾವಗಳಿಗೆ ಕನ್ನಡಿ ಹಿಡಿದಿದ್ದಾರೆ.



ನಾದನಾಮಕ್ರಿಯೆ ಅಟ್ಟ

ಜನರ ನಡತೆ ಕೇಳಿರಯ್ಯ, ಇಂಥ
ಜನರ ನೋಡಿ ನೀವು ಏನೆಂಬಿರಯ್ಯ ಅ

ತಾಯಿಗನ್ನವನಿಕ್ಕರಯ್ಯ, ಬಲು
ಬಾಯ ಮಾತಿಗೆ ಮರುಳಾಗುವರಯ್ಯ
ನ್ಯಾಯವೆಂಬುದು ಇಲ್ಲವಯ್ಯ
ಅನ್ಯಾಯವೆ ಗತಿಯೆಂದು ಸಾಧಿಪರಯ್ಯ ೧

ಉತ್ತಮ ಸ್ತ್ರೀಯಳ ಬಿಟ್ಟು, ತನ್ನ
ವೃತ್ತಿಗಳೆಲ್ಲವ ಸೂಳೆಗೆ ಕೊಟ್ಟು
ಮತ್ತರೊಡನೆ ಕೂಡಿ ಕೆಟ್ಟು, ಇಹ
ರುತ್ತಮರೆಂಬರೀ ಜಗದೊಳು ಮುಟ್ಟು ೨

ಗಂಡನ್ನ ತಾ ಬಿಡುತಿಹಳು, ಪರ
ಮಿಂಡನ್ನ ಕೂಡಿ ಲೋಲಾಡುತಲಿಹಳು
ಭಂಡೆಯರು ಹೆಚ್ಚು ಜಗದೊಳು, ಭೂ
ಮಂಡಲದೊಳಗಿಂಥ ನಡತೆಯು ಬಹಳ ೩

ಹೊನ್ನುಳ್ಳ ಹೊಲೆಯರುತ್ತಮರು, ಅವರ
ಬಣ್ಣಿಸಿ ಬಾರೆಂದು ಮನೆಗೆ ಕರೆವರು
ಕನಕಾಂಬರವನು ಕೊಡುವರು, ಅವರ
ಬಿನ್ನಣದಲಿ ಬಹು ಉಪಚರಿಸುವರು ೪

ಬಡವನ್ನ ಬಾರೆನ್ನರಯ್ಯ, ಏನು
ನಡತೆಯಿದ್ದರು ಪ್ರಯೋಜನವಿಲ್ಲವಯ್ಯ
ಕಡುಮೂರ್ಖರಿಗೆ ಕಾಲವಯ್ಯ, ಎ
ನ್ನೊಡೆಯ ಪುರಂದರವಿಠಲ ಕೇಳಯ್ಯ ೫

ನಾದನಾಮಕ್ರಿಯೆ ಅಟ್ಟ

ಜನರ ನಡತೆ ಕೇಳಿರಯ್ಯ, ಇಂಥ
ಜನರ ನೋಡಿ ನೀವು ಏನೆಂಬಿರಯ್ಯ ಪ

ತಾಯಿಗನ್ನವನಿಕ್ಕರಯ್ಯ, ಬಲು
ಬಾಯ ಮಾತಿಗೆ ಮರುಳಾಗುವರಯ್ಯ
ನ್ಯಾಯವೆಂಬುದು ಇಲ್ಲವಯ್ಯ
ಅನ್ಯಾಯವೆ ಗತಿಯೆಂದು ಸಾಧಿಪರಯ್ಯ ೧

ಉತ್ತಮ ಸ್ತ್ರೀಯಳ ಬಿಟ್ಟು, ತನ್ನ
ವೃತ್ತಿಗಳೆಲ್ಲವ ಸೂಳೆಗೆ ಕೊಟ್ಟು
ಮತ್ತರೊಡನೆ ಕೂಡಿ ಕೆಟ್ಟು, ಇಹ
ರುತ್ತಮರೆಂಬರೀ ಜಗದೊಳು ಮುಟ್ಟು ೨

ಗಂಡನ್ನ ತಾ ಬಿಡುತಿಹಳು, ಪರ
ಮಿಂಡನ್ನ ಕೂಡಿ ಲೋಲಾಡುತಲಿಹಳು
ಭಂಡೆಯರು ಹೆಚ್ಚು ಜಗದೊಳು, ಭೂ
ಮಂಡಲದೊಳಗಿಂಥ ನಡತೆಯು ಬಹಳ ೩

ಹೊನ್ನುಳ್ಳ ಹೊಲೆಯರುತ್ತಮರು, ಅವರ
ಬಣ್ಣಿಸಿ ಬಾರೆಂದು ಮನೆಗೆ ಕರೆವರು
ಕನಕಾಂಬರವನು ಕೊಡುವರು, ಅವರ
ಬಿನ್ನಣದಲಿ ಬಹು ಉಪಚರಿಸುವರು ೪

ಬಡವನ್ನ ಬಾರೆನ್ನರಯ್ಯ, ಏನು
ನಡತೆಯಿದ್ದರು ಪ್ರಯೋಜನವಿಲ್ಲವಯ್ಯ
ಕಡುಮೂರ್ಖರಿಗೆ ಕಾಲವಯ್ಯ, ಎ
ನ್ನೊಡೆಯ ಪುರಂದರವಿಠಲ ಕೇಳಯ್ಯ ೫

[ಜನರ ನಡವಳಿಕೆಯಲ್ಲಿ ಕಂಡು ಬರುವ ಅಸಂಗತತೆಯನ್ನು ಪುರಂದರದಾಸರು ಇಲ್ಲಿ ಪ್ರಸ್ತಾಪಿಸಿದ್ದಾರೆ. ಕೌಟುಂಬಿಕ ಕಟ್ಟುಪಾಡುಗಳನ್ನು ಮುರಿದು ಗೃಹಭಂಗಕ್ಕೆ ಕಾರಣ ರಾಗುವುದು ಆರ್ಥಿಕ ಅಂತಸ್ತುಗಳನ್ನು ಮಾತ್ರ ಗಮನಿಸಿ ಪುರಸ್ಕಾರ–ತಿರಸ್ಕಾರಗಳನ್ನು ಸೂಚಿಸುವುದು ಈ ಜನರ ವೈಶಿಷ್ಟ್ಯ.]

ವೃತ್ತಿಗಳೆಲ್ಲವ—ಸಂಪಾದನೆಯನ್ನೆಲ್ಲ.

ಮತ್ತರೊಡನೆ—ಕುಡುಕರೊಡನೆ.

ಹೊಲೆಯರು—ನೀತಿಗೆಟ್ಟವರು. ದಾಸರು ಈ ಮಾತಿನಿಂದ ಜಾತಿಯನ್ನು ಸೂಚಿಸುವುದಿಲ್ಲ. 'ಹೊಲೆಯ ಹೊರಗಿಹನೆ' ಮೊದಲಾದ ಪದಗಳನ್ನು ನೋಡಿ.

ಕನಕಾಂಬರ—ಪೀತಾಂಬರ, ರೇಷ್ಮೆ ವಸ್ತ್ರ.

ಮೋಹನ ಅಟ್ಟ

ಜಾಲಿಯ ಮರದಂತೆ ಧರೆಯೊಳು ದುರ್ಜನರು ಪ

ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ ಅ

ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವಿಷದಂತೆ ಇರುತಿಹ ೧

ಊರಹಂದಿಗೆ ಷಡ್ರಸಾನ್ನವನಿಕ್ಕಲು
ನಾರುವ ದುರ್ಗಂಧ ಬಿಡಬಲ್ಲುದೆ
ಘೋರಪಾಪಿಗೆ ತತ್ವಜ್ಞಾನವ ಪೇಳಲು
ಕ್ರೂರ ಕರ್ಮವ ಬಿಟ್ಟು ಸುಜನನಾಗುವನೆ ೨

ತನ್ನಿಂದ ಉಪಕಾರ ತೊಟಕಾದರು ಇಲ್ಲ
ಬಿನ್ನಾಣದ ಮಾತಿಗೆ ಕೊನೆಯಿಲ್ಲ
ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ
ಇನ್ನಿವರ ಕಾರ್ಯವು ಪುರಂದರವಿಠಲ ೩

[ಉತ್ತರ ಕರ್ನಾಟಕದಲ್ಲಿ ಕೆಲವು ಭಾಗಗಳಲ್ಲಿ ಎಲ್ಲೆಡೆ ಹರಡಿ ವಿಜೃಂಭಿಸುವ ಜಾಲಿಯ ಮರದೊಂದಿಗೆ ಸಮಾಜ ಜೀವನದಲ್ಲಿ ಎಲ್ಲೆಂದರಲ್ಲಿ ಉಗ್ರವಾಗಿ ಬೆಳೆಯುತ್ತ ಹೋಗುವ ದುರ್ಜನ ವೃಂದವನ್ನು ಸಮೀಕರಿಸಿ ಬರೆದ 'ಪದ' ಇದು. ಹೂವಿಲ್ಲದ, ಹಣ್ಣಿಲ್ಲದ, ನೆರಳಿಲ್ಲದ ರಸಹೀನವಾದ ಜಾಲಿಯ ಮರ ಸಮಾಜ ಕಂಟಕರ ಇದೇ ಬಗೆಯ ಅವಗುಣಗಳನ್ನು ಧ್ವನಿಸುತ್ತದೆ. ಸತ್ಪುರುಷರಿಗೆ ದುರ್ಜನರು ಆಶ್ರಯ ಕೊಡುವುದಿಲ್ಲ. ದುರ್ಬಲರಿಗೆ ಸಹಾಯ ಮಾಡುವುದಿಲ್ಲ. ಜ್ಞಾನ ಗಂಧವಾಗಲೀ, ಸ್ನೇಹರಸವಾಗಲಿ ಅವರಲ್ಲಿಲ್ಲ. ಆಮೂಲಾಗ್ರವಾಗಿ ಕಂಟಕ ವೃತ್ತಿಯನ್ನೇ ಮೆರೆಸುವ ದುರ್ಜನರ ಸ್ವಭಾವ ಚಿತ್ರಣ ಈ ಕೀರ್ತನೆಯಲ್ಲಿ ಸಮರ್ಥವಾಗಿ ರೂಪಿತವಾಗಿದೆ.]

ಶಂಕರಾಭರಣ ಝಂಪೆ

ಪಂಚಮಹಾಪಾತಕಿಗೆ ಎಂತು ಬುದ್ಧಿಯು ಪೇಳೆ ತನ್ನ
ವಂಚನೆಯಿಂದಲಿ ತನಗೆ ತಾನೆ ಕೆಟ್ಟುಹೋಹನಲ್ಲದೆ ಪ

ಊರೆಲ್ಲ ತೊಳೆದರೆ ಮಸಿ ಬೆಳ್ಳಗಾಗುವುದೆ
ನೀರೊಳಗಿನ ಕಲ್ಲು ಮೃದುವಾಗಬಲ್ಲುದೆ
ಧಾರಿಣಿಯೊಳಗೊಬ್ಬ ಮೂರ್ಖನಿಗೆ ಬುದ್ಧಿಯನು
ಆರಾರು ಪೇಳಿದರೆ ಅವ ಕೇಳಬಲ್ಲನೆ ೧

ಹಾವಿನ ಮರಿಯ ತಂದು ಹಾಲನೆರೆದು ಸಾಕಿದರೆ
ಬಾಯಿಯೊಳಗಿನ ವಿಷವು ತಾ ಮಾಣಬಲ್ಲುದೆ
ನಾಯಿಕುನ್ನಿಯ ತಂದು ಜ್ಞಾನವನು ಹೇಳಿದರೆ
ಕಾಲು ಕಚ್ಚುವ ವಿದ್ಯ ಬಿಡಬಲ್ಲುದೆ ೨

ಕತ್ತೆಮರಿಯನೆ ತಂದು ಗಾನವನೆ ಹೇಳಿದರೆ
ಬಿತ್ತರಿಸಲದು ಮತ್ತೆ ಕೇಳುವರೆ ಬಲ್ಲುದೆ
ಹಿತ್ತಲ ತುರುಚಿಯ ತಂದು ಪನ್ನೀರನೆರೆದರೆ
ಒತ್ತಿದವರ ಹರಿಕೊಂಡು ತಿಂಬೋದು ಬಿಡಬಲ್ಲುದೆ ೩

ಹಂದಿಯ ಮರಿಗೆ ಶ್ರೀಗಂಧವ ಪೂಸಿದರೆ
ಸಂದುಗೊಂದಿನ ಬಯಕೆ ಬಿಡಬಲ್ಲುದೆ
ಮಂದವಾಗಿಹ ಗಜವ ತಂದು ಬುದ್ಧಿಯ ಹೇಳೆ
ಎಂದಿಗಾದರು ಜಾಗ್ರತೆಯು ಪುಟ್ಟಬಲ್ಲುದೆ ೪

ಹುಟ್ಟುಕುರುಡನ ಕೈಗೆ ಕನ್ನಡಿಯ ಕೊಟ್ಟರೆ
ಮುಟ್ಟಿ ತನ್ನಂಗವನು ನೋಡಿಕೊಳ್ಳಬಲ್ಲನೆ
ಸೃಷ್ಟಿಯೊಳು ಪುರಂದರವಿಠಲನ ದಾಸರ
ಕಷ್ಟಪಡಿಸಿದವರು ಕೆಟ್ಟುಹೋಹರಲ್ಲದೆ ೫

ಪಂಚಮಹಾಪಾತಕಿ— ಐದು ದೊಡ್ಡಪಾಪಗಳು, ಸಜ್ಜನರನ್ನು ಹಿಂಸಿಸುವುದು, ಹೆಂಡ ಕುಡಿಯುವುದು, ಚಿನ್ನವನ್ನು ಕದಿಯುವುದು, ಗುರುವಿನ ಹೆಂಡತಿ ಯೊಡನೆ ಕೂಡುವುದು ಮತ್ತು ಈ ಪಾಪಗಳನ್ನು ಮಾಡುವವರೊಂದಿಗೆ ಬೆರೆಯುವುದು.

ಧಾರಿಣಿ—ಭೂಮಿ.

ಊರೆಲ್ಲ—ಚೆನ್ನಾಗಿ, ಊರಿ ಎಲ್ಲ ; ಊರಿನ ಜನರೆಲ್ಲ.

ಮಾಣಬಲ್ಲಂದೆ—ಕಡಮೆಯಾದೀತೆ.

ಕೇಳುವರೆ ಬಲ್ಲುದೆ—ಕೇಳಬಹುದೆ.

ತುರುಚಿ—ಮುಟ್ಟಿದರೆ ನವೆಯಾಗುವ ಸೊಪ್ಪು.

ಸೌರಾಷ್ಟ್ರ ಆದಿ

ಹರಿ ಸರ್ವೋತ್ತಮನೆಂದು ಸ್ಮರಿಸದ ಜನರ ಸಂಗ ಬೇಡ ಪ

ಸಿರಿ ವಾಯುಮತ ಪೊಂದಿ ಹರುಷ ಪಡದವರ ಸಂಗ ಬೇಡ ಅ

ಮುಂದೆ ಭಲಾಯೆಂದು ಹಿಂದಾಡಿಕೊಂಬರ ಸಂಗ ಬೇಡ
ಎಂದೆಂದಿಗು ಪರರ ನಿಂದೆ ಮಾಡುವ ಪಾಪಿಸಂಗ ಬೇಡ
ತಂದೆತಾಯಿಗೆ ಮನಬಂದಂತೆ ನುಡಿವರ ಸಂಗ ಬೇಡ
ಇಂದುಮುಖಿಯರ ಮಾತಿನಂದದಿ ಕುಣಿವರ ಸಂಗ ಬೇಡ ೧

ತುದಿನಾಲಿಗೆ ಬೆಲ್ಲ ಎದೆ ವಿಷವುಳ್ಳವರ ಸಂಗ ಬೇಡ
ಬೆದರಿಕೆ ಮಾತುಗಳೊದರುವ ಜನರ ಸಂಗ ಬೇಡ
ಮದುವೆಯ ಕೆಡಿಸಿ ಮುದದಿ ನಲಿಯುವರ ಸಂಗ ಬೇಡ
ಉದರಕೋಸುಗ ವಿಧಿಕರ್ಮ ಕೆಡಿಸುವರ ಸಂಗ ಬೇಡ ೨

ತುಂಟತನವ ಮಾಡಿ ಕುಟಿಲವ ನುಡಿವರ ಸಂಗ ಬೇಡ
ಬಂಟನಾಗಿ ಧಣಿಯ ಗಂಟಲ ಪಿಡಿವರ ಸಂಗ ಬೇಡ
ಉಂಟು ತನಗೆಂದು ಬಡವರ ಸಂಗ ಬೇಡ
ನೆಂಟ ಪುರಂದರವಿಠಲ ಅನ್ನದವರ ಸಂಗ ಬೇಡ ೩

ತುದಿನಾಲಿಗೆ...—'ಮಧು ತಿಷ್ಠತಿ ಜಿಹ್ವಾಗ್ರೇ ಹೃದಯೇತು ಹಾಲಾಹಲಂ' ಎನ್ನುವ ಸುಭಾಷಿತದ ಕನ್ನಡರೂಪ.

ಉದರಕೋಸುಗ...—ಹೊಟ್ಟೆ ಹೊರೆದುಕೊಳ್ಳಲು ನಿತ್ಯನೈಮಿತ್ತಿಕ ಕರ್ಮಗಳನ್ನೆಲ್ಲ ಬಿಟ್ಟುಬಿಡುವವರು ; ಕೆಟ್ಟ ಕೆಲಸಗಳನ್ನು ಮಾಡುವವರು.

ಕಾಪಿ ಅಟ್ಟ

ಧರ್ಮ ಏಕಃ ಸಹಾಯಃ ಪ

ಪರಬ್ರಹ್ಮಮೂರುತಿಯ ಪಾದವ ಭಜಿಪ ಸುಜನರಿಗೆ ಅ

ಹರಿಭಕುತಿಯನು ಮಾಳ್ಪ ಪರಮಭಾಗವತರಿಗೆ
ಕರೆದು ಭೂಸುರರಿಗನ್ನವನಿತ್ತಗೆ
ಪರಸತಿಯರನು ಕಂಡು ಮನವೆಳಸದಿದ್ದವಗೆ
ಪರರುಪದ್ರವ ಬಿಡಿಸಿ ಪೊರೆವ ಸುಜನರಿಗೆಲ್ಲ ೧

ನಿತ್ಯ ನೇಮವ ಬಿಡದೆ ಸತ್ಯದಲಿ ನಡೆದವಗೆ
ವ್ಯರ್ಥವಾಗಿ ಹೊತ್ತು ಕಳೆಯದವಗೆ
ಚಿತ್ತಶುದ್ಧಿಯಲಿ ಪರವಸ್ತು ಹರಿಯನು ತನ್ನ
ಹೃತ್ಕಮಲಮಧ್ಯದಲಿ ಇಟ್ಟು ಭಜಿಪರಿಗೆಲ್ಲ ೨

ಮಾತೆಪಿತರುಗಳನ್ನು ಪ್ರಿಯದಲ್ಲಿ ಪೊರೆದವಗೆ
ಯಾತ್ರೆಗಳ ಮಾಳ್ಪ ಪುಣ್ಯಾತ್ಮನಿಗೆ
ಧಾತ್ರಿಯೊಳು ಪುರಂದರವಿಠಲನ ನಾಮವನು
ಕೀರ್ತನೆ ಮಾಡಿ ಲೋಲಾಡುತಿಹ ಸುಜನರಿಗೆ ೩

ನಿತ್ಯನೇಮ—ಶಾಸ್ತ್ರವಿಹಿತವಾದ ನಿತ್ಯಕರ್ಮಗಳು (ಸ್ನಾನ, ಆಹ್ನಿಕ ಇತ್ಯಾದಿ).
ಧಾತ್ರಿಯೊಳು—ಭೂಮಿಯ ಮೇಲೆ.

ನಾದನಾಮಕ್ರಿಯೆ ಅಟ್ಟ

ನಿಂದಕರಿರಬೇಕಿರಬೇಕು ಪ

ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗೆ ಅ

ಅಂದಂದು ಮಾಡಿದ ಪಾಪವೆಂಬ ಮಲ
ತಿಂದು ಹೋಗುವರಯ್ಯ ನಿಂದಕರು
ವಂದಿಸಿ ಸ್ತುತಿಸುವ ಜನರೆಲ್ಲರು ನಮ್ಮ
ಪೊಂದಿದ ಪುಣ್ಯವನೊಯ್ಯುವರಯ್ಯ ೧

ದುಷ್ಟಜನರು ಈ ಸೃಷ್ಟಿಯೊಳಿದ್ದರೆ
ಶಿಷ್ಟ ಜನರಿಗೆಲ್ಲ ಕೀರ್ತಿಗಳು
ಇಷ್ಟಪ್ರದ ಶ್ರೀಕೃಷ್ಣ ನಿನ್ನೊಳು
ಇಷ್ಟೇ ವರವನು ಬೇಡುವೆನಯ್ಯ ೨

ದುರುಳ ಜನಂಗಳು ಚಿರಕಾಲವಿರುವಂತೆ
ಕರವ ಮುಗಿದು ವರವ ಬೇಡುವೆನು
ಪರಿಪರಿ ತಮಸಿಗೆ ಗುರಿಯಹರಲ್ಲದೆ
ಪರಮ ದಯಾನಿಧೆ ಪುರಂದರವಿಠಲ ೩

[ಮಾಡಿದ ಕೆಟ್ಟ ಕೆಲಸದ ಕಾವು ಅವನ್ನು ಕಂಡು ಬಯ್ಯುವವರಿಂದ ಕಡಮೆಯಾಗುತ್ತದೆ; ಒಬ್ಬ ಮಾಡಿದ ಪಾಪ ಬೇರೆಯವರು ಮಾಡುವ ನಿಂದನೆಯಿಂದ ಪರಿಹಾರವಾಗುವುದೆಂದೂ, ಅದು ನಿಂದಕರಿಗೆ ಒದಗುವುದೆಂದೂ ಅಗ್ನಿಪುರಾಣದ ಮಾತಿದೆ. 'ಮಾಡಿದವರ ಪಾಪ ಆಡಿದವರಿಗೆ' ಎಂಬ ಕನ್ನಡ ಗಾದೆಗೆ ಇದೇ ಮೂಲ. ಹಾಗೆಯೇ ದಾನಧರ್ಮಾದಿಗಳನ್ನು ಮಾಡಿದಾಗ, ಬೇರೆಯವರು ಹೊಗಳಿದರೆ ಮಾಡಿದವರಿಂದ ಪುಣ್ಯವೂ ಹೊರಟುಹೋಗುತ್ತದೆ; ಹೊಗಳಿದವರಿಗೆ ಸಲ್ಲುತ್ತದೆ; ಅದಕ್ಕಾಗಿಯೇ ಪುಣ್ಯದ ಕೆಲಸವನ್ನು ಗುಟ್ಟಾಗಿ ಮಾಡಬೇಕೆನ್ನುವುದು. ಮತ್ತು, ಕೆಟ್ಟವರಿದ್ದು ಕಷ್ಟವನ್ನು ಕೊಡುತ್ತಿದ್ದರೆ, ಅವನ್ನು ತಾಳಿಕೊಳ್ಳುವುದು ತಪಸ್ಸೆನಿಸುತ್ತದೆ; ಸಾಧನೆಯೇ ಆಗಿ ಮಾರ್ಪಡುತ್ತದೆ. ಇದಕ್ಕೆ ಅವಕಾಶ ಮಾಡಿಕೊಡುವ ಜನ ಇರಲೇಬೇಕು; ಇಲ್ಲವಾದರೆ ಸಾಧನೆ ಕೈಗೂಡುವುದಿಲ್ಲ. ಇದೇ ಭಾವ ಮುಂದಿನ ಪದದಲ್ಲೂ ಕಾಣುತ್ತದೆ.]

ಕಾಪಿ ಏಕ

ಬೈಯಿರೋ ಬೈಯಿರೋ
ಮನಮುಟ್ಟಿ ಬೈಯಿರೋ ಪ

ಚೆನ್ನಾಗಿ ಬೈದೆನ್ನ ಧನ್ಯನ ಮಾಡಿರೋ ಅ

ಅವರು ಇವರು ಬೈವರೆಂಬೊ
ಹೀನಬುದ್ಧಿ ನನಗಿಲ್ಲ
ನಾ ಮಾಡಿದಷ್ಟು ಪಾಪವನ್ನು
ಅಳೆದುಹಾಕಿ ಹಂಚಿಕೊಳ್ಳಿರೋ ೧

ಇರುವೆ ನೊಣ ಕೊಂದ ಪಾಪ
ಪರನಿಂದೆಯ ಮಾಡಿದ ಪಾಪ
ಹೊಲೆಯ ಪಾಪ ಕೆಲವು ಉಂಟು
ಅಳೆದು ಹಾಕಿ ಹಂಚಿಕೊಳ್ಳಿರೋ ೨

ಅತ್ತೆಮಾವನ ಬೈದ ಪಾಪ
ಮತ್ತೆ ಹಿರಿಯರ ಜರಿದ ಪಾಪ
ಕರ್ತ ಶ್ರೀ ಪುರಂದರವಿಠಲನ್ನ
ಚಿತ್ತದಲ್ಲಿ ನೆನೆಯದ ಪಾಪ ೩

ಮೋಹನ ರಝಂಪೆ

ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡೆ ಜಗಳವೇ ಲೇಸು ಪ

ಉಂಬುಡುವುದಕ್ಕಿರುವ ಅರಸನೋಲಗಕಿಂತ
ತುಂಬಿದೂರೊಳಗೆ ತಿರಿದುಂಬುವುದೆ ಲೇಸು
ಹಂಬಲಿಸಿ ಹಾಳು ಹರಟೆ ಹೊಡೆವುದಕಿಂತ
ನಂಬಿ ಹರಿದಾಸರೊಳು ಪೊಂದಿ ಹಾಡುವುದೆ ಲೇಸು ೧

ಒಡನೆ ಹಂಗಿಸುವವನ ಪಾಲೋಗರಕ್ಕಿಂತ
ಕುಡಿ ನೀರು ಕುಡಿದುಕೊಂಡಿಹುದೆ ಲೇಸು
ಬಿಡದೆ ಬಡಿದಾಡುವರ ನೆರೆಯಲಿಹುದಕ್ಕಿಂತ
ಅಡವಿಯೊಳಗಜ್ಞಾತವಾಸವೇ ಲೇಸು ೨

ಮುಸೆದು ಮುತ್ಸರಿಪ ಸತಿಯೊಡನೆ ಸಂಸಾರಕ್ಕಿಂತ
ಹಸನಾದ ಹಾಳುಗುಡಿಯೆ ಲೇಸು
ಬಿಸಜಾಕ್ಷ ಪುರಂದರವಿಠ್ಠಲನ ನೆನೆನೆನೆದು
ವಸುಧೆಯೊಳು ಚಿರಕಾಲವಿರುವುದೆ ಲೇಸು ೩

ಪೊಂದಿ ಹಾಡುವುದೆ—ಸೇರಿ ಸಂಕೀರ್ತನೆಯನ್ನು ನಡೆಸುವುದೇ.

ಪಾಲೋಗರ—ಹಾಲನ್ನ.

ಕುಡಿ ನೀರು—ಕುಡಿಯುವ ನೀರು ; ಸೀನೀರು.

ಮುಸೆದು—ಜಗಳಕ್ಕೆ ಸಿದ್ಧವಾಗಿರುತ್ತ.

ಹಸನಾದ—ಬಿಸಿಲಿಗೆ, ಗಾಳಿಗೆ ಮರೆಯಾಗುವ.

ಕಾಂಬೋದಿ ಅಟ್ಟ

ಮಾನ ಹೀನನಿಗೆ ಅಭಿಮಾನವೇಕೆ ಪ

ಜ್ಞಾನವಿಲ್ಲದವಂಗೆ ಗುರುಬೋಧೆಯೇಕೆ ಅ

ಕಾಡೊಳಗೆ ತಿರುಗುವಗೆ ಕನಕಭೂಷಣವೇಕೆ
ಓಡೊಳಗೆ ತಿಂಬುವಗೆ ಹರಿವಾಣವೇಕೆ
ಬೇಡಿದರೆ ಕೊಡದಿಹಗೆ ಕಡು ಬಿಂಕತನವೇಕೆ
ಪಾಡಲರಿಯದವಂಗೆ ಪ್ರೌಢತನವೇಕೆ ೧

ಅಂಬಲಿಯನುಂಬುವಗೆ ಅಮೃತಾನ್ನ ತಾನೇಕೆ
ಕಂಬಳಿಯ ಹೊದೆವವಗೆ ಮಡಿಯೇತಕೆ
ಡೊಂಬಾಟವಿಕ್ಕುವಗೆ ಗಂಭೀರತನವೇಕೆ
ಹಂಬಲನು ಬಿಡದವಗೆ ಹರಿನಾಮವೇಕೆ ೨

ಭೂಸುರರ ಕೊಲುವವಗೆ ಭೂರಿ ಧರ್ಮಗಳೇಕೆ
ಭಾಷೆಗೆಟ್ಟವನಿಗೆ ನಂಬುಗೆಯದೇತಕೆ
ಕ್ಲೇಶ ಒಡಲೊಳಗಿರಲು ತೀರ್ಥಯಾತ್ರೆಗಳೇಕೆ
ಆಸೆ ಬಿಡದಿದ್ದವಗೆ ಸನ್ಯಾಸವೇಕೆ ೩

ಮಿತಿಮೀರಿ ನಡೆವವಗೆ ವ್ರತ ನೇಮಗಳು ಏಕೆ
ಸತಿಗೆ ಅಳುಕುವನ ಸಾಹಸವು ಏಕೆ
ಮತಿ ಶುದ್ಧಿಯಿಲ್ಲದ ಮಂತ್ರ ತಂತ್ರಗಳೇಕೆ
ಗತಿಯ ಚಿಂತಿಸದವನ ವಿಪ್ರತ್ವವೇಕೆ ೪

ಸಾಮಾನ್ಯನಿಗೆ ಸಾರ್ವಭೌಮ ಪದವಿಯದೇಕೆ
ಪ್ರೇಮವಿಲ್ಲದ ಬಂಧುಜನವೇತಕೆ
ಸ್ವಾಮಿ ಶ್ರೀ ಪುರಂದರವಿಠಲನ ನೆನೆಯದಿಹ
ತಾಮಸಾಧಮನಿಗೆ ಕೈವಲ್ಯವೇಕೆ ೫

ಓಡು—ಮಡಕೆಯ ಚೂರು.

ಹರಿವಾಣ—ಚಿನ್ನದ ತಟ್ಟೆ.

ಬಿಂಕತನ—ಹೆಮ್ಮೆ.

ಪ್ರೌಢತನ—ಗರ್ವ.

ಮಡಿ—ಒಗೆದು, ಗಂಜಿಹಾಕಿದ ಬಟ್ಟೆ.

ಡೊಂಬಾಟವಿಕ್ಕುವಗೆ—ಜನರೆದುರು ಬೀದಿಯಲ್ಲಿ ಲಾಗಹಾಕುವವನಿಗೆ.

ಭೂಸುರರ—ಸಜ್ಜನರನ್ನು.

ಭೂರಿ ಧರ್ಮ—ಹೆಚ್ಚಾದ ದಾನ, ಆಡಂಬರದಿಂದ ಮಾಡುವುದು.

ಭಾಷೆಗೆಟ್ಟವಗೆ—ಕೊಟ್ಟ ಮಾತನ್ನು ನಡೆಸದವನಿಗೆ.

ಕ್ಲೇಶ—ಅವಿದ್ಯೆ, ಅಸ್ಮಿತಾ (ಅಹಂಕಾರ), ರಾಗ, ದ್ವೇಷ, ಅಭಿನಿವೇಶಗಳು ಪಂಚ ಕ್ಲೇಶಗಳೆನಿಸಿಕೊಳ್ಳುತ್ತವೆ.

ಗತಿಯಂ...—ಮೋಕ್ಷವನ್ನು ಬಯಸದವನು ಬ್ರಾಹ್ಮಣನಾಗಿ ಏನು ಪ್ರಯೋಜನ ?

ತಾಮಸಾಧಮನಿಗೆ—ನೀಚನಿಗೆ.

ಕಾಂಬೋದಿ ಝಂಪೆ

ತಾ ಪಡೆದುಬಂದುದಕುಪಾಯವೇನು ಪ

ಕೋಪದಲಿ ಶ್ರೀಪತಿಯು ಶಪಿಸಿದರೇನು ಅ

ಅನ್ನಕಿಲ್ಲವು ಎಂದು ಅತಿ ದೈನ್ಯಪಡಲೇನು
ಮನ್ನಣೆಯ ಸೌಭಾಗ್ಯ ಬಯಸಲೇನು
ತನ್ನ ಶಿರ ಅಡಿಮಾಡಿ ತಪವ ಮಾಡಿದರೇನು
ಎಣ್ಣೆಯನು ಪೂಸಿ ಹುಡಿಯೊಳಗೆ ಉರುಳಾಡಲೇನು ೧

ಸರಿಯ ಜನರನು ನೋಡಿ ಕರುಬಿ ಕೂಗಿದರೇನು
ಬರಿಯ ನಿಂದೆಯ ಮಾಡಿ ಪರಚಿಕೊಳಲೇನು
ಇರುಳು ಹಗಲೊಂದಾಗಿ ಕುದಿದು ಸೊರಗಿದರೇನು
ಅರಿಯದ ಮನುಜರಿಗೆ ಆಲ್ಪರಿದರೇನು ೨

ಕಂಡ ದೇವತೆಗಳಿಗೆ ಕೈಯ ಮುಗಿದರೆ ಏನು
ಪುಂಡತನದಲಿ ಜಗವ ಚರಿಸಿದರೆ ಏನು
ಮಂಡಲಾಧಿಪ ನಮ್ಮ ಪುರಂದರವಿಠ್ಠಲನ
ಕೊಂಡಾಡುವುದಕಿನ್ನು ಸಂದೇಹವೇನು ೩

[ಪ್ರತಿಯೊಬ್ಬನೂ ತನ್ನ ಪೂರ್ವಕರ್ಮಕ್ಕನುಗುಣವಾಗಿ ಸುಖದುಃಖಗಳನ್ನೂ, ಜಯಾಪಜಯಗಳನ್ನೂ, ಐಶ್ವರ್ಯ ದಾರಿದ್ರ್ಯಗಳನ್ನೂ, ಮಾನಾಪಮಾನಗಳನ್ನೂ ಪಡೆಯುತ್ತಾನೆ. 'ಮಾಡಿದ ಕರ್ಮ ಬಲವಂತವಾದರೆ' ಯಾರೇನು ಮಾಡಿಯಾರು? ತನ್ನ ಅಸಹಾಯಕತೆಯ ಪರಿಣಾಮವಾಗಿ ವ್ಯಕ್ತಿಯು ದೈನ್ಯ, ಕಪಟ, ಅಸೂಯೆ, ಕೊರಗು, ಮೊದಲಾದ ಭಾವಗಳನ್ನು ಸಾಂದರ್ಭಿಕವಾಗಿ ಪ್ರಕಟಿಸುತ್ತ ಹೋಗುತ್ತಾನೆ. ಈ ಬಗೆಯ ಭಾವಪ್ರದರ್ಶನದಿಂದ ಪ್ರಯೋಜನವಿಲ್ಲ ಎಂಬ ಭಾವ.]

ಪೂಸಿ—ಹಚ್ಚಿಕೊಂಡು.

ಹುಡಿಯೊಳಗೆ—ಮಣ್ಣಿನಲ್ಲಿ.

ಆಲ್ಪರಿ—ಗೋಳಾಡು.

೯೮

ಮುಖಾರಿ — ಝಂಪೆ

ಮೂಢ ಬಲ್ಲನೆ ಜ್ಞಾನ ದೃಢಭಕ್ತಿಯು
ಕಾಡಕಪಿ ಬಲ್ಲುದೇ ಮಾಣಿಕದ ಬೆಲೆಯು ಪ

ಕೋಣ ಬಲ್ಲುದೆ ವೀಣೆ ನುಡಿಯುವ ಸುನಾದವನು
ಗೋಣಿ ಬಲ್ಲುದೆ ಎತ್ತಿನ ದುಃಖವ
ಪ್ರಾಣ ತೊಲಗಿದ ದೇಹ ಕಿಚ್ಚಿಂದು ಬಲ್ಲುದೆ
ಕ್ಷೋಣಿಯೊಳು ಕುರುಡ ಬಲ್ಲನೆ ಹಗಲು ಇರುಳ ೧

ಬಧಿರ ಬಲ್ಲನೆ ಸುಸಂಗೀತ ಸ್ವಾರಸ್ಯವನು
ಚದುರನುಡಿಯಾಡಬಲ್ಲನೆ ಮೂಕನು
ಕ್ಷುಧೆ ಇಲ್ಲದಾ ಮನುಜ ಅಮೃತಾನ್ನ ಸವಿದಪನೆ
ಮಧುರ ವಚನವ ಬಲ್ಲನೆ ದುಷ್ಟ ಮನುಜ ೨

ಅಜ ಬರೆದ ಬರಹವನು ತೊಳೆಯಬಲ್ಲನೆ ಜಾಣ
ನಿಜಭಕ್ತಿ ಮುಕ್ತಿ ಸುಖವನು ಕೊಡುವ
ಭುಜಗೇಂದ್ರಶಯನ ಸಿರಿಪುರಂದರವಿಠ್ಠಲನ
ಭಜಿಸಲರಿಯದವ ಬಲ್ಲನೆ ಮುಕ್ತಿ ಸುಖವ ೩

ಗೋಣಿ—ಹೊರೆ ; ಭಾರ.
ಕಿಚ್ಚಿಂದು—ಹೆಣವನ್ನು ಬೆಂಕಿಗೆ ಒಡ್ಡಿದಾಗ, ಬೆಂಕಿಯೆಂದು ಹೆಣ ತಿಳಿಯಬಲ್ಲುದೆ ?
ಕ್ಷೋಣಿಯೊಳು—ಭೂಮಿಯ ಮೇಲೆ.
ಬಧಿರ—ಕಿವುಡ.
ಕ್ಷುಧೆ—ಹಸಿವೆ.
ಅಜ—ಬ್ರಹ್ಮ.

ಮಧ್ಯಮಾವತಿ ಆದಿ

ಆರ ಹಾರೈಸಿದರೇನುಂಟು ಬರೆ
ನೀರ ಕಡೆದರಲ್ಲೇನುಂಟು ಪ

ಅಂತರವರಿಯದ ಅಧಮನ ಬಾಗಿಲ
ನಿಂತು ಕಾಯ್ದರಲ್ಲೇನುಂಟು
ಎಂತಾದರಲ್ಲಿಯು ತಪ್ಪ ಸಾಧಿಸಿ ತಾ ಯಮ
ನಂತೆ ಕೊಲುವನಲ್ಲೇನುಂಟು ೧

ಕೊಟ್ಟೆಕೊಟ್ಟೆನೆಂದು ಕೊಡದುಪಚಾರದ
ಭ್ರಷ್ಟನ ಸೇರಿದರೇನುಂಟು
ಬಿಟ್ಟಿಯ ಮಾಡಿಸಿ ಬೆದರಿಸಿ ಬಿಡುವ ಕ
ನಿಷ್ಠನ ಸೇರಿದರೇನುಂಟು ೨

ಪಿಸುಣನ ಕುದುರೆಯು ಮುಂದೋಡಲು ಬರಿ
ಬಿಸಿಲಿನ ಹಣ್ಣಲ್ಲದೇನುಂಟು
ವಸುಧೆಯೊಳಗೆ ನಮ್ಮ ಪುರಂದರವಿಠಲನೆಂ
ದುಸುರಲು ಮುಕ್ತಿಯ ಫಲವುಂಟು ೩

[ಸಮಾಜದಲ್ಲಿ ಹೇರಳ ಸಂಖ್ಯೆಯಲ್ಲಿರುವ ಭ್ರಷ್ಟರು, ಕನಿಷ್ಠರು, ಅಧಮರು, ಪಿಸುಣರು, ಪೀಡಕರು, ದೋಷಸಾಧಕರು ಮೊದಲಾದವರನ್ನು ಆಶ್ರಯಿಸುವುದು ಸರಿಯಲ್ಲ ಎಂದು ದಾಸರ ವಿಚಾರಸರಣಿ.]

ಆರ ಹಾರೈಸಿದರೆ—ಯಾರ ಮುಂದೆ ಬಯಸಿ ಬೇಡಿದರೂ ಏನು ಫಲ ?
ಅಂತರವರಿಯದ—ಒಳ್ಳೆಯವರು ಕೆಟ್ಟವರು, ಪಾತ್ರರು ಅಪಾತ್ರರು, ನಿಷ್ಠರು ಭ್ರಷ್ಟರು ಎಂಬ ವ್ಯತ್ಯಾಸವನ್ನು ತಿಳಿಯದ.
ಬಿಟ್ಟಿ—ಚಾಕರಿ.
ಪಿಸುಣ—ಚಾಡಿಕೋರ, ನೀಚ.
ಬಿಸಿಲಿನ ಹಣ್ಣು—ಬಿಸಿಲಲ್ಲಿ ಸುತ್ತಿ ಹಣ್ಣಾಗುವುದು.
ವಸುಧೆ—ಭೂಮಿ.

ಹೆಣ್ಣು ಹೊನ್ನು ಮಣ್ಣು

ಮಾಯೆ, ಆಸ್ತಿ, ಅಧಿಕಾರ ವ್ಯಾಮೋಹ ಯಾರನ್ನೂ ಬಿಟ್ಟದ್ದಲ್ಲ. ಇವೆಲ್ಲಾ ಕಾಮನ ಬಿಲ್ಲಿನ ಹಾಗೆ, ಮಿಂಚಿನ ಹಾಗೆ, ಮಂಜಿನ ಹಾಗೆ ಈಗ ತೋರಿ ಮರುಕ್ಷಣವೇ ಮರೆಯಾಗುವಂಥವು ಎಂದು ವರ್ಣನೆಗಳಿವೆ. ಈ ಮೂರರ ಆಸೆಗೆ ಬಿದ್ದು ಪುಣ್ಯಪಾಪವನ್ನು ತಿಳಿಯದೆ ಇದ್ದು ಜೀವಗಳು ಸಂಕಟಪಡುತ್ತವೆ ಎಂದು ಪುರಂದರದಾಸರು ಮಾರ್ಮಿಕವಾಗಿ ತಿಳಿಸಿದ್ದಾರೆ. ನಾರಿ, ಧಾರುಣಿ, ಬಹುಧನದ ಸಿರಿ ಈ ಮೂರರಲ್ಲಿ ಯಾರೂ ಜೀವಕ್ಕೆ ಹಿತರಲ್ಲ ಎಂಬುದು ಅವರ ಅಭಿಪ್ರಾಯವಾಗಿದೆ (ನಾರಿಯರ ದೃಷ್ಟಿಯಿಂದ ನೋಡುವಾಗ ಹೆಣ್ಣಿನ ಬದಲಿಗೆ 'ಪುರುಷ' ಎಂಬ ಶಬ್ದವನ್ನು ಸೇರಿಸಿಕೊಳ್ಳಬಹುದು). ನಮ್ಮ ಐಹಿಕ ಸಂಸಾರದ ಬಲವಾದ ಕೋಟೆ ಕಟ್ಟಿಕೊಳ್ಳಲು ಈ ಮೂರರ ಒತ್ತಡವೇ ಮೂಲಕಾರಣ. ಸ್ತ್ರೀಮೊಹ (ಅಥವಾ ಸ್ತ್ರೀಗೆ ಪುರುಷ ಮೋಹ) ಸಂಸಾರಿಗಳಿಂದ ಮಾಡಬಾರದ ಕೆಲಸವನ್ನು ಮಾಡಿಸುತ್ತದೆ. ಲೋಕದಲ್ಲಿ ಕಾಮನ ಅಟ್ಟುಳಿ ಘನವಾಗುತ್ತ ಬಂದಂತೆಲ್ಲ ಲೋಕದ ಕೆಲಸವೆಲ್ಲ ಕೆಡುತ್ತದೆ. ಹಿತಶತ್ರುವಾಗಿ ಒಂದು ನಿಮಿಷ ರತಿಕೊಟ್ಟು ನಿತ್ಯ ಮುಕ್ತಿಯನ್ನು ಕಳೆಯುವುದು 'ಕಾಮ' ಎಂದು ಪುರಂದರದಾಸರು ವರ್ಣಿಸುತ್ತಾರೆ. ಹೊನ್ನಿನ ಅಥವಾ ಅಧಿಕಾರದ ಆಸೆಯೂ ಇದಕ್ಕೆ ಕಡಿಮೆಯದೇನಲ್ಲ. ಮುನ್ನ ಶತಕೋಟಿ ರಾಯರುಗಳು ಆಳಿದ ಈ 'ನೆಲ'ವನ್ನು ನಮ್ಮದು ಎಂದು ಶಾಸನ ಬರೆಯುತ್ತೇವೆ. ಬಿನ್ನಣದ ಮನೆ ಕಟ್ಟುತ್ತೇವೆ. ಅದನ್ನು ಉಳಿಸಿಕೊಳ್ಳಲು ಕೋಟೆ ಕೊತ್ತಳ ನಿರ್ಮಿಸುತ್ತೇವೆ. ಧನಸಂಪಾದನೆಯ ಮಾದರಿಯೂ ಇದಕ್ಕಿಂತ ಭಿನ್ನವೇನಲ್ಲ. ಉದ್ಯೋಗ, ವ್ಯವಹಾರ, ಚಾಕರಿ, ಕುಶಲಕರ್ಮ, ಕಳವು, ಪರದ್ರೋಹ ಮೊದಲಾದ ನಾನಾ ಮಾರ್ಗಗಳಲ್ಲಿ ಹೇರಳವಾದ ಆಸ್ತಿಯನ್ನು ಸಂಪಾದಿಸಲು ನೋಡುತ್ತೇವೆ. ಹೀಗೆ ಸಂಪಾದಿಸಿದ ಅತಿಶಯವಾದ ರೊಕ್ಕ ನಮ್ಮ 'ತುಂಟ ತನು' ಗಳನ್ನು ಬಲಿಸಿ ಹಾಳುಮಾಡುತ್ತದೆ. ಈ ಮೂರರ ಆಧಿಕ್ಯದಿಂದ ನಮಗೆ

"ಸಂಸಾರ ಬಲು ಖೊಟ್ಟಿ
ಆದರೊಳು ಬಿದ್ದಿದ್ದಿ ಕಾಲ್ಕಟ್ಟಿ"

ಎಂಬ ಅರಿವು ಮೂಡಬೇಕು. ತುದಿಮೊದಲಿಲ್ಲದ ನೋವನ್ನು ತರುವ ಇವುಗಳ ಹಿಡಿತಕ್ಕೆ ಸಿಕ್ಕದೆ ಜೀವನ ನಡೆಸಬಲ್ಲವರು ಈ ಮೂರನ್ನು ಉತ್ತಮವಾಗಿ ತಮ್ಮ ಏಳಿಗೆಗೆ ದುಡಿಸಿಕೊಳ್ಳುವುದನ್ನು ಕಲಿಯಬೇಕು. ಈ ಸಮನ್ವಯದ ಹಾದಿ ತಿಳಿದವರಿಗೆ ಈ ಮೂರೂ ತೊಡಕಾಗುವುದಿಲ್ಲ. ತಮ್ಮ ಸತ್ತ್ವಗಳನ್ನು ಮಾತ್ರ ಪ್ರಕಟಿಸಿ ಬದುಕಿನಲ್ಲಿ ಹಿತ ತರುತ್ತವೆ.

ಹೆಣ್ಣು ಬದುಕಿನಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಬಗೆಗೂ ಪುರಂದರದಾಸರು ಚಿಂತಿಸಿದಾರೆ. ಪರಸತಿ, ಪರವಿತ್ತಗಳಿಗೆ ಆಸೆ ಪಡದಂತೆ ಪುರುಷ ಗಣಕ್ಕೆ ಹಿತವಾದ ಹೇಳಿದ್ದಾರೆ. ಹೆಣ್ಣು ಗೃಹಕೃತ್ಯದಲ್ಲಿ ನಿರ್ವಹಿಸಬೇಕಾದ ಕೆಲವು ಜವಾಬ್ದಾರಿಗಳನ್ನೂ ಉಪದೇಶ ರೂಪದಲ್ಲಿ ಹೇಳಿದ್ದಾರೆ.

ಕಾಂಬೋದಿ ಝಂಪೆ

ಆರು ಹಿತವರು ನಿನಗೆ
ಮೂರು ಮಂದಿಯೊಳಗೆ ಪ

ನಾರಿಯೋ, ಧಾರುಣಿಯೋ
ಬಲು ಧನದ ಸಿರಿಯೋ ಅ

ಅನ್ಯರಲಿ ಜನಿಸಿರ್ದ ಅಂಗನೆಯ ಕರೆತಂದು
ತನ್ನ ಮನೆಗವಳ ಯಜಮಾನಿ ಎನಿಸಿ
ಭಿನ್ನವಿಲ್ಲದೆ ಅರ್ಧದೇಹವೆನಿಸುವ ಸತಿಯು
ಕಣ್ಣಿನಲಿ ನೋಡಲಮ್ಮಳು ಕಾಲವಶದಿ ೧

ಮುನ್ನ ಶತಕೋಟಿ ರಾಯರುಗಳಾಳಿದ ನೆಲನ
ತನ್ನದೆಂದೆನುತ ಶಾಸನವ ಬರೆಸಿ
ಬಿನ್ನಣದ ಮನೆಕಟ್ಟಿ ಕೋಟೆ ಕೊತ್ತಳವಿಕ್ಕಿ
ಚೆನ್ನಿಗನು ಅಸುವಳಿಯೆ ಹೊರಗೆ ಹಾಕುವರು ೨

ಉದ್ಯೋಗ ವ್ಯವಹಾರ ನೃಪಸೇವೆ ಕುಶಲಗತಿ
ಕ್ಷುದ್ರತನ ಕಳವು ಪರದ್ರೋಹದಿಂದ
ಬುದ್ಧಿಯಿಂದಲಿ ಗಳಿಸಿ ಇಟ್ಟಿದ್ದ ಅರ್ಥವನು
ಸದ್ಯದಲಿ ಆರುಂಬುವರು ಪೇಳೊ ಮನುಜ ೩

ಶೋಕವನು ಗೈಯುವರು ಸತಿಸುತರು ಬಾಂಧವರು
ಜೋಕೆ ತಪ್ಪಿದ ಬಳಿಕ ಅರ್ಥ ವ್ಯರ್ಥ
ಲೋಕದೊಳು ಗಳಿಸಿರ್ದ ಪುಣ್ಯಪಾಪಗಳೆರಡು
ಸಾಕಾರವಾಗಿ ಸಂಗಡ ಬಾಹೊವಲ್ಲದೆ ೪

ಅಸ್ಥಿರದ ದೇಹವನು ನೆಚ್ಚಿ ನೀ ಕೆಡಬೇಡ
ಸ್ವಸ್ಥದಲಿ ನೆನೆ ಕಂಡ್ಯ ಪರಮಾತ್ಮನ
ಚಿತ್ತದೊಳು ಶುದ್ಧಿಯಿಂ ಪುರಂದರವಿಠಲನೆ
ಉತ್ತಮೋತ್ತಮನೆಂದು ಸುಖಿಯಾಗೊ ಮನುಜ ೫

[ಶಾಶ್ವತವಾದದ್ದೆಂದು ಭ್ರಮಿಸಿ ನಾವು ಪೋಷಿಸುತ್ತ ಹೋಗುವ ಕಾಮ, ಅರ್ಥ, ಅಧಿಕಾರ ಇವು ಯಾವುವೂ ನಮಗೆ ಕೊನೆಯಲ್ಲಿ ಸುಖವನ್ನು ತಂದುಕೊಡಲಾರವು ಎಂಬ ಭಾವವನ್ನು ಬಿಂಬಿಸುವ ಪದ ಇದು.]

ನೋಡಲಮ್ಮಳು ಕಾಲವಶದಿ—ಕಾಲ ಕಳೆದಂತೆ ಕಣ್ಣೆತ್ತಿ ನೋಡಲು ಕೂಡ ಬಯಸಳು ; ಅಮ್ಮು, ಅಣ್ಮು, ಬಯಕೆ.

ಬಿನ್ನಣದ ಮನೆ—ಚೊಕ್ಕವಾದ, ಚೆಲುವಾದ ಮನೆ (ಬಿನ್ನಣ, ಬಿನ್ನಾಣ ; ವಿಜ್ಞಾನದ ತದ್ಭವ).

ಚೆನ್ನಿಗನು ಅಸುವಳಿಯೆ—ಚೆಲುವನು ಪ್ರಾಣಬಿಟ್ಟರೆ.

ಮೋಹನ ಆದಿ

ಕೆಟ್ಟಿತು ಕೆಲಸವೆಲ್ಲ, ಲೋಕದಿ ಕಾಮು
ನಟ್ಟುಳಿ ಘನವಾಯಿತು ಪ

ಬಟ್ಟೆ ತಪ್ಪಿತು ಮುಂದೆ ಕಟ್ಟು ಕರ್ಮಿಯಾಗಿ
ಬಿಟ್ಟು ಮುಂದಿನ ಪಥವ ಹೇ ದೇವ ಅ

ಸತ್ಯ ಶೌಚ ಕರ್ಮ ಧರ್ಮದ ಬಲ
ಮತ್ತೆ ಅಡಗಿಹೋಯಿತು
ಎತ್ತ ನೋಡಲು ನೀಚ ವೃತ್ತಿಯು ತುಂಬಿ
ಅತ್ಯಂತ ಪ್ರಬಲಾಯಿತೋ, ಹೇ ದೇವ ೧

ಹೊತ್ತು ಹೊತ್ತಿಗೆ ಹಲವು ಲಂಪಟತನದಿ
ಚಿತ್ತ ಚಂಚಲವಾಯಿತು
ಸತ್ತು ಹುಟ್ಟುವ ಸುಳಿಯಿಲ್ಲದೆ ಮತ್ತೊಂದು
ಗೊತ್ತು ಇಲ್ಲದೆ ಹೋಯಿತೋ, ಹೇ ದೇವ ೨

ಹೇಳುವುದೇನಿನ್ನು ದುರ್ಜನ ಸಂಗ
ದೋಲಾಟ ಸೊಗಸಾಯಿತು
ಕೀಳು ಮೇಲಾಗಿ ಮೇಲು ಕೀಳಾಗಿ ನಡೆವ
ಕಾಲ ವೆಗ್ಗಳವಾಯಿತೋ, ಹೇ ದೇವ ೩

ಆಳುವ ನೃಪರಿಗೆಲ್ಲ ಕಾಂಚನದಾಸೆ
ಮೇಲು ಮೇಲಾಯಿತಯ್ಯ
ನೀಲ ಮೇಘಶ್ಯಾಮ ನಿನ್ನಾಳೆಂಬುವರಿಗೆ
ಕೂಳು ಹುಟ್ಟದೆ ಹೋಯಿತೋ, ಹೇ ದೇವ ೪

ಅರಿಷಡ್ವರ್ಗದಿ ಸಿಲುಕಿ, ಸುಜ್ಞಾನದ
ಅರಿಕೆಯಿಲ್ಲದೆ ಹೋಯಿತೋ
ಕರುಣಾಳು ಶ್ರೀ ಪುರಂದರವಿಠಲ ನಿನ್ನ
ಸ್ಮರಣೆಯಿಲ್ಲದೆ ಹೋಯಿತೋ, ಹೇ ದೇವ 3

ಅಟ್ಟುಳಿ—ಪೀಡೆ, ಹಿಂಸೆ, ಕಾಟ.

ಬಟ್ಟೆ ತಪ್ಪಿತು—ದಾರಿ ತಪ್ಪಿತು.

ಸತ್ತು ಹುಟ್ಟುವ ಸುಳಿ—ಸಂಸಾರಚಕ್ರ.

ವೆಗ್ಗಳ—ಅತಿಶಯ.

ಅರಿಷಡ್ವರ್ಗದಿ—ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಆರರಲ್ಲಿ.

೧೦೨

ಕಾಂಬೋದಿ ಝಂಪೆ

ಹೆಣ್ಣಿಗಿಚ್ಛೈಸುವರೆ ಮೂಢ ಇದನು
ಕಣ್ಣು ಮೈಮನಗಳಿಂ ಸೋಂಕಲೆ ಬೇಡ ಪ

ತಾಯಾಗಿ ಮೊದಲೆ ಪಡೆದಿಹುದು ಮತ್ತು
ಜಾಯೆ ಎಂದೆನಿಸಿ ಕಾಮದಿ ಕೆಡಹುವುದು
ಕಾಯದೊಳು ಜನಿಸುತ್ತಲಿಹುದು ಇಂತು
ಮಾಯೆಯು ನಿನ್ನ ಬಹು ವಿಧದಿ ಕಾಡುತಲಿಹುದು ೧

ಹಿತಶತ್ರುವಾಗಿ ಪೊಂದುವುದು ನಿಮಿಷ
ರತಿಗೊಟ್ಟು ನಿತ್ಯಮುಕ್ತಿಯ ಕಳೆಯುವುದು
ಕ್ಷಿತಿಯ ಪೂಜ್ಯತೆ ಕೆಡಿಸುವುದು ಮುಂದೆ
ಶತ ಜನ್ಮಂಗಳಿಗೆ ಹೊಣೆಯಾಗಿ ನಿಲ್ಲುವುದು ೨

ಬಗೆಬಗೆ ತನು ಎಲುಬುನರಖಂಡ ಅದ
ರೊಳಗೆ ವಾಯು ರಂಧ್ರ ಕೊಳೆಯುದ್ದಂಡ
ಭಗವೆಂಬುದು ಮೂತ್ರದ ಭಾಂಡ ಅದ-ಅ
ವಗಡಿಸದೆ ನಿಜಸುಖವಿಲ್ಲ ಕಂಡ್ಯ ೩

ವಶವಾದ ವಾಲಿಯ ಕೊಲಿಸಿಹುದು ಹೀಗೆ
ಹೆಸರು ಮಾತ್ರದಿ ದಶಕಂಠನನ್ನಳಿಸಿಹುದು
ಶಚಿಪತಿಯಂಗದಿ ಭಗಕ್ಷಯ ಹೀಗೆ
ಹೆಸರು ಪಡೆದ ಕೀಚಕನನಳಿಸಿಹುದು ೪

ಪಶುಪತಿ ದೆಸೆಗೆಡಿಸಿಹುದು ಹೀಗೆ
ವಸುಧೆಯೊಳು ಜೀವರ ಹಸಗೆಡಿಸಿಹುದು
ವಸುಧೀಶನ ನಾಮ ಮರೆಸಿ ನಮ್ಮ
ಅಸಮ ಪುರಂದರವಿಠ್ಠಲನ ತೊರೆಸುವುದು ೫

ಜಾಯೆ—ಹೆಂಡತಿ.

ಅವಗಡಿಸದೆ—ಅಸಡ್ಡೆ ಮಾಡದೆ.

ವಶವಾದ ವಾಲಿಯು ಕೊಲಿಸಿಹುದು—ಸ್ತ್ರೀ ಮೋಹ ಪರವಶನಾದ ವಾಲಿಯ ಪ್ರಸಂಗ; ಸುಗ್ರೀವನ ಹೆಂಡತಿಯಾದ ರುಮೆಯನ್ನು ಮೋಹಿಸಿದ್ದೇ ವಾಲಿಯ ವಧೆಗೆ ಕಾರಣವಾಯಿತು.

ಹೆಸರು ಮಾತ್ರದಿ ದಶಕಂಠನನ್ನುಳಿಸಿಹುದು—ರಾವಣನು ನಾಮಾವಶೇಷನಾದ.

ಪಶುಪತಿ ದೆಸೆಗೆಡಿಸುವುದು—ವಿಷ್ಣು ಮೋಹಿನೀ ರೂಪವನ್ನು ತಾಳಿ ಬಂದಾಗ ಶಿವನು ಮೋಹಪರವಶನಾದ ಪ್ರಸಂಗ.

ಶಚಿಪತಿಯುಂಗದಿ ಭಗಕ್ಷಯ—ಇಂದ್ರನು ಗೌತಮ ಪತ್ನಿಯಾದ ಅಹಲ್ಯೆಯನ್ನು ಕಾಮಿಸಿ, ಯೋನಿನಾಶವಾಗಲಿ (ಭಗಕ್ಷಯ) ಎಂಬ ಶಾಪವನ್ನು ತಳೆದ ಪ್ರಸಂಗ.



ಪಂತುವರಾಳಿ — ಅಟ್ಟ

ಹೆಂಡತಿ ಪ್ರಾಣ ಹಿಂಡುತಿ ದೊಡ್ಡ
ಕೊಂಡ ಕೋತಿಯಂತೆ ಕುಣಿಕುಣಿಸುತ್ತಿ ಪ

ಹೊತ್ತಾರೆ ಏಳುತ್ತಿ ಹೊರಗೆ ತಿರುಗಾಡುತ್ತಿ
ಹೊತ್ತು ಹೋಯಿತು ಭತ್ಯ ತಾ ಯೆನ್ನುತ್ತಿ
ಉತ್ತಮ ಗುರುಹಿರಿಯರ ಮಾತು ಮಿಾರುತ್ತಿ
ಮೃತ್ಯು ದೇವತೆಯಂತೆ ಮನೆಯೊಳಗಿರುತಿ ೧

ಇಲ್ಲದ್ದು ಬೇಡುತ್ತಿ ಸುಳ್ಳು ಮಾತಾಡುತ್ತಿ
ಒಳ್ಳೆ ಊಟವನುಂಡು ಕುಳಿತಿರ್ಪೆನೆಂತಿ
ಎಳ್ಳಿನಷ್ಟು ಕೆಲಸ ಮಾಡಲಾರೆನೆಂತಿ
ಎಲ್ಲೆಲ್ಲಿ ತಲೆಯೆತ್ತದಹಾಗೆ ಮಾಡುತ್ತಿ ೨

ಹಿರಿಯತನಕೆ ಹೋಗುತ್ತಿ ಗರುವಿಕೆ ಮಾಡುತ್ತಿ
ನೆರೆಹೊರೆಯರ ಕೂಡ ಬಡಿದಾಡುತ್ತಿ
ದೊರೆ ಸಿರಿ ಪುರಂದರವಿಠಲನ ಸ್ಮರಿಸಿದೆ
ದುರಿತಕ್ಕೆ ಗುರಿಯಾಗಿ ನೀ ನಿಲ್ಲುತ್ತಿ ೩

[ದಾಂಪತ್ಯದಲ್ಲಿ ಸುಖ ಕಾಣಬೇಕಾದರೆ ಹೆಂಡತಿ–ಗಂಡ ಇವರ ಚರ್ಯೆಗಳಲ್ಲಿ ಅನ್ಯೋನ್ಯತೆಯಿರಬೇಕು. ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವ ಹೃದಯವಂತಿಕೆ ಇರಬೇಕು. ಆದರೆ ತಾಳ ತಪ್ಪಿದ ದಾಂಪತ್ಯದಲ್ಲಿ ಇಬ್ಬರಲ್ಲಿ ಒಬ್ಬರು ಶೋಷಕರಾಗುತ್ತಾರೆ. ಇನ್ನೊಬ್ಬರ ನೆಮ್ಮದಿಯನ್ನು ತಪ್ಪಿಸುತ್ತಾರೆ. ಈ ಪದದಲ್ಲಿ ಅಂಥ ವಿಷಮ ದಾಂಪತ್ಯದ ಹೆಂಡತಿಯೊಬ್ಬಳ ಚರ್ಯೆಗಳ ಕಥನವಿದೆ. ಗಂಡನೊಂದಿದೆ ಮಾತ್ರವಲ್ಲದೆ ಅವಳು ಹಿರಿಯತನವನ್ನು ಮಾಡಲು ಹೋಗಿ ಸಂಸಾರದ ಇತರರೊಂದಿಗೂ ನೆರೆಹೊರೆಯವರೊಂದಿಗೂ ಜಗಳಕ್ಕೆ ನಿಲ್ಲುವ ಹೆಣ್ಣು ಎಂಬುದೂ ಇಲ್ಲಿ ಸ್ಪಷ್ಟವಾಗುತ್ತದೆ. ಇದು ಯಾವುದೋ ಒಂದು ಕುಟುಂಬದ ಚಿತ್ರ. ಗಂಡುಗಳೂ ಹೀಗೆ ವರ್ತಿಸಲಾರರೆಂದಲ್ಲ.]

ಕೊಂಡ ಕೋತಿ—ಬೆಟ್ಟದ ಕಪಿ.

ಭತ್ಯ—ಕೆಲಸಮಾಡಿದ ದಿನಕ್ಕೆ ನಿಗದಿಯಾಗಿ ಸಲ್ಲಿಸುವ ಆಹಾರ ಸಾಮಗ್ರಿ, ಅಥವಾ ಹಣ ; ಬತ್ತೆ, ಸಂಸ್ಕೃತದ 'ಭೃತ್ಯೆ' ಎನ್ನುವುದರ ತದ್ಭವ.

೧೦೪

ಮುಖಾರಿ ಝಂಪೆ

ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ ಪ

ಪಡೆದವಳ ಎದೆಗೊರಳ ಕೊಯ್ವಂಥ ಚೂರಿ ಅ

ಮಾತು ಕಲಿತರೆ ಏನು ಮಹಾಜಾಣೆಯಾದರೇನು
ಚಾತುರ್ಯವಿದ್ದರೇನು ಚೆಲುವೆಯಾದರೇನು
ರಾಸಿ ಹಣವಿದ್ದರೇನು ಏಸು ಪೇಳಿದರೇನು
ರೀತಿ ಕೆಟ್ಟ ಜನ್ಮ ಪೊರೆಯಬೇಕಲ್ಲ ೧

ಹೊರಗೆ ಬರಲಿಕೆ ಸಲ್ಲ ಇದಿರಾಗಿ ಇರೆ ಸಲ್ಲ
ಅಡುಗೆ ಯೋಗ್ಯಳಲ್ಲ ಹರಿಯು ತಾನೆ ಬಲ್ಲ
ಮರ್ಯಾದೆಗಳು ಇಲ್ಲ ಬಲು ಹಗುರ ರಾಜ್ಯಕೆಲ್ಲ
ಸರ್ವ ರೀತಿಲಿ ಕೆಟ್ಟ ಜನ್ಮ ಪೊರೆಸಲ್ಲ ೨

ಅತ್ತೆ ತನ್ನಯ ಮಗಗೆ ಮೃತ್ಯು ಎಂತೆಂಬುವಳು
ಹುಟ್ಟಿದ ಮನೆಯವರು ದೂಷಿಸುವರು
ಎಷ್ಟು ಹೇಳಲಿ ಬಹಳ ತುಚ್ಛವನೆ ಮಾಡುವರು
ಅಕ್ಕ ತಂಗಿಯರಿಗೆ ದಿಕ್ಕು ಎಂಬುವರು ೩

ಉಪಕಾರ ಮಾಡಿದರೆ ಗತಿಯು ನೀನೆಂಬುವರು
ಅತಿ ಶ್ರಮಪಟ್ಟರೂ ಆದರಿಸರು
ವಿಪರೀತ ಹಣವಿದ್ದರಪಹರಿಸಿ ತಿಂಬುವರು
ಅತಿ ದೈನ್ಯದಿಂದ ಬೇಡೆ ಬಾಯ ಬಡಿಸುವರು ೪

ಚಾಕರಿಯ ಮಾಡಿದರೆ ಆಚೀಚೆಲಾಡುವರು
ರಾಶಿ ಅನ್ನವನುಂಡಳೆಂದು ದೂರುವರು
ಈಸು ಸೈರಿಸಿಕೊಂಡು ಏಕಾಂತದಲಿ ಕುಳಿತು
ಶ್ರೀಶ ಪುರಂದರವಿಠ್ಠಲನ ನೆನೆಯೆ ನಾರಿ ೫

[ವಿಧವೆಯರ ಮೂಕವೇದನೆಗಳಿಗೆ ಸ್ಪಂದಿಸಿರುವ ಈ ಪದ ಆ ನಿರ್ಭಾಗ್ಯಳನ್ನು ಸಮಾಜ ಹಾಗೂ ಕುಟುಂಬದವರು ಅನಾದರಿಸುವ ಬಗೆಗಳನ್ನು ಹೃದಯಸ್ಪರ್ಶಿಯಾಗಿ ವಿವರಿಸಿದ್ದಾರೆ. ಕವಿಗೆ ಆಕೆಯ ಬಗೆಗೆ ಅಪಾರ ಅನುಕಂಪೆ ಇರುವುದೂ ಸಮಾಜದ ಬಗೆಗೆ ಆಕ್ರೋಶ ಇರುವುದೂ ಇಲ್ಲಿ ಸ್ಪಷ್ಟವಾಗುತ್ತದೆ. ವಿಧವೆಯ ರೂಪ, ಯೌವನ, ಬುದ್ಧಿಮತ್ತೆ, ಶ್ರೀಮಂತಿಕೆ, ಸೇವಾಚಾತುರ್ಯ ಶ್ರಮಗಾರಿಕೆ ಇವೆಲ್ಲವೂ ಆಕ್ಷೇಪಿಸುವರ ಬಾಯಿಗೆ ಒಳ್ಳೆಯ ಆಹಾರವಾಗಿಬಿಡುತ್ತವೆ. ಹೆತ್ತಮನೆ ಹೊಕ್ಕಮನೆಗಳೆರಡರಿಂದಲೂ ದೂಷಣೆಯನ್ನೇ ಪಡೆಯುವ ಆಕೆಯ ಸ್ಥಿತಿ ಚಿಂತಾಜನಕ.]



೧೦೫

ಕಾಂಬೋದಿ ಚಾಪು

ಪತಿಭಕುತಿ ಇಲ್ಲದಿಹ ಸತಿಯು ಸಂಗ
ವ್ರತಗೆಟ್ಟು ಸುಖ ಪಡೆಯಲಿಲ್ಲವೊ ರಂಗ ಪ

ಗಂಡ ಬಂದರೆ ಎದ್ದು ನಿಲ್ಲದೆ ಆ ಕ್ಷಣದಿ
ಕಂಡು ಆಡಿ ಏಕವಚನಂಗಳನಾಗ
ಅಂಡಲೆದು ಮಾರ್ಮಲೆದು ಕಾಡಿ ಬೇಡುವ ಇಂಥ
ಭಂಡುದೊತ್ತಿನ ಕೂಟ ಏಳು ನಾಗರಕಾಟ ೧

ಒಂದು ತಂದರೆ ಮನೆಗೆ ಹತ್ತಾಗಿ ಭಾವಿಸದೆ
ತಂದರೆ ಹತ್ತು ಮನೆಯೊಳಗೊಂದು ಮಾಡಿ
ಇಂದೇನಿಲ್ಲವು ಎಂದು ಮುಖ ಮೂರುಕಡೆ ತಿರುವಿ
ಕೊಂಡು ಹೋಗುವ ನಾರಿ ಬಹುದೊಡ್ಡ ಮಾರಿ ೨

ಮಕ್ಕಳಿಗೆ ಇಡಲಿಲ್ಲ ಮರಿಗಳಿಗೆ ತುಡಲಿಲ್ಲ
ಇಕ್ಕುವೆಡೆ ಬೆಳ್ಳಿ ಬಂಗಾರವಿಲ್ಲ
ಚಿಕ್ಕವಳು ನಾನಿನ್ನ ಕೈಪಿಡಿದು ಕೆಟ್ಟೆನೆಂಬ
ಮೂರ್ಖ ತೊತ್ತಿನ ಸಂಗ ಕುಲಕೆಲ್ಲ ಭಂಗ ೩

ತಾಯನು ಹೊರಡಿಸು ತಂದೆಯನು ತೆರಳಿಸು
ದಾಯಾದಿಯನು ಮನೆಯಲಿರಿಸಬೇಡ
ಬಾಯಿನ್ನು ಮನೆಕಟ್ಟಿ ಬೇರಿರುವ ನಾವೆಂಬ
ಮಾಯಕಾತಿಯು ಸಂಗ ಅಭಿಮಾನ ಭಂಗ ೪

ಇಷ್ಟವೆಲ್ಲವ ಬಿಟ್ಟು ಕೆಟ್ಟೆನೈ ನಾನಿಂದು
ಕಷ್ಟ ಸೆರೆಯೆನುವೆನೆ ಈ ಪರಿಯಲಿ
ಸೃಷ್ಟಿಗಧಿಕನಾದ ದಿಟ್ಟ ಶ್ರೀ ಪುರಂದರ
ವಿಠ್ಠಲ ಪಶ್ಚಿಮದ ರಂಗಧಾಮ ೫

[ತನಗಿಂತ ತುಂಬ ಚಿಕ್ಕ ವಯಸ್ಸಿನ ಹುಡುಗಿಯೊಬ್ಬಳನ್ನು ಮದುವೆಯಾದ ಗಂಡಿನ ಮತ್ತು ಅವನ ಸಂಸಾರದ ಪಾಡು ಇಲ್ಲಿ ವರ್ಣಿತವಾಗಿದೆ. ವ್ರತ ಕೆಟ್ಟರೂ ಸುಖವಿಲ್ಲದ ಗಂಡು ಈತ. ಇವಳ ಸಹವಾಸ ಅವನಿಗೆ ಏಳು ನಾಗರ ಕಾಟವೆನ್ನಿಸಿದೆ. ಗೃಹಕೃತ್ಯದಲ್ಲಿ ಒಪ್ಪವಿಲ್ಲದೆ ತುಂಬ ಖರ್ಚು ಮಾಡಿಸುವ, ಮಕ್ಕಳು ಮರಿಗಳಿಗೆ ಒಡವೆ ವಸ್ತ್ರವಿಲ್ಲ ವೆಂದು ಹಂಗಿಸುವ, ವಯಸ್ಸಾದ ಗಂಡನೆಂದು ಮೇಲಿಂದ ಮೇಲೆ ನೆನಪಿಸುವ, ಅತ್ತೆ ಮಾವಂದಿರು ದಾಯಾದಿಗಳು ಉಳ್ಳ ಅವಿಭಕ್ತ ಕುಟುಂಬವನ್ನು ಒಡೆಸುವ ಇಂಥ ಮಾಯಗಾತಿಯ ಕೈಗೆ ಸಿಕ್ಕಿ ಆತ ನವೆಯುತ್ತಿದ್ದಾನೆ.]

ಆನಂದಭೈರವಿ ಝಂಪೆ

ನೋಡದಿರು ಪರಸ್ತ್ರೀಯರ
ನೋಡಿದರೆ ಕೇಡಹುದು ತಪ್ಪದಿದಕೋ ಪ

ನೋಡಿದರೆ ಸ್ತ್ರೀ ಹತ್ಯವು, ನುಡಿಸಿ ಮಾ
ತಾಡಿದರೆ ಗೋಹತ್ಯವು
ಕಾಡಿದರೆ ಶಿಶುಹತ್ಯವು ಮೈ
ಗೂಡಿದರೆ ಬ್ರಹ್ಮಹತ್ಯವು ೧

ಎರಳೆಗಂಗಳರೊಲುಮೆಗೆ ಮರುಳಾಗಿ
ಬರಿದೆ ನೀ ಕೆಡಬೇಡವೊ
ದುರುಳ ಯಮಲೋಕದಲ್ಲಿ ಕರೆದೊಯ್ದು
ಉರಿಗಂಬ ಅಪ್ಪಿಸುವರೊ ೨

ಮರುಳು ಮಾನವನೆ ಕೇಳೊ ಪರಸತಿಯು
ಉರಿಯೆಂದು ನೋಡು ನಿತ್ಯ
ವರದ ಪುರಂದರವಿಠಲನ ನೆನೆದರೆ
ಸ್ಥಿರವಾದ ಮುಕುತಿಯಹುದು ೩

[ಪರಸ್ತ್ರೀಯನ್ನು ಉರಿಯಂತೆ ಕಾಣುವುದು ವಿಹಿತವೆಂದು ಸಮಾಜದ ಶೀಲಚಿಂತಕ ಕವಿ ಅಭಿಪ್ರಾಯಪಡುತ್ತಾನೆ. ವೈಯಕ್ತಿಕ ನೆಲೆಯಲ್ಲಿ ಪರಸ್ತ್ರೀ ವ್ಯಾಮೋಹ ಸೌಶೀಲ್ಯದ ದೃಷ್ಟಿಯಿಂದ ತುಂಬ ಕೆಟ್ಟದ್ದು. ಅಂಥ ವ್ಯಾಮೋಹಿಗಳಿಗೆ ನರಕದಲ್ಲಿ ಸಿಕ್ಕಬಹುದಾದ ಪಾತಕಗಳನ್ನೆಲ್ಲ ವಿವರಿಸುವ ಕವಿ ವ್ಯಕ್ತಿಗಳಿಗೆ ಎಚ್ಚರಿಕೆ ನೀಡುತ್ತಾನೆ.]

ಎರಳೆಗಂಗಳರ ಒಲುಮೆಗೆ—ಜಿಂಕೆಯ ಕಣ್ಣುಗಳಂತೆ ಕಣ್ಣುಳ್ಳ ಹೆಂಗಳೆಯರ ಪ್ರೀತಿಗೆ.

೧೦೭

ದರ್ಬಾರು (ಕಾಪಿ) ಆದಿ

ಕಣ್ಣೆತ್ತಿ ನೋಡಲು ಬೇಡ ಅವಳ ಪ
ಸಣ್ಣ ಬೈತಲೆ ನೋಡಿ ಮರುಳಾಗಬೇಡ ಅ

ಕಣ್ಣಿಟ್ಟು ಕೀಚಕ ಕೆಟ್ಟ ಪರ
ಹೆಣ್ಣಿಗಾಗಿ ರಾವಣ ತಲೆಕೊಟ್ಟ
ಇನ್ನೆಷ್ಟು ಹೇಳಲಾ ನಷ್ಟ ಪರ
ಹೆಣ್ಣ ಮೋಹಿಸಿದವ ಬಲು ಭ್ರಷ್ಟ ೧

ದೂಷಿಸದಿರು ದುರುಳ ಕಣ್ಣ ಅವಳ
ತೋರ ಕಕ್ಕಸ ಕುಚ ನಡು ಬಹು ಸಣ್ಣ
ಸೀರೆಯ ಬಿಗಿದುಟ್ಟ ಹೆಣ್ಣ ಅವಳ
ಓರೆ ನೋಟವ ನೋಡಿ ಹಾರಬೇಡಣ್ಣ ೨

ಹಸಿವು ಇಲ್ಲದ ಸವಿಯೂಟ ತನ್ನ
ವಶಕೆ ಬಾರದ ಪರ ಸ್ತ್ರೀಯರ ಕೂಟ
ದೆಸೆದೆಸೆಗಪಕೀರ್ತಿಯಾಟ ನಮ್ಮ
ವಸುಧೇಶ ಪುರಂದರವಿಠಲಗಲ್ಲದ ನೋಟ ೩

[ಪರಸ್ತ್ರೀ, ಪರಧನಗಳನ್ನು ಬಯಸುವವರ ಬಗೆಗೆ ಪುರಂದರದಾಸರದು ಕಟುವಾದ ಭಾವನೆ. ಹೆಣ್ಣಿನ ಅಂದಕ್ಕೆ ಮರುಳಾಗಿ ಪರವನಿತೆಯರನ್ನು ಕಾಮಿಸಿದವರು ಪಟ್ಟಿರುವ ಪಾಡನ್ನು ರಾವಣ ಕೀಚಕರ ಉದಾಹರಣೆಗಳಿಂದ ಕವಿ ಸ್ಪಷ್ಟಪಡಿಸಿದ್ದಾರೆ.]

ದೂಷಿಸದಿರು ದುರುಳ ಕಣ್ಣ— ಕಣ್ಣು ಸಹಜವಾಗಿಯೇ ಕೆಟ್ಟದ್ದು (ಇಂದ್ರಿಯಗಳು ವಿಷಯಪರವಾಗಿರುವುದು ಅವುಗಳ ಸಹಜದೋಷ) ; ಅದನ್ನು ಮತ್ತಷ್ಟು ಕೆಡಿಸಬೇಡ.

ತೋರ—ದಪ್ಪನಾದ.

ಕಕ್ಕಸ—ಕಠಿಣವಾದ.

ಹಸಿವು ಇಲ್ಲದ—ಉಂಡ ಅನ್ನವು ಜೀರ್ಣವಾಗದಿದ್ದರೆ ಹಸಿವೆ ಆಗದು ; ಹಾಗಿರುವಾಗ ಮತ್ತೆ ಉಣ್ಣುವುದು ಆರೋಗ್ಯವನ್ನು ಕೆಡಿಸುತ್ತದೆ.

ವಶಕೆ ಬಾರದ—ವಿಧಿವತ್ತಾಗಿ ಮದುವೆಯಾಗಿ ಮನೆತುಂಬಿಸಿಕೊಂಡು ಬರದ.

೧೦೮

ಧನಾಸರಿ ಆದಿ

ಭಂಗಾರವಿಡಬಾರೆ ನಿನಗೊಪ್ಪುವ
ಭಂಗಾರವಿಡಬಾರೆ ಪ

ರಂಗನಾಥನ ದಿವ್ಯ ಮಂಗಳನಾಮ
ವೆಂಬ ಭಂಗಾರವಿಡಬಾರೆ ಅ

ಮುತ್ತೈದೆತನವೆಂಬ ಮುಖದಲಿ ಕುಂಕುಮದ
ಕಸ್ತುರಿಯ ಬೊಟ್ಟನಿಡೆ ನಿನ್ನ ಫಣೆಗೆ
ಹೆತ್ತವರ ಕುಲಕೆ ಕುಂದು ಬಾರದಹಾಗೆ
ಮುತ್ತಿನ ಮೂಗುತಿಯನಿಡೆ ೧

ಕರ್ತೃಪತಿಯು ಮಾತ ಮೀರಬಾರದು ಎಂಬ
ಮುತ್ತಿನೋಲೆ ಕೊಪ್ಪನಿಡೆ ನಿನ್ನ ಕಿವಿಗೆ
ಹತ್ತುಮಂದಿಯು ಕೈಲಿ, ಹೌದು ಹೌದು ಎನಿಸಿಕೊಂಬ
ಮಸ್ತಕ ಮಕುಟವಿಡೆ ೨

ಅರಗಳಿಗೆ ಪತಿಯು ಅಗಲಬಾರದು ಎಂಬ
ಅಚ್ಚ ಮಂಗಳಸೂತ್ರ ಕಟ್ಟೆ ನಿನ್ನ ಕೊರಳಿಗೆ
ಪರ ಪುರುಷನು ನಿನ್ನ ಪಡೆದ ತಂದೆಯೆಂಬ
ಪದಕ ಸರವ ಹಾಕೆ ೩

ಕರೆದೊಬ್ಬರಿಗೆ ಅನ್ನವಿಕ್ಕುವೆನೆಂತೆಂಬ
ಹರಡಿ ಕಂಕಣವನಿಡೆ ನಿನ್ನ ಕೈಗೆ
ನೆರೆ ಹೊರೆಯುವರೆಲ್ಲ ಸರಿಸರಿಯೆಂಬಂಥ
ಬಿರುದಿನೊಡ್ಯಾಣವಿಡೆ ೪

ಮಾನ ಹೊರಗೆ ಬಿಚ್ಚೆನೆಂಬ ಕಂಭಾವತಿಯ
ನೇಮದ ಮಡಿಯನುಡೆ ನಿನ್ನ ಮೈಗೆ
ಹೀನ ಗುಣವ ಬಿಟ್ಟು ಹಿತದಲ್ಲಿದ್ದೇನೆಂಬ
ಹೆಚ್ಚಿನ ಕುಪ್ಪುಸ ತೊಡೆ ೫

ಜ್ಞಾನನಿಧಿಗಳಾದ ಗುರುಗಳ ಪಾದಕೆ
ಆನತಳಾಗಿ ಬಾಳೆ
ಮೌನಿಗಳೊಡೆಯ ಶ್ರೀ ಪುರಂದರವಿಠಲನ
ಪ್ರೇಮ ಸೆರಗಲಿ ಕಟ್ಟೆ ಓ

[ಗೃಹಿಣಿಯೊಬ್ಬಳ ವಸ್ತ್ರಾಲಂಕರಣಗಳು ಒಡವೆ ಇತ್ಯಾದಿಗಳು ಆಕೆಯ ಸೌಂದರ್ಯ ವರ್ಧನೆಗೆ ಹೇಗೆ ಪೋಷಕವಾಗುತ್ತವೆಯೋ ಹಾಗೆಯೇ ಹೆಣ್ಣಿನ ಬಾಳಿನಲ್ಲಿ ಶೀಲ, ವಂಶ ಗೌರವವನ್ನು ಕಾಪಾಡುವ ಹೊಣೆ, ಪತಿಯನ್ನು, ನೆರೆಯವರನ್ನು, ಪರಪುರುಷರನ್ನು ಗುರು ಹಿರಿಯರನ್ನು ಕಾಣಬೇಕಾದ ಬಗೆ ಕೂಡ ಮುಖ್ಯ. ಇವೇ ಆಕೆಯ ವಸ್ತ್ರಾಭರಣಗಳು. ಆದರ್ಶ ಗೃಹಿಣಿಯೊಬ್ಬಳ ವ್ಯಕ್ತಿತ್ವವನ್ನು ಕಡೆದು ನಿಲ್ಲಿಸುವ ಪ್ರಯತ್ನ ಕವಿಯದು.]

ಫಣೆ—ಹಣೆ.

ಓಲೆಕೊಪ್ಪನಿಡೆ – ಓಲೆಕೊಪ್ಪು. ಕಿವಿಯ ಮೇಲ್ಭಾಗದಲ್ಲಿ ಧರಿಸುವ ಆಭರಣ (ಕೊಡಂಕೆ, ತಾಳಕಪತ್ರ).

ಮಸ್ತಕ ಮುಕುಟ—ತಲೆಯ ಮೇಲೆ ಬೈತಲೆಯ ನಡುವೆ ಇಡುವ ಆಭರಣ.

ಹರಡಿ ಕಂಕಣ—ಬಂಗಾರದ ಗುಂಡು, ಹವಳಗಳನ್ನು ಸೇರಿಸಿ ಮಾಡಿದ ಕೈಬಳೆ.

ಬಿರುದಿನ ಒಡ್ಯಾಣ—ಕಚ್ಚಳಿ, ಬೆಲೆಬಾಳುವ ನಡುಪಟ್ಟಿ.

ಕಂಭಾವತಿಯ ನೇಮದ ಮಡಿ—ಭಾರಿಯ ಅಂಚುಳ್ಳ (ಕಂಬವತಿ) ರೇಷ್ಮೆ ಸೀರೆ.

ಪಾದಕೆ ಆನತಳಾಗಿ—ಅಡಿದಾವರೆಗಳಿಗೆ ನಮಸ್ಕಾರ ಮಾಡಿ.

ಕಾಂಬೋದಿ ಅಟ್ಟ

ಮುತ್ತೈದೆಯಾಗಿರಬೇಕು ಮುದದಿಂದಲಿ ಪ

ಹತ್ತುನೂರು ನಾಮದೊಡೆಯ ಹರಿ ನಮ್ಮ ಪತಿಯೆಂದು ಅ

ಗುರುವಿಂದ ಶಾಸ್ತ್ರವನು ಓದುವುದೆ ಮಾಂಗಲ್ಯ
ವೈರಾಗ್ಯವೆಂಬುದೆ ಒಪ್ಪುವ ಮೂಗುತಿ
ತಾರತಮ್ಯಜ್ಞಾನ ತಾಯಿತ್ತು ಮುತ್ತು ಸರ
ಕರುಣರಸವೆಂಬಂಥ ಕಟ್ಬಾಣಿ ಕಟ್ಟಿಕೊಂಡು ೧

ಹರಿಕಥೆಯ ಕೇಳುವುದು ಕಿವಿಗೆ ಮುತ್ತಿನ ಓಲೆ
ನಿರುತ ಸತ್ಕರ್ಮವು ನಿಜ ಕಾಂತಿಯು
ಪರಮ ಭಕ್ತರ ಪಾದರಜ ಹೆರಳು ಭಂಗಾರ
ಗುರು ಭಕುತಿಯೆಂಬಂಥ ಗಂಧ ಕುಂಕುಮ ಧರಿಸಿ ೨

ಪೊಡವಿಯೊಳು ಪರಹಿತದ ಪಟ್ಟವಾಳಿಯನುಟ್ಟು
ಕೊಡುವ ಧರ್ಮವೆಂಬ ಕುಬುಸ ತೊಟ್ಟು
ಬಿಡದೆ ಎನ್ನೊಡೆಯ ಶ್ರೀ ಪುರಂದರವಿಠ್ಠಲನ
ದೃಢ ಭಕುತಿ ಎಂಬಂಥ ಕಡಗ ಬಳೆ ಇಟ್ಟುಕೊಂಡು ೩

ಹತ್ತುನೂರು ನಾಮದೊಡೆಯ—ಸಹಸ್ರನಾಮಗಳಿಗೆ ವಿಷಯನಾದವನು.
ತಾಯಿತ್ತು—ತಾಯತ.
ಕಟ್ಬಾಣಿ—ಬೆಲೆಬಾಳುವ ಮುತ್ತಿನ ಸರ.
ನಿರುತ ಸತ್ಕರ್ಮ—ಯಾವಾಗಲೂ ಮಾಡುತ್ತಿರುವ ಒಳ್ಳೆಯ ಕೆಲಸಗಳು.
ಪಾದರಜ—ಕಾಲಧೂಳು.
ಹೆರಳುಭಂಗಾರ—ಜಡೆಬಿಲ್ಲೆ.
ಪೊಡವಿ—ಲೋಕ.
ಪಟ್ಟವಾಳಿ—ಪಟಾವಳಿ, ರೇಷ್ಮೆ ಸೀರೆ.
ಕೊಡುವ ಧರ್ಮ—ದಾನಮಾಡುವ ಬುದ್ಧಿ.

ಶಂಕರಾಭರಣ ಆದಿ

ಬುದ್ಧಿ ಮಾತು ಹೇಳಿದರೆ ಕೇಳಬೇಕಮ್ಮ
ಮಗಳೆ–ಮನ
ಶುದ್ಧ ಳಾಗಿ ಗಂಡನೊಡನೆ ಬಾಳಬೇಕಮ್ಮ ಪ

ಅತ್ತೆ ಮಾವಗಂಜಿಕೊಂಡು ನಡೆಯಬೇಕಮ್ಮ
ಮಗಳೆ
ಚಿತ್ತದೊಲ್ಲಭನ ಅಕ್ಕರೆಯನ್ನು ಪಡೆಯಬೇಕಮ್ಮ
ಹೊತ್ತುಹೊತ್ತಿಗೆ ಮನೆಯ ಕೆಲಸ ಮಾಡಬೇಕಮ್ಮ
ಮಗಳೆ
ಹತ್ತುಮಂದಿ ಒಪ್ಪುವ ಹಾಗೆ ನುಡಿಯಬೇಕಮ್ಮ ೧

ಕೊಟ್ಟು ಕೊಂಬುವ ನಂಟರೊಡನೆ ದ್ವೇಷ ಬೇಡಮ್ಮ
ಮಗಳೆ
ಅಟ್ಟು ಉಂಬುವ ಕಾಲದಲ್ಲಿ ಆಟ ಬೇಡಮ್ಮ
ಹಟ್ಟಿಬಾಗಿಲಲ್ಲಿ ಬಂದು ನಿಲ್ಲಬೇಡಮ್ಮ
ಮಗಳೆ
ಕಟ್ಟಿ ಆಳುವ ಗಂಡನೊಡನೆ ಸಿಟ್ಟು ಬೇಡಮ್ಮ ೨

ನೆರೆಹೊರೆಯವರಿಗೆ ನ್ಯಾಯವನ್ನು ಹೇಳಬೇಡಮ್ಮ
ಮಗಳೆ
ಗರುವ ಕೋಪ ಮತ್ಸರವನ್ನು ಮಾಡಬೇದಮ್ಮ
ಪರರ ನಿಂದಿಪ ಹೆಂಗಳೊಡನೆ ಸೇರಬೇಡಮ್ಮ ಮಗಳೆ
ವರಪುರಂದರವಿಠಲನ ಸ್ಮರಣೆ ಮರೆಯಬೇಡಮ್ಮ ೩

ಮನಶುದ್ಧ ಳಾಗಿ—ಅಂತರಂಗಶುದ್ಧಿಯಿಂದ.
ಚಿತ್ತದೊಲ್ಲಭನ—ಚಿತ್ತದ ವಲ್ಲಭನ, ಗಂಡನ.
ಅಟ್ಟು—ಅಡುಗೆಮಾಡಿ.

ಕಾಂಬೋದಿ ಝಂಪೆ

ತಂಗಿಗೆ ಹೇಳಿದ ಕೃಷ್ಣ ಚಂದದಿಂದಲಿ ಬುದ್ಧಿ ಪ

ಅತ್ತೆಯ ಮನೆಯಲ್ಲಿ ಇರುವಂಥ ಸುದ್ದಿ ಅ

ಯಾರೇನು ಅಂದರೂ ಮೋರೆಯನು ತಿರುಹದಿರು
ಮೋರೆ ಮೇಲೆ ಎತ್ತಿ ಬಲ್ಲಳೆಂದೆಣಿಸಿ
ವಾರಿಗೇವರ ಕೂಡಿ ನೀರನ್ನು ತರುವಾಗ
ವಾರೆಗಣ್ಣಿನಲಿ ನೋಟ ನೋಡದಿರು ಕಂಡ್ಯ ೧

ಪರರ ಒಡವೆಯ ಕಂಡು ದುರುಳೆ ಮಾತಾಡದಿರು
ನೆರೆಹೊರೆಯರಿಗೆ ನೀನು ತಲೆವಾಗಿ ನಡೆಯೆ
ಪರರ ಮಾತುಗಳಿಂದ ದುರುಳಳೆಂದು ಎನಿಸಬೇಡ
ನೆರೆಹೊರೆಯರ ಕಂಡು ನೀ ಬದುಕು ಮಾಡಮ್ಮ ೨

ಭಂಗಾರದ ಪೇಟೆಯೊಳು ಅಂಗಡಿಗೆ ಹೋಗದಿರು
ಅಂಗನೇರಿಗೆ ಮಾನಭಂಗಾಗಿ ನಡೆಯೆ
ಅಂಗನೇರಿಗೆ ನಿನ್ನಂತರಂಗವ ಹೇಳದಿರು
ಭಂಗಾರ ವಸ್ತುಗಳ ಮುಚ್ಚಿಕೊಳ್ಳಮ್ಮ ೩

ಹಾಕಿದ್ದು ನೀನುಂಡು ಬೇಕೆಂದು ಬೇಡದಿರು
ಸಾಕು ಸಾಕು ಎಂಬ ನಾಚಿಕೆಯ ಹಿಡಿಯೆ
ನಾಕು ಮಂದಿಯರೊಡನೆ ಕೋಕೆ ಮಾತಾಡದಿರು
ಲೋಕದೊಳಿವಳೊಬ್ಬ ಮೂಕಿಯೆಂದೆನಿಸೆ ೪

ಇಷ್ಟರು ಅಂದರೂ ನಿಷ್ಠೂರವಾಡದಿರು
ಘಟ್ಟಿ ಮಾಡಮ್ಮ ನಿನ್ನ ಮನಸು
ಸೃಷ್ಟಿಯೊಳಗೆ ನಮ್ಮ ಪುರಂದರವಿಠಲನ್ನ
ಶ್ರೇಷ್ಠನಾದ ಕೃಷ್ಣನ್ನ ತಂಗಿಯೆಂದೆನಿಸೆ ೫

ವಾರಿಗೇವರ—ಓರಗೆಯವರ, ಒಂದೇ ವಯಸ್ಸಿನವರ.
ಅಂಗನೇರಿಗೆ—ಅಂಗನೆಯರಿಗೆ, ಹೆಂಗಳೆಯರಿಗೆ.
ಮಾನಭಂಗಾಗಿ ನಡೆಯೆ—ಉದ್ದಂಡತನವನ್ನು ಬಿಟ್ಟು ನಡೆದುಕೋ.
ಕೋಕೆ ಮಾತಾಡದಿರು—ಕೋಕ ವಾಕ್ಯಗಳು ; ಅಶ್ಲೀಲ ಶಬ್ದಗಳನ್ನು ಬಳಸಬೇಡ.

ಕಾಪಿ ಆದಿ

ಏತರ ಕಟಪಟಿ ಒಂದಿನ ಹೋಗುತಿ ಲಟಪಟಿ ಪ

ಬರುವಾಗ ಏನು ತಂದೆ
ಬರುತಲೇ ಎಲ್ಲಾನು ನನ್ನದೆಂದೆ
ದುಡ್ಡು ಕೂಡಿಟ್ಟು ಬಳಿದು ಹೋಗುವಾಗ
ಬಳಲಿ ಬಳಲಿ ಅಳವಾರಿಗೆ ಬಂದೆ ೧

ದೊಡ್ಡ ಮನೆಯು ಕಟ್ಟಿ ಅದರೊಳು
ಮಡದಿಯು ಒಯ್ದಿಟ್ಟಿ
ಮಡದಿಗೆ ಮೋಹದ ಮಗು ಒಂದು ಹುಟ್ಟಿ
ಅದರ ಮೇಲೆ ನೀ ಮನಸಿಟ್ಟಿ ೨

ಸಂಸಾರ ಬಲು ಖೊಟ್ಟಿ ಅದರೊಳು
ಬಿದ್ದಿದ್ದಿ ಕಾಲ್ಕಟ್ಟಿ
ತಂದೆ ಶ್ರೀಪುರಂದರವಿಟ್ಠಲರಾಯನ
ಧ್ಯಾನವನ್ನೇ ಮರೆತುಬಿಟ್ಟಿ ೩

[ಅಧಿಕಾರ, ಸಂಪತ್ತು, ತಾನು ತನ್ನವರು ಎಂಬ ಭ್ರಮೆಗಳು ಹೋಗಬೇಕೆಂದು ಪುರಂದರದಾಸರು ಹೇಳುತ್ತಾರೆ. ಹುಟ್ಟುವಾಗ ಬರಿಗೈಯಲ್ಲಿ ಬಂದು ಹೋಗುವಾಗಲೂ ಹಾಗೆಯೇ ಹೋಗುವ ಮನುಷ್ಯ ಹುಟ್ಟು–ಸಾವುಗಳ ನಡುವಣ ಜೀವಿತದ ಅವಧಿಯಲ್ಲಿ ಮಾತ್ರ ಈ ಸಂಸಾರ 'ಖೊಟ್ಟಿ' ಎಂದು ತಿಳಿದಿದ್ದರೂ ಕಾಲುಕಟ್ಟಿಕೊಂಡು ಅದರೊಳಗೇ ಬೀಳುತ್ತಾನೆ.]

ಕಟಪಟಿ—ಹಿಂಸೆ, ರೇಜಿಗೆ, ತೊಂದರೆ (ಮರಾಠಿಯ ಖಟಪಟ).

ಲಟಪಟಿ—ತಟಕ್ಕನೆ.

ಅಳವಾರಿಗೆ ಬಂದೆ—ಅಳುವ ಮೋರೆಯನ್ನು (ಮುಖ) ಹಾಕಿದೆ.

ಖೊಟ್ಟಿ—ಸುಳ್ಳು (ಕೋಟಾ), ಮಾಯೆಯದು.

ಪಂತುವರಾಳಿ ಅಟ್ಟ

ರೊಕ್ಕ ಎರಡಕ್ಕು ದುಃಖ ಕಾಣಕ್ಕ ಪ

ಮಕ್ಕಳ ಮರಿಗಳ ಮಾಡೋದು ರೊಕ್ಕ
ಸಕ್ಕರೆ ತುಪ್ಪವ ತಿನಿಸೋದು ರೊಕ್ಕ
ಕಕ್ಕುಲಾತಿಯನು ಬಿಡಿಸೋದು ರೊಕ್ಕ
ಫಕ್ಕನೆ ಹೋದರೆ ಘಾತ ಕಾಣಕ್ಕ ೧

ನೆಂಟರ ಇಷ್ಟರ ಮರೆಸೋದು ರೊಕ್ಕ
ಕಂಟಕಗಳ ಪರಿಹರಿಸೋದು ರೊಕ್ಕ
ಗಂಟು ಕಟ್ಟಲಿಕ್ಕೆ ಕಲಿಸೋದು ರೊಕ್ಕ
ತುಂಟತನಗಳನು ಬಲಿಸೋದು ರೊಕ್ಕ ೨

ಇಲ್ಲದ ಗುಣಗಳ ತರಿಸೋದು ರೊಕ್ಕ
ಸಲ್ಲದ ನಾಣ್ಯವ ನಡಿಸೋದು ರೊಕ್ಕ
ಬೆಲ್ಲಕ್ಕಿಂತಲೂ ಬಹು ಸವಿ ರೊಕ್ಕ
ಇಲ್ಲದಿರಲೂ ಬಹು ದುಃಖ ಕಾಣಕ್ಕ ೩

ಉಂಟಾದ ಗುಣಗಳ ಮರೆಸೋದು ರೊಕ್ಕ
ಬಂಟರನೆಲ್ಲರ ಬರಿಸೋದು ರೊಕ್ಕ
ಕಂಠಿ ಸರಿಗೆಯನು ಗಳಿಸೋದು ರೊಕ್ಕ
ಒಂಟೆ ಕುದುರೆ ಆನೆ ತರಿಸೋದು ರೊಕ್ಕ ೪

ವಿದ್ಯದ ಮನುಜರ ಕರೆಸೋದು ರೊಕ್ಕ
ಹೊದ್ದಿದ ಜನರನು ಬಿಡಿಸೋದು ರೊಕ್ಕ
ಮುದ್ದು ಪುರಂದರವಿಠಲನ ಮರೆಸುವ
ಬಿದ್ದು ಹೋಗೋ ರೊಕ್ಕವ ಸುಡು ನೀನಕ್ಕ ೫

[ಹಣವನ್ನು 'ಹೊರಗಿನ ಪ್ರಾಣ' ಎನ್ನುತ್ತಾರೆ. ಇಂಥ ಬಲಿಷ್ಠವಾದ, ಅತ್ಯವಶ್ಯಕವಾದ ಹಣವನ್ನು ಪುರಂದರದಾಸರು ಇನ್ನೊಂದು ದಿಕ್ಕಿನಿಂದ ನೋಡಬಯಸುತ್ತಾರೆ. ಅದೇನೆಂದರೆ ರೊಕ್ಕ ಮನುಷ್ಯನ 'ತುಂಟತನ'ಗಳನ್ನು ಬೆಳೆಸುತ್ತ ಹೋಗುತ್ತದೆ. ತನ್ನ ಆಂತರಿಕ ಮೌಲ್ಯವನ್ನು ತೋರಗೊಡದೆ ತನ್ನ ಅಸ್ತಿತ್ವ ಎಷ್ಟು ಪ್ರಭಾವಶಾಲಿಯಾದದ್ದೆಂಬುದನ್ನು ದರ್ಪದಿಂದ ತೋರಿಸಿಕೊಡುತ್ತ ಸಾಗುತ್ತದೆ. ಬರಿಯ ಕ್ಲೇಶ ಕಳವಳಗಳನ್ನೇ ತರುವ ಈ ರೊಕ್ಕವನ್ನು ಕವಿ ತಿರಸ್ಕರಿಸಿದ್ದಾನೆ.]

ಎರಡಕ್ಕು ದುಃಖ—ಇದ್ದರೂ ದುಃಖ, ಇಲ್ಲದಿದ್ದರೂ ದುಃಖ.

ಕಕ್ಕುಲಾತಿ—ಕಕ್ಕುಲತೆ, ಪ್ರೀತಿ.

ಹೊದ್ದಿದ ಜನರನು—ಹೊಂದಿದ್ದ ಜನರನ್ನು, ಬಳಿ ಇದ್ದವರನ್ನು.

೧೧೪

ನಾದನಾಮಕ್ರಿಯೆ ಅಟ್ಟ

ದುಗ್ಗಾಣಿ ಎಂಬುದು ದುರ್ಜನ ಸಂಗ
ದುಗ್ಗಾಣಿ ಬಲು ಕೆಟ್ಟದಣ್ಣ ಪ

ಆಚಾರ ಹೇಳೋದು ದುಗ್ಗಾಣಿ, ಬಹು
ನೀಚರ ಮಾಡೋದು ದುಗ್ಗಾಣಿ
ನಾಚಿಕೆಯಿಲ್ಲದೆ ಮನೆ ಮನೆ ತಿರುಗಿಸಿ
ಛೀ ಛೀ ಎನಿಸೋದು ದುಗ್ಗಾಣಿ ಅಣ್ಣ ೧

ನೆಂಟತನ ಹೇಳೋದು ದುಗ್ಗಾಣಿ, ಬಹು
ನೆಂಟರನೊಲಿಸೋದು ದುಗ್ಗಾಣಿ
ಒಂಟೆ ಹಾಂಗೆ ಮೋರೆ ಮೇಲಕ್ಕೆ ಸೆಳಕೊಂಡು
ಕುಂಟನೆನಿಸುವುದು ದುಗ್ಗಾಣಿ ಅಣ್ಣ ೨

ಮಾನವಾಗಿರಿಸೋದು ದುಗ್ಗಾಣಿ, ಬಹು
ಮಾನ ಹಸೆಗೆಡಿಸೋದು ದುಗ್ಗಾಣಿ
ಮಾನನಿಧಿ ಶ್ರೀ ಪುರಂದರವಿಠಲನ
ಕಾಣೆಸದಿರುವುದು ದುಗ್ಗಾಣಿ ಅಣ್ಣ ೩

ದುಗ್ಗಾಣಿ—ದುಗ+ಕಾಣಿ, ಎರಡು ಕಾಣಿಗಳು ; ಅಲ್ಪ ಬೆಲೆಯ ನಾಣ್ಯ. ಇಲ್ಲಿ ಹಣ ಎಂಬುದಕ್ಕೆ ಪರ್ಯಾಯವಾಗಿ ಬಳಸಿದ್ದಾರೆ ; ಆದರೆ ಅದು ಎಷ್ಟು ನೀಚ ವಾದುದು ಎಂಬ ಸೂಚನೆಯೂ ಇದೆ.

೧೧೫

ಕಲ್ಯಾಣಿ ಅಟ್ಟ

ಯಾರಿಗೆ ದೂರುವೆನೊ, ಗಿರಿಯ ರಾಯಾ
ಯಾರೆನ್ನ ಸಲಹುವರು ಪ

ಸಾರಿದ ಭಕ್ತ ಸಂಸಾರಿ, ನಿನ್ನಯ ಪದ
ವಾರಿಜವನು ತೋರೋ ಕಾರುಣ್ಯ ನಿಧಿ ಬೇಗ ಅ

ಕಷ್ಟ ಜನ್ಮದಿ ಬಂದೆನೊ, ಧಾ
ರುಣಿಯೊಳು ದುಷ್ಟರಿಂದ ನೊಂದೆನೊ
ನಿಷ್ಠುರ ಬೇಡವೊ ನಿನ್ನ ನಂಬಿದಮೇಲೆ
ಸೃಷ್ಟಿಗೊಡೆಯ ಎನ್ನ ಬಿಟ್ಟು ಕಳೆಯಬೇಡ ೧

ಹಿಂದೆ ಮಾಡಿದ ಕರ್ಮವು, ಈ ಭವದೊಳು
ಮುಂದಾಗಿ ತೋರುತಿದೆ
ಇಂದಿಲ್ಲ ಗತಿ ಅದರಿಂದ ನೊಂದೆನು ನಾನು
ಮಂದರಧರ ಗೋವಿಂದ ನೀನಲ್ಲದೆ ೨

ಹಗಲು ಕತ್ತಲೆ ಸುತ್ತಿಯೆ, ಕಂಗೆಡಿಸುತ್ತ
ಹಗೆಗಳ ನಗಿಸುತಿದೆ
ಉಗುರಿನ ಸಿರಿಗೆ ಮುಳ್ಳುಗಳೀಗ ನೆಟ್ಟುವು
ಸೊಗವ ಹಾರಿಸಿ ಎದೆ ದಿಗಿಲುಗೊಳಿಸುತಿದೆ ೩

ಬಾಡಿದ ಅರಳಿಯನು, ಕಲ್ಲಿನ ಮೇಲೆ
ಈಡಾಗಿ ನಾಟಿದರೆ
ಬೇಡಿಕೊಂಡರೆ ತಳಿರು ಮೂಡಿ ಬರುವುದುಂಟೆ
ರೂಢಿಗೊಡೆಯ ನೀನು ನೋಡದಿದ್ದ ಮೇಲೆ ೪

ಹಲವು ಪರಿಯ ಕಷ್ಟವ, ನಿನ್ನಯ ಪಾದ
ಜಲಜದ ಕರುಣದಲಿ
ಸುಲಿಗೆ ಕೊಟ್ಟೆನು ನಾನು, ಸೂರೆಗಾರರಿಗೆಲ್ಲ
ಒಲವಾಗಿ ಎನ್ನೊಳು ಪುರಂದರವಿಠಲ ೫

೧೧೬

ಧನ್ಯಾಸಿ (ಆನಂದಭೈರವಿ) — ರೂಪಕ

ಮಾಯೆ ಎನ್ನ ಕಾಯುವನ್ನುಪಾಯದಿಂದ ನೋಯಿಸಿ
ಬಾಯಿ ಮುಚ್ಚಿ ಕೊಲ್ಲುತಾಳೆ ಕಾಯೊ ಲಕ್ಷ್ಮಿ ಅರಸನೆ ಪ

ಮಾತಾಪಿತರ ಏಕಳದಿಂದ ಶ್ವೇತಬಿಂದು ಬೀಳಲು
ರಕ್ತ ಕೀವು ತಾಕಿ ಮಾಂಸ ಚೀಲದೊಳಗೆ ಬೆಳೆದೆ ನಾ
ರಕ್ತ ಸೂಸಿ ಬಸಿರೊಳೊಂಬತ್ತು ತಿಂಗಳಿದ್ದ ನಾ
ಮತ್ತೆ ಭೂಮಿಯೊಳಗೆ ಜನಿಸಲಾರೆ ಲಕ್ಷ್ಮಿ ಅರಸನೇ ೧

ಎಲುಬು ಗಳವಮಾಡಿ ನರದ ಬಳ್ಳಿಯಲ್ಲಿ ಬಿಗಿಯುತ
ಒಳಗೆ ರಕ್ತಮಾಂಸದಿಂದ ಮಲವು ಮಜ್ಜಮೇಧದಿ
ಮಲಿನ ಚರ್ಮವನ್ನು ಹೊದಿಕೆ ಎಳೆದು ನಿತ್ಯ ಬೆಳೆವ ಈ
ಹೊಲೆಯ ಗೂಡಿನೊಳಗೆ ಜನಿಸಲಾರೆ ಲಕ್ಷ್ಮಿ ಅರಸನೆ ೨

ಎನ್ನ ಸತಿಯು ಎನ್ನ ಸುತರು ಎನ್ನ ಬಂಧುಬಳಗವು
ಇನ್ನು ಸಾಕಿ ಸಲಹೆಂದು ಎನ್ನ ಹಿರಿದು ತಿಂಬರು
ನನ್ನ ಸೆಳೆದೊಯ್ಯುವಾಗ ಬೆನ್ನಾಪರ ಕಾಣೆನೊ
ಎನ್ನ ಸಲಹಬೇಕು ನೀನು ಚೆನ್ನ ಲಕ್ಷ್ಮಿಯರಸನೆ ೩

ಇರುವೆ ಮೊದಲುಮಾಡಿ ಆನೆ ಕಡೆಯುಮಾಡಿ ಬಸುರಿನಲ್ಲಿ
ಮರಳಿ ಮರಳಿ ಹುಟ್ಟಿ ಹೊಂದಿ ತೊಳಲಿ ಬಂದೆ ನಾ
ಬಿರುಸು ಗಾಳಿಯೊಳಗೆ ಬಿದ್ದ ತರಗೆಲೆಯ ಅಂದವಾಯ್ತು
ಮರಳಿ ಮರಳಿ ಹುಟ್ಟಿ ಹೊಂದಲಾರೆ ಲಕ್ಷ್ಮಿ ಅರಸನೆ ೪

ಲಕ್ಷ ಜೀವರಾಶಿ ನಿನ್ನ ಕುಕ್ಷಿಯೊಳಗಿಂಬಿಟ್ಟು
ಅಚ್ಯುತ ಅನಂತ ನನ್ನನೇಕೆ ಹೊರಗು ಮಾಡಿದೆ
ಮಚ್ಚರಿಸದೆನ್ನ ನೀನು ಕುಕ್ಷಿಯೊಳಗಿಂಬಿಟ್ಟು
ರಕ್ಷಿಸಯ್ಯ ಲಕುಮಿಯರಸ ಪುರಂದರವಿಠಲಯ್ಯ ೫

ಭಾಗ ೩

ಮನೋಬೋಧೆ

ಜೀವಸಂಬೋಧನೆ
ವಿಧಿಚಿಂತನೆ
ಶಬ್ದ ಚಿಂತನೆ

ಜೀವಸಂಬೋಧನೆ

"ಅಲ್ಲಿದೆ ನಮ್ಮ ಮನೆ,
ಇಲ್ಲಿ ಬಂದೆ ಸುಮ್ಮನೆ"

ಎಂದು ಪುರಂದರದಾಸರು ಒಂದು ಕಡೆ ಮಾರ್ಮಿಕವಾಗಿ ಜೀವದ ಹಳವಂಡವನ್ನು ಚಿತ್ರಿಸಿದ್ದಾರೆ. ಅವರ ದೃಷ್ಟಿಯಲ್ಲಿ ಈ ಜೀವ ತನ್ನ ವಾಸ್ತವ ನೆಲೆಯನ್ನು ಗುರುತಿಸಿಕೊಂಡುಬಿಡುತ್ತದೆ. ಸಮಾಜದಲ್ಲಿ ಇದ್ದೂ ಎಲ್ಲರೊಡನೆ ಬೆರೆತೂ, ಇಲ್ಲಿಯ ಎಲ್ಲ ಭೋಗಭಾಗ್ಯಗಳನ್ನು ಅನುಭವಿಸಿಯೂ ಜೀವಕ್ಕೆ ತಾನು ನೆಲೆತಪ್ಪಿದ ಹಕ್ಕಿ ಎಂಬ ನೆನಪು ಅಂತರಂಗದ ನರನಾಡಿಗಳನ್ನೆಲ್ಲ ಮಿಡಿಯುತ್ತಲೇ ಇರುತ್ತದೆ. ಕಾಡಿನಲ್ಲಿ ಹಿಡಿವಡೆದ ಆನೆ ಅರಮನೆಯ ಮೆರವಣಿಗೆಯ ಆನೆಯಾಗಿ ಮೆರೆಯುತ್ತಿದ್ದರೂ ತಾನು ಮೊದಲು ವಾಸವಾಗಿದ್ದ ವಿಂಧ್ಯವನ್ನು ಸದಾ ನೆನಪಿಸಿಕೊಳ್ಳುತ್ತಿರುತ್ತದೆ ಎಂದು ವಚನಕಾರರು ಹೇಳುತ್ತಾರೆ. ಪುರಂದರದಾಸರು ಚಿತ್ರಿಸುವ ಸಮಾಜ ಜೀವಿಯೂ ಅಷ್ಟೆ. ಈ ನೆನಪು ಅಳಿಸಿಹೋಗದ ಹಾಗೆ ಜೀವಿ ಸದಾ ತನ್ನ ಅಂತರಂಗದಲ್ಲಿ ಎಚ್ಚರಿಕೆಯ ಗಂಟೆಯನ್ನು ಬಾರಿಸುತ್ತಿರುತ್ತಾನೆ. ಉಳಿದವರಂತೆ ಲೌಕಿಕದಲ್ಲೇ ಸಂಪೂರ್ಣವಾಗಿ ಮುಳುಗಿ ಹೋಗದ ಹಾಗೆ ಜೀವಚಿಂತನೆ–ದೈವಚಿಂತನೆಗಳಲ್ಲಿ ತನ್ನ ಅಂತರಂಗವನ್ನು ತೊಡಗಿಸುತ್ತಾನೆ. ಈ ಕಾವು ಆರದಂತೆ ಜೀವದೊಂದಿಗೆ ಮಾತನಾಡುವುದು ಒಂದು ಸೊಗಸಾದ ಪ್ರಯೋಗ. ಸಮಾಜದೊಂದಿಗೆ ಸಜೀವ ಸಂಬಂಧವಿರಿಸಿಕೊಂಡು ಸಮಾಜದ ಎಲ್ಲ ಬಗೆಯ ಚಟುವಟಿಕೆಗಳಲ್ಲಿ ಇತ್ಯಾತ್ಮಕವಾಗಿ ಭಾಗವಹಿಸುವ ವ್ಯಕ್ತಿ ತನ್ನ ಎಲ್ಲ ವ್ಯವಹಾರಗಳ ಮಧ್ಯದಲ್ಲೂ ಅಂತರಂಗದಲ್ಲಿ ಜೀವಸಂಬೋಧನೆಯ ಶ್ರುತಿಯನ್ನು ಮೀಟುತ್ತಲೇ ಇರುತ್ತಾನೆ. ವ್ಯಕ್ತಿಯ ಅಂತರಂಗ–ಬಹಿರಂಗಗಳನ್ನು ಬೆದಕಲು ಕವಿಗಳು ಬಳಸುವ ಕಲಾತ್ಮಕ ತಂತ್ರ ಇದು. ಅಲ್ಲದೆ ಇಂಥ 'ಪದ'ಗಳಲ್ಲಿ ಸಮಾಜ ಜೀವಿ ತನ್ನ ಒಳಜೀವದೊಂದಿಗೆ ನಡೆಸುವ ಸಂಭಾಷಣೆ ಒಂದು ಬಗೆಯಲ್ಲಿ ಮಾನವ ಸ್ವಭಾವಗಳ ವಿಶ್ಲೇಷಣೆಯೂ ಆಗುತ್ತದೆ, ಮಾಡಿದ ಸಾಧನೆಗಳ ಸಿಂಹಾವಲೋಕನವೂ ಆಗುತ್ತದೆ, ದಾಸ್ಯಾನು ಪರೀಕ್ಷೆಯೂ ಆಗುತ್ತದೆ.

ಪುರಂದರದಾಸರ ಜೀವ ಸಂಬೋಧನೆಯ ಪದಗಳಲ್ಲಿ ಜೀವ–ದೇಹಗಳನ್ನು, ಜೀವ–ದೈವವನ್ನು ಮುಖಾಮುಖಿಯಾಗಿಸುವ ಪ್ರಯತ್ನವಿದ್ದು ನೇರವಾದ ಸಂವಾದ ಸಾಧ್ಯವಾಗುತ್ತದೆ. 'ಏನು ಬಂದೆಯೊ ಜೀವವೆ ವ್ಯರ್ಥವಾಗಿ' 'ಸಿಕ್ಕಿದೆಯ ಎಲೆ ಜೀವವೆ ನಿನ್ನ ಕುಕ್ಕಿ ಕೊಲ್ಲದೆ ಬಿಡರು' ಎಂಬ ಪದಗಳಲ್ಲಿ ಐಹಿಕ ಜಂಜಡಗಳಲ್ಲಿ ಸಿಕ್ಕಿಕೊಂಡ ಜೀವಿಯ ದುರವಸ್ಥೆಯ ವರ್ಣನೆಯಿದೆ. ದೇಹದೊಂದಿಗೆ ನಂಟು ಬೆಳೆಸಿಕೊಂಡ ಜೀವಕ್ಕೆ ಇದ್ದಕ್ಕಿದ್ದಂತೆ ಕೊಸರಿಕೊಂಡು ಹೋಗುವ ಸ್ವಭಾವ. ಇದನ್ನು ಸಹಿಸಲಾಗದ ದೇಹ

ಅನುದಿನದಲಿ ಬಂದು
ತನುವ ಸ್ನೇಹವ ಮಾಡಿ
ಎನ್ನ ಬಿಟ್ಟು ಹೋಗುತೀಯ ಜೀವವೆ ?

ಎಂದು ತರ್ಕಕ್ಕೇ ನಿಲ್ಲುತ್ತದೆ. ಜೀವಸಂಬೋಧನೆಯ ಸಂಗೀತದಲ್ಲಿ ವಿವಿಧ ರಾಗ–ತಾಳಗಳ ಬಳಕೆಯಿದೆ. 'ಅಂಜಬೇಡ ಎಲೊ ಜೀವ' ಎಂದು ಜೀವಕ್ಕೆ ಸಮಾಧಾನ ಹೇಳುವ ಎದೆಗಾರಿಕೆಯಿದೆ. 'ಉರಗನ ಹೆಡೆಯ ನೆಳಲ ಸೇರಿದ ಕಪ್ಪೆ ಸ್ಥಿರಕಾಲ ಬಾಳ್ವುದೆ ಜೀವವೆ' ಎಂದು ಸಂಸಾರದ ಅಸಾರತೆಯನ್ನು ತಿಳಿಯಪಡಿಸುವ ವೈರಾಗ್ಯ ಚಿತ್ರಮಾಲಿಕೆಗಳಿವೆ. 'ಗಾಳಿ ಗಿಕ್ಕಿದ ದೀಪ ಬಾಳು ಬದುಕಿಲ್ಲ' ಎಂಬ ನಿರ್ವೇದ ಭಾವವಿದೆ.

'ಹುಚ್ಚುಕುನ್ನಿ ಮನವೇ ನೀ
ಹುಚ್ಚುಗೊಂಬುದು ಘನವೇ ?'

ಎಂಬ ವ್ಯಂಗ್ಯ ಧೋರಣೆಯಿದೆ. ಹಾಗೆಯೇ 'ಜೀವ'ದ ನೆಲೆಯಲ್ಲಿ ನಿಂತು 'ಕಾಯ'ವನ್ನು ನೋಡುವ ಒಂದು ತಿರುಗುನೋಟವೂ ಇದ್ದು ಎರಡರ ಅಂತರಂಗಗಳೂ ನಿಚ್ಚಳವಾಗಿ ಕಾಣುತ್ತವೆ.

ಹಾಗೆಯೇ ಜೀವವು ದೈವದೊಂದಿಗೆ ನಡೆಸುವ ಸಂವಾದದಲ್ಲಿ 'ಎನ್ನ ಅಪರಾಧಂಗಳ ಕ್ಷಮಿಸೋ' ಎಂಬ ಕ್ಷಮಾ ಯಾಚನೆಯ ಧ್ವನಿ, 'ತೇಲಿಸೊ ಇಲ್ಲ ಮುಳುಗಿಸೊ ನಿನ್ನ ಕಾಲಿಗೆ ಬಿದ್ದೆನೊ' ಎಂಬ ಸಮರ್ಪಣ ಧ್ವನಿ, 'ಎನ್ನ ಕಡೆ ಹಾಯಿಸುವುದು ನಿನ್ನ ಭಾರ' ಎಂಬ ಕರ್ತವ್ಯ ಜ್ಞಾಪನದ ಧ್ವನಿ, 'ಹರಿ ನೀನೆ ಗತಿಯೆಂದು ನೆರೆನಂಬಿದವರನು ಮರೆತಿರುವುದು ನ್ಯಾಯವೆ ?' ಎಂಬ ಆಕ್ಷೇಪಣೆಯ ಧ್ವನಿ, 'ಭಂಡನಾದೆನು ನಾನು ಸಂಸಾರದಿ' ಎಂಬ ಆತ್ಮಾವಲೋಕನದ ಧ್ವನಿ ಮುಂತಾದ ಹಲವಾರು ಸೀಳುನೋಟಗಳನ್ನು ಕಾಣಬಹುದಾಗಿದೆ. ನಿಂದಾಸ್ತುತಿ, ಬೇಡಿಕೆ, ಆಕ್ಷೇಪ, ನ್ಯಾಯ, ತರ್ಕ, ವಿತಂಡವಾದ ಮೊದಲಾದ ಬಗೆಬಗೆಯ ದೃಷ್ಟಿಕೋನಗಳಿಂದ ಜೀವ–ದೈವ ಗಳ ಪರಾಮರ್ಶನ ಸಾಗುತ್ತದೆ.

ನಮ್ಮ ಸಾಮಾಜಿಕ ವರ್ತನೆಗಳ ಗಾಢವಾದ ಪರಾಮರ್ಶೆಯೂ ಇಲ್ಲಿಯ 'ಸಂವಾದಪದ'ಗಳಲ್ಲಿ ಸೇರಿಕೊಂಡಿದ್ದು ಕವಿಯ ಚಿಂತನಗಳಿಗೆ ಹೊಸ ಆಯಾಮವನ್ನು ಒದಗಿಸಿಕೊಟ್ಟಿವೆ.

೧೧೮

ಶಹನ ಆದಿ

ಸಿಕ್ಕಿದೆಯು ಎಲೆ ಜೀವ ನಿನ್ನ
ಕುಕ್ಕಿ ಕೊಲ್ಲದೆ ಬಿಡರು ಪ

ಸೊಕ್ಕಿದ ಹೆಣ್ಣಿಗೆ ಮರುಳಾಗಿ
ಉಕ್ಕಿನ ಕಂಭಕೆ ಗುರಿಯಾದೆ ಅ

ಹಾಳೂರ ಕೋಳಕ್ಕೆ ಕಾಲುಚಾಚಿದ ಹಾಗೆ
ಮೂಳ ಸಂಸಾರಕೆ ನೀ ಗುರಿಯಾಗಿ
ಏಳುತ ಬೀಳುತ ಇಲ್ಲಿಗೆ ಬಂದು ೧

ಸತಿಸುತರೆಂಬುವರೆ ಹಿತರೆಂದು ನಂಬಿದೆಯೊ
ಯತಿಗಳತಿಥಿಗಳು ಬಂದರೆ ಮನೆಗೆ
ಗತಿಯಿಲ್ಲವೆಂದು ಖತಿಗೊಂಡೆಯಲ್ಲೊ ೨

ಸುಣ್ಣವತಿಂದ ತಿಮ್ಮಣ್ಣನಂದದಿ ಬೆದರಿ
ಟಣ್ಣುಪಣ್ಣನೆ ಕುಣಿಕುಣಿದಾಡಿ
ದೊಣ್ಣೆ ಪೆಟ್ಟಿಗೆ ನೀ ಗುರಿಯಾದೆಯಲ್ಲೊ ೩

ತೊಂಡಿನ ದನದಂತೆ ಖಂಡುಗ ಧನವನ್ನು
ಕಂಡವರ ಒಡವೆಗಳ ಬಡ್ಡಿಯ ಹಣವನ್ನು
ಕಂಡೂ ಕಾಣದಹಾಗೆ ನೀ ತಿಂದೆಯಲ್ಲೊ ೪

ಮನೆಮನೆ ತಪ್ಪದೆ ಶುನಕನಂದದಿ ತಿರುಗಿ
ಘನಘನವಾಗಿ ತದ್ದಿನ ಕೂಳನು ತಿಂದು
ತನುವ ಬೆಳಸಿ ನೀನಿಲ್ಲಿ ಬಂದೆಯಲ್ಲೊ ೫

ಭೂಪಾಲ ಸರ್ವೇಶ ರೂಪವಂತನೆನಿಸಿದೆಯೊ
ದೀಪಕೆ ಬೀಳುವ ಪತಂಗದ ಹಾಗೆ
ತಾಪಕೆ ಗುರಿಯಾದೆಯಿಾಪರಿಯಲ್ಲಿ ೬

ಗೋಪಾಲಕೃಷ್ಣಯ್ಯ ತಾಪತ್ರಯವ ಕಳೆವ
ಆಪತ್ತೆಲ್ಲ ಪರಿಹರ ಮಾಡುವ
ಶ್ರೀಪತಿ ಪುರಂದರವಿಠಲನ ನೆನೆಯದೆ ೭

[ಪುರಂದರದಾಸರು ತುಂಬ ಸುಂದರವೂ ಧ್ವನಿಪೂರ್ಣವೂ ಆದ ಹತ್ತಾರು ಉಪಮೆ-ರೂಪಕಗಳಿಂದ, ಲೋಕದಲ್ಲಿ ಜೀವಿಯ ಬಗೆ ಬಗೆ ಯಾತನೆಗಳನ್ನು ದೃಶ್ಯವತ್ತಾಗಿ ಚಿತ್ರಿಸಿದ್ದಾರೆ. ಇಲ್ಲಿ ಕೇಂದ್ರೋಪಮೆ ಬೇಟೆಗಾರನ ಕೈಗೆ ಸಿಕ್ಕಿದ ಪ್ರಾಣಿಯ ಅವಸ್ಥೆ. ಇದು ಮಾಯಾಪಾಶದಲ್ಲಿ ಸಿಕ್ಕಿದ ಸಂಸಾರಿ ಜೀವಿಗೂ ಅನ್ವಯಿಸುತ್ತದೆ.ತೊಂಡು ದನ, ನಾಯಿ, ಕೋತಿ, ಹಾಳೂರ ಕೋಳ ಈ ಪ್ರತಿಮೆಗಳೆಲ್ಲ ಕೇಂದ್ರದ ಭಾವವನ್ನು ಸಮರ್ಪಕವಾಗಿ ವಿಸ್ತರಿಸುತ್ತವೆ.]

ಸಿಕ್ಕಿದೆಯ ಎಲೆ....—ಇದು ಬಲೆಗೆ ಸಿಕ್ಕ ಮಿಕ (ಜೀವ)ದ ಚಿತ್ರ. ಬೇಟೆಗಾರನ (ವಿಧಿ) ಅಟ್ಟಹಾಸವೂ ಇಲ್ಲಿ ಧ್ವನಿತವಾಗಿದೆ.

ಸೊಕ್ಕಿದ ಹೆಣ್ಣಿಗೆ...—ಸ್ತ್ರೀ ಮೋಹಕ್ಕೆ ಸಿಲುಕಿದವನು ನರಕದಲ್ಲಿ ಪಡಬೇಕಾದ ಬಾಧೆ (ಉಕ್ಕಿನ ಕಂಭ).

ಹಾಳೂರ ಕೋಳ...—ಹಾಳೂರಿನ ಹೊರಗೆ ಕೋಳವನ್ನು ಇಟ್ಟಿರುತ್ತಾರೆ. 'ಕೋಳ' ಎಂಬುದು ಅಪರಾಧಿಯನ್ನು ಹಿಡಿದು ತಂದು ಕಾಲನ್ನು ತೂತಿಗೆ ಸಿಕ್ಕಿಸಿ ಕೀಲಂ ಜಡಿದು ಬಂಧಿಸುವ ಒಂದು ಮರದ ಸಾಧನ. (ಹೋಲಿಸಿ: ಹಾಳೂರ ಮುಂದೆ ಇಟ್ಟಿಹ ಕೋಳದಲ್ಲಿ ಕಾಲನಿಟ್ಟು ಕೀಲ ಜಡಿಕೊಂಡಂತಾಯಿತ್ತು, ಶೂನ್ಯ ಸಂಪಾದನೆ). ಸಂಸಾರವನ್ನು ಹಾಳೂರಿನ ಕೋಳಕ್ಕೆ ಹೋಲಿಸಲಾಗಿದೆ. ಸಂಸಾರದ ಕಟ್ಟುಪಾಡುಗಳಿಗೆ ಸಿಕ್ಕಿದ ಜೀವದ ಯಾತನೆ ಇಲ್ಲಿ ಚಿತ್ರಿತವಾಗಿದೆ.

ಖತಿ—ದುಃಖ.

ತಿಮ್ಮಣ್ಣ—ಕಪಿ.

ತೊಂಡಿನ ದನ—ತೊಂಡು ಶಬ್ದದ ಮೂಲಾರ್ಥ ಭಕ್ತಿ. ಭಕ್ತಿಯಿಂದ ಬಿಟ್ಟ ಬಸವಿ ಮೇಯಲು ಊರ ಹೊಲಕ್ಕೆಲ್ಲ ನುಗ್ಗುತ್ತದೆ. ಹೀಗೆ ಅದು 'ಪೋಲಿದನ' ವೆಂದು ಅರ್ಥವ್ಯತ್ಯಾಸ ಪಡೆದಿದೆ.

ಮನೆ ಮನೆ ತಪ್ಪದೆ...—ನಾಯಿ ತಿರುಗುವ ಹಾಗೆ ಹೊಟ್ಟೆಯ ಚಪಲದಿಂದ ತದ್ದಿನ (ತಿಥಿ) ಕೂಳು ತಿಂದು ಬೊಜ್ಜು ಬೆಳೆಸಿಕೊಳ್ಳುವುದು.

ತದ್ದಿನ ಕೂಳು—ತದ್ದಿನ ಎಂದರೆ ತತ್ (ಆ) ದಿನ ಎಂದರ್ಥ. ಅಂದರೆ ಶ್ರಾದ್ಧದ ದಿನ ಎಂದರ್ಥ. ಮಡಿವಂತರ ಮನೆಗಳಲ್ಲಿ ತಿಥಿ, ಶ್ರಾದ್ಧ ಇವೆಲ್ಲ ಅಮಂಗಳ ವನ್ನು ಸೂಚಿಸುವ ಶಬ್ದಗಳಾದ್ದರಿಂದ ಆ ಶಬ್ದ ಬಳಸದೆ ಹೀಗೆ ಹೇಳುತ್ತಾರೆ.

ಪಂತುವರಾಳಿ — ಅಟ್ಟ

ದಾರಿಗೆ ನಿನ್ನ ಬಾಳ್ವೆ ದಾರಿಗೆ ಪ

ಬರುತಲಿ ಏನ ತಂದೆ ಎಲ್ಲಾ ನನ್ನದೆ ಅಂದೆ
ಪರನಿಂದೆಗಳ ಕಟ್ಟಿ ಹರ ಕೊಂಡನೆಂದೆ ೧

ಇರಲಿ ಎಲೊ ಶಾಂತಿ ಈಡಾಡೊ ಭ್ರಾಂತಿ
ಮೂರು ದಿನದ ಸಂತೆ ನಿನಗ್ಯಾಕೊ ಚಿಂತೆ ೨

ಅನುಗಾಲ ಕಿಚ್ಚು ಭವದೊಳಗೆ ಹಚ್ಚು
ಅನುಭವದಚ್ಚು ಸವಿ ನೋಡೊ ಹುಚ್ಚು ೩

ಶ್ರೀಕೃಷ್ಣ ಧ್ಯಾನ ಮರೆಯದಿರಲಿ ಶ್ವಾನ
ಪರಿಪರಿ ದಿನದಲ್ಲಿ ತಿಳಿಯೊ ನೀ ಜ್ಞಾನ ೪

ಸಿರಿವರ ರಂಗ ಭವಭಯಭಂಗ
ಪುರಂದರವಿಠಲನ್ನ ಒಲಿಸಿಕೊ ಮಂಗ ೫

ದಾರಿಗೆ—ಯಾರಿಗೆ ; ಅದು + ಆರಿಗೆ>ಅದ್ಯಾರಿಗೆ>ದ್ಯಾರಿಗೆ>ದಾರಿಗೆ.

ದಾರಿಗೆ ನಿನ್ನ ಬಾಳ್ವೆ ದಾರಿಗೆ...—ಲೋಕದಲ್ಲಿ ವಾಸ್ತವವಾಗಿ 'ನಿನ್ನವರು' ಎನ್ನಬಲ್ಲವರು ಯಾರೂ ಇಲ್ಲ. ಆದ್ದರಿಂದ ಯಾರಿಗಾಗಿ ಹೀಗೆ ಆಸ್ತಿ ಪಾಸ್ತಿ ಯಜಮಾನಗಿರಿ ಮಾಡುತ್ತಿದ್ದೀ ?

ರೇಗುಪ್ತಿ ಝಂಪೆ

ಅಂಜಬೇಡ ಬೇಡೆಲೊ ಜೀವ ಭವ
ಭಂಜನ ಹರಿ ಶರಣರ ಕಾವ ಪ

ಬಂದ ಕಷ್ಟಗಳೆಲ್ಲ ತಾಳಿಕೋ ಬಲು
ಸಂದೇಹ ಬಂದಲ್ಲಿ ಕೇಳಿಕೋ
ನಿಂದಾಸ್ತುತಿಗಳ ತಾಳಿಕೋ ಗೋ
ವಿಂದ ನಮ್ಮವನೆಂದು ಹೇಳಿಕೋ ೧

ಮಾಧವನಿಗೆ ತನು ಮನ ಮೆಚ್ಚು ಕ್ರೋಧ
ರೂಪದ ಮಾಯಗಳ ಕಚ್ಚು
ಮೋದತೀರ್ಥರ ಪಾದವೆ ಹೆಚ್ಚು ಮಾಯ
ವಾದಿ ಮತಕ್ಕೆ ಬೆಂಕಿಯ ಹಚ್ಚು ೨

ಪರನಾರಿಯರ ಆಸೆಯ ಬಿಡು ನೀನು
ಪರಮಾತ್ಮನ ಧ್ಯಾನವ ಮಾಡು
ಹರಿ ಸರ್ವೋತ್ತಮನೆಂದು ಕೊಂಡಾಡು ವರದ
ಪುರಂದರವಿಠಲನ ಮೂರ್ತಿಯ ನೋಡು ೩

[ಲೌಕಿಕ ಜೀವನದಲ್ಲಿ ಅಡಿಗಡಿಗೆ ಕಾಡುವ ಸಮಸ್ಯೆಗಳಿಗೆ ಹೆದರದೆ ಧೈರ್ಯವಾಗಿ ಎದುರಿಸಬೇಕೆಂಬ ಜಾಗೃತಿಯನ್ನು ಮೂಡಿಸುವ ಪದ ಇದು.'ಗೋವಿಂದ ನಮ್ಮವನು' ನಮ್ಮನ್ನು ಎಂಥ ವಿಪತ್ತಿನಿಂದಲೂ ಪಾರುಮಾಡಬಲ್ಲ ಎಂದು ಭಾವಿಸುವ ಜೀವ ಯಾರಿಗೂ ಹೆದರಬೇಕಾದದ್ದಿಲ್ಲ.]

ಭವಭಂಜನ—ಸಾಂಸಾರಿಕ ಕ್ಲೇಶಗಳನ್ನು ನಾಶಮಾಡುವ.

ಮೋದತೀರ್ಥ—ಆನಂದತೀರ್ಥರು, ಮಧ್ವಾಚಾರ್ಯರು.

ನಾದನಾಮಕ್ರಿಯೆ ಆದಿ

ಅನುದಿನದಲಿ ಬಂದು ತನುವ ಸ್ನೇಹವಮಾಡಿ
ಎನ್ನ ಬಿಟ್ಟು ಹೋಗುತೀಯಾ ಜೀವವೆ ಪ

ಘನಕೋಪದಿಂದ ಬಂದು ಯಮನವರೆಳೆದೊಯ್ವಾಗ
ನಿನ್ನ ಕೂಡಿನ್ಯಾತರ ಮಾತೊ ಕಾಯುವೆ ಅ

ಬೆಲ್ಲದ ಹೇರಿನಂತೆ ಬೇಕಾದ ಬಂಧು ಬಳಗ
ನಿಲ್ಲೊ ಮಾತ ಹೇಳುತೇನೋ ಜೀವವೆ
ನಿಲ್ಲಲೀಸದೆ ನಿನ್ನ ಯಮನವರೆಳೆದೊಯ್ವಾಗ
ಬೆಲ್ಲ ಬೇವಾಯಿತಲ್ಲೋ ಕಾಯುವೆ ೧

ಸಕ್ಕರೆ ಪಾಯಸ ಸವಿದುಂಬ ಕಾಲದಲ್ಲಿ
ದಿಕ್ಕುಗೆಟ್ಟು ಹೋಗುತಿಯಾ ಜೀವವೇ
ದಕ್ಕಗೊಡದೆ ಎನ್ನ ಯಮನವರೆಳೆದೊಯ್ವಾಗ
ಸಕ್ಕರೆ ವಿಷವಾಯಿತಲ್ಲೋ ಕಾಯುವೆ ೨

ಸೋರುವ ಮನೆಯಲಿ ಧ್ಯಾನ ಮೌನಾದಿಗಳು
ಬೇರಿತ್ತು ನಿನ್ನ ಮನಸು ಜೀವವೇ
ನೀರಮೇಲಣಗುಳ್ಳೆ ತೋರಿ ಹಾರಿದಂತೆ
ಯಾರಿಗೆ ಯಾರಿಲ್ಲ ಕಾಯುವೆ ೩

ಅಂದಣದೈಶ್ವರ್ಯ ದಂಡಿಗೆ ಪಲ್ಲಕ್ಕಿ
ಮಂದಗಮನೆಯರು ಜೀವವೆ
ಮಂದಗಮನೆ ಯಾರೊ ಮಡದಿಮಕ್ಕಳು ಯಾರೊ
ಬಂದಂತೆ ಹೋಗುತೇನೋ ಕಾಯುವೆ ೪

ಹುಟ್ಟಿದ್ದು ಹೊಲೆಯೂರು ಬೆಳೆದದ್ದು
ಮೊಲೆಯೂರು ಇಟ್ಟದ್ದು ಕಾಡೂರಾಯಿತಲ್ಲೊ ಜೀವವೆ
ಸೃಷ್ಟಿಗೊಡೆಯ ನಮ್ಮ ಪುರಂದರವಿಠಲನ
ಮುಟ್ಟಿ ಭಜಿಸು ಕಂಡ್ಯ ಕಾಯುವೆ ೫

[ದೇಹ–ಜೀವಗಳ ನಡುವಣ ಒಗೆತನದ ಸರಸ–ವಿರಸ ಮುಖಗಳೆರಡೂ ಹಾಸು ಹೊಕ್ಕಾಗಿ ನೆಯ್ದುಕೊಂಡು ಬಂದಿರುವ ಪದ ಇದು. ಬದುಕಿನಲ್ಲಿ ತುಂಬ ಹಿತಕರ ವೆನ್ನಿಸುವ ಸವಿಸವಿಯಾದ ಆಹಾರ, ಐಶ್ವರ್ಯ, ಅಧಿಕಾರ, ಕಾಮಸುಖ, ಬಂಧು ಬಳಗದ ಸುಖ ಎಲ್ಲವೂ ಅಧ್ರುವ. ಎಲ್ಲಕ್ಕೂ ತೆರೆ ಇಳಿಯುವ ಕಾಲ ಬರುತ್ತದೆ ಎಂಬ ಭಾವವನ್ನು ಈ ಕೀರ್ತನೆ ಬಿಂಬಿಸುತ್ತದೆ. ದೇಹ–ಜೀವಗಳ ನಡುವೆ ನಡೆಯುವ ಆಪ್ತ ಸಂಭಾಷಣೆಯಲ್ಲಿ ಪ್ರತಿಯೊಂದು ವಸ್ತುವಿನ ಎರಡು ಮಗ್ಗುಲುಗಳೂ ತೆರೆದು ಕೊಳ್ಳುವಂತೆ ಸಾಗುವ 'ಪದ'ದ ರಚನಾಶಿಲ್ಪ ಅದ್ಭುತವಾಗಿದೆ. ಸೂಕ್ತಿಗಳಿಂದ ಇಡಿ ಕಿರಿದು ವಿಚಾರಸಂಪುಷ್ಟಿಯುಳ್ಳ ಸಾರ್ಥಕ ರಚನೆ ಇದು.]

ಅನುದಿನದಲಿ—ದೇಹವು ಜೀವವನ್ನು ಸಂಬೋಧಿಸಿ ಹೇಳುವ ಮಾತು.

ಘನಕೋಪದಿಂದ—ಜೀವವು ದೇಹದ ಪ್ರಶ್ನೆಗೆ ಕೊಡುವ ಉತ್ತರ. ಯಾವಾಗಲೂ ಜೀವದ್ದೇ ಕೊನೆಯ ಮಾತು ತಾನೆ.

ಬೆಲ್ಲದ ಹೇರಿನಂತೆ—ಬಂಧು ಬಾಂಧವರೆಲ್ಲ ಬೆಲ್ಲದ ಹೇರಿನಂತೆ ಹಿತಕರವಾಗಿ ಕಾಣು ತ್ತಿದ್ದಾರೆ ದೇಹಕ್ಕೆ. ಆದರೆ ಜೀವದ ಉತ್ತರದಲ್ಲಿ ಬೆಲ್ಲ ಬೇವಾಗಿದೆ.

ಸಕ್ಕರೆ ಪಾಯಸ—ದೇಹವು ರುಚಿರುಚಿಯಾದ ಆಹಾರವನ್ನು ನೆನಪಿಸಿಕೊಂಡು ಬಾಯಲ್ಲಿ ನೀರೂರಿಸಿಕೊಂಡರೆ ಜೀವ ಸಕ್ಕರೆಯನ್ನು ವಿಷವಾಗಿ ಮಾಡುವ ದಿಕ್ಕಿನಲ್ಲಿ ಯೋಚಿಸುತ್ತಿದೆ.

ಸೋರುವ ಮನೆಯಲ್ಲಿ—ನವದ್ವಾರಗಳ ದೇಹ.

ಅಂದಣದೈಶ್ವರ್ಯ—ಪಲ್ಲಕ್ಕಿಯ ಸವಾರಿಯ ಸಂಪತ್ತು; ಅಂದಣ, ದಂಡಿಗೆ, ಪಲ್ಲಕ್ಕಿ ಎಲ್ಲವೂ ಸಮಾನಾರ್ಥಕ ಶಬ್ದಗಳು.

ಹುಟ್ಟಿದ್ದು ಹೊಲೆಯೂರು—ಹುಟ್ಟು ಬೆಳವಣಿಗೆ ಸಾವು ಈ ಮೂರನ್ನು ಕ್ರಮವಾಗಿ ಹೊಲೆಯೂರು, ಮೊಲೆಯೂರು, ಕಾಡೂರು ಎಂಬ ಪ್ರತಿಮೆಗಳು ವ್ಯಂಜಿಸು ತ್ತವೆ. ಹೊಲೆಯೂರು ಎಂದರೆ ಗರ್ಭವಾಸದಲ್ಲಿ ದೇಹ ಇರುವಾಗಿನ ಸ್ಥಿತಿ, ಮೊಲೆಯೂರು ಎಂದರೆ ತಾಯ ಸ್ತನ್ಯಪಾನದ ಘಟ್ಟ. ಇಟ್ಟದ್ದು ಕಾಡೂರು ಎಂದರೆ ಸುಡುಗಾಡು, ರುದ್ರಭೂಮಿ.

ಸೌರಾಷ್ಟ್ರ ಅಟ್ಟ

ಎರವಿನ ಸಿರಿಗೆ ಬಿಮ್ಮನೆ ಬೆರೆತರೆ ನೀರ
ಕಡೆದರುಂಟೆ ಬೆಣ್ಣೆ ಜೀವವೆ
ಉರಗನ ಹೆಡೆಯ ನೆಳಲ ಸೇರಿದ ಕಪ್ಪೆ
ಸ್ಥಿರಕಾಲ ಬಾಳ್ವುದೆ ಜೀವವೆ ಪ

ಸತಿ ಸುತರೆಂದು ನೆಚ್ಚಲು ಬೇಡ ಮನದೊಳು
ಹಿತವರೊಬ್ಬರ ಕಾಣೆ ಜೀವವೆ
ವೃಥಾ ನೀನು ಕೆಡಬೇಡ ಮರಣವು ತಪ್ಪದು
ನಾಥ ದಶಕಂಠಗಾದರು ಜೀವವೆ ೧

ಆಸೆ ಮಾಡಲು ಬೇಡ ಭಾಷೆ ತಪ್ಪಲು ಬೇಡನ್ಯ
ಸ್ತ್ರೀಸಂಗವು ಬೇಡ ಜೀವವೆ
ಏಸೇಸು ಜನ್ಮಾಂತರ ಕಳೆದುಳಿದರು
ಈ ಸಾವು ತಪ್ಪದು ಜೀವವೆ ೨

ಆನೆ ಕುದುರೆ ಮಂದಿ ಶಾನೆ ಭಂಡಾರವು
ಏನು ಪಡೆದರಿಲ್ಲ ಜೀವವೆ
ಮಾನ ಸಹ ಸರ್ವ ಹರಿಗೆ ಅರ್ಪಣ ಮಾಡಿ
ಪುನೀತನಾಗಿರು ಜೀವವೆ ೩

ಕೆರೆಯ ಕಟ್ಟಿಸು ಮತ್ತೆ ಪೂದೋಟ ಹಾಕಿಸು
ಸೆರೆಯ ಬಿಡಿಸಲದು ಪುಣ್ಯ ಜೀವವೆ
ಕರೆಯದೆ ಮನೆಗೆ ಬಂದವರಿಗನ್ನವ ನೀಡು
ಪರಲೋಕ ಸಾಧನವದು ಜೀವವೆ ೪

ಸತ್ಯವಂತರ ಸಂಗದೊಳಗೆ ಚರಿಸೆ ಮೃತ್ಯು
ಅತ್ತತ್ತಲಿರುವಳು ಜೀವವೆ
ಸತ್ಯವಂತ ಸಿರಿಪುರಂದರವಿಠಲನೆನ್ನು
ಸತ್ತು ಹುಟ್ಟುವುದಿಲ್ಲ ಜೀವವೆ ೫

[ಜೀವನದ ಉನ್ನತ ಮೌಲ್ಯಗಳ ಪರಿಪಾಲನೆಗೆ ಜೀವ ತಾನೇ ಕೆಲವು ಸೂತ್ರಗಳನ್ನು ರೂಪಿಸಿಕೊಳ್ಳಬೇಕು, ಅದರಂತೆ ನಡೆದುಕೊಳ್ಳಬೇಕು. ಪ್ರಾಪಂಚಿಕ ಹಿತಗಳು ಶಾಶ್ವತವಲ್ಲವೆಂದು ತಿಳಿಯುವುದು, ಆಸೆ ಮಾಡದಿರುವುದು, ಉಪಯುಕ್ತವಾಗಿ ಸಮಾಜದಲ್ಲಿ ಬದುಕುವುದು ಬಹಳ ಮುಖ್ಯ.]

ಎರವಿನ ಸಿರಿಗೆ—ನಶ್ವರವಾದ ಸಂಪತ್ತಿನಿಂದಲೇ ಉನ್ನತ ಫಲಗಳನ್ನು ಪಡೆಯುತ್ತೇನೆ ಎನ್ನುವುದು ನೀರನ್ನು ಕಡೆದು ಬೆಣ್ಣೆಯನ್ನು ಅಪೇಕ್ಷಿಸುವಷ್ಟೇ ಮೂರ್ಖ ಪ್ರಯತ್ನವಾಗುತ್ತದೆ.

ಏಸೇಸು—ಎಷ್ಟೆಷ್ಟು.

೧೨೩

ಆನಂದಭೈರವಿ ಅಟ್ಟ

ಎಚ್ಚರಿಕೆ ಎಚ್ಚರಿಕೆ ಮನವೆ
ಅಚ್ಯುತನ ಪಾದಾರವಿಂದದಲ್ಲಿ ಪ

ಆಶಾಪಾಶದೊಳಗೆ ಸಿಕ್ಕಿ, ಬಹು
ಕ್ಲೇಶಪಟ್ಟು ತುಚ್ಛ ಸುಖದಿ ಮರುಳಿಕ್ಕಿ
ಹೇಸಿ ಸಂಸಾರದೊಳು ಹೊಕ್ಕು, ಮಾಯಾ
ಕೂಪದೊಳು ಬಿದ್ದು ನೀ ಮೈಮರೆತು ಸೊಕ್ಕಿ ೧

ದುಷ್ಟಜನ ಸಹವಾಸ ಹೀನ ಕೇಳು
ಶಿಷ್ಟಜನ ಸಂಗ ಇಹಪರಕೆ ಬಹು ಮಾನ
ಎಷ್ಟು ಓದಿದರಷ್ಟು ಜ್ಞಾನ, ಅದರೊಳು
ಇಟ್ಟು ಭಕ್ತಿಯನು ತಿಳಿಯಲೆ ಸಾವಧಾನ ೨

ತೊಗಲ ಚೀಲ ಒಂಭತ್ತು ಹರಕು, ಒಳಗೆ
ಬಿಗಿದು ನರ ಎಲಬುಗಳ ಸಿಲುಕು
ತ್ವಗ್ರಕ್ತ ಮಾಂಸದ ಹುಳುಕು, ಮಲಮೂತ್ರ
ಬಗೆಬಗೆ ಕಫ ವಾತ ಪಿತ್ತದ ಸರಕು ೩

ಹಣ ಹೆಣ್ಣು ಮಣ್ಣಾಸೆ ವ್ಯರ್ಥ, ಈ ತನುವು
ಪೆಣವಾಗಿ ನಿನಗೆ ಯಮಪುರಿಯು ಸತ್ಯ
ಮಿಣಕು ಶೃಂಗಾರಗಳು ಮಿಥ್ಯ, ಅಂತಕನ
ಘನ ಯಾತನೆಗೆ ಹರಿಯ ನಾಮವೆ ಪಥ್ಯ ೪

ನಾಲಿಗೆಯ ಹರಿಯ ಬಿಡಬೇಡ, ತಿಂಡಿ
ವಾಳೆರ ರುಚಿ ಪಾಕಗಳೆ ಸವಿಯಬೇಡ
ಹಾಳು ಮಾತುಗಳಾಡಬೇಡ, ಗುಣ
ಶೀಲ ಪುರಂದರವಿಠಲನ ಸ್ಮರಣೆ ಬಿಡಬೇಡ ೫

[ಎಚ್ಚರವಿಲ್ಲದ ಬದುಕನ್ನು ಪೊಳ್ಳಾಗಿಸಲು ನಮ್ಮೆಲ್ಲ ಇಂದ್ರಿಯಗಳೂ ಎಷ್ಟೆಷ್ಟು ಪ್ರಯತ್ನ ಪಡುತ್ತವೆ ಎಂಬುದು ಈ ಪದದಲ್ಲಿ ಧ್ವನಿತಗೊಂಡಿದೆ.]

ಕೂಪ—ಬಾವಿ.

ತೊಗಲ ಚೀಲ—ಮಾನವ ದೇಹ.

ಒಂಭತ್ತು ಹರಕು—ನವ ದ್ವಾರಗಳು.

ತ್ವಕ್—ಚರ್ಮ.

ತಿಂಡಿವಾಳೆ—ಹೊಟ್ಟೆಬಾಕ.

೧೨೪

ಬಿಲಹರಿ ಚಾಪು

ವಾರಿಜನಾಭನ ಕರುಣವೆ ಸ್ಥಿರ ಸಂ
ಸಾರವೆ ಎರವು ಕೇಳಾತ್ಮಾ ಪ

ಚಾರುತದಾಯುಷ್ಯ ದೂರದ ಮುಕುತಿಗೆ ದಾರಿ ಸರಿಯು ಕೇಳಾತ್ಮಾ ಅ

ಸತಿಸುತರೆಂಬಾಸೆಯು ಬಿಡು ಅವರಿಂದ
ಹಿತವಾಗದು ಕಂಡ್ಯ ಆತ್ಮಾ
ಮತಿಗೆಟ್ಟು ಕೆಡಬೇಡ ಮರಣ ತಪ್ಪದು ಮುಂದೆ
ಗತಿ ಯಾವುದು ಕಂಡ್ಯ ಆತ್ಮಾ ೧

ಆನೆ ಕುದುರೆ ಒಂಟೆ ಸೈನ್ಯ ಭಂಡಾರವ
ಏನು ಪಡೆದರೇನು ಆತ್ಮಾ
ನಾನಾಬಗೆಯಿಂದ ಅಳಿದುಳಿದರೆ ಮುಂದೆ
ಹಾನಿ ತಪ್ಪದು ಕಂಡ್ಯ ಆತ್ಮಾ ೨

ಎರವಿನ ಸಿರಿಗುಬ್ಬಿ ಮೈ ಮರೆವರೆ
ನೀರ ಕಡೆದರುಂಟೆ ಬೆಣ್ಣೆ ಆತ್ಮಾ
ಉರಗನ ಹೆಡೆಯು ನೆರಳ ಸೇರಿದ ಕಪ್ಪೆ
ಸ್ಥಿರವೆಂದು ಬಗೆವರೆ ಆತ್ಮಾ ೩

ಲೆತ್ತ ಪಗಡೆ ಚದುರಂಗ ಜೂಜಾಟವ
ಮತ್ತಾಡಿ ಕೆಡಬೇಡ ಆತ್ಮಾ
ಭಕ್ತಿಯಲಿ ಪುರಂದರವಿಠಲನ ನೆನೆಯಲು
ಮುಕ್ತಿ ಪಡೆವೆ ಕಂಡ್ಯ ಆತ್ಮಾ ೪

ಕಾಂಬೋದಿ ಝಂಪೆ

ಉಬ್ಬದಿರು ಉಬ್ಬದಿರು ಎಲೆ ಮಾನವ ಪ

ಹೆಬ್ಬುಲಿಯಂತೆ ಯಮ ಬೊಬ್ಬಿಡುತ ಕಾದಿರುವ ಅ

ಸಾಗರದ ತೆರೆಯಂತೆ ಸಾವು ಹುಟ್ಟಿರಲಾಗಿ
ಭೋಗ ಭಾಗ್ಯಗಳೆಂದು ಬಳಲಲೇಕೋ
ನಾಗಪೆಡೆ ನೆರಳಲ್ಲಿ ನಡುಗೊ ಕಪ್ಪೆಯ ರೀತಿ
ಕೂಗಿ ಚೀರಿದರೆ ನೀನಾಗ ಕೇಳುವರೆ ೧

ಮಾಳಿಗೆ ಮನೆಯೆಂದು ಮತ್ತೆ ಸತಿಸುತರೆಂದು
ಜಾಳಿಗೆ ಧನಧಾನ್ಯ ಪಶುಗಳೆಂದು
ವೇಳೆ ತಪ್ಪದೆ ತಿಂಬ ಕೂಳು ತನಗುಂಟೆಂದು
ಗಾಳಿಗಿಕ್ಕಿದ ದೀಪ ಬಾಳು ಬದುಕೆಲ್ಲ ೨

ಅಸ್ಥಿರದ ಭವದೊಳಗೆ ಅತಿಶಯಗಳೆಣಿಸದಲೆ
ವಸ್ತು ಇದಿರಲಿ ಕೇಳು ವೈರಾಗ್ಯವ
ವಿಸ್ತಾರಮಹಿಮ ಶ್ರೀ ಪುರಂದರವಿಠಲನ
ಸ್ವಸ್ಥಚಿತ್ತದಿ ನೆನೆದು ಮುಕ್ತಿ ಪಡೆ ಮನುಜ ೩

ವಸ್ತು ಇದಿರಲಿ ಕೇಳು ವೈರಾಗ್ಯವ—ಅಭಾವ ವೈರಾಗ್ಯಕ್ಕೆ ವಿರುದ್ಧವಾದ ಮನೋಧರ್ಮ. ಏನೂ ಇಲ್ಲದಾಗ ವೈರಾಗ್ಯ ಕೇಳುವುದು ಸುಲಭ. ಆದರೆ ನಮಗೆ ಅಗತ್ಯವೆನಿಸಿದ ಎಲ್ಲ ಲೌಕಿಕ ಅಗತ್ಯಗಳು ಎದುರಿಗೆ ಸಿದ್ಧವಾಗಿದ್ದಾಗ ಅವನ್ನೆಲ್ಲ ಬಿಟ್ಟು ವೈರಾಗ್ಯ ಭಾವವನ್ನು ತಾಳುವುದು.

೧೨೬

ಸೌರಾಷ್ಟ್ರ ಅಟ್ಟ

ನೆಚ್ಚದಿರೀ ಭಾಗ್ಯ ಯಾರಿಗೂ ಸ್ಥಿರವಲ್ಲ
ನಿಶ್ಚಯವೆಚ್ಚರಿಕೆ ಪ

ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕ್ಕೆ ಮೆಚ್ಚು
ಕೇಳೆಚ್ಚರಿಕೆ ಅ

ಪೊಡವಿಪನೊಲುಮೆಯ ಕಡು ನೆಚ್ಚಿ ಗರ್ವದಿ ನಡೆಯದಿರೆಚ್ಚರಿಕೆ
ಕೊಡನ ಅಂಧಕ ಪೊತ್ತು ನಡೆವಂತೆ ಅಧಿಕಾರ ಕಡೆಯಲ್ಲಿ ಎಚ್ಚರಿಕೆ
ಕಡು ಚಳಕನು ತಾನೆನುತ ಪರರ ಅವಘಡಿಸದಿರೆಚ್ಚರಿಕೆ
ಬಡಬಗ್ಗರ ಬಾಯಿ ಬಡಿದು ಪಾಪದಿ ಹೆಜ್ಜೆ ಇಡಬೇಡ ಎಚ್ಚರಿಕೆ ೧

ದೊರೆ ಎನ್ನ ಬಲವು ಸುಸ್ಥಿರವೆಂದೆಲ್ಲರ ಹಗೆ ತರವಲ್ಲ ಎಚ್ಚರಿಕೆ
ಉರಗನ ಮುತ್ತಿ ಕಟ್ಟಿರುವೆಯು ಕೊರೆದಂಥ ತೆರನಪ್ಪುದೆಚ್ಚರಿಕೆ
ಕರವ ಮುಗಿದು ಸಜ್ಜನರಿಗೆ ಶಿರಬಾಗಿ ಚರಿಸುತಿರೆಚ್ಚರಿಕೆ
ಸಿರಿಯೆಂಬ ಸೊಡರಿಗೆ ಮಾನ್ಯನ ಅವಮಾನ ಬಿರುಗಾಳಿ ಎಚ್ಚರಿಕೆ ೨

ಲೋಕಾಪವಾದಕ್ಕೆ ಅಂಜಿ ನಡೆವುದು ವಿವೇಕ ಕೇಳೆಚ್ಚರಿಕೆ
ನಾಕೇಶಗಾದರು ಬಿಡದಪಕೀರ್ತಿ ಪರಾಕು ಕೇಳೆಚ್ಚರಿಕೆ
ಕಾಕುಜನರ ಚಾಡಿ ನೀ ಕೇಳಿ ಕೋಪೋದ್ರೇಕ ಬೇಡೆಚ್ಚರಿಕೆ
ಭೂಕಾಂತೆ ನಡನಡಗುವಳು ನಿಷ್ಠುರವಾದ ವಾಕು ಬೇಡೆಚ್ಚರಿಕೆ ೩

ನಳ ಮಾಂಧಾತರೇನಾದರೆಂಬುದ ನೀ ತಿಳಿದು ನೋಡೆಚ್ಚರಿಕೆ
ಅಳಿವುದು ಕಾಯವು ಉಳಿವುದೊಂದೇ ಕೀರ್ತಿ ಇಳೆಯೊಳಗೆಚ್ಚರಿಕೆ
ಅಳಲಿಸಿ ಪರರನು ಗಳಿಸಿ ತಂದರ್ಥವು ಉಳಿಯದು ಎಚ್ಚರಿಕೆ
ಉಳಿದಲ್ಪಕಾಲದಿ ಧರ್ಮದ ಹಾದಿಯ ಹಳಿಯಬೇಡೆಚ್ಚರಿಕೆ ೪

ಪರಸತಿ ಧನ ಅಪಹರಿಸಲು ಸಿರಿ ಮೊಗದಿರುಹುವಳೆಚ್ಚರಿಕೆ
ನೆರೆ ಛಿದ್ರ ಕುಂಭದ ನೀರಿನಂತಾಯುಷ್ಯ ಸರಿಯುತಿದೆಚ್ಚರಿಕೆ
ಬರುವ ಹಾನಿ ವೃದ್ಧಿ ತನ್ನ ಕಾಲವ ಮೀರಲರಿಯದು ಎಚ್ಚರಿಕೆ
ವರದ ಪುರಂದರವಿಠಲನ ಚರಣವ ಮರೆಯದಿರೆಚ್ಚರಿಕೆ ೫

ಪೊಡವಿಪನ ಒಲುಮೆ—ಅರಸನ ಆದರ.

ಕೊಡನ ಅಂಧಕ—ಕುರುಡನು ಕೊಡವನ್ನು.

ಕಡು ಚಳಕನು—ತುಂಬ ಬುದ್ಧಿಶಾಲಿಯೆಂದು.

ಸಿರಿಯೆಂಬ ಸೊಡರಿಗೆ... —ಐಶ್ವರ್ಯವೆಂಬ ದೀಪವನ್ನು ಆರಿಸುವ ಬಿರುಗಾಳಿ ಸಜ್ಜನರನ್ನು ಅವಮಾನಪಡಿಸುವುದೇ.

ನಾಕೇಶ—ಇಂದ್ರ.

ಕಾಕುಜನ—ಕೆಟ್ಟವರು.

ಅಳಲಿಸಿ ಪರರನು—ಬೇರೆಯವರನ್ನು ತೊಂದರೆಪಡಿಸಿ.

ಸಿರಿ ಮೊಗದಿರುಹುವಳು—ಐಶ್ವರ್ಯದೇವತೆಯು ಮುಖತಿರುಗಿಸಿಕೊಂಡು ಹೊರಟು ಹೋಗುವಳು.

ನೆರೆ ಛಿದ್ರಕುಂಭದ—ತುಂಬ ತೂತುಗಳಿರುವ ಮಡಕೆಯಲ್ಲಿರುವ.

೧೨೭

ತೋಡಿ　　　　　　　　　　　　　　　　　　ರೂಪಕ

ಎಳ್ಳು ಕಾಳಿನಷ್ಟು ಭಕುತಿ ಎನ್ನೊಳಗಿಲ್ಲವಯ್ಯ
ಬೆಳ್ಳಕ್ಕಿಯಂತೆ ನಿನ್ನ ಧ್ಯಾನವ ಮಾಡುವೆನಯ್ಯಾ　　ಪ

ಗಂಡು ಮುಳುಗಹಕ್ಕಿಯಂತೆ ನೀರಕಂಡ ಕಡೆಗೆ ಮುಳುಗಿ
ಮಂಡೆ ಶೂಲೆಯಲ್ಲದೆ ಗತಿಯು ಇಲ್ಲ
ಮಂಡೆ ಮುಸುಕನಿಕ್ಕಿ ಮಂತ್ರ ಜಪಿಸುವೆನಯ್ಯ　　೧

ಗಾಣದೆತ್ತಿನಂತೆ ಕಣ್ಣು ಕಟ್ಟಿ ಪ್ರದಕ್ಷಿಣೆ ಮಾಡಿ
ಕಾಣದೆ ನಾ ತಿರುಗಿದೆ ಕಂಡುದಿಲ್ಲ
ಮಾಣಿಕ್ಯದ ರಾಶಿ ಆಡಿಗೆ ಕಂಗಳಯ್ಯನು ಪೋಗಿ
ಆಣಿಕಾರಿಕೆ ಮಾಡಿದಂಥ ಈ ಕುಯುಕ್ತಿಯು　　೨

ಇಕ್ಕಳವ ಕೈಯ ಪಿಡಿದುಕೊಂಡು ಕಾದ ಕಬ್ಬಿಣದಂತೆ
ಸಿಕ್ಕಿಸಿಕೊಂಡಲ್ಲದೆ ಗತಿಯು ಇಲ್ಲ
ಪೊಕ್ಕಳುಪೂವಿನ ಶ್ರೀಪುರಂದರವಿಠಲನೆ
ಮಕ್ಕಳಾಟಿಕೆಯು ಬಿಡೊ ರಕ್ಷಿಸೊ ಎನ್ನೊಡೆಯ　　೩

ಕಂಗಳಯ್ಯ—'ಕಂಗಳ' ಎಂದರೆ ಕಣ್ಣು ಕಳೆದುಕೊಂಡವ, ಕುರುಡ.
ಆಣಿಕಾರಿಕೆ—ರತ್ನ ಪರೀಕ್ಷೆ.
ಪೊಕ್ಕುಳುಪೂ—ಪದ್ಮನಾಭ.

೧೨೮

ಶಂಕರಾಭರಣ — ತ್ರಿವಿಡೆ

ಎನಗೂ ಆಣೆ ರಂಗ ನಿನಗೂ ಆಣೆ ಪ

ಎನಗೂ ನಿನಗೂ ಇಬ್ಬರಿಗು ಭಕ್ತರಾಣೆ ಅ

ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ, ರಂಗ
ಎನ್ನ ನೀ ಕೈ ಬಿಟ್ಟು ಪೋದರೆ ನಿನಗೆ ಆಣೆ ೧

ತನುಮನಧನದಲಿ ವಂಚಕನಾದರೆ ಎನಗೆ ಆಣೆ, ರಂಗ
ಮನಸು ನಿನ್ನಲಿ ನಿಲಿಸದಿದ್ದರೆ ನಿನಗೆ ಆಣೆ ೨

ಕಾಕು ಮನುಜರ ಸಂಗವ ಮಾಡಿದರೆನಗೆ ಆಣೆ, ರಂಗ
ಲೌಕಿಕವ ಬಿಡಿಸದಿದ್ದರೆ ನಿನಗೆ ಆಣೆ ೩

ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ, ರಂಗ
ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ ೪

ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ, ರಂಗ
ಪುರಂದರವಿಠಲ ನೀನೊಲಿಯದಿದ್ದರೆ ನಿನಗೆ ಆಣೆ ೫

ಭೈರವಿ ‍ ಝಂಪೆ

ಯಾಕೆ ಚಿಂತಿಸುತಿದ್ದಿ ಕೋತಿಮನವೆ ‍ ಪ

ಲೋಕನಾಥನ ನೆನೆದು ಸುಖಿಯಾಗು ಮನವೆ ‍ ‍ ‍ ‍ ‍ ‍ ‍ ‍ ‍ ‍ ‍ ‍ ‍ ‍ ಅ

ಹುಟ್ಟುವಾಗಾಪತ್ತಿಗಾರು ಚಿಂತಿಸಿದವರು
ಕಟ್ಟಕಡೆಯಲಿ ಲಯಕೆ ಯಾರ ಚಿಂತೆ
ನಟ್ಟನಡುವಿನ ಬಾಳಿಗೇಕೆ ಚಿಂತಿಸುತಿರುವೆ
ಹುಟ್ಟಿದವರಿಗೆ ಮೂರು ಬಟ್ಟಿಲ್ಲವೆ ಮರುಳೆ ‍ ‍ ‍ ‍ ‍ ‍ ‍ ‍ ‍ ‍ ‍ ‍ ೧

ನವಿಲಿಗೆ ಚಿತ್ರಪತ್ರವನಾರು ಬರೆದವರು
ಪವಳದ ಲತೆಗೆ ಕೆಂಪಿಟ್ಟವರು ಯಾರು
ಸವಿಮಾತಿನರಗಿಣಿಗೆ ಹಸುರು ಬಳಿದವರಾರು
ಅವ ಮಾಡಿದವ ನಮ್ಮ ಮರೆತಿಹನೆ ಮರುಳೆ ‍ ‍ ‍ ‍ ‍ ‍ ‍ ‍ ‍ ‍ ‍ ‍ ೨

ಬಸುರೊಳಗೆ ಶಿಶುವನು ಅದಾರು ಸಲಹಿದವರು
ವಸುಧೆಯಂನು ಬಸುರೊಳಗೆ ಇಟ್ಟವರು ಯಾರು
ಹಸಗೆಡದೆ ನಮ್ಮ ಶ್ರೀ ಪುರಂದರವಿಠಲನ
ಬಿಸಜ ಪಾದವ ನಂಬಿ ಸುಖಿಯಾಗು ಮರುಳೆ ‍ ‍ ‍ ‍ ‍ ‍ ‍ ‍ ‍ ‍ ‍ ‍ ೩

ಬಟ್ಟು—ಬಟ್ಟೆ, ದಾರಿಗಳು ; ಧರ್ಮ, ಅರ್ಥ, ಕಾಮ.

ಹಸ—ಹದ ; ಅಂದಗೆಡದೆ.

ಬಿಸಜಪಾದ—ಅಡಿದಾವರೆ.

ಸಾವೇರಿ ಆದಿ

ತನಗಿಲ್ಲದಾ ವಸ್ತುವೆಲ್ಲಿದ್ದರೇನು
ತನ್ನ ಮನಕೆ ಬಾರದ ಹೆಣ್ಣು ಮೆಚ್ಚಿ ಬಂದರೇನು ಪ

ಆದರಣೆಯಿಲ್ಲದೂಟವಮೃತಾನ್ನವಾದರೇನು
ವಾದಿಸುವ ಸತಿಸುತರು ಇದ್ದು ಫಲವೇನು
ಕ್ರೋಧವನು ಬೆಳೆಸುವ ಸೋದರರಿಗರಿದ್ದರೇನು ೧

ಸಾವಿಗಿಲ್ಲದೌಷಧಿಯು ಸಂಚಿ ತುಂಬ ಇದ್ದರೇನು
ದೇವಕೀಸುತನ ಹೊಗಳದ ಕವಿತ್ವವೇನು
ಹೇವವಿಲ್ಲದ ಗಂಡು ಹೆಚ್ಚಾಗಿ ಬಾಳಿದರೇನು
ಹಾವಿನ ಹೆಡೆಯೊಳಗೆ ಹಣವಿದ್ದರೇನು ೨

ಸನ್ಮಾನ ಮಾಡದ ದೊರೆ ಸಾವಿರಾರು ಕೊಟ್ಟರೇನು
ತನ್ನ ತಾ ತಿಳಿಯದ ಜ್ಞಾನವೇನು
ಚೆನ್ನಾಗಿ ಪುರಂದರವಿಠಲನ ನೆನೆಯದವ
ಸಂನ್ಯಾಸಿಯಾದರೇನು ಸಂಸಾರಿಯಾದರೇನು ೩

ಪಂತುವರಾಳಿ ಅಟ್ಟ

ಸಾಕು ಸಂಸಾರ ಸಜ್ಜಾಗಿಲ್ಲ ಒಲ್ಲೆ ಒಗತನವ ಪ

ಆರು ಮಂದಿ ಗಂಡರಾಳುವರು ಎನ್ನ
ಆರು ಮಂದಿಗೆ ಮೂರು ಸುತರೆನಗೆ
ಆರು ಮೂರೇಳ್ವರು ಭಾವ ಮೈದುನರೆಲ್ಲ
ಆರೇನೆಂದರೆ ಬಿಡರು ಆರಿಗುಸಿರಲಮ್ಮ ೧

ಹತ್ತುಮಂದಿ ಬೆನ್ನ ಮುತ್ತಿಕೊಂಡಿಹರೆ
ಮತ್ತೆ ಬಿಟ್ಟೇನೆಂದರೆ ಬಿಡಗೊಡರು
ಅತ್ತಿಗೆ ನೆಗೆಹೆಣ್ಣೆ ಹೊತ್ತು ಹೊತ್ತಿನೊಳೆನ್ನ
ನೆತ್ತಿಯೊಳು ಹಸ್ತವಿಟ್ಟೆನ್ನ ಸೆಣೆವರಮ್ಮ ೨

ಪಂಚೈವರು ಎನ್ನ ತ್ವಂಚಾಹಂಚ ಎಂದು
ಸಂಚಿತ ಕರ್ಮವನುಣಿಸುವರು
ವಂಚನೆಯುಳಿದ ಪ್ರಪಂಚವ ಕಳೆದಿಹ
ಮಿಂಚಿನ ಪರಿಯಲಿ ವಿರಿಂಚಿ ಬರೆದಿಹನಮ್ಮ ೩

ಜ್ಯೇಷ್ಠನಾಗಿಹ ಪುತ್ರ ಧರ್ಮನ ಅಗಲಿಸಿ
ಭ್ರಷ್ಟ ಅತ್ತೆಯು ಮೃತ್ಯುವಾಗಿಹಳು
ಮೆಟ್ಟಿಲ ಹೊರಗೆ ಕಣ್ಣಿಟ್ಟು ಸಾಧುಗಳನ್ನು
ದೃಷ್ಟಿಸಿ ನೋಳ್ಪೆನೆಂದರೆ ಕ್ಷಣ ಬಿಡರಮ್ಮ ೪

ಒಂಭತ್ತು ಬಾಗಿಲ ಊಳಿಗವನು ಮಾಳ್ಪ
ಕುಂಭಕದ ನರಕ ಕಾವರ ಧಾಳಿ
ಡಂಭಕವನು ಬಿಟ್ಟು ಇಂಬಿನೊಳಿಟ್ಟು ವಿ
ಶ್ವಂಭರ ಪುರಂದರವಿಠಲ ಧ್ಯಾನದ ಗುಟ್ಟು ೫

ಒಗತನ—ಸಂಸಾರ.

ಆರುಮಂದಿ ಗಂಡರು—ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ.

ಮೂರು ಸುತರು—ತಾಪ-ತ್ರಯಗಳು.

ಆರು ಮೂರು—ಆರು + ಮೂರು = ಒಂಬತ್ತು. ನವದ್ವಾರಗಳು.

ಏಳ್ವರು—ಸಪ್ತ ವ್ಯಸನಗಳು. ಸ್ತ್ರೀ ವ್ಯಸನ, ಅಕ್ಷ (ಪಗಡೆ) ವ್ಯಸನ, ಮೃಗಯಾ (ಬೇಟೆ) ವ್ಯಸನ, ಪಾನ ವ್ಯಸನ (ಕುಡಿತ), ವಾಕ್ ಪಾರುಷ್ಯ ವ್ಯಸನ (ಒರಟು ಮಾತು), ಅರ್ಥವ್ಯಸನ (ಹಣದಗೀಳು), ದೂಷಣ ವ್ಯಸನ.

ಹತ್ತು ಮಂದಿ...—ಮದ್ಯಪಾನ, ಧನಮದ, ಉನ್ಮತ್ತತೆ, ಬಳಲಿಕೆ, ಕೋಪ, ಹಸಿವೆ, ಅತ್ಯವಸರ, ಲೋಭ, ಭೀತಿ, ಕಾಮುಕತೆ.

ಪಂಚೈವರು—ಐದು ಇಂದ್ರಿಯಗಳು.

ತ್ವಂಚಾ ಹಂಚ—ನೀನು-ನಾನು ಎಂಬ ಭೇದಭಾವ, ತೊಂಚಾವಂಚ.

ಒಂಭತ್ತು ಬಾಗಿಲ ಊಳಿಗ—ದೇಹದ ನವರಂಧ್ರಗಳು.

೧೩೨

ಮೋಹನ ಅಟ್ಟ

ಆಚಾರವಿಲ್ಲದ ನಾಲಿಗೆ ನಿನ್ನ
ನೀಚ ಬುದ್ಧಿಯ ಬಿಡು ನಾಲಿಗೆ ಪ

ವಿಚಾರವಿಲ್ಲದೆ ಪರರ ದೂಷಿಪುದಕ್ಕೆ
ಚಾಚಿಕೊಂಡಿರುವಂಥ ನಾಲಿಗೆ ಅ

ಪ್ರಾತಃಕಾಲದೊಳೆದ್ದು ನಾಲಿಗೆ
ಸಿರಿಪತಿಯೆನ್ನಬಾರದೆ ನಾಲಿಗೆ
ಪತಿತ ಪಾವನ ನಮ್ಮ ರತಿಪತಿ ಜನಕನ
ಸತತವು ನುಡಿ ಕಂಡ್ಯ ನಾಲಿಗೆ ೧

ಚಾಡಿ ಹೇಳಲಿಬೇಡ ನಾಲಿಗೆ
ನಿನ್ನ ಬೇಡಿಕೊಂಬುವೆನು ನಾಲಿಗೆ
ರೂಢಿಗೊಡೆಯ ಶ್ರೀ ರಾಮನ ನಾಮವ
ಪಾಡುತಲಿರು ಕಂಡ್ಯ ನಾಲಿಗೆ ೨

ಹರಿಯ ಸ್ಮರಣೆ ಮಾಡು ನಾಲಿಗೆ
ನರಹರಿಯ ಭಜಿಸು ಕಂಡ್ಯ ನಾಲಿಗೆ
ವರದ ಪುರಂದರವಿಠ್ಠಲರಾಯನ
ಚರಣಕಮಲವ ನೆನೆ ನಾಲಿಗೆ ೩

ಮೋಹನ ಅಟ್ಟ

ನಾಡಮಾತು ಬೇಡ ನಾಲಿಗೆ ನಿನ್ನ
ಬೇಡಿಕೊಂಬೆನು ಕಂಡ್ಯ ನಾಲಿಗೆ
ರೂಢಿಗೆ ಶ್ರೀಹರಿ ಕೈವಲ್ಯದಾನಿಯ
ನಾಮವ ನೆನೆ ಕಂಡ್ಯ ನಾಲಿಗೆ ಪ

ಹಾಸ ಹೊತ್ತಾರೆದ್ದು ನಾಲಿಗೆ ಶ್ರೀನಿ
ವಾಸನ ನೆನೆ ಕಂಡ್ಯ ನಾಲಿಗೆ
ಶಕ್ತನಂತೆ ನೀನು ಮತ್ತೆ ಬೊಗಳದಿರು
ಸತ್ತ ಹಾಗಿರು ಕಂಡ್ಯ ನಾಲಿಗೆ ೧

ಉಂಬೋದು ಉಡುವೋದು ನಾಲಿಗೆ ಬಹು
ತಾಂಬೂಲ ಕೊಂಡೆ ನೀ ನಾಲಿಗೆ
ಮುಂದೆ ಕಾಣದೆ ಹೋಗಿ ಬಂದು ಜಗಕ್ಕೆ
ತಂದು ನಿಲಿಸಿದ ನಾಲಿಗೆ ೨

ಅತ್ತೆ ಮಾವನ ಬೈವ ನಾಲಿಗೆ ಇದು
ಮತ್ತೆ ಗಂಡನ ಬೈವ ನಾಲಿಗೆ
ಸುತ್ತುಮುತ್ತರದಿಂದ ದೇವ ಬ್ರಹ್ಮರ ಬೈವ
ನಾಯ ಹಾಗಿರು ಕಂಡ್ಯ ನಾಲಿಗೆ ೩

ರಸ ಬಾಯಾರುಂಬೋದು ನಾಲಿಗೆ ಶ್ರೀನಿ
ವಾಸನ ನೆನೆ ಕಂಡ್ಯ ನಾಲಿಗೆ
ಪೊಡವಿಯೊಡೆಯ ಎನ್ನ ಪುರಂದರವಿಠಲನ್ನ
ನಾಮವ ನೆನೆ ಕಂಡ್ಯ ನಾಲಿಗೆ ೪

[ನಮ್ಮ ಭಾವನೆಯನ್ನು ವಿವರಿಸಲು ಇರುವ ಏಕೈಕ ಸಾಧನ ಎಂದರೆ ಭಾಷೆ. ಆದರೆ ಆಡುವ ಮಾತಿನಲ್ಲಿ ಕೊಳಕುತನ, ಅಶ್ಲೀಲದ ಚಾಪಲ್ಯ, ಉಗ್ರತೆ, ವಿನಾಕಾರಣ ಇನ್ನೊಬ್ಬರ ಮನಸ್ಸನ್ನು ನೋಯಿಸುವ ಗುಣಗಳಿರಬಾರದು.]

ಸೌರಾಷ್ಟ್ರ ಅಟ್ಟ

ಮುಂದೆ ಭಲಾ ಎಂದು ಹಿಂದಾಡಿಕೊಂಬರ
ಸಂಗ ಬೇಡ
ಕುಂದು ನಿಂದೆಗಳಪವಾದ ನೀಡುವರ ಪ್ರ
ಸಂಗ ಬೇಡ ಪ

ತುದಿನಾಲಿಗೆ ಬೆಲ್ಲ ಎದೆ ಕತ್ತರಿಯುವರ
ಸಂಗಬೇಡ
ಹದವು ಮೀರಿದ ಮೇಲೆ ಹಲವನಾಡುವರ
ಸಂಗ ಬೇಡ ೧

ಸ್ತ್ರೀಯಾವಗುಣ ಬಿಟ್ಟು ಪರರವಗುಣ ತೋರ್ಪರ
ಸಂಗ ಬೇಡ
ದಯೆ ಧರ್ಮ ದಾಕ್ಷಿಣ್ಯ ಅರಿಯದ ಮನುಜರ
ಸಂಗ ಬೇಡ ೨

ವಿನಯ ವಿವೇಕವಿಲ್ಲದ ವಿದ್ವಾಂಸರ
ಸಂಗ ಬೇಡ
ತನಗಿಲ್ಲದಂಥ ಬಂಟರೆ ಮಿತ್ರ ಜನರ
ಸಂಗ ಬೇಡ ೩

ಆಡಿ ಅಳುಕುವ ಅಜ್ಞಾನಿ ಮನುಜನ
ಸಂಗ ಬೇಡ
ಕೂಡೆ ಕುಮತಿಗಳ ಕುಪಿತ ಮನುಜರ
ಸಂಗ ಬೇಡ ೪

ತನ್ನ ಕಾರ್ಯಕ್ಕಾಗಿ ಪರರ ಕೆಡಿಸುವರ
ಸಂಗ ಬೇಡ
ಚೆನ್ನ ಪುರಂದರವಿಠಲನ್ನ ಹೊರತು ಪ್ರ–
ಸಂಗ ಬೇಡ ೫

ನವರಂಧ್ರಗಳ ಕಟ್ಟು ನೀ
ನಡೆವ ದಾರಿಯ ಮುಟ್ಟು
ಕವಿದ ಕಾಮಕ್ರೋಧಗಳಟ್ಟು
ರವಿಮಂಡಲ ಮುಟ್ಟು ೬

ಏನು ನೋಡಿದರೇನು ನೀ
ನೆಂತು ಮಾಡಿದರೇನು
ಜ್ಞಾನದಿಂದ ಪುರಂದರವಿಠಲನ
ಧ್ಯಾನಿಸಲಿಲ್ಲ ಮನವೇ ೭

[ಮನಸ್ಸು ದೈವವೆಂಬ ಬಲವಾದ ನೆಲೆಯನ್ನು ಆಶ್ರಯಿಸದೆ ಹುಚ್ಚುಹುಚ್ಚಾಗಿ ಬಾಹ್ಯ ಪ್ರದರ್ಶನಗಳಿಗೆ ಮಾರುಹೋದರೆ ಏನು ಹೇಳಲಾದೀತು ? ಸ್ನಾನ, ಧ್ಯಾನ, ಜಪ, ತಪ, ನದಿಯ ತೀರದಲ್ಲಿ ಮೂಗು ಹಿಡಿದು ಮುಸುಕುಹಾಕಿ ಮಾಡುವ ವ್ರತಾಚಾರ ಇವುಗಳ ಹಿನ್ನೆಲೆಯಲ್ಲಿ ವ್ಯಕ್ತಿಯ ಪ್ರಚಾರಪ್ರಿಯತೆ ಎದ್ದುಕಾಣುತ್ತದೆ.]

ಕಚ್ಚುಕದತನ—ಚಾಂಚಲ್ಯ, ವಿರೋಧ.

ನಿಪುಣತನ—ಸಂಸಾರವನ್ನು ದಾಟುವ ಜಾಣತನ ('ನೈಪುಣ್ಯಂ ಭವಾಬ್ಧಿತರಣೇ' ಎಂಬ ಮಾತಿನ ಛಾಯೆ).

ಮುಸುಕನಿಕ್ಕಿದರೇನು—ಜಪಮಾಡುವಾಗ ಹಾಕಿಕೊಳ್ಳುವ ಮುಸುಕು.

ಬೇಗೆ ಕಳೆಯದೆ—ದುಗುಡವನ್ನು ಒತ್ತಟ್ಟಿಗಿಟ್ಟು.

ನವರಂಧ್ರ—ದೇಹದ ನವದ್ವಾರಗಳು.

ಧಾಮ ಪಥ—ಮೋಕ್ಷದ ಮಾರ್ಗ ; ಭಕ್ತಿ.

ರವಿಮಂಡಲ—ಸೂರ್ಯಮಂಡಲಸ್ಥನಾದ ನಾರಾಯಣ.

ಸಾವೇರಿ — ಅಟ್ಟ

ಪರಾಕು ಮಾಡದೆ ಪರಾಂಬರಿಸಿ ಎನ್ನ ಅ
ಪರಾಧಂಗಳ ಕ್ಷಮಿಸೋ ಪ

ಧರಾರಮಣ ಫಣಿಧರಾಮರಾರ್ಚಿತ
ಸುರಾಧಿಪತಿ ವಿಧಿ ಹರಾದಿ ವಂದಿತ ಅ

ನರರೊಳಗೆ ಪಾಮರನು ನಾನಿಹ
ಪರಕೆ ಸಾಧನವರಿಯೆ ಶ್ರೀ ಹರಿಯೆ
ಶರಣು ಹೊಕ್ಕೆ ನಿನ್ನ ಚರಣ ಕಮಲಕೆ
ಕರುಣದಿಂದ ನಿನ್ನ ಸ್ಮರಣೆ ಎನಗಿತ್ತು ೧

ಜಪವನರಿಯೆನು ತಪವನರಿಯೆನು
ಉಪವಾಸ ವ್ರತಗಳನರಿಯೆ ಶ್ರೀ ಹರಿಯೆ
ಕೃಪಾವಲೋಕನದಿ ಆ ಪಾಪಗಳನೆಲ್ಲ
ಅಪಹೃತವ ಮಾಡೊ ಅಪಾರ ಮಹಿಮನೆ ೨

ಕರಿರಾಜನುದ್ಧರಿಸಿ ದ್ರೌಪದಿಯ
ಮೊರೆ ಲಾಲಿಸಿ ತರಳನಿಗೊಲಿದು ನೀ ಪೊರೆದೆ
ಸಿರಿಯರಸ ನಿನ್ನ ಸರಿ ಯಾರ ಕಾಣೆ
ಪುರಾರಿನುತ ಸಿರಿ ಪುರಂದರವಿಠಲ ೩

ಧರಾರಮಣ—ಭೂದೇವಿಯ ಒಡೆಯ.
ಫಣಿಧರ—ಶೇಷ.
ಸುರಾಧಿಪತಿ—ಇಂದ್ರ.
ಕರಿರಾಜ—ಗಜೇಂದ್ರ.
ತರಳ—ಧ್ರುವ.
ಪುರಾರಿ—ಶಿವ.

ಪೂರ್ವಿಕಲ್ಯಾಣಿ ಅಟ್ಟ

ತೇಲಿಸೋ ಇಲ್ಲ ಮುಳುಗಿಸೋ ನಿನ್ನ
ಕಾಲಿಗೆ ಬಿದ್ದೆನೊ ಪರಮ ಕೃಪಾಳೋ ಪ

ಸತಿಸುತ ಧನದಾಸೆ ಎಂಬಂತೆ ಮೋಹದಿ
ಹಿತದಿಂದ ಅತಿ ನೊಂದು ಬೆಂಡಾದೆನೊ
ಗತಿ ಕೊಡುವರ ಕಾಣೆ ಮತಿಯು ಪಾಲಿಸೊ ಲಕ್ಷ್ಮೀ
ಪತಿ ನಿನ್ನ ಚರಣದ ಸ್ಮರಣೆಯಿತ್ತೆನಗೆ ೧

ಜರೆ ರೋಗ ದಾರಿದ್ರ್ಯ ಕಶ್ಮಲವೆಂತೆಂಬ
ಶರಧಿಯೊಳಗೆ ಬಿದ್ದು ಮುಳುಗಿದೆನೊ
ಸ್ಥಿರವಲ್ಲ ದೇಹವು ನೆರೆ ನಂಬಿದೆ ನಿನ್ನ
ಕರುಣಾಭಯವಿತ್ತು ಪಾಲಿಸೊ ಹರಿಯೆ ೨

ದೋಷವುಳ್ಳವ ನಾನು, ಭಾಷೆಯುಳ್ಳವ ನೀನು
ಮೋಸ ಹೋದೆನೊ ಭಕ್ತಿ ರಸವ ಬಿಟ್ಟು
ಶೇಷಶಯನ ಶ್ರೀ ಪುರಂದರವಿಠಲನೆ
ದಾಸರ ಸಂಗವಿತ್ತು ಪಾಲಿಸೊ ಹರಿಯೆ ೩

[ಸಂಪೂರ್ಣ ಸಮರ್ಪಣ ಭಾವದ ಪ್ರಾರ್ಥನಾಗೀತೆ ಇದು. ಸಾಂಸಾರಿಕ (ಸತಿ ಸುತ ಮೋಹದಿ) ಆರ್ಥಿಕ (ಧನದಾಸೆ ಎಂತೆಂಬ ಮೋಹದಿ) ಶಾರೀರಕ (ಜರೆ ರೋಗ ದಾರಿದ್ರ್ಯ ಎಂತೆಂಬ) ಹಿತಾಸಕ್ತಿಗಳಿಗೆ ವಶವಾಗಿ ಮೋಸಹೋಗಿರುವ ಜೀವವೊಂದು ಕಡೆಗೆ ನಿಜವನ್ನು ಅರಿತುಕೊಂಡು ತನ್ನ ವ್ಯರ್ಥ ತೊಳಲಾಟವನ್ನು ನಿಲ್ಲಿಸಿ ದೈವದ ಆಶ್ರಯ ಬೇಡಿ ಬಂದಿದೆ.]

ಸತಿಸುತಧನದಾಸೆ—ಭ್ರಮೆಯ ಏಷಣಾತ್ರಯಗಳು (ದಾರೈಷಣ, ಪುತ್ರೈಷಣ, ವಿತ್ತೈಷಣ).

ಜರೆ—ಮುಪ್ಪು.

ಶರಧಿ—ಸಮುದ್ರ.

ದೋಷವುಳ್ಳವ ನಾನು ಭಾಷೆಯುಳ್ಳವ ನೀನು—ಎಷ್ಟೇ ತಪ್ಪು ಮಾಡಿದ್ದರೂ ಕಾಪಾಡುವುದಾಗಿ ದೈವ ಜೀವನಿಗೆ ಭಾಷೆ ಕೊಟ್ಟಿರುವುದರಿಂದ ಈ ಹೇಳಿಕೆ (ಭಗವದ್ಗೀತೆಯ 'ಅಪಿಚೇತ್ಸುದುರಾಚಾರಃ' ಎನ್ನುವ ಶ್ಲೋಕ).

ಧನ್ಯಾಸಿ ಆದಿ

ವೈದ್ಯನ ನಾನರಿಯೆ ಭವರೋಗಕೆ
ವೈದ್ಯನು ನೀ ಹರಿಯೆ

ಕೃಷ್ಣನೆ ಕೈಪಿಡಿದು ಕಪಟದ
ಉಷ್ಣವಾಯುವ ಜರಿದು
ಇಷ್ಟು ಭಕುತಿ ನಿನ್ನ ಸೇವಕಗಿತ್ತು ಉ
ತ್ಕೃಷ್ಟನ ಮಾಡೆನ್ನ ಕಷ್ಟವ ಪಡಿಸದೆ ೧

ಹರಿ ನಿನ್ನ ಶರಣೆಂಬೊ ರಸದಲಿ
ಚರಣ ಧ್ಯಾನವನಿತ್ತು ಗುರುತರ
ಮಾತ್ರೆಗಳೆನಗಿಟ್ಟು ಕೊಟ್ಟು
ದುರಿತ ಪರಿಹರಿಪ ಬಂಧು ನೀನಲ್ಲದೆ ೨

ನಿನ್ನ ದಾಸ ನಾನು ದುರಿತಗ
ಳೆನ್ನ ಕಾಡುವದೇನು ಘನ್ನ ಶ್ರೀ
ಪುರಂದರವಿಠಲರಾಯನೆ
ಬನ್ನವ ಕಳೆಯುವ ದೊರೆ ನೀನಲ್ಲದೆ ೩

[ಶಾರೀರಕ ಮಾನಸಿಕ ರೋಗಗಳಿಂದ ನರಳಿ ನರಳಿ ಎಲ್ಲ ಬಗೆಯ ಔಷಧಸೇವನೆಗಳನ್ನು ಪ್ರಯತ್ನಿಸಿ ಶ್ರೇಷ್ಠ ವೈದ್ಯನನ್ನೇ ಹುಡುಕಿಕೊಂಡು ಹೋಗುತ್ತಾರೆ ಜನ. ಹಾಗೆಯೇ ಈ ಸಂಸಾರದ ರೋಗಗಳಿಗೆ ಭವರೋಗಿಯಾದ ಹಿರಿಯ ವೈದ್ಯನಲ್ಲಿಗೆ ಶರಣುಹೋಗುವುದು ಲೇಸು. ಈ ಪದದಲ್ಲಿ ವೈದ್ಯಕೀಯ ಪರಿಭಾಷೆ ಬಳಸಲ್ಪಟ್ಟಿದೆ. ನಮ್ಮ ಪ್ರಾಪಂಚಿಕ ವಿಕಾರ ವರ್ತನೆಗಳನ್ನು ರೋಗಗಳೊಂದಿಗೆ ಸಮೀಕರಿಸಿ ಹೇಳಲಾಗಿದೆ.]

ಉಷ್ಣವಾಯು—ಕಪಟ ನಡತೆ ; ಪಿತ್ತ ಉದ್ರಿಕ್ತವಾದ ಸ್ಥಿತಿ.
ರಸ—ಹರಿಶರಣು ಎಂಬ ರಸ.
ಗುರುತರ—ಪ್ರಭಾವಶಾಲಿಯಾದ.
ದುರಿತ—ಪಾತಕ.
ಬನ್ನ—ಭಂಗ, ಸೋಲು.

ಕಲ್ಯಾಣಿ ಅಟ್ಟ

ಇನ್ನೂ ದಯೆ ಬಾರದೆ ದಾಸನ ಮೇಲೆ ಪ

ಪನ್ನಂಗಶಯನ ಪಾಲ್ಗಡಲೊಡೆಯನೆ ರಂಗ ಅ

ನಾನಾ ದೇಶಗಳಲ್ಲಿ ನಾನಾ ಕಾಲಗಳಲ್ಲಿ
ನಾನಾ ಯೋನಿಗಳಲ್ಲಿ ಅಳಿದು ಪುಟ್ಟಿ
ನಾನು ನನ್ನದು ಎಂಬ ನರಕದೊಳಗೆ ಬಿದ್ದು
ನೀನೇ ಗತಿಯೆಂದು ನಂಬಿದ ದಾಸನ ಮೇಲೆ ೧

ಕಾಮಾದಿ ಷಡ್ವರ್ಗ ಗಾಢಾಂಧಕಾರದಿ
ಪಾಮರನಾಗಿದ್ದ ಪಾತಕನು
ಶ್ರೀಮನೋಹರನೆ ಚಿತ್ತಜ ಜನಕನೆ
ನಾಮಮುದ್ರಿಕೆಯಿಂದ ನಂಬಿದ ದಾಸನ ಮೇಲೆ ೨

ಮಾನಸ ವಾಚ ಕಾಯದಿ ಮಾಳ್ಪ ಕರ್ಮವು
ದಾನವಾಂತಕ ನಿನ್ನಾಧೀನವಲ್ಲವೆ
ಏನು ಮಾಡಿದರೇನು ಪ್ರಾಣ ನಿನ್ನದು ದೇವ
ಶ್ರೀನಾಥ ಪುರಂದರವಿಠಲ ದಾಸನ ಮೇಲೆ ೩

ಅಳಿದು ಪುಟ್ಟಿ—ಸತ್ತು, ಹುಟ್ಟಿ.

ನಾನು ನನ್ನದು—ಮೊದಲು ಮಿಥ್ಯಾಜ್ಞಾನ, ಅನಂತರ ಎರಡನೆಯ ಅಪರಾಧವಾದ ಹರಿಯ ವಿಸ್ಮರಣೆ, ಅದರಿಂದ ಸ್ವಾತಂತ್ರ್ಯಾಭಿಮಾನ ಒದಗಿ ಅಹಂಕಾರ ಮಮಕಾರಗಳು ತಲೆದೋರಿಕೊಳ್ಳುತ್ತವೆ. ಇದರಿಂದ ಮೂರನೆಯ ಅಪರಾಧವಾದ ನಿಷಿದ್ಧ ಆಚರಣೆ, ವಿಹಿತ ಅನಾಚರಣೆ ಇವು ನರಕಕ್ಕೆ ದಾರಿಯಾಗುತ್ತವೆ.

ಕಾಮಾದಿಷಡ್ವರ್ಗ—ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರು.

ಪಾಮರ—ಸರಿಯಾದ ತಿಳುವಳಿಕೆಯಿಲ್ಲದವನು.

ಶ್ರೀಮನೋಹರ—ಸಮುದ್ರ ಮಂಥನ ಕಾಲದಲ್ಲಿ ಸಮುದ್ರದಿಂದ ಹೊರಬಂದ ಲಕ್ಷ್ಮಿಯು ವರಿಸಿದುದು ನಾರಾಯಣನನ್ನೇ. ಅವಳ ಮನಸ್ಸನ್ನು ಅಪಹರಿಸಿದನಾಗಿ ಮನೋಹರ.

ಚಿತ್ತಜಜನಕ—ಮನ್ಮಥನ ತಂದೆ.

ನಾಮ ಮುದ್ರಿಕೆಯಿಂದ—ಹರಿದಾಸದೀಕ್ಷೆಯನ್ನು ಪಡೆದು.

ಮಾನಸ ವಾಚ ಕಾಯದಿ—ಮನಸ್ಸು ಮಾತು ಮೈಗಳಿಂದ ಮಾಡುವ ಕೆಲಸವೆಲ್ಲವೂ ಜೀವನಿಗೆ ಬಿಂಬರೂಪವಾಗಿರುವ ಪರಮಾತ್ಮನ ಅಧೀನವಾದುವೇ ; ಬಿಂಬ ಕ್ರಿಯೆಯಿಂದಲೇ ಪ್ರತಿಬಿಂಬನಾದ ಜೀವನ ಕ್ರಿಯೆ.

ಧನ್ಯಾಸಿ ಆದಿ

ಎಂದಿಗೆ ನಾನಿನ್ನು ಧನ್ಯನಾಗುವೆ ಪ

ಎಂದಿಗೆ ನಿನ್ನ ಚಿತ್ತಕೆ ಬರುವೆ ಅಚ್ಯುತನೆ ಅ

ಫಲ ಮರ ಗಿಡ ಬಳ್ಳಿ ಕುಲದಲ್ಲಿಪ್ಪತ್ತು ಲಕ್ಷ
ಜಲ ಜೀವದೊಳಗೆ ಒಂಭತ್ತು ಲಕ್ಷ
ಅಳಲಿ ಏಕಾದಶ ಲಕ್ಷ ಕ್ರಿಮಿಗಳಲ್ಲಿ
ತೊಳಲಿ ಬಳಲಿದೆನಂಡಜದೊಳು ದಶಲಕ್ಷ ೧

ಚರಣ ನಾಲ್ಕರಲಿ ಮೂವತ್ತು ಲಕ್ಷ ಜೀವಿಸಿ
ನರನಾಗಿ ಸೇರಿದೆ ನಾಲ್ಕು ಲಕ್ಷ
ಪರಿಪರಿ ಭವದೊಳಗೆ ನೊಂದೆನಯ್ಯ ನಿನ್ನ
ಸರಸಿಜ ಸಂಭವನ ಕಲ್ಪದಲ್ಲಿ ೨

ಎಂಭತ್ತುನಾಲಕು ಲಕ್ಷ ಯೋನಿಗಳಲ್ಲಿ
ಅಂಬುಜನಾಭ ನಿನ್ನ ಲೀಲೆಗಾಗಿ
ಕುಂಭಿಣಿಯಲ್ಲಿ ಬಂದು ನೊಂದೆನಯ್ಯ ಸ್ವಾಮಿ
ಕಂಬುಕಂಧರ ಸಿರಿ ಪುರಂದರವಿಠಲ ೩

ಅಂಡಜದೊಳು—ಬ್ರಹ್ಮಾಂಡದಲ್ಲಿರುವ ಸಂಸಾರಚಕ್ರದಲ್ಲಿ.
ಪರಿಪರಿ ಭವದೊಳಗೆ—ಬಗೆಬಗೆಯ ಜನ್ಮಗಳಲ್ಲಿ.
ಎಂಬತ್ತುನಾಲ್ಕು ಲಕ್ಷಯೋನಿಗಳಲ್ಲಿ—ವಿವರಣೆ ಆಗಲೆ ಬಂದಿದೆ.
ನಿನ್ನ ಲೀಲೆಗಾಗಿ—'ಲೋಕವತ್ತು ಲೀಲಾ ಕೈವಲ್ಯಂ' ಎನ್ನುವ ಸೂತ್ರವಾಕ್ಯ.
ಕುಂಭಿಣಿ—ಭೂಮಿ.
ಕಂಬುಕಂಧರ—ಶಂಖದಂತೆ ಚೆಲುವಾದ ಕತ್ತುಳ್ಳವನು.

ಕಲ್ಯಾಣಿ ಝಂಪೆ

ನಿನ್ನ ಆಶ್ರಯಿಸುವೆ ನಿಗಮಗೋಚರ ನಿತ್ಯ
ಬೆನ್ನ ಬಿಡದೆ ಕಾಯೊ ಮನದಿಷ್ಟವೀಯೊ ಪ

ಕುಂದಣದ ಆಶ್ರಯು ನವರತ್ನಗಳಿಗೆಲ್ಲ
ಚಂದಿರನ ಆಶ್ರಯು ಚಕೋರಗೆ
ಕಂದರ್ಪನಾಶ್ರಯು ವಸಂತಕಾಲಕೆ, ಗೋ
ವಿಂದನಾಶ್ರಯು ಮರಣಕಾಲದೊಳಗೆ ೧

ಹಣ್ಣುಳ್ಳ ಮರಗಳು ಪಕ್ಷಿಗಳಿಗಾಶ್ರಯವು
ಪುಣ್ಯವುಳ್ಳ ನದಿಗಳು ಋಷಿಗಳಾಶ್ರಯವು
ಕಣ್ಣಿಲ್ಲದಾತಗೆ ಕೈಗೋಲಿನಾಶ್ರಯವು
ಎನ್ನಿಷ್ಟ ಪಡೆವರೆ ನಿನ್ನ ಆಶ್ರಯವು ೨

ಪತಿವ್ರತೆ ವನಿತೆಗೆ ಪತಿಯೊಂದೆ ಆಶ್ರಯವು
ಯತಿಗನುಶ್ರುತ ಪ್ರಣವವಾಶ್ರಯವು
ಮತಿಯುತ ನರಗೆ ಹರಿಸ್ತುತಿಗಳೇ ಆಶ್ರಯವು
ಹಿತವಾದ ಪುರಂದರವಿಠಲನಾಶ್ರಯವು ೩

ಕುಂದಣ—ಬಂಗಾರದ ಚೌಕಟ್ಟು.

ಕಂದರ್ಪ—ಮನ್ಮಥ.

ಎನ್ನಿಷ್ಟ ಪಡೆವರೆ—ಮನದಿಷ್ಟಾರ್ಥವನ್ನು ಪಡೆದುಕೊಳ್ಳಬೇಕೆಂದರೆ.

ಅನುಶ್ರುತ ಪ್ರಣವ—ಆಶ್ರಮ ಸ್ವೀಕರಿಸುವಾಗ ವಿರಜಾ ಹೋಮವಾದ ಮೇಲೆ ಗುರುವಿನಿಂದ ದೊರಕುವ ಓಂಕಾರಮಂತ್ರ.

೧೪೨

ಧನಾಸರಿ ಅಟ್ಟ

ಹರಿ ನೀನೆ ಗತಿಯೆಂದು ನೆರೆ ನಂಬಿದವರನು
ಮರೆತಿರುವುದು ನ್ಯಾಯವೆ ಪ

ಗರುಡಗಮನ ನೀ ಸಿರಿಲೋಲನಾಗಿರೆ
ಅರಸಿ ಎನ್ನನು ಕಾಯ್ವ ಧೊರೆಗಳಿನ್ನಾರಯ್ಯ ಅ

ಮುಟ್ಟಿ ಪೂಜಿಸಿ ನಿನ್ನ ಇಷ್ಟವ ಬೇಡುವ
ದೃಷ್ಟಿ ಎನ್ನೊಳಗಿದೆಯೆ
ಕಷ್ಟವ ಪಡಲಾರೆ ಸೃಷ್ಟಿಯೊಳಗೆ ಎನ್ನ
ದುಷ್ಟ ಕರ್ಮವ ಬಿಡಿಸಿ ಧಿಟ್ಟನೆಂದೆನಿಸೊ ೧

ಭುಜಗಶಯನ ನಿನ್ನ ಭಜಕರ ಹೃದಯದಿ
ನಿಜವಾಗಿ ನೀನಿಲ್ಲವೆ
ಅಜನ ಪಿತನೆ ಕೇಳು ತ್ರಿಜಗವೆಲ್ಲವು ನಿನ್ನ
ಸುಜನಪಾಲಕನೆಂದು ಭಜನೆ ಮಾಳ್ಪುದು ಕಂಡು ೨

ಭಾಗವತರರಸನೆ ಯೋಗಿಗಳೊಡೆಯನೆ
ಬಾಗಿ ಬಿನ್ನಯಿಪೆ ನಿನ್ನ
ಸಾಗರಶಯನನೆ ನೀಗಿಸಿ ಶ್ರಮವನು
ಜಾಗುಮಾಡದೆ ಎನ್ನ ಬೇಗದಿ ಕಾಯಯ್ಯ ೩

ತುಂಟರೈವರ ತುಳಿದು ಕಂಟಕೊಬ್ಬನ ಕಳೆದು
ಎಂಟು ಮಂದಿಯ ಗರ್ವವನಳಿದು
ನೆಂಟ ನೀ ಬಂದೆನ್ನ ಕಂಟಕವನೆ ಬಿಡಿಸಿ
ಉಂಟಾದ ವೈಕುಂಠ ಭಂಟನೆಂದೆನಿಸೋ ೪

ಧರಣಿಯೊಳಗೆ ನೀ ಸುಜನರ ಸಲಹುವ
ಬಿರುದು ಪಡೆದವನಲ್ಲವೆ
ಸಿರಿರಮಣನೆ ಎನ್ನ ಕರುಣದಿಂದಲಿ ಕಾಯೊ
ಪರಮಪುರುಷ ಸಿರಿ ಪುರಂದರವಿಠಲ ೫

ಭುಜಗಶಯನ—ಸರ್ಪಶಯನ, ವಿಷ್ಣು.

ಅಜನ ಪಿತನೆ—ಬ್ರಹ್ಮನ ತಂದೆಯಾದ ವಿಷ್ಣುವೆ.

ಸಾಗರಶಯನನೆ—ಹಾಲಿನ ಸಮುದ್ರದಲ್ಲಿ ವಾಸ ಮಾಡುತ್ತಿರುವವನೆ.

ಜಾಗು ಮಾಡದೆ—ತಡಮಾಡದೆ, ಉದಾಸೀನಮಾಡದೆ.

ತುಂಟರೈವರು—ಪಂಚೇಂದ್ರಿಯಗಳು.

ಕಂಟಕನೊಬ್ಬ—'ಮನಸ್ಸು' ಎಂಬ ಕಂಟಕಿ.

ಎಂಟು ಮಂದಿಯ ಗರ್ವ—ಅಷ್ಟ ಮದ, ಎಂಟು ಬಗೆಯಾದ ಮದಗಳು : ಧನ ಮದ, ಕುಲಮದ, ವಿದ್ಯಾಮದ, ರೂಪಮದ, ಯೌವನ ಮದ, ಬಲಮದ, ಪರಿವಾರ ಮದ, ಅಧಿಕಾರ ಮದ.

ಕಂಟಕವನೆ—ಅಭ್ಯುದಯಕ್ಕೆ ಪ್ರತಿಪಕ್ಷಿಯಾದ ಪಾಪ.



ಕಾಂಬೋದಿ ಝಂಪೆ

ಆರಿದ್ದರೇನಯ್ಯ ನೀನಿಲ್ಲದೆ ಪ

ಕಾರುಣ್ಯನಿಧಿ ಹರಿಯೆ ಕೈಯ ಬಿಡಬೇಡ ಅ

ದುರುಳ ಕೌರವನಂದು ದ್ರುಪದಜೆಯ ಸೀರೆಯನು
ಕರಗಳಿಂ ಸೆಳೆಯುತಿರೆ ಪತಿಗಳೆಲ್ಲ
ಗರ ಹೊಡೆದರಂತಿರ್ದರಲ್ಲದೆ ನರಹರಿಯೆ
ಕರುಣಿ ನೀನಲ್ಲದಿನ್ನಾರು ಕಾಯ್ದುವರು ೧

ಅಂದು ನೆಗಳಿನ ಬಾಧೆಯಿಂದ ಗಜ ಕೂಗಲು
ತಂದೆ ನೀ ವೈಕುಂಠದಿಂದ ಬಂದು
ಇಂದಿರೇಶನೆ ಚಕ್ರದಿಂದ ನಕ್ರನ ಬಾಯ
ಸಂದಿಯನು ಸೀಳಿ ಕೃಪೆಯಿಂದ ಸಲಹಿದೆಯೊ ೨

ಅಜಮಿಳನು ಕುಲಗೆಡಲು ಕಾಲದೂತರು ಬಂದು
ನಿಜಸುತನ ಕರೆಯೆ ನೀನತಿವೇಗದಿ
ತ್ರಿಜಗದೊಡೆಯನೆ ಸಿರಿ ಪುರಂದರವಿಠ್ಠಲ
ನಿಜದೂತರನು ಕಳುಹಿ ಕಾಯ್ದೆ ಶ್ರೀಹರಿಯೆ ೩

ದುರುಳ ಕೌರವನು—ದುಃಶಾಸನನು (ದ್ರೌಪದೀ ವಸ್ತ್ರಾಪಹರಣ).
ನೆಗಳಿನ—ಮೊಸಳೆಯ (ಗಜೇಂದ್ರಮೋಕ್ಷ).

ಪಂತುವರಾಳಿ ಅಟ್ಟ

ಹಿಂದಿಲ್ಲ ಸ್ವಾಮಿ ಮುಂದಿಲ್ಲ
ಗೋವಿಂದ ನೀನಲ್ಲದೆ ಇಹಪರವಿಲ್ಲ ಪ

ಪರರ ಬೇಡಿಪ್ಪಂತೆ ಗತಿಯಾಯಿತಲ್ಲ
ನರರ ತುತಿಸಿ ನಾಲಿಗೆ ಬರಡಾಯಿತಲ್ಲ
ಪರವಿಲ್ಲ ಇಹವಿಲ್ಲ ನರಜನ್ಮ ಸ್ಥಿರವಿಲ್ಲ
ನರಗೆ ಪಾಮರಗೆ ಪಾಪದ ಪಂಜರಗೆ ೧

ತನುವು ತನ್ನದಲ್ಲ ತನ್ನವರಾರಿಲ್ಲ
ಘನವಾಗಿ ಇರುವಾಗ ಸತಿ ಸುತರೆಲ್ಲ
ತನು ಮನ ಧನ ತಪ್ಪಿ ತಲ್ಲಣಿಸುವಾಗ
ವನಜನಾಭ ನೀನಲ್ಲದೆ ಯಾರಿಲ್ಲ ೨

ಮಾತಾಪಿತ ಮೊದಲಾದ ಗೋತ್ರಜರು ಸಂ
ಪ್ರೀತಿಯೊಳಿರುವಾಗ ಮನ್ನಿಪರೆಲ್ಲ
ಕಾತರನಾಗಿ ಯಮ ಕೊಂಡೊಯ್ಯುವಾಗ ಸಂ
ಗಾತ ಇನ್ನಾರಯ್ಯ ಪುರಂದರವಿಠಲ ೩

ಹಿಂದಿಲ್ಲ ಮುಂದಿಲ್ಲ—'ಹಿಂದೆ' ಎಂದರೆ ಪೂರ್ವಜನ್ಮಗಳಲ್ಲಿ ನಡೆಸಿದ ಪುಣ್ಯಕರ್ಮ, ಪಡೆದುಕೊಂಡ ಜ್ಞಾನ, ಮಾಡಿದ ಭಕ್ತಿ; 'ಮುಂದೆ' ಎಂದರೆ ಸದ್ಗತಿ, ಮುಕ್ತಿಗೆ ಕಾರಣವಾಗುವ ದಾರಿ.

ಇಹಪರವಿಲ್ಲ—'ಇಹ'ವೆಂದರೆ ಸಂಸಾರದಲ್ಲಿ ಅಭ್ಯುದಯ; ಪುಣ್ಯದಿಂದ ಬರುವಂಥದು; 'ಪರ'ವೆಂದರೆ ಮುಕ್ತಿ, ನಿಃಶ್ರೇಯಸ, ಜ್ಞಾನದಿಂದ ಬರುವಂಥದು.

ತುತಿಸಿ—ಸ್ತುತಿಸಿ, ಹೊಗಳಿ.

ಗೋತ್ರಜರು—ನಂಟರು.

ಸಂಗಾತ—ಜೊತೆಯಲ್ಲಿ

ಸಹಾನ ಝಂಪೆ

ಯಾಕೆ ಕಡಗಣ್ಣಿಂದ ನೋಡುವೆ
ಕೃಷ್ಣ ನೀ ಕರುಣಾಕರನಲ್ಲವೆ ಪ

ಭಕ್ತವತ್ಸಲ ನೀನಲ್ಲವೆ, ಕೃಷ್ಣ
ಚಿತ್ಸುಖದಾತ ನೀನಲ್ಲವೆ
ಅತ್ಯಂತ ಅಪರಾಧಿ ನಾನಾದಡೇನಯ್ಯಾ
ಇತ್ತಿತ್ತ ಬಾ ಎನ್ನ ಬಾರದೆ ರಂಗ ೧

ಇಂದಿರೆಯರಸ ನೀನಲ್ಲವೆ, ಬಹು
ಸೌಂದರ್ಯ ನಿಧಿ ನೀನಲ್ಲವೆ
ಮಂದಮತಿ ನಾನಾದಡೇನು, ಕೃಪಾ
ಸಿಂಧು ನೀ ರಕ್ಷಿಸಬಾರದೆ ರಂಗ ೨

ದೋಷಿಯು ನಾನಾದಡೇನಯ್ಯ, ಸರ್ವ
ದೋಷರಹಿತ ನೀನಲ್ಲವೆ
ಘಾಸಿಯಾತಕೆ ನಿನ್ನ ನಂಬಿದೆ ಸಲಹಯ್ಯ
ಶೇಷಶಾಯಿ ಶ್ರೀ ಪುರಂದರವಿಠಲ ೩

ಕಡೆಗಣ್ಣಿಂದ ನೋಡುವೆ—ಅಸಡ್ಡೆ ಮಾಡುವೆ.

ಚಿತ್ಸುಖದಾತ—ಅಪರೋಕ್ಷ ಜ್ಞಾನವನ್ನೂ ಮುಕ್ತಿಯ ಆನಂದವನ್ನೂ ಸ್ವರೂಪಕ್ಕೆ ಅನುಗುಣವಾಗಿ ಜೀವಕ್ಕೆ ಒದಗಿಸುವವನು.

ಇತ್ತಿತ್ತ—ಮುಕ್ತಿಯ ಕಡೆಗೆ.

ದೋಷರಹಿತ—ಪರಮಾತ್ಮನು ಸ್ವರೂಪದಲ್ಲಿ ದೋಷದ ಸೋಂಕಿಲ್ಲದವನು, ಸ್ವಭಾವ ದಲ್ಲಿ ಜೀವರ ದೋಷಗಳನ್ನು ಕಳೆಯುವವನು.

ಘಾಸಿಯಾತಕೆ—ನನ್ನನ್ನು ಏಕೆ ತೊಂದರೆಗೀಡುಮಾಡುವೆ.

ಕಾಂಬೋದಿ ಝಂಪೆ

ಕಂಡು ಕಂಡು ನೀ ಎನ್ನ ಕೈ ಬಿಡುವರೇ ಪ

ಪುಂಡರೀಕಾಕ್ಷ ಶ್ರೀ ಪುರುಷೋತ್ತಮ ಅ

ಬಂಧುಗಳು ಎನಗಿಲ್ಲ ಬದುಕಿನಲಿ ಸುಖವಿಲ್ಲ
ನಿಂದೆಯಲಿ ನೊಂದೆನೈ ನೀರಜಾಕ್ಷ
ತಂದೆತಾಯಿಯು ನೀನೆ ಬಂಧುಬಳಗವು ನೀನೆ
ಎಂದೆಂದಿಗೂ ನಿನ್ನ ನಂಬಿಹೆನು ಕೃಷ್ಣಾ ೧

ಕ್ಷಣವೊಂದು ಯುಗವಾಗಿ ತೃಣಕಿಂತ ಕಡೆಯಾಗಿ
ಎಣಿಸಲಾಗದ ಭವದಿ ನೊಂದೆ ನಾನು
ಸನಕಾದಿಮುನಿವಂದ್ಯ ವನಜಸಂಭವನೆಪಿತ
ಫಣಿಶಾಯಿ ಪ್ರಹ್ಲಾದವರದ ಶ್ರೀಕೃಷ್ಣಾ ೨

ಭಕ್ತವತ್ಸಲನೆಂಬೊ ಬಿರುದು ಪೊತ್ತಮೇಲೆ
ಭಕ್ತರಾಧೀನನಾಗಿರಬೇಡವೆ
ಮುಕ್ತಿದಾಯಕ ದೇವ ಪುರಂದರವಿಠ್ಠಲನೆ
ಶಕ್ತ ನೀನಹುದೆಂದು ನಂಬಿದೆನೊ ಕೃಷ್ಣಾ ೩

ಎಣಿಸಲಾಗದ ಭವದಿ—ಲೆಕ್ಕವಿಲ್ಲದಷ್ಟು ಜನ್ಮಗಳಲ್ಲಿ.

ಸನಕಾದಿಮುನಿವಂದ್ಯ — ಭಾಗವತಧರ್ಮದ ಪ್ರಚಾರಕರಾದ ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತ ಎಂಬ ಮುನಿಗಳಿಂದ ಹೊಗಳಲ್ಪಟ್ಟವನು.

ವನಜಸಂಭವನ ಪಿತ—ಚತುರ್ಮುಖ ಬ್ರಹ್ಮನ ತಂದೆ.

ಫಣಿಶಾಯಿ—ಫಣ (ಹೆಡೆಯುಳ್ಳದ್ದು) ಫಣಿ, ಹಾವು ; ಆದಿಶೇಷನ ಮೇಲೆ ಪವಡಿಸಿರುವವನು.

ಭಕ್ತವತ್ಸಲನೆಂಬೊ ಬಿರುದು—'ನ ಮೇ ಭಕ್ತಃ ಪ್ರಣಶ್ಯತಿ' ಎಂಬ ಆಶ್ವಾಸನೆಯಿಂದ; ಮತ್ತು ಗಜೇಂದ್ರ, ಪ್ರಹ್ಲಾದ, ಧ್ರುವ, ಅಜಾಮಿಳ, ಅಂಬರೀಷ ಮೊದಲಾದ ಭಕ್ತರನ್ನು ಕಾಪಿಟ್ಟ ಯಶಸ್ಸಿನಿಂದ.

೧೪೭

ಕಾಂಬೋದಿ ಝಂಪೆ

ಬಿನ್ನಹಕೆ ಬಾಯಿಲ್ಲವಯ್ಯಾ
ಅನಂತ ಅಪರಾಧ ಎನ್ನಲ್ಲಿ ಇರಲಾಗಿ ಪ

ಅಸುರಾರಿ ನಿನ್ನ ಮರೆತೆನೊ ಕಾಯೊ ಹರಿಯೆ ಅ

ಶಿಶು ಮೋಹ ಸತಿ ಮೋಹ ಜನನಿ ಜನಕರ ಮೋಹ
ರಸಿಕ ಭ್ರಾಂತಿಯ ಮೋಹ ರಾಜಮನ್ನಣೆ ಮೋಹ
ಪಶು ಮೋಹ ಭೂ ಮೋಹ ಬಂಧುವರ್ಗದ ಮೋಹ
ಹಸನುಳ್ಳ ಆಭರಣಗಳ ಮೋಹದಿಂದ ೧

ಅನ್ನಮದ ಅರ್ಥಮದ ಅಖಿಳ ವೈಭವದ ಮದ
ಮುನ್ನ ಪ್ರಾಯದ ಮದವು ರೂಪಮದವು
ತನ್ನ ಸತ್ವದ ಮದ ಧಾತ್ರಿ ವಶವಾದ ಮದ
ಇನ್ನು ತನಗೆದುರಿಲ್ಲವೆಂತೆಂಬ ಮದದಿಂದ ೨

ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ
ಅಷ್ಟು ದೊರಕಿದರು ಮತ್ತಷ್ಟರಾಸೆ
ಕಷ್ಟ ಬೇಡೆಂಬಾಸೆ ಕಡುಸುಖವ ಕಾಂಬಾಸೆ
ನಷ್ಟಜೀವನದಾಸೆ ಪುರಂದರವಿಠಲ ೩

ಮೋಹ—ಮನಸ್ಸನ್ನು ವಶಮಾಡಿಕೊಳ್ಳುವ ಪ್ರವೃತ್ತಿ ; ಅತಿಯಾದ ಪ್ರೀತಿ.

ರಸಿಕಭ್ರಾಂತಿ—ತಾನು ರಸಿಕನೆಂದೂ, ಸುಖವನ್ನು ಅನುಭವಿಸುವವನೆಂದೂ ತಪ್ಪಾಗಿ ತಿಳಿಯುವುದು.

ಅನ್ನಮದ... —ಇಲ್ಲಿ ಅನ್ನಮದ, ಅರ್ಥಮದ, ಅಧಿಕಾರಮದ, ಯೌವನಮದ, ರೂಪಮದ, ಕುಲಮದ, ಐಶ್ವರ್ಯಮದ, ಬಲಮದ ಎಂಬ ಅಷ್ಟ ಮದಗಳನ್ನು ಹೇಳಿದೆ.

ಕಡುಸುಖ—ಹೆಚ್ಚಾದ ಸುಖ.

ನಷ್ಟಜೀವನದಾಸೆ—ಹಿಂದೆ ಸಂದ ಬದುಕು ಮತ್ತೆ ಬರಲಿ (ಎಂದರೆ ಮುಪ್ಪಡರದೆ ಇರಲಿ ಎಂಬ ಬಯಕೆ).

ಶಂಕರಾಭರಣ ಅಟ್ಟಿ

ಮನವೆನ್ನ ಮಾತು ಕೇಳದು ಮಂದಜ್ಞಾನದಿ
ತನುವಿನಾಸೆಯು ಬಿಡಲೊಲ್ಲದು ಪ

ದೇಹ ಸಂಬಂಧಿಗಳಾದವರೈವರು
ಮೋಹಪಾಶದಿ ಕಟ್ಟಿ ಬಿಗಿದಿಹರಯ್ಯ
ದೇಹವನಿತ್ಯವೆಂಬುದ ಗುರುತರಿಯದೆ
ಮಾಯಾ ಪ್ರಪಂಚವೆಂಬುದು ಬದ್ಧವಾಗಿದೆ ೧

ಸಾಧುಸಜ್ಜನರ ಸಂಗವ ಮಾಡಿ ಪರಗತಿಗೆ
ಆಧಾರವನು ಮಾಡಲೊಲ್ಲದಯ್ಯ
ಕ್ರೋಧ ಕುಹಕ ದುಷ್ಟರೊಡನಾಡಿ ಕಾಲನ
ಬಾಧೆಗೆ ಗುರಿಯು ಮಾಡುತಲಿದೆ ಹರಿಯೆ ೨

ಮದಗಜ ಮೈಯು ಮರೆತು ಮುಂದುಗಾಣದೆ
ಕದುವಿನೊಳಗೆ ಬಿದ್ದಂತಾಯಿತಯ್ಯ
ಹೃದಯಕಮಲದಲ್ಲಿ ನಿಂತು ರಕ್ಷಿಸೊ ಎನ್ನ
ಪದುಮಾಕ್ಷ ವರದ ಶ್ರೀಪುರಂದರವಿಠಲ ೩

ದೇಹ ಸಂಬಂಧಿಗಳಾದೈವರು—ಪಂಚೇದ್ರಿಯಗಳು.

ಗುರುತು—ಪ್ರತ್ಯಭಿಜ್ಞೆ.

ಮಾಯಾಪ್ರಪಂಚ—ದೇಹಾತ್ಮಭಾವದಿಂದ ; ನಿತ್ಯಾನಿತ್ಯವಸ್ತುವಿವೇಕವಿಲ್ಲದೆ.

ಕದುವು—ಕೆಸರು (ಕರ್ದಮ).

ಕಾಂಬೋದಿ ಝಂಪೆ

ಭಂಡನಾದೆನು ನಾನು ಸಂಸಾರದಿ ಪ

ಕಂಡು ಕಾಣದ ಹಾಗೆ ಇರಬಹುದೆ ಹರಿಯೆ ಅ

ಕಂಡ ಕಲ್ಲುಗಳಿಗೆ ಕೈಮುಗಿದು ಸಾಕಾದೆ
ದಿಂಡೆಕಾರರ ಮನೆಗೆ ಬಲು ತಿರುಗಿದೆ
ಶುಂಡಾಲನಂತೆನ್ನ ಮತಿ ಮಂದವಾಯಿತು
ಪುಂಡರೀಕಾಕ್ಷ ನೀ ಕರುಣಿಸಯ್ಯ ಬೇಗ ೧

ನಾನಾ ವ್ರತಗಳನು ಮಾಡಿ ನಾ ಬಳಲಿದೆನು
ಏನಾದರೂ ಎನಗೆ ಫಲವಿಲ್ಲವಯ್ಯ
ಆ ನಾಡು ಈ ನಾಡು ಸುತ್ತಿ ನಾ ಕಂಗೆಟ್ಟೆ
ಇನ್ನಾದರೂ ಕೃಪೆಯು ಮಾಡಯ್ಯ ಹರಿಯೆ ೨

ಬುದ್ಧಿಹೀನರ ಮಾತ ಕೇಳಿ ನಾ ಮರುಳಾದೆ
ಶುದ್ಧಿಯಿಲ್ಲದೆ ಮನವು ಕೆಟ್ಟುಹೋಯ್ತು
ಉದ್ಧಾರಕ ಪುರಂದರವಿಠ್ಠಲನ ತತ್ತ್ವದ
ಸಿದ್ಧಿಯನು ದಯೆಗೈದು ಉದ್ಧರಿಸು ಹರಿಯೆ ೩

ದಿಂಡೆಕಾರ—ದುಷ್ಟ, ಉದ್ಧತ.
ಶುಂಡಾಲ—ಆನೆ ; ಸೊಂಡಿಲುಳ್ಳದ್ದು.

೧೫೦

ಕಾಂಬೋದಿ — ಝಂಪೆ

ಇಷ್ಟು ಪಾಪಗಳ ಮಾಡಿದ್ದೆ ಸಾಕು ಪ
ಸೃಷ್ಟೀಶನೆ ಎನ್ನನುದ್ಧರಿಸಬೇಕು ಅ

ಒಡಲ ಕಿಚ್ಚಿಗೆ ಪರರ ಕಡು ನೋಯಿಸಿದೆ ಕೃಷ್ಣ
ಕೊಡದೆ ಅನ್ಯರ ಋಣವನಪಹರಿಸಿದೆ
ಮಡದಿಯ ನುಡಿ ಕೇಳಿ ಒಡಹುಟ್ಟಿದವರೊಡನೆ
ಹಡೆದ ತಾಯಿಯ ಕೂಡೆ ಹಗೆ ಮಾಡಿದೆ ೧

ಸ್ನಾನ ಸಂಧ್ಯಾದಿಗಳ ಮಾಡದಲೆ ಮೈಗೆಟ್ಟೆ
ಜ್ಞಾನ ಮಾರ್ಗವನಂತು ಮೊದಲೆ ಬಿಟ್ಟೆ
ಏನು ಪೇಳಲಿ ಪರರ ಮಾನಿನಿಗೆ ಮನಸಿಟ್ಟೆ
ಶ್ವಾನ ಸೂಕರರಂತೆ ಹೊರೆದೆ ಹೊಟ್ಟೆ ೨

ವ್ರತ ನೇಮ ಉಪವಾಸ ಒಂದುದಿನ ಮಾಡಲಿಲ್ಲ
ಅತಿಥಿಗಳಿಗನ್ನವನು ನೀಡಲಿಲ್ಲ
ಶ್ರುತಿ ಶಾಸ್ತ್ರ ಪೌರಾಣ ಕಥೆಗಳನು ಕೇಳಲಿಲ್ಲ
ವೃಥವಾಗಿ ಬಹುಕಾಲ ಗತವಾಯಿತಲ್ಲ ೩

ಶುದ್ಧ ವೈಷ್ಣವ ಕುಲದಲುದ್ಭವಿಸಿದೆ ನಾನು
ಮಧ್ವಮತ ಸಿದ್ಧಾಂತ ಪದ್ಧತಿಗಳ
ಬುದ್ಧಿಪೂರ್ವಕ ತಿಳಿಯದುದ್ದಂಡ ಕಾಯವನು
ವೃದ್ಧಿಮಾಡಿದೆನಯ್ಯ ಉದ್ಧರಿಸು ಹರಿಯೆ ೪

ತಂದೆ ತಾಯ್ಗಳ ಸೇವೆಯೊಂದುದಿನ ಮಾಡಲಿಲ್ಲ
ಮಂದ ಭಾಗ್ಯಗೆ ಭವಣೆ ತಪ್ಪಲಿಲ್ಲ
ಹಿಂದೆ ಮಾಡಿದ ದೋಷ ಒಂದುಳಿಯದರುಹಿದೆನೊ
ತಂದೆ ಪುರಂದರವಿಠಲ ಬಂದೆನ್ನ ಸಲಹೊ ೫

೨೫೧

ಕಾಂಬೋದಿ ಝಂಪೆ

ಮಂದಮತಿಯೋ ನಾನು ಮದನಜನಕನು ನೀನು
ಕುಂದುಗಳನೆಣಿಸದೆ ದಯಮಾಡಿ ಸಲಹೋ ಪ

ಪಾಪಕರ್ತನು ನಾನು ಪಾಪನಾಶನ ನೀನು
ಕೋಪ ಮದ ಮತ್ಸರದಿ ಸುಳಿವೆ ನಾನು
ತಾಪವನು ತರಿದು ನಿರ್ಭಯವ ಮಾಡುವೆ ನೀನು
ರೂಪ ಛಾಯಕೆ ಮರುಳುಗೊಂಬೆನೋ ನಾನು ೧

ಶರಣರಕ್ಷಕ ನೀನು ಪರಮಪಾತಕಿ ನಾನು
ದುರಿತ ಪರ್ವತವ ಪರಿಹರಿಪೆ ನೀನು
ಮರುಳುಗೊಂಬೆಯು ನಾನು ಅರಿತು ರಕ್ಷಿಪೆ ನೀನು
ಗರುವಾಹಂಕಾರಿ ನಾನು ಅಗಮ್ಯ ನೀನು ೨

ಮಂದಭಾಗ್ಯನು ನಾನು ಇಂದಿರಾಪತಿ ನೀನು
ಹಿಂದು ಮುಂದಿನ ಸುದ್ದಿ ಅರಿಯದವ ನಾನು
ತಂದೆ ಶ್ರೀಪುರಂದರವಿಠ್ಠಲರಾಯನೆ
ಎಂದೆಂದು ಭಕ್ತರನು ಸಲಹುವೆಯೊ ನೀನು ೩

ಕುಂದುಗಳು—ಕೊರತೆ, ದೋಷ.

ರೂಪಛಾಯಕೆ—ನೆರಳಿಗೆ.

ಹಿಂದು ಮುಂದಿನ ಸುದ್ದಿ—ಪೂರ್ವಜನ್ಮಗಳ ಮತ್ತು ಆಗಾಮಿ ಜನ್ಮಗಳ ವಿವರಗಳು.

ಸೌರಾಷ್ಟ್ರ ಅಟ್ಟ

ಏನೆಂತೊಲಿದೆ ನಿನ್ನವರಂತೆ ಕೆಡುಬುದ್ಧಿ
ಎನ್ನೊಳಿಲ್ಲ ಗುಣ
ಹೀನರಲ್ಲದ ದೀನಜನರ ಪಾಲಿಪ ಬುದ್ಧಿ
ನಿನ್ನೊಳಿಲ್ಲ ಪ

ತರಳ ಪ್ರಹ್ಲಾದನಂದದಿ ನಿನ್ನ ರೂಪವ
ಕೆಡಿಸಲಿಲ್ಲ ಮತ್ತೆ
ನರನಂತೆ ನಾ ನಿನ್ನ ಬಂಡಿಬೋವನ ಮಾಡಿ
ಹೊಡೆಸಲಿಲ್ಲ
ಸುರನದೀಸುತನಂತೆ ನೊಸಲಲ್ಲಿ ಬಾಣವ
ನೆಡಿಸಲಿಲ್ಲ ಆ
ದೊರೆ ಅಂಬರೀಷನಂತೀರೈದು ಜನ್ಮವ
ಪಡಿಸಲಿಲ್ಲ ೧

ನಾರದನಂತೆ ಕಂಡವರ ಕೊಂಡೆಯ
ಮಾತನಾಡಲಿಲ್ಲ ನಾ
ಮಾರುತಿಯಂತೆ ನೀನುಣುತಿದ್ದ ಎಡೆಯ
ಕೋಂಡೊಯ್ಯಲಿಲ್ಲ
ಆ ರುಕ್ಮಾಂಗದನಂತೆ ಸುತನ ಕೊಲ್ಲಲು
ದೃಢಮಾಡಲಿಲ್ಲ ಮುನಿ
ಪರಾಶರನಂತೆ ನದಿಯೊಳಂಬಿಗ ಹೆಣ್ಣ
ಕೂಡಲಿಲ್ಲ ೨

ವಿದುರನ ತೆರನಂತೆ ಸದನವ ಮುರಿದು ನಾ
ಕುಣಿಯಲಿಲ್ಲ ನೊಂದ
ಮದಗಜದಂತೆ ಮಕರಿಯ ಬಾಯೊಳು ಸಿಲುಕಿ
ಒದರಲಿಲ್ಲ
ಬೆದರದೆ ಬಲಿಯಂತೆ ಭೂಮಿಯ ಧಾರೆಯ
ನೆರೆಯಲಿಲ್ಲ ಒಣ
ಸದರ ಮಾತುಗಳಾಡಿ ಶಿಶುಪಾಲನಂದದಿ
ಜರೆಯಲಿಲ್ಲ ೩

ಅಗಣಿತಮಹಿಮ ನೀನೆಂದು ಧ್ರುವನಂತೆ
ಪೊಗಳಲಿಲ್ಲ ಮತ್ತಾ
ಭೃಗುಮುನಿಯಂತೆ ಗರ್ವದಿ ನಿನ್ನ ಹೃದಯದಿ
ಒದೆಯಲಿಲ್ಲ
ಖಗರಾಜನಂತೆ ನಿನ್ನನು ಪೊತ್ತು ಲೋಕವ
ತಿರುಗಲಿಲ್ಲ ವರ
ಅಗಜೆಯರಸನಂತೆ ಮಸಣದಿ ನಿನ್ನ ನಾಮ
ನೆನೆಯಲಿಲ್ಲ ೪

ಸನಕಾದಿ ಮುನಿಗಳಂತನುದಿನ ಮನದೊಳು
ಸ್ಮರಿಸಲಿಲ್ಲ ಘನ
ಇನಸುತ ಕಪಿಯಂತೆ ವಂದಿಸಿ ವಾಲಿಯ
ಕೊಲಿಸಲಿಲ್ಲ
ಬಿನುಗು ಬೇಡತಿಯಂತೆ ಸವಿದುಂಡ ಹಣ್ಣನು
ಮೆಲಿಸಲಿಲ್ಲ ಅಂದು
ಘನ ಅಜಮಿಳನಂತೆ ಸುತನ ನಾರಗನೆಂದು
ಕರೆಯಲಿಲ್ಲ ೫

ವರ ಶೌನಕರಂತೆ ನಿತ್ಯ ಸೂತನ ಕಥೆಯ
ಕೇಳಲಿಲ್ಲ ನಾ
ನೆರೆ ತುಂಬುರನಂತೆ ರಂಭೆ ನಟಿಸಿ ಗೀತ
ಪೇಳಲಿಲ್ಲ
ಉರಗಾಧಿಪತಿಯಂತೆ ಉದರದೊಳಿಂಬಿಟ್ಟು
ನೋಡಲಿಲ್ಲ ನೋಡೆ
ಪಿರಿದು ಕುಚೇಲನ ತೆರನಂತೆ ಅವಲಕ್ಕಿ
ನೀಡಲಿಲ್ಲ ೬

ಬವರದೊಳು ವಿಭೀಷಣನಂತೆ ಅಣ್ಣನ
ಕೊಲಿಸಲಿಲ್ಲ ವರ
ಯುವತಿ ದ್ರೌಪದಿಯಂತೆ ಶಾಕಪಾತ್ರೆಯೊಳೊಮ್ಮೆ
ಮೆಲಿಸಲಿಲ್ಲ
ತವಪುಂಡಲೀಕನಂದದಿ ಇಟ್ಟಿಗೆಯ ಮೇಲೆ
ನಿಲಿಸಲಿಲ್ಲ ನಾ
ನಿವರಂತೆ ದೇವ ಪುರಂದರ ವಿಠಲನ
ಸ್ಮರಿಸಲಿಲ್ಲ ೭

ರೂಪವ ಕೆಡಿಸಲಿಲ್ಲ—ಹಿರಣ್ಯಕಶಿಪುವನ್ನು ಕೊಲ್ಲಲು ಘೋರವಾದ ನರಸಿಂಹನಾಗಿ ಬರಬೇಕಾಯಿತು.

ನರನಂತೆ ಬಂಡಿಬೋವ—ಪಾರ್ಥಸಾರಥಿ ; ಕೃಷ್ಣನನ್ನು ಅರ್ಜುನನು ತನ್ನ ಗಾಡಿ ಹೊಡೆಯಲು ನೇಮಿಸಿಕೊಂಡ.

ಸುರನದೀಸುತ...—ಸುರನದೀಸುತ (ಗಂಗೆಯ ಮಗನಾದ ಭೀಷ್ಮ) ಮಹಾಭಾರತ ಯುದ್ಧದಲ್ಲಿ ಕೃಷ್ಣನ ಮೇಲೆ ದಾಳಿ ಮಾಡಿ ಹಣೆಗೆ ಬಾಣಗಳನ್ನು ನೆಟ್ಟು ರಕ್ತ ಬರಿಸಿದ್ದನು. ನಾನು ಹಾಗೆ ಮಾಡಿಲ್ಲ ಎಂಬ ಭಾವ.

ಅಂಬರೀಷ—ವಿವರಣೆ ಆಗಲೆ ಬಂದಿದೆ.

ಈರೈದು ಜನ್ಮ—ಹತ್ತು ಜನ್ಮ.

ನಾರದನಂತೆ...—(ಕೊಂಡೆಯದ ಮಾತು) ಚಾಡಿಯ ಮಾತು ನಾರದನಿಗೆ ತುಂಬ ಪ್ರಿಯವೆಂದು ಪ್ರತೀತಿ.

ಮಾರುತಿಯಂತೆ...—ರಾಮನು ರಾವಣನನ್ನು ಕೊಂದು ಅಯೋಧ್ಯೆಗೆ ಹಿಂದಿರುಗಿದಾಗ, ಅರಮನೆಯಲ್ಲಿ ನಡೆದ ಔತಣದಲ್ಲಿ ರಾಮನು ಹನುಮಂತನನ್ನು ತನ್ನ ಪಕ್ಕದಲ್ಲೇ ಕೂರಿಸಿಕೊಳ್ಳಲು, ಸ್ವಾಮಿಯ ಸಾಲಿನಲ್ಲೇ ಸೇವಕನು ಕೂರಬಾದದೆಂದು ಹನುಮಂತನು ಭಾವಿಸಿ, ರಾಮನ ಎಲೆಯಲ್ಲಿ ಅವನು ತಿಂದುಳಿದಿದ್ದ ಭಕ್ಷ್ಯವನ್ನು ಪಡೆದುಕೊಂಡು ದೂರ ನಿಂತು ಪ್ರಸಾದವೆಂದು ತಿಂದನೆಂಬ ಕಥೆಯಿದೆ.

ರುಕ್ಮಾಂಗದ—ವಿವರಣೆ ಆಗಲೆ ಬಂದಿದೆ.

ಪರಾಶರ—ವಸಿಷ್ಠನ ಮೊಮ್ಮಗ, ಶಕ್ತಿಯ ಮಗ, ವ್ಯಾಸನ ತಂದೆ. ಯಮುನಾ ನದಿಯನ್ನು ದಾಟುವಾಗ, ದೋಣಿ ನಡೆಸುತ್ತಿದ್ದ ಮತ್ಸ್ಯಗಂಧಿಯೊಂದಿಗೆ ಕೂಡಿಕೊಂಡದ್ದೂ, ಸದ್ಯೋಗರ್ಭದಿಂದ ವ್ಯಾಸ ಹುಟ್ಟಿದ್ದೂ ಮಹಾಭಾರತದಲ್ಲಿ ಬರುತ್ತದೆ.

ವಿದುರ—ಕೃಷ್ಣ ಮನೆಗೆ ಬಂದ ಉತ್ಸಾಹದಲ್ಲಿ ವಿದುರ ಮನೆಯ ಗಳುವನ್ನು ಕಿತ್ತೆಸೆದನಂತೆ.

ಮದಗಜ—ಗಜೇಂದ್ರ.

ಖಗರಾಜ—ಗರುಡ.

ಅಗಜೆಯರಸ—'ಅಗ'ವೆಂದರೆ ಸ್ಥಳ ಬಿಟ್ಟು ಹೋಗಲಾರದ ಬೆಟ್ಟ, ಪರ್ವತ, ಇಲ್ಲಿ ಹಿಮಾಲಯ ; ಅದರ ಮಗಳು 'ಅಗಜೆ', ಪಾರ್ವತಿ ; ಅವಳ ಅರಸ ಶಿವ. ಅವನು ಕಾಶಿಯಲ್ಲಿ ('ಮಸಣದಲಿ' ಕಾಶಿಗೆ ಮಹಾಶ್ಮಶಾನವೆಂಬ ಹೆಸರಿದೆ) ರಾಮನಾಮದ ಮಹಿಮೆಯನ್ನು ಪಾರ್ವತಿಗೆ ಹೇಳಿದನು.

ಇನಸುತ ಕಪಿ—ಸೂರ್ಯನ ಮಗನಾದ ಸುಗ್ರೀವ.

ಬಿನುಗು ಬೇಡತಿ—ಮಹಾಶ್ರಮಣಿಯಾದ ಶಬರಿ ; ಪಂಪಾತೀರದಲ್ಲಿದ್ದ ಇವಳ ಆಶ್ರಮಕ್ಕೆ ರಾಮನು ಸೀತಾನ್ವೇಷಣೆಯ ಸಂದರ್ಭದಲ್ಲಿ ಬಂದಾಗ ಇವಳು ರಾಮನಿಗೆ ತಾನು ಭಕ್ತಿಯಿಂದ ಮೊದಲು ರುಚಿ ನೋಡಿ ಹಣ್ಣನ್ನು ಕೊಟ್ಟ ಳೆಂದೂ, ರಾಮನು ಪ್ರೀತಿಯಿಂದ ಅದನ್ನು ತಿಂದನೆಂದೂ ಕಥೆ.

ವರ ಶೌನಕ—ನೈಮಿಷಾರಣ್ಯದಲ್ಲಿರುತ್ತಿದ್ದ ಭೃಗುವಂಶದ ಋಷಿ ; ಸೂತ ಪೌರಾಣಿಕ ನಿಂದ ಪುರಾಣೇತಿಹಾಸಗಳನ್ನು ಶ್ರವಣಮಾಡಿದವನು. ಇವನ ಹೆಸರು ಭಾಗವತದಲ್ಲೂ ಭಾರತದಲ್ಲೂ ಬರುತ್ತದೆ.

ನೆರೆ ತುಂಬುರ—ಕಶ್ಯಪನ ಮಗನಾದ ತುಂಬುರು ಒಬ್ಬ ದೇವಗಂಧರ್ವ, ಗಾಯಕ. ಸ್ವರ್ಗಲೋಕದಿಂದ ಅಪ್ಸರೆ ರಂಭೆ ಕುಬೇರನ ನಗರವಾದ ಅಲಕಾ ವತಿಗೆ ಹೋಗುತ್ತಿರುವಾಗ ದಾರಿಯಲ್ಲಿ ತುಂಬುರು ಅವಳನ್ನು ನೋಡಿ, ಮೋಹಿಸಿ, ಅವಳ ಮಾನಭಂಗ ಮಾಡಿದನೆಂದು ಕಥೆ. ವಿಷ್ಣುವಿನ ಓಲಗದಲ್ಲಿ ರಂಭೆ ನರ್ತನ ಮಾಡುವಾಗ ತುಂಬುರು ಹಾಡುವನೆಂದು ಉಲ್ಲೇಖವಿದೆ.

ಉರಗಾಧಿಪತಿ—ಶೇಷ, ವಾಸುಕಿ, ತನ್ನ ಮೈಯ್ಯನ್ನೇ ವಿಷ್ಣುವಿಗೆ ಶಯ್ಯೆಯಾಗಿ ಸಜ್ಜುಮಾಡಿರುವವನು.

ಕುಚೇಲ—ಸಾಂದೀಪಿನಿ ಮುನಿಗಳ ಬಳಿ ರಾಮಕೃಷ್ಣರೊಂದಿಗೆ ಸಹಪಾಠಿಯಾಗಿದ್ದ ವನು ; ಕೃಷ್ಣನ ಬಾಲ್ಯಸ್ನೇಹಿತ. ಇವನಿಗೆ ಸುದಾಮನೆಂದೂ ಹೆಸರು. ವಿದ್ಯಾಭ್ಯಾಸ ಮುಗಿದಮೇಲೆ ಇವನು ಗೃಹಸ್ಥನಾಗಿ, ಬಡತನದಲ್ಲಿ ಬಾಳುತ್ತಿದ್ದ ; ಆಗ ದ್ವಾರಕೆಯ ದೊರೆಯಾಗಿದ್ದ ಕೃಷ್ಣನನ್ನು ಕಾಣಲು ಹೋದಾಗ ಒಂದು ಹಿಡಿ ಅವಲಕ್ಕಿಯಷ್ಟನ್ನೇ ಉಪಾಹಾರವಾಗಿ ಕೊಂಡೊಯ್ದನು. ಅಷ್ಟಕ್ಕೇ ಕೃಷ್ಣನು ತೃಪ್ತಿಪಟ್ಟು, ಅವನಿಗೆ ಸಕಲೈಶ್ವರ್ಯವನ್ನು ಅನುಗ್ರಹಿಸಿದೆನ್ನುವ ಸಂದರ್ಭ.

ಬವರ—ಯುದ್ಧ.

ಪುಂಡಲೀಕ—ಪಂಡರಿಗೆಯೆಂಬಲ್ಲಿ ಪುಂಡಲೀಕನೆಂಬ ಭಕ್ತನು ವೃದ್ಧರಾದ ತನ್ನ ತಾಯಿ ತಂದೆಯರಿಗೆ ಸ್ನಾನ ಮಾಡಿಸುತ್ತಿರುವಾಗ ಪರಮಾತ್ಮನು ತಾನಾಗಿ ಅಲ್ಲಿಗೆ ಬಂದನೆಂದೂ ಪುಂಡಲೀಕನು ತನ್ನ ಮಾತಾಪಿತೃ ಸೇವೆಯನ್ನು ಕೈಬಿಡದೆ, ಅಲ್ಲೇ ಇದ್ದ ಇಟ್ಟಿಗೆಯೊಂದನ್ನು ದೇವರೆಡೆಗೆ ಸರಿಸಿ ತನ್ನ ಕೆಲಸ ಮುಗಿಯುವ ವರೆಗೆ ಅಲ್ಲಿ ನಿಂತಿರುವಂತೆ ಬೇಡಿಕೊಂಡನೆಂದೂ, ದೇವರು ಅವನ ಶ್ರದ್ಧೆಗೆ ಮೆಚ್ಚಿ ಹಾಗೆಯೇ ಇಂದಿಗೂ ನಿಂತಿರುವನೆಂದೂ ಕಥೆ. ಪಂಢರಪುರದಲ್ಲಿರುವ ಪಾಂಡುರಂಗವಿಟ್ಠಲನು ಈಗಲೂ ಇಟ್ಟಿಗೆಯ ಮೇಲೆ ನಿಂತಿರುವಂತೆಯೇ ಇದೆ.

ಸಾರಂಗ ಅಟ್ಟ

ನಾನೇನು ಮಾಡಿದೆನೋ ಕೃಷ್ಣಯ್ಯ
ನೀನೆನ್ನ ಸಲಹಬೇಕು ಪ

ಕರಿರಾಜ ಕರೆಸಿದನೆ ದ್ರೌಪದಿದೇವಿ
ಬರೆದೋಲೆ ಕಳುಹಿದಳೆ
ಹರುಷದಿಂದಲಿ ಋಷಿಪತ್ನಿಯು ಶಾಪವ
ಪರಿಹರಿಸಿದೆಯಲ್ಲೋ ಹೇ ಸ್ವಾಮಿ ೧

ರಕ್ಕಸತನುಜನಲ್ಲವೆ ಪ್ರಹ್ಲಾದ
ಚಿಕ್ಕ ಪ್ರಾಯದ ಧ್ರುವನು
ಸಿಕ್ಕಿದ ಪಾಪ ಮಾಡಿದ ಅಜಾಮಿಳ ನಿ
ನ್ನಕ್ಕನ ಮಗನೇ ಪೇಳೊ ಸ್ವಾಮಿ ೨

ಒಪ್ಪಿಡಿ ಅವಲಕ್ಕಿಯು ಕೃಷ್ಣಯ್ಯ ನಿನ್ನ
ಗೊಪ್ಪಿಸಿದವಗೊಲಿದೆ
ಒಪ್ಪೇನೊ ನಿನಗೆ ಶ್ರೀಪುರಂದರವಿಠಲವ
ರಪ್ಪಂತೆ ಕಾಯಬೇಕೋ ಹೇ ಸ್ವಾಮಿ ೩

ಕರಿರಾಜ—ಗಜೇಂದ್ರ.

ಋಷಿಪತ್ನಿ—ಅಹಲ್ಯೆ (ರಾಮಾವತಾರದಲ್ಲಿ ಅಹಲ್ಯಾಶಾಪವಿಮೋಚನ ಪ್ರಸಂಗ).

ರಕ್ಕಸತನುಜನಲ್ಲವೆ—ಪ್ರಹ್ಲಾದನು ವಿಷ್ಣುಭಕ್ತನಾದರೂ ದೈತ್ಯಕುಲದಲ್ಲಿ ಹುಟ್ಟಿದವನು ; ಹಿರಣ್ಯಕಶಿಪು ದೈತ್ಯನೇ.

ಒಪ್ಪಿಡಿ ಅವಲಕ್ಕಿಯು—ಕುಚೇಲನು ಕೃಷ್ಣನನ್ನು ಕಾಣಲು ಬಂದಾಗ ಒಂದು ಹಿಡಿ ಅವಲಕ್ಕಿಯನ್ನು ತಂದ ಸಂದರ್ಭ.

ಸಹಾನ

ರೂಪಕ

ಪುಟ್ಟಿಸಬೇಡವೊ ದೇವ ಎಂದೆಂದಿಗೂ, ಇಂಥ ಪ

ಕಷ್ಟಪಟ್ಟು ತಿರುಗುವ ಪಾಪಿ ಜೀವನವ ಅ

ನರರ ತುತಿಸಿ ನಾಲಗೆ ಬರಡು ಮಾಡಿ, ಉ
ದರ ಪೋಷಣೆಗಾಗಿ ಅವರಿವರೆನ್ನದೆ
ಧರೆಯೊಳು ಲಜ್ಜೆ ನಾಚಿಕೆಗಳನೀಡಾಡಿ
ಪರರ ಪೀಡಿಸಿ ತಿಂಬ ಪಾಪಿ ಜೀವನವ ೧

ಎಂಟು ಗೇಣು ಶರೀರ ಒಂದು ಗೇಣು ಮಾಡಿಕೊಂಡು
ಪಂಟಿಸುತ್ತ ಮೆಲ್ಲ ಮೆಲ್ಲನೆ ಪೋಗಿ
ಗಂಟಲ ಸೆರೆಗಳುಬ್ಬಿ ಕೇಳುವ ಸಂಕಟ ವೈ
ಕುಂಠ ಪತಿ ನೀನೆ ಬಲ್ಲೆ ಕಪಟನಾಟಕನೆ ೨

ಲೆಖ್ಖದಲಿ ನೀ ಮೊದಲು ಮಾಡಿದ್ದಲ್ಲದೆ
ಸಖ್ಯಕೆ ವೆಗ್ಗಳ ಕೊಡುವರುಂಟೆ
ಕಕ್ಕುಲಾತಿಪಟ್ಟರಿಲ್ಲ ಕರುಣಾಳು ನಿನ್ನ ಮೊರೆ
ಹೊಕ್ಕೆ ಎನ್ನಲು ಕಾಯೊ ಪುರಂದರವಿಠಲ ೩

[ಜೀವಕ್ಕೆ ಈ ಲೋಕದಲ್ಲಿ ಕೆಲವು ಹಿಂಸೆಗಳಿವೆ. ಹೊಟ್ಟೆಯ ಪಾಡಿಗಾಗಿ ಮೇಲಿನ ಒಡೆಯರನ್ನು ಬಾಯಿತುಂಬ ಹೊಗಳಬೇಕು. ಹಣಕ್ಕಾಗಿ ಸಮಾಜದಲ್ಲಿ ಶೋಷಣೆ ಮಾಡಬೇಕು.]

ಪಂಟಿಸು—ಹಾಳುಹರಟೆ ಹೊಡೆಯುವುದು.

ವೈಕುಂಠಪತಿ ನೀನೆ ಬಲ್ಲೆ—ಇನ್ನೊಬ್ಬರನ್ನು ಯಾಚಿಸುವುದು ತುಂಬಕಷ್ಟದ ಕೆಲಸ. ದೇಹವನ್ನು ಕುಗ್ಗಿಸಿ, ಕೊರಳು ಕುಸಿದು, ಕೇಳಲಾಗದ ಸ್ಥಿತಿ ಬರುತ್ತದೆ. ವಾಮನಾವತಾರದಲ್ಲಿ ಕುಳ್ಳವಾಮನನಾಗಿ ಬಂದ ವಿಷ್ಣುವಿಗೆ ಈ ಕಷ್ಟ ಗೊತ್ತಿರಲೇಬೇಕಲ್ಲ.

ಲೆಖ್ಖದಲಿ ನೀ ಮೊದಲು ಮಾಡಿದ್ದಲ್ಲದೆ—ವಿಧಿಯು ಬರಹವೂ ಪರಮಾತ್ಮನ ಸಂಕಲ್ಪ ದಿಂದಲೇ. ಆದರ ಒಲವೇ ಹೆಚ್ಚಿನದು.

ಕಕ್ಕುಲಾತಿ—ಕಕ್ಕುಲತೆ ; ಪ್ರೀತಿ.

೧೫೫

ಮಧ್ಯಮಾವತಿ ಅಟ್ಟ

ತನುವ ನೀರೊಳಗದ್ದಿ ಫಲವೇನು, ತನ್ನ
ಮನದಲ್ಲಿ ದೃಢಭಕ್ತಿಯಿಲ್ಲದ ಮನುಜನು ಪ

ದಾನ ಧರ್ಮಗಳನ್ನು ಮಾಡುವುದೆ ಸ್ನಾನ
ಜ್ಞಾನತತ್ತ್ವಂಗಳ ತಿಳಿವುದೆ ಸ್ನಾನ
ಹೀನ ಪಾಶಂಗಳ ಹರಿವುದೆ ಸ್ನಾನ
ಧ್ಯಾನದಿ ಮಾಧವನ ನೋಡುವುದೆ ಸ್ನಾನ ೧

ಗುರುಗಳ ಶ್ರೀಪಾದ ತೀರ್ಥವೆ ಸ್ನಾನ
ಹಿರಿಯರ ದರ್ಶನ ಮಾಡುವುದೆ ಸ್ನಾನ
ಕರೆದು ಅತಿಥಿಗೆ ಅನ್ನ ಇಡುವುದೆ ಸ್ನಾನ
ನರಹರಿ ಚರಣವ ನಂಬುವುದೆ ಸ್ನಾನ ೨

ದುಷ್ಟರ ಸಂಗವ ಬಿಡುವುದೆ ಸ್ನಾನ
ಶಿಷ್ಟರ ಸಹವಾಸ ಮಾಡುವುದೆ ಸ್ನಾನ
ಸೃಷ್ಟಿಯೊಳಗೆ ಸಿರಿ ಪುರಂದರವಿಠಲನ
ಮುಟ್ಟಿ ಭಜಿಸಿ ಪುಣ್ಯ ಪಡೆವುದೆ ಸ್ನಾನ ೩

ಮಧ್ಯಮಾವತಿ ಆದಿ

ರಾಮ ಮಂತ್ರವ ಜಪಿಸೊ ಏ ಮನುಜಾ
ರಾಮ ಮಂತ್ರವ ಜಪಿಸೊ ಪ

ಆ ಮಂತ್ರ ಈ ಮಂತ್ರ ನೆಚ್ಚಿ ನೀ ಕೆಡಬೇಡ
ಸೋಮಶೇಖರ ತನ್ನ ಸತಿಗೆ ಪೇಳಿದ ಮಂತ್ರ ಅ

ಕುಲಹೀನನಾದರು ಕೂಗಿ ಜಪಿಸುವ ಮಂತ್ರ
ಜಲಜಪಾಣಿ ನಿತ್ಯ ಜಪಿಪ ಮಂತ್ರ
ಕಲುಷಪರ್ವತಕಿದು ಕುಲಿಶವಾಗಿಹ ಮಂತ್ರ
ಸುಲಭದಿಂದಲಿ ಮೋಕ್ಷ ಸೂರೆಗೊಂಬುವ ಮಂತ್ರ ೧

ಸ್ನಾನ ಮೌನಂಗಳಿಗೆ ಸಾಧನದ ಮಂತ್ರ
ಜ್ಞಾನಿಗಳು ಮನದಿ ಧ್ಯಾನಿಪ ಮಂತ್ರ
ಹೀನಗುಣಂಗಳ ಹಿಂಗಿಸುವ ಮಂತ್ರ
ಏನೆಂಬೆ ವಿಭೀಷಣಗೆ ಪಟ್ಟಗಟ್ಟಿದ ಮಂತ್ರ ೨

ಸಕಲ ವೇದಂಗಳಿಗೆ ಸಾರವೆನಿಪ ಮಂತ್ರ
ಮುಕುತಿ ಮಾರ್ಗಕೆ ಇದೇ ಮೂಲಮಂತ್ರ
ಭಕುತಿರಸಕೆ ಬಟ್ಟೆ ಒಮ್ಮೆ ತೋರುವ ಮಂತ್ರ
ಸುಖನಿಧಿ ಪುರಂದರವಿಠಲನ ಮಹಾ ಮಂತ್ರ ೩

ಸೋಮಶೇಖರ—ಶಿವನು ಪಾರ್ವತಿಗೆ ಹೇಳಿದ ಮಂತ್ರ. ವಿವರಣೆ ಮೊದಲೇ ಬಂದಿದೆ.
ಜಲಜಪಾಣಿ—ತಾವರೆಯನ್ನು ಕೈಯಲ್ಲಿ ಹಿಡಿದ ಲಕ್ಷ್ಮಿ.
ಕಲುಷಪರ್ವತ...—ಪಾಪವೆಂಬ ಬೆಟ್ಟವನ್ನು ಸೀಳುವ ವಜ್ರಾಯುಧ (ಕುಲಿಶ).
ಬಟ್ಟೆ—ದಾರಿ (ಬಾಟೆ, ವಾಟ, ಪಂಥ, ವರ್ತ್ಮ).

೧೫೭

ಧನಾಸರಿ ಆದಿ

ನಾಮಕೀರ್ತನೆ ಅನುದಿನ ಮಾಳ್ಪಗೆ ನರಕ ಭಯಗಳುಂಟೆ ಪ

ನಾಮವೊಂದೆ ಯಮನಾಳ್ಗಳನೊದೆದು,
ಅಜಾಮಿಳನಿಗೆ ಸುಕ್ಷೇಮವಿತ್ತ ಹರಿ ಅ

ಕೇಸರಿಗಂಜದ ಮೃಗವುಂಟೆ ದಿ
ನೇಶನಿಗಂಜದ ತಮವುಂಟೆ
ವಾಸುದೇವ ವೈಕುಂಠ ಜಗನ್ಮಯ
ಕೇಶವ ಕೃಷ್ಣಾ ಎಂದುಚ್ಚರಿಸುತ ೧

ಕುಲಿಶಕ್ಕೆದುರಿಹ ಗಿರಿಯುಂಟೆ, ಬಲು
ಪ್ರಳಯ ಬಂದಾಗ ಜೀವಿಪರುಂಟೆ
ಜಲಜನಾಭ ಗೋವಿಂದ ಜನಾರ್ದನ
ಕಲುಷಹರಣ ಕರಿರಾಜ ವರದನೆಂದು ೨

ಗರುಡನಿಗಂಜದ ಫಣಿಯುಂಟೆ ದ
ಳ್ಳುರಿಯಲಿ ಬೇಯದ ತೃಣವುಂಟೆ
ನರಹರಿ ನಾರಾಯಣ ದಾಮೋದರ
ಪುರಂದರವಿಠಲ ಎಂದುಚ್ಚರಿಸುತ ೩

ಕೇಸರಿ—ಸಿಂಹ.

ದಿನೇಶ—ಸೂರ್ಯ.

ಕುಲಿಶ—ವಜ್ರಾಯುಧ.

ಬಲುಪ್ರಳಯ—ಮಹಾಪ್ರಳಯ.

ಫಣಿ—ಹಾವು (ಹೆಡೆಯುಳ್ಳದ್ದು).

ದಳ್ಳುರಿ—ಕಾಡುಕಿಚ್ಚು.

ವಿಧಿಚಿಂತನ

ಮುಂದಿನ ವಿಭಾಗದಲ್ಲಿ ಸೇರಿರುವ ಪದಗಳು ಸಾವು, ಕರ್ಮ, ವಿಧಿ, ಅಳಲು ಇವುಗಳ ಅನಿವಾರ್ಯತೆಯನ್ನು ಎತ್ತಿ ಹೇಳುವಂಥವು. ಈ ಸಮಸ್ಯೆಗಳು ಕೇವಲ ಆಧ್ಯಾತ್ಮಿಕವಲ್ಲ ; ಅವುಗಳಿಗೆ ಸಾಮಾಜಿಕ ಪ್ರಜ್ಞೆಯ ಸಂಬಂಧವೂ ಇದೆ. ಇವುಗಳ ಅನಿವಾರ್ಯತೆಯನ್ನು ಮನಗಾಣದೆ ವಿರಕ್ತಿ ಸಾಧ್ಯವಿರದು, ಭಗವದ್ಭಕ್ತಿ ಬೇರೂರದು ; ಮತ್ತು ದಂಭ, ಅಹಂಕಾರ, ಅಸೂಯೆ, ದುರಾಶೆ ಮೊದಲಾದ ದುರ್ಗುಣಗಳೂ ಹರಿಯವು. "ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ" ಎಂಬ ಅರಿವು ಮೂಡಿದ ಮನುಷ್ಯ ತನ್ನ ಕಷ್ಟಗಳಿಗೆ ಬೇರೆ ಯಾರನ್ನು ತಾನೆ ದೂರಿಯಾನು? ಬೇರೆಯವರ ಸುಖಕ್ಕೆ ಕರುಬಿಯಾನು ? "ಯಾರೂ ಸಂಗಡ ಬಾಹೋರಿಲ್ಲ" ಎಂಬ ತತ್ವವನ್ನು ಮನಗಂಡವನು ದುರಾಶೆಯನ್ನು ಮಾಡುವುದು ಸಾಧ್ಯವೆ? ಲಾಭಕ್ಕೆ ಲೋಭಪಡುವುದು ಸಾಧ್ಯವೇ ? ದಾಸರ ದೃಷ್ಟಿಯಲ್ಲಿ ಮರಣಾನಂತರದ ಮುಕ್ತಿಯಷ್ಟೇ ಮುಖ್ಯವಾದುದು ಇಲ್ಲಿನ ಸುಖಜೀವನ. ಇದಕ್ಕೆ ನೆರವಾಗುವುದು ನೀತಿಯ ನೆಲೆ. ನೀತಿಯಿಂದ ನೆಮ್ಮದಿಯಲ್ಲದೆ ಸಂಪತ್ತು, ಅಧಿಕಾರ, ದೇಹಬಲ, ಪರಿವಾರ ಇವುಗಳಿಂದಲ್ಲ. ನೀತಿಯ ಮುಖ್ಯ ವಿವರಗಳೆಂದರೆ ತನ್ನ ಪಾಲಿಗೆ ಬಂದುದನ್ನು ಅನುಭವಿಸುವುದು, ಕರ್ಮದ ಗುಟ್ಟನ್ನು ತಿಳಿದುಕೊಳ್ಳುವುದು, ಸಾವು ತಪ್ಪಿದ್ದಲ್ಲವೆಂದು ಮನದಟ್ಟುಮಾಡಿಕೊಳ್ಳುವುದು, ತನ್ನ ಬಾಳುವೆಯಲ್ಲಿ ಸಾಧ್ಯವಾದಷ್ಟು ಸಾರ್ಥಕತೆಯನ್ನು ಮೂಡಿಸಿಕೊಳ್ಳುವುದು. ದಾಸರು ಈ ವಿವರಗಳನ್ನು ಸ್ವಾರಸ್ಯವಾಗಿ ಕಾಣಿಸಿದ್ದಾರೆ. ಇಲ್ಲಿ ಲೋಕನೀತಿಯೂ ಸೇರಿಬರುತ್ತದೆ.

೧೫೮

ಮೋಹನ | ಅಟ್ಟ

ಯಾರೂ ಸಂಗಡ ಬಾಹೋರಿಲ್ಲ ಪ

ನಾರಾಯಣ ನಿಮ್ಮ ನಾಮ ಒಂದಲ್ಲದೆ ಅ

ಹೊತ್ತು ನವಮಾಸ ಪರಿಯಂತರವು ಗರ್ಭದಲಿ
ಹೆತ್ತು ಬಲು ನೋವು ಬೇನೆಗಳಿಂದಲಿ
ತುತ್ತು ಬುತ್ತಿಯ ಕೊಟ್ಟು ಸಲಹಿದಂಥ ತಾಯಿ
ಅತ್ತು ಕಳುಹುವಳಲ್ಲದೆ ನೆರೆ ಬಾಹಳೆ ೧

ದೇವವಿಪ್ರರು ಅಗ್ನಿ ಸಾಕ್ಷಿಯಿಂದಲಿ ತನ್ನ
ಭಾವಶುದ್ಧಿಯಲಿ ಧಾರೆಯೆರೆಸಿಕೊಂಡ
ದೇವಿ ತನ್ನ ತಲೆಗೆ ಕೈಯಿಟ್ಟುಕೊಂಡು ಇ
ನ್ನಾವ ಗತಿಯಿಂದೆನುತ ಗೋಳಿಡುವಳಲ್ಲದೆ ೨

ಮತ್ತೆ ಪ್ರಾಣನು ತನುವ ಬಿಟ್ಟು ಹೋಗುವಾಗ
ಎತ್ತಿವನ ಹೊರಗೊಯ್ದು ಹಾಕೆಂಬರು
ಎತ್ತಿದ ಕಸಕ್ಕಿಂತ ಕಡೆಯಾಯಿತೀ ದೇಹ
ವಿತ್ತವೆಷ್ಟಿದ್ದರೂ ಫಲವಿಲ್ಲ ಹರಿಯೆ ೩

ಪುತ್ರ ಮಿತ್ರರು ಸಕಲ ಬಂಧು ಬಳಗಗಳೆಲ್ಲ
ಹತ್ತಿರ ನಿಂತು ನೋಡುವರಲ್ಲದೆ
ಮೃತ್ಯುದೇವಿಯು ಬಂದು ಅಸುಗಳನು ಸೆಳೆವಾಗ
ಮತ್ತೆ ತನ್ನವರಿದ್ದು ಏನು ಮಾಡುವರು ೪

ಯಮನ ದೂತರು ಬಂದು ಪಾಶಂಗಳನೆ ಎಸೆದು
ಮಮತೆಯಿಲ್ಲದೆ ಪ್ರಾಣ ಎಳೆಯುತಿರಲು
ವಿಮುಖನಾಗಿ ತಾನು ವ್ಯಥೆಯಿಂದ ಪೋಪಾಗ
ಕಮಲಾಕ್ಷ ಪುರಂದರವಿಠಲ ನೀನಲ್ಲದೆ ೫

ಯಾರೂ ಸಂಗಡ ಬಾಹೋರಿಲ್ಲ—ಸಾಯುವಾಗ, ಪ್ರಾಣವು ಹೊರಗೆ ಹೋಗುವಾಗ ಜೊತೆಗೆ ಬರುವವರು ಯಾರೂ ಇರರು. ಜೀವ ಒಂಟಿಯಾಗಿಯೇ ಸಾಗಬೇಕೆಂಬುದನ್ನು ಧ್ವನಿಸುವ ಮಾತು.

ನವಮಾಸ ಪರಿಯಂತರ—ಒಂಬತ್ತು ತಿಂಗಳವರೆಗೆ.

ಬಾಹಳೆ—ಬರುವಳೆ.

ಶಂಕರಾಭರಣ ಝಂಪೆ

ನೆಚ್ಚಬೇಡ ಪ್ರಾಣಿ ಸಂಸಾರ ಸ್ಥಿರವೆಂದು
ಹುಚ್ಚು ಬುದ್ಧಿಲಿ ನೀನು ಕೆಡಬೇಡ ಕಂಡ್ಯ
ಸ್ವೇಚ್ಛೆಯಿಂದಿರದೆ ಧರ್ಮದಿ ನೀನು ನಡೆ ಕಣ್ಣ
ಮುಚ್ಚಿದ ಮೇಲುಂಟೆ ನರಜನ್ಮ ಸ್ಥಿರವೆಂದು ಪ

ನೆಂಟರಿಷ್ಟರು ಬಂಧು ಬಳಗವು ಹರಿಕೊಟ್ಟು
ದುಂಟಾದರೆ ಬಾಚುವರು
ಕಂಟಕ ಬಂದಾಗ ಒಪ್ಪೊತ್ತಿರಿಸರು ಕಡೆಗೆ
ಕಂಟಿಯು ತರಿದೊಟ್ಟಿ ಸುಡುವರು ನಿನ್ನ ೧

ಅತಿಪ್ರೀತಿಯಿಂದಲಿ ಮದುವ್ಯಾದ ಮೋಹದ
ಸತಿ ನಿನ್ನ ಮರಣಕಾಲದಲ್ಲಿ
ಗತಿ ಯಾರು ತನಗೆಂದು ಗೋಳಿಡುವಳಲ್ಲದೆ
ಜೊತೆಯಾಗಿ ನಿನ್ನ ಸಂಗಡ ಬಾಹೋಳಲ್ಲ ೨

ಒಂದೊಂದು ಪರಿಯು ಪ್ರೇಮವ ಮಾಡಿ ಸಲಹಿದ
ಕಂದ ನಿನ್ನವಸಾನಕಾಲದಲ್ಲಿ
ಮುಂದೆ ಸಂಸಾರ ನಡೆವ ಉಪಾಯವು ಆವು
ದೆಂದು ಚಿಂತಿಸುವರೆ ಸಂಗಡ ಬಾಹೋನಲ್ಲ ೩

ಅಷ್ಟಕಂಭವನಿಕ್ಕಿ ಚೌಕದುಪ್ಪರಿಗೆಯ
ಕಟ್ಟಿದ ಮನೆಯು ಇದ್ದಲ್ಲೇ ಇಹುದು
ಹೊಟ್ಟೆ ತುಂಬ ಉಣದೆ ಅರ್ಥವ ಗಳಿಸಿದ್ದು
ಒಟ್ಟಿಟ್ಟಲ್ಲಿರದೆ ಸಂಗಡ ಬಾಹೋದಲ್ಲ ೪

ಇಂತು ಒಂದೊಂದರಿಂದಲೂ ಪ್ರಯೋಜನವಿಲ್ಲ
ಅಂತ್ಯಕಾಲಕೆ ಒಂದೂ ಬಾಹೋದಲ್ಲ
ಕಂತುಜನಕ ಸಿರಿಪುರಂದರವಿಠಲನ
ಸಂತತ ಚಿಂತೆಯೊಳಿರು ಕಂಡ್ಯ ಮನುಜ ೫

ಕಂಟಿ—ಕಟ್ಟಿಗೆ ; ಪುರುಳೆ ; ಕಡ್ಡಿ.
ಚಿಂತಿಸುವರೆ—ಚಿಂತಿಸುವನಲ್ಲದೆ.
ಸಂಗಡ ಬಾಹೋನಲ್ಲ—ಜೊತೆಗೆ ಬರುವವನಲ್ಲ.

ಮುಖಾರಿ ಝಂಪೆ

ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ
ಚಿಂತೆಯನು ಬಿಟ್ಟು ಶ್ರೀಹರಿಯ ನೆನೆ ಮನವೆ ಪ

ದಿವ ರಾತ್ರಿಯೆನ್ನದೆ ವಿಷಯಲಂಪಟನಾಗಿ
ಸವಿಯೂಟಗಳನುಂಡು ಭ್ರಮಿಸಬೇಡ
ಅವನ ಕೊಂದಿವನ ಕೊಂದರ್ಥವನು ಗಳಿಸುವೊಡೆ
ಜವನದೂತರು ಬರುವ ಹೊತ್ತು ನೀನರಿಯೆ ೧

ಮೊನ್ನೆ ಮದುವೆಯನಾದೆ ಕರೆವುದೊಂದೆರಡೆಮ್ಮೆ
ನೆನ್ನೆ ಕೊಂಡೆನು ಕ್ಷೇತ್ರ ಫಲವು ಬಹುದು
ಹೊನ್ನು ಹಣವುಂಟೆನಗೆ ಸಾಯಲಾರೆನು ಎನಲು
ಬೆನ್ನುಬಿಡುವಳೆ ಮೃತ್ಯು ವ್ಯರ್ಥ ಜೀವಾತ್ಮಾ ೨

ಹೊಸ ಮನೆಯ ಕಟ್ಟಿದೆನು ಗೃಹಶಾಂತಿ ಮನೆಯೊಳಗೆ
ಬಸುರಿ ಹೆಂಡತಿ ಮಗನ ಮದುವೆ ನಾಳೆ
ಹಸನಾಗಿ ಇದೆ ಬದುಕು ಸಾಯಲಾರೆನು ಎನಲು
ಕುಸುರಿದರಿಯದೆ ಬಿಡರು ಯಮನವರು ಆಗ ೩

ಪುತ್ರ ಹುಟ್ಟಿದ ದಿವಸ ಹಾಲು ಊಟದ ಹಬ್ಬ
ಮತ್ತೊಬ್ಬ ಮಗನ ಉಪನಯನ ನಾಳೆ
ಅರ್ತಿಯಾಗಿದೆ ಬದುಕು ಸಾಯಲಾರೆನು ಎನಲು
ಮೃತ್ಯು ಹೆಡತಲೆಯಲ್ಲಿ ನಗುತಿರ್ಪುದರಿಯೆ ೪

ಅಟ್ಟಡಿಗೆಯನುಣಲಿಲ್ಲ ಇಷ್ಟ ದರುಶನವಿಲ್ಲ
ಕೊಟ್ಟ ಸಾಲವ ಕೇಳ್ವ ಹೊತ್ತನರಿಯೆ
ಕಟ್ಟಲೆ ತುಂಬಿದಮೇಲೆ ಕ್ಷಣಮಾತ್ರ ಇರಲಿಲ್ಲ
ಅಷ್ಟರೊಳು ಪುರಂದರವಿಠಲನೆನು ಮನವೆ ೫

[ಯಮನ ಅಟ್ಟಹಾಸವನ್ನು ಹೇಳುವ ನಿಟ್ಟಿನಲ್ಲೇ ದೈವಸ್ಮರಣೆಯ ನೆನಪನ್ನು ಎಳೆದು ತರುವುದು ಕವಿಯ ಉದ್ದೇಶ.]

ಅಂತಕ—ಯಮ.

ದಿವ—ದಿವಾ, ಹಗಲು.

ಕೊಂದು—ಹಿಂಸಿಸಿ.

ಕುಸುರಿದರಿ—ಕುಸುರಿ + ತರಿ. ಸಣ್ಣ ಸಣ್ಣದಾಗಿ ಕತ್ತರಿಸಿಹಾಕು, ಕೊಚ್ಚು.

ಅರ್ತಿಯಾಗಿದೆ ಬದುಕು—ಜೀವನವು ಸೊಗಸಾಗಿದೆ (ಅಳ್ತಿ = ಪ್ರೀತಿ, ಹಿತ).

ಹೆಡತಲೆ—ಪೆಡದಲೆ, ತಲೆಯ ಹಿಂಭಾಗ.

ಕಟ್ಟಲೆ—ವಾಯಿದೆ, ಆಯುಸ್ಸಿನ ಮಿತಿ.

ಪಂತುವರಾಳಿ ಆದಿ

ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೊ
ಪೆರ್ಮೆಯಿಂದ ದೇಹವ ನಂಬಬೇಡಿ ಕಾಣಿರೊ ಪ

ಅಟ್ಟ ಅಡುಗೆ ಉಣಲು ಬಿಡನು
ಕೊಟ್ಟ ಸಾಲ ಕೇಳಬಿಡನು
ಪೆಟ್ಟಿಗೆಯೊಳಿದ್ದ ಚಿನ್ನವ
ತೊಟ್ಟೆನೆಂದರೆ ಯಮನು ಬಿಡನು ೧

ಅಕ್ಕನಿಲ್ಲಿ ಕರೆಯಲಿಲ್ಲ
ಮಕ್ಕಳನ್ನು ಪಡೆಯಲಿಲ್ಲ
ದುಃಖಗೊಂಡ ಕಣ್ಣೀರನು
ಉಕ್ಕಿಸಿದರೆ ಬಿಡನು ಯಮನು ೨

ಪೇಳ್ವೆ ನೆಂಟರಿಂಗೆ ಕರೆದು
ಬೇಳೆ ಬೆಲ್ಲವನ್ನು ತಂದು
ನಾಳೆ ಮಗನ ಮದುವೆಯೆಂದು
ತಾಳು ಎಂದರೆ ಯಮನು ಬಿಡನು ೩

ಮಾಳಿಗೆ ಮನೆಯಿರಲಿ
ಜಾಳಿಗೆ ತುಂಬ ಹೊನ್ನಿರಲಿ
ಆಳು ಮಂದಿ ಶಾನೆಯಿರಲಿ
ಕಾಲನು ತಾ ಬೆನ್ನ ಬಿಡನು ೪

ಆರ್ತಿಯಿಂದ ಸಂಸಾರವ
ವ್ಯರ್ಥವಾಗಿ ನೆಚ್ಚಬೇಡಿ
ಕರ್ತೃ ಪುರಂದರವಿಠಲನ್ನ
ಭಕ್ತಿಯಿಂದ ಭಜಿಸಿರೋ ೫

[ಸಾವಿನ ಅನಿವಾರ್ಯತೆಯ ಬೆಳಕಿನಲ್ಲಿ ಧರ್ಮದ ಉಜ್ವಲ ಪಾತ್ರವನ್ನು ಇಲ್ಲಿ ಚಿತ್ರಿಸಲಾಗಿದೆ].

ಪೆರ್ಮೆ—ಹೆಮ್ಮೆ.
ಜಾಳಿಗೆ—ಕೈಚೀಲ.
ಆರ್ತಿ—ಪ್ರೀತಿ.

ಪೂರ್ವಿ ಅಟ್ಟ

ಬಂದಾನು ಯಮನು ದುಷ್ಟರ
ಕೊಂದಾನು ಯಮನು ಪ

ಕೆರೆ ಬಾವಿ ಕಟ್ಟುವರಿಲ್ಲಿ ದೊಡ್ಡ
ದೊರೆತನವಾಳುವರಲ್ಲಿ
ಕರೆದನ್ನ ಇಕ್ಕುವರಿಲ್ಲಿ
ಸಿರಿ ಸಂಪನ್ನರಾಗಿಹರಲ್ಲಿ ೧

ಗಂಡನ ಬೈಯುವರಿಲ್ಲಿ ಯಮ
ದಂಡ ಹೊರಿಸುವರಲ್ಲಿ
ಉಂಡ ಮನೆ ಕೊಂಬರಿಲ್ಲಿ ಯಮ
ಕೊಂಡಕ್ಕೆ ನೂಕುವರಲ್ಲಿ ೨

ಪರಸತಿ ಕೂಡುವರಿಲ್ಲಿ ಉರಿ
ಕಂಬ ತಕ್ಕೈಸುವರಲ್ಲಿ
ಪರಿಭೇದ ಪಂಕ್ತಿಗಳಿಲ್ಲಿ
ಪರಿಪರಿಯ ಭಾಗಗಳಲ್ಲಿ ೩

ತಾಯ್ತಂದೆ ಸೇವೆಗಳಿಲ್ಲಿ
ಸುರರೆಲ್ಲ ಮೆಚ್ಚುವರಲ್ಲಿ
ಗುರುಗಳ ಉಪದೇಶವಿಲ್ಲಿ
ಗುರು ಮರುತರು ತೋಷಿಪರಲ್ಲಿ ೪

ದಾನಧರ್ಮಂಗಳಿಲ್ಲಿ ಸು
ಖಾನುಭೋಗ ಮೋಕ್ಷವಲ್ಲಿ
ಧ್ಯಾನವ ಮಾಡುವುದಿಲ್ಲಿ ಪುರಂ
ದರವಿಠಲನ ಕಾಣುವುದಲ್ಲಿ ೫

[ಪುಣ್ಯಪಾಪಗಳ ವಿಪಾಕವನ್ನು ಸೂಚಿಸುವ ಪದ. 'ಇಲ್ಲಿ' ಎಂದರೆ ಭೂಲೋಕದಲ್ಲಿ 'ಅಲ್ಲಿ' ಎಂದರೆ ಪರಲೋಕದಲ್ಲಿ. ಭೂಲೋಕದಲ್ಲಿ ಮಾಡಿದ ಕರ್ಮಕ್ಕೆ ಪರಲೋಕದಲ್ಲಿ ಫಲ. ಭೂಲೋಕ ಕರ್ಮಭೂಮಿ, ಪರಲೋಕ ಭೋಗಭೂಮಿ.]

೧೬೩

ಪಂತುವರಾಳಿ

ಸುಮ್ಮನೆ ಕಾಲವ ಕಳೆವರೆ
ಯಮಧರ್ಮರಾಯನ ದೂತರೆಳೆಯರೆ ಪ

ನರಿನಾಯಿ ಜನ್ಮದಿ ಬಾರದೆ ಈ
ನರ ಜನ್ಮದಲಿ ಬಂದು ಸೇರಿದೆ
ಹರಿಯ ಸ್ಮರಣೆಯನು ಮಾಡದೆ ಸುಮ್ಮ
ನಿರಲು ಪಾಪದ ವಿಷವೇರದೆ ೧

ಬಾಲನಾಗಿದ್ದಾಗ ಬಹು ಲೀಲೆ ಸ್ತ್ರೀ
ಲೋಲನಾಗಿ ಬಾಳಿದ ಮೇಲೆ
ಮೂಳ ವೃದ್ಧಾಪ್ಯ ಬಂತಾಗಲೆ ಮುಂದೆ
ಬಾಳುವುದೆಲ್ಲ ನೂಲಾಮಾಲೆ ೨

ಮಡದಿ ಮಕ್ಕಳ ಕೂಡಣ ಬಾಳು ಬರಿದೆ
ಒಡಲಿಗಾಗಿ ಚಿಂತನೆ ಕೇಳು
ಬಿಡದೆ ಸಂಕೀರ್ತನೆ ಮಾಡೇಳು ನೀ
ನುಡಿದ ನುಡಿಗಳೆಲ್ಲವು ಬೀಳು ೩

ಮನೆಮನೆವಾರ್ತೆಯು ಥರವಲ್ಲ ಈ
ಮನುಜರ ಪಾಡೇನು ಘನವಲ್ಲ
ವನಜಸಂಭವಗೇ ನಿಶ್ಚಯವಿಲ್ಲ ಮುಂದೆ
ಹನುಮಂತ ಪಟ್ಟಕ್ಕೆ ಬಹನಲ್ಲ ೪

ಇಂದಿನ ಹಮ್ಮು ನಾಳೆಗೆ ಇಲ್ಲ ಭವ
ಬಂಧನದೊಳು ನೀನಿರೆ ಸಲ್ಲ
ಮುಂದಿನ ಪರಿಯರಿತವನಲ್ಲ ಮೃತ್ಯು
ಬಂದಾಗ ಬಿಡಿಸಿಕೊಂಬುವರಿಲ್ಲ ೫

ಕರುಣಂಗಳಾವಾಗ ಜರಿವುದೊ ತನ್ನ
ಗರುವ ತನಗಾವಾಗ ಮುರಿವುದೊ
ಹರಣ ತನ್ನಾವಾಗ ಮರೆವುದೊ ಇನ್ನು
ಮರಣ ಕೊನೆಗಾವಾಗ ಬರುವುದೊ ೬

ಮರಣಕುಲದಲಜಮಿಳನಾಗ ತನ್ನ
ತರಳನ ನಾರಗನೆಂದು ಕರೆದಾಗ
ಕರುಣದಿ ವೈಕುಂಠಪದವಾಗ ಇತ್ತ
ಪುರಂದರವಿಠಲನ ನೆನೆ ಬೇಗ ೭

ನೂಲಾಮಾಲೆ—ಜೇಡನ ಬಲೆಯಂತೆ ಟೊಳ್ಳು.

ಕೂಡಣ—ಸೇರಿರುವ.

ಒಡಲಿಗಾಗಿ—ಹೊಟ್ಟೆ ಹೊರೆದುಕೊಳ್ಳುವುದಕ್ಕಾಗಿ.

ಬೀಳು—ಬರಡು, ಹಾಳು.

ವನಜಸಂಭವಗೇ ನಿಶ್ಚಯವಿಲ್ಲ...—ಈ ಕಲ್ಪದಲ್ಲಿ ಬ್ರಹ್ಮಾಂಡದ ಸೃಷ್ಟಿಯೆಲ್ಲವನ್ನೂ ಮಾಡುವವನು ಬ್ರಹ್ಮ; ಎಲ್ಲರಿಗಿಂತ ಹಿರಿಯ ಅವನೇ. ಆದರೆ ಅವನೇನು ಸ್ಥಿರವಾಗಿ ಇದೇ ಪಟ್ಟದಲ್ಲಿರುವವನಲ್ಲ. ಮುಂದಿನ ಕಲ್ಪದಲ್ಲಿ ಈಗಿನ ಬ್ರಹ್ಮನಿಗೆ ಮುಕ್ತಿ ದೊರೆತು, ಹನುಮಂತನು ಬ್ರಹ್ಮಪಟ್ಟಕ್ಕೆ ಬರುವನೆಂದು ನಂಬಿಕೆ.

ಹಮ್ಮು—ಹೆಮ್ಮೆ, ಗರ್ವ, ಅಹಂಕಾರ; ಪಬ್ಬು.

ಕರಣಂಗಳು—ಇಂದ್ರಿಯಂಗಳು.

ಹರಣ—ಪ್ರಾಣ.

ನಾರಗ—ನಾರಾಯಣ.

೧೬೪

ಯಮನಾಕಲ್ಯಾಣಿ — ಆದಿ

ಮಾನಿಸರೊಳು ಮಾನಿಸಾ
ಮಾನಸವಿಠಲ ಪ

ಭೀಮರಥಿಯಲೊಬ್ಬ ದಾಸ ಮುಳುಗಿ ಪೋಗೆ
ಪೂಮಾಲೆ ಅಂಬರ ತೋಯದೆ ತೆಗೆದು ತಂದ ೧

ಮಾನಸಕನ್ಯಾ ಮದುವೆಗೆ ಒಬ್ಬಳು
ಆ ನಾಲಿಗೆ ಸುಳ್ಳು ಪಾಲಿಗೆ ನಡೆಸಿದ ೨

ಆ ಹೆಣ್ಣು ನೆರೆತಿಂದ ನೋಡಬಂದೆಣ್ಣನ
ತಾ ಹೊದ್ದ ಕಂಬಳಿಯೊಳು ಕಟ್ಟಿ ಹೊರಗಿಟ್ಟ ೩

ತಾಂಬೂಲವಿತ್ತನೊಬ್ಬ ಗಂಡನುಳ್ಳವಳಿಗೆ
ಪೊಂಬಟ್ಟೆಯ ಮುಂಜೆರಗ ಕೊಯಿಸಿಕೊಂಡ ೪

ಕಟ್ಟಾಭೀಮನಿಗೊಬ್ಬ ಕಿಟ್ಟ ಕಠಾರಿಯಂತೆ
ಅಟ್ಟೆಯುರಿಯುತ ಬಂದು ಓಡಿ ಗುಡಿಯ ಪೊಕ್ಕ ೫

ಮೈಲಾರ ಬೊಕ್ಕಗೆ ಹಿಂದುಮುಂದಾಗಿದ್ದ
ಕೈಯ ಕಂಕಣವಿತ್ತು ಸೂಳೆ ಕಾಯಿದು ಬಂದು ೬

ಅಂದುಂಟು ಇಂದಿಲ್ಲ ಎಂದೆನ್ನಬೇಡಿರಿ
ಎಂದಿಗಾದರು ಉಂಟು ಪುರಂದರವಿಠಲ ೭

ಜಂಜೂಟಿ ರೂಪಕ

ರಾಮ ರಾಮ ರಾಮ ಸೀತಾ ರಾಮ ಎನ್ನಿರೋ ಪ

ಅಮರಪತಿಯ ದಿವ್ಯನಾಮ ಅಂದು ಒದಗದೋ ಅ

ಭರದಿ ಯಮನ ಭಟರು ಬಂದು
ಹೊರಡಿರೆಂದು ಮೆಟ್ಟಿ ಮುರಿಯೆ
ಕೊರಳಿಗಾತ್ಮ ಸೇರಿದಾಗ
ಹರಿಯ ನಾಮ ಒದಗದೊ ೧

ಇಂದ್ರಿಯಂಗಳೆಲ್ಲ ಕೂಡಿ
ಬಂದು ತನುವ ಮುಸುಕುವಾಗ
ಸಿಂಧುಸುತೆಯ ಪತಿಯ ನಾಮ
ಅಂದಿಗೊದಗಿ ಬಾರದೊ ೨

ಶ್ವಾಸಖಾಸವೆರಡು ಕಂಠ
ದೇಶದಲ್ಲಿ ಸೇರಿದಾಗ
ವಾಸುದೇವನೆಂಬ ನಾಮ
ಆ ಸಮಯಕ್ಕೊದಗದೋ ೩

ಶೃಂಗಾರದ ದೇಹವೆಲ್ಲ
ಅಂಗ ಮುರಿದು ಬೀಳುವಾಗ
ಕಂಗಳಿಗಾತ್ಮ ಸೇರಿದಾಗ
ರಂಗನ ಧ್ಯಾನ ಒದಗದೋ ೪

ವಾತಪಿತ್ತವೆರಡು ಕೂಡಿ
ಈ ತನುವನಾವರಿಸಿ
ಧಾತು ಕುಂದಿದಾಗ ರಘು
ನಾಥನ ಧ್ಯಾನ ಒದಗದೋ ೫

ಕಲ್ಲು ಮರನಾಗಿ ಜ್ಞಾನ
ವಿಲ್ಲದಾಗ ಮರಣ ಒದಗೆ
ಫುಲ್ಲನಾಭ ಕೃಷ್ಣನೆಂಬ
ಸೊಲ್ಲು ಬಾಯಿಗೊದಗದೋ ೬

ಕೆಟ್ಟ ಜನ್ಮದಲ್ಲಿ ಹುಟ್ಟಿ
ದುಷ್ಟ ಕರ್ಮಮಾಡಿ ದೇಹ
ಬಿಟ್ಟು ಹೋಗುವಾಗ ಪುರಂದರ
ವಿಠಲನ ಧ್ಯಾನ ಒದಗದೋ ೭

ಕೊರಳಿಗಾತ್ಮ ಸೇರಿದಾಗ—'ಕಂಠಗತಪ್ರಾಣ'ವೆಂಬ ಸಂಸ್ಕೃತಮಾತಿನ ಛಾಯೆ.

ಸಿಂಧುಸುತೆ—ಲಕ್ಷ್ಮಿ.

ಶ್ವಾಸಖಾಸ—ವಾತಕಫಗಳೆಂಬ ಎರಡು ದೋಷಗಳು ಕುತ್ತಿಗೆಯಲ್ಲಿ ಕವಿಯಲು ಅದು ಪ್ರಾಣೋತ್ಕ್ರಮಣಸ್ಥಿತಿಯೆಂದು ಎಣಿಕೆ. ('ಕಫವಾತಪಿತ್ತೈಃ ಕಂಠಾವರೋಧನವಿಧೌ ಸ್ಮರಣಂ ಕುತಸ್ತೆ ?' ಎಂದು ಕುಲಶೇಖರರ ಮುಕುಂದ ಮಾಲಾಸ್ತೋತ್ರದಲ್ಲಿ ಬರುವುದು.)

ಕಾಂಬೋದಿ ಝಂಪೆ

ಈಗ ಮಾಡೆಲೊ ರಾಮಧ್ಯಾನವ ನೀ
ಮೂಗನಾಗಿರಬೇಡ ಎಲೆ ಮಾನವ ಪ

ಕಾಲನ ದೂತರು ಕರೆವಾಗ ನೀ
ಕಾಲಗೆಟ್ಟು ಕಣ್ಣು ಬಿಡುವಾಗ
ನಾಲಿಗೆ ಸೆಳಕೊಂಡು ಜ್ಞಾನಗೆಟ್ಟಿರುವಾಗ
ನೀಲವರ್ಣನ ಧ್ಯಾನ ಬರುವುದೇನಯ್ಯ ೧

ಸತಿ ಸುತರೆಂಬ ಸಂದಣಿಯೊಳು ನೀ
ಮತಿಭ್ರಷ್ಟನಾಗಿ ಮನದೊಳು
ಸತತ ಶ್ರೀ ಲಕ್ಷ್ಮೀಪತಿಯ ನೆನೆದರೆ ಸ
ದ್ಗತಿ ಸನ್ಮಾರ್ಗ ಪಾರಂಪದವೀವನಯ್ಯ ೨

ಯಮದೂತರು ಬಂದು ಎಳೆದಾಗ ನೀ
ನವೆಯುತ್ತ ಹೊತ್ತು ಕಳೆವಾಗ
ಸಮದರ್ಶಿ ಪುರಂದರವಿಠಲನ ನಾಮವಾ
ಸಮಯಕ್ಕೆ ಒದಗಿ ತಾ ಬರುವುದೇನಯ್ಯ ೩

ಪಾರಂಪದ—ಪರಮಪದ, ಮುಕ್ತಿ.
ನವೆಯುತ್ತ—ನೋವನ್ನು ಅನುಭವಿಸುತ್ತ, ಬಾಧೆಪಡುತ್ತ.
ಸಮದರ್ಶಿ—ವೈಷಮ್ಯ ನೈರ್ಘೃಣ್ಯಗಳಿಲ್ಲದೆ ಸಾಕ್ಷಿಕನಾಗಿರುವ.

ಸಾವೇರಿ ಚಾಪು

ಆಗಲೇ ಕಾಯಬೇಕು, ಅಂಬುಜಾಕ್ಷನೆ ಎನ್ನ
ಈಗ ನೀ ಕಾಯ್ದರೇನು ಕಾಯದಿದ್ದರೆ ಏನು ಪ

ಅನುಜ ತನುಜರುಂಟು ಬಹು ಹಣವೊಳಗುಂಟು
ಚಿನ್ನ ಚೀನಾಂಬರವುಂಟು ಉಪ್ಪರಿಗೆಯುಂಟು
ಮೊನ್ನೆ ಹುಟ್ಟಿದ ಗಂಡು ಮಗನೊಬ್ಬನೆನಗುಂಟು
ಸನ್ನೆ ಸಂಜ್ಞೆ ಕುಂದಿದಾಗ ಸಂಗಡ ಒಬ್ಬರ ಕಾಣೆ ೧

ನಂಟರಿಷ್ಟರು ಉಂಟು ನೆರೆಹೊರೆಯವರುಂಟು
ಭಂಟ ಬಳಗವುಂಟು ಭಾಗ್ಯ ಉಂಟು
ಕಂಠಕ್ಕೆ ಬದ್ಧಳಾದ ಕಾಂತೆಯು ಎನಗುಂಟು
ಒಂಟಿಯಾಗಿ ಪೋಗುವಾಗ ಒಬ್ಬರ ಸಂಗಡ ಕಾಣೆ ೨

ಒಂದು ಕ್ಷಣದಲಿ ವಾತ ಘಾತಗಳು ಮೊದಲಾಗಿ
ಸಂಧಿಸಿ ವ್ಯಾಧಿಯು ಬಾಧಿಸುತಿರಲು
ಇಂದಿರೇಶನೆ ನಿನ್ನ ನಾಮವೊಂದೆ ಕಾಯುವುದಕೆ
ಬಂದೆನ್ನ ಸಲಹಯ್ಯ ಪುರಂದರವಿಠ್ಠಲ ೩

ಅನುಜ—ತಮ್ಮ.

ತನುಜ—ಮಗ.

ಸನ್ನೆ ಸಂಜ್ಞೆ ಕುಂದಿದಾಗ—ಕೊನೆಯ ಗಳಿಗೆಯಲ್ಲಿ ಅರಿವು ಮರೆಯಾಗುವಾಗ.

ಕಂಠಕ್ಕೆ ಬದ್ಧಳಾದ ಕಾಂತೆ—ಕೊರಳಿಗೆ ಕಟ್ಟಿಕೊಂಡ ಹೆಂಡತಿ.

೧೬೮

ಶಂಕರಾಭರಣ ಅಟ್ಟ

ಬರಬೇಕೋ ರಂಗಯ್ಯ ನೀ ಬರಬೇಕೊ ಪ

ಬರಬೇಕೊ ಬಂದು ಒದಗಬೇಕೊ ಮಮಗುರು
ನರಹರಿ ನಾರಾಯಣ ನೀನಾ ಸಮಯಕ್ಕೆ ಅ

ಕಂಠಕ್ಕೆ ಪ್ರಾಣ ಬಂದಾಗ, ಎನ್ನ
ನಂಟರಿಷ್ಟರು ಬಂದಳುವಾಗ
ಗಂಟುಹುಬ್ಬಿನ ಕಾಲಭಂಟರು ಕವಿದೆನ್ನ
ಗಂಟಲೌಕುವಾಗ ವೈಕುಂಠನಾರಾಯಣ ೧

ನಾರಿಯು ಪುತ್ರ ಮಿತ್ರರು ಬಂಧುಗ
ಳಾರೆನ್ನ ಸಂಗಡ ಬಾರರು
ಆರಿಗಾರಿಲ್ಲ ಯಮನಾರ್ಭಟಕ್ಕೆ ಅಸು
ಹಾರಿ ಮೈಮರೆವಾಗ ನೀರೇರುಹನಾಭ ೨

ಕರಿ ಪ್ರಹ್ಲಾದಾದಿ ಭಕ್ತರ, ಪತಿ
ಕರಿಸಲು ಒದಗಿದೆ ಶ್ರೀಧರ
ನೆರೆ ಹೀನನೆನ್ನ ಉದ್ಧರಿಸಿ ಅಚ್ಯುತ ನಿನ್ನ
ಚರಣದೊಳಿಂಬಿಡೊ ಪುರಂದರವಿಠಲ ೩

ಕಂಠಕ್ಕೆ ಪ್ರಾಣ ಬಂದಾಗ—'ಕಂಠಗತಪ್ರಾಣ' ; ಸಾವು ಸನ್ನಿಹಿತವಾದಾಗ.

ಗಂಟಲೌಕುವಾಗ—ಗಂಟಲನ್ನು ಒತ್ತಿ ಹಿಡಿಯುವಾಗ.

ನೀರೇರುಹನಾಭ—ತಾವರೆಹೊಕ್ಕುಳಿನವ, ವಿಷ್ಣು.

ಪತಿಕರಿಸಲು—ಕಾಪಾಡಲು.

ಇಂಬಿಡು—ನೆಲೆಗೊಳಿಸು.

೧೬೯

ಸಾವೇರಿ — ತ್ರಿವಿಡೆ

ನಾ ಮಾಡಿದ ಕರ್ಮ ಬಲವಂತವಾದರೆ
ನೀ ಮಾಡುವದೇನೊ ದೇವ ಪ

ಸಾಮಾನ್ಯವಲ್ಲವಿದು ಬ್ರಹ್ಮ ಬರೆದ ಬರಹ
ನೇಮದಿಂದಲಿ ಎನ್ನ ಹಣೆಯಲ್ಲಿ ಬರೆದುದಕೆ ಅ

ಅನ್ನಪಾನಂಗಳಿಗೆ ಅಗ್ರಗಣ್ಯನಾಗಿ
ಸ್ನಾನ ಸಂಧ್ಯಾನ ಜಪತಪ ನೀಗಿ
ದಾನವಾಂತಕ ನಿನ್ನ ಧ್ಯಾನವ ಮಾಡದೆ
ಶ್ವಾನನಂತೆ ಮನೆಮನೆಯ ತಿರುಗುತಲಿದ್ದೆ ೧

ಅತಿಥಿಗಳಿಗೆ ಅನ್ನ ಕೊಟ್ಟವನಲ್ಲ ಪರ
ಸತಿಯರ ಸಂಗ ಅರಘಳಿಗೆ ಬಿಟ್ಟವನಲ್ಲ
ಮತಿಹೀನ ನಾನಾಗಿ ಮರುಳಾಗಿದ್ದೆನೊ ದೇವ
ಗತಿ ಯಾವುದೆನಗಿನ್ನು ಗರುಡಗಮನ ಕೃಷ್ಣ ೨

ಇನ್ನಾದರು ನಿನ್ನ ದಾಸರ ಸಂಗವಿತ್ತು
ಮನ್ನಿಸಿ ಸಲಹಯ್ಯ ಮನ್ಮಥ ಜನಕ
ಅನ್ಯರೊಬ್ಬರ ಕಾಣೆ ಆದರಿಸುವರಿಲ್ಲ
ಪನ್ನಂಗಶಯನ ಶ್ರೀ ಪುರಂದರವಿಠಲ ೩

ಆನಂದಭೈರವಿ ಅಟ್ಟ

ಇನ್ನೇಕೆ ಯಮನ ಬಾಧೆಗಳು, ಎನ್ನ
ಜಿಹ್ವೆಯೊಳಗೆ ಹರಿನಾಮವೊಂದಿರಲು ಪ

ಪತಿತ ಪಾವನವೆಂಬ ನಾಮ ಅತಿ
ಹಿತದಿಂದ ಯತಿಗಳು ಸ್ತುತಿಸುವ ನಾಮ
ಕ್ರತುಕೋಟಿ ಫಲವೀವ ನಾಮ ಸ
ದ್ಗತಿಗೆ ಸಾಧನವಹ ಅತಿಶಯ ನಾಮ ೧

ಮುನ್ನೊಬ್ಬ ಪ್ರಹ್ಲಾದ ಸಾಕ್ಷಿ ಆ
ಕನ್ಯಾ ಶಿರೋಮಣಿ ದ್ರೌಪದಿ ಸಾಕ್ಷಿ
ಚಿಣ್ಣನೆಂದಜಾಮಿಳ ಸಾಕ್ಷಿ ದಿವ್ಯ
ಪುಣ್ಯ ಲೋಕವನಾಳ್ವ ಧ್ರುವರಾಯ ಸಾಕ್ಷಿ ೨

ಹದಿನಾಲ್ಕು ಲೋಕವನಾಳ್ವ ಇವ
ಮದನಜನಕನಾಗಿ ಮುದದಿಂದ ಬಾಳ್ವ
ಪದುಮನಾಭನಾಗಿ ಇರುವ ನಮ್ಮ
ಸದರ ಪುರಂದರವಿಠಲನು ಕಾಯ್ವ ೩

ಪತಿತ ಪಾವನ—ಪಾಪದಲ್ಲಿ ಬಿದ್ದವರನ್ನು (ಕೆಟ್ಟವರನ್ನು) ಮೇಲೆತ್ತಿ ಒಳಿತನ್ನು ಮಾಡುವುದು.

ಕ್ರತುಕೋಟಿ ಫಲ—ಒಂದು ಕೋಟಿ ಯಜ್ಞಗಳನ್ನು ಮಾಡಿದ ಪುಣ್ಯಫಲ.

ಸದ್ಗತಿಗೆ—ಮುಕ್ತಿಗೆ.

ಚಿಣ್ಣನೆಂದ—ಮಗನನ್ನು ಕರೆದ.

ಬಾಳ್ವ—ಇಲ್ಲಿ ಬಾಳಿಸುವ ಎಂದರ್ಥವಾಗುತ್ತದೆ.

೧೭೧

ಕಾಂಬೋದಿ ಝಂಪೆ

ಪೂರ್ವಜನ್ಮದಲಿ ನಾ ಮಾಡಿದ ಅಘದಿಂದ
ಉರ್ವಿಯೊಳು ಜನಿಸಿದೆನೊ ಕೃಷ್ಣ
ಕಾರುಣ್ಯನಿಧಿಯೆನ್ನ ಕಾಯಬೇಕಯ್ಯ ಹರಿ
ವಾರಿಜನಾಭ ಶ್ರೀಕೃಷ್ಣ ಪ

ಹುಟ್ಟಿದಂದಿಂದಿಗೂ ಸುಖವೆಂಬುದನು ಅರಿಯೆ
ಕಷ್ಟವಾಗುತಿಹುದು ಕೃಷ್ಣ
ದಟ್ಟ ದಾರಿದ್ರ್ಯವನು ಪರಿಹರಿಸದಿರೆ ದೂರು
ತಟ್ಟುವುದು ನಿನಗಯ್ಯ ಕೃಷ್ಣ ೧

ಕಾಸಿನಾ ಆಸೆಯನು ಮಾಡಿ ಬಹು ದಿನದಿಂದ ಆ
ಯಾಸದೊಳಗಿರುತಿಹೆನೊ ಕೃಷ್ಣ
ಆಸೆಯನು ಬಿಡಿಸಿ ಮಿಗೆ ದೋಷವನು ಪರಿಹರಿಸೊ
ಸಾಸಿರನಾಮದ ಶ್ರೀಕೃಷ್ಣ ೨

ಮುಟ್ಟಲಂಜುವರು ಬಂಧುಗಳು ಕಂಡರೆ ಎನ್ನ
ಅಟ್ಟಿ ಕೊಲ್ಲುತಿಹರಯ್ಯ ಕೃಷ್ಣ
ತೊಟ್ಟಿಲ ಶಿಶು ಬಾಯ ಬಿಡುವ ತೆರದಿ ಕಂ
ಗೆಟ್ಟು ಶೋಕಿಸುವೆನೊ ಕೃಷ್ಣ ೩

ಈ ಪರಿಯಿಂದ ನಾನಾಪತ್ತು ಪೇಳಿದರೆ
ನನ್ನ ಕಾಯದಿರುವೆ ಏಕೊ ಕೃಷ್ಣ
ಶಪಿಸುವೆನೆಂದರೆ ಸಾವು ಹುಟ್ಟು ನಿನಗಿಲ್ಲ
ಏಸು ದೊರೆತನವಯ್ಯ ಕೃಷ್ಣ ೪

ತಂದೆತಾಯಿಯು ಇಲ್ಲ ಬಂಧು ಬಳಗವು ಇಲ್ಲ
ಇದೇನು ತೆರ ಹೇಳೋ ಶ್ರೀಕೃಷ್ಣ
ಮಂದರಧರ ಶ್ರೀಪುರಂದರವಿಠಲನೆ
ಬಂದು ನೆಲೆಯಾಗಯ್ಯ ಕೃಷ್ಣ ೫

ಅಘ—ಪಾಪ.

ಊರ್ವಿ—ಭೂಮಿ.

ಮಿಗೆ—ಹೆಚ್ಚಾದ.

ಮುಖಾರಿ ಝಂಪೆ

ಪ್ರಾಚೀನ ಕರ್ಮವು ಬಿಡಲರಿಯದು
ಯೋಚನೆಯ ಮಾಡಿ ನೀ ಬಳಲಬೇಡ ಪ

ಮುನ್ನ ಮಾಡಿದ ಕರ್ಮ ಬೆನ್ನಟ್ಟಿ ಬರುತಿರಲು
ತನ್ನಿಂದ ತಾನೆ ತಿಳಿಯಲರಿಯದೆ
ಇನ್ನು ದೇಹವನು ಆಶ್ರಯಿಸಿ ಫಲವೇನು
ಉನ್ನತ ಹರುಷದಲಿ ಮನದಿ ಯೋಚಿಸುವ ೧

ಲೋಕಾದಿಲೋಕಗಳ ತಿರುಗುವ ರವಿ ರಥಕೆ
ಏಕಗಾಲಿಗೆ ಏಳು ಕುದುರೆ ಕಟ್ಟಿ
ಆಕಾಶಮಾರ್ಗದಲಿ ತಿರುಗುವ ಅರುಣನಿಗೆ
ಬೇಕಾದ ಚರಣಗಳ ಕೊಡಲಿಲ್ಲ ಹರಿಯು ೨

ಸೇತುವೆಯು ಕಟ್ಟಿ ಲಂಕೆಗೆ ಹಾರಿ ಹನುಮಂತ
ಖ್ಯಾತಿಯನೆ ಮಾಡಿ ರಾವಣನ ಗೆದ್ದು
ಸೀತೆಯನು ತಂದು ಶ್ರೀರಾಮನಿಗೆ ಕೊಡಲಾಗಿ
ಪ್ರೀತಿಯಿಂ ಕೌಪೀನವ ಬಿಡಿಸಲಿಲ್ಲ ಹರಿಯು ೩

ನಿತ್ಯದಲಿ ಗರುಡ ಸೇವೆಯ ಮಾಡಿ ವಿಷ್ಣುವನು
ಹೊತ್ತುಕೊಂಡು ಇದ್ದ ಜಗವರಿಯಲು
ಅತ್ಯಂತ ಸೇವಕನೆಂದು ಮೂಗಿನ ಡೊಂಕು
ಎತ್ತಿ ನೆಟ್ಟಗೆ ಮಾಡಲಿಲ್ಲ ಶ್ರೀಕೃಷ್ಣ ೪

ಇಂತೆಂದು ಈ ಪರಿ ತಮ್ಮೊಳಗೆ ತಾವು ತಿಳಿದು
ಭ್ರಾಂತನಾಗದೆ ಬಯಕೆಗಳನು ಜರಿದು
ಶಾಂತ ಮೂರುತಿ ಸಿರಿಪುರಂದರವಿಟ್ಠಲನ
ಸಂತತದಿ ಬಿಡದೆ ಭಜಿಸೆಲವೊ ಮನುಜ ೫

ಅರುಣ—ಸೂರ್ಯನ ಸಾರಥಿ, ಹೆಳವ.
ಕೌಪೀನವ—ಬ್ರಹ್ಮಚರ್ಯವನ್ನು.

೧೭೩

ಮುಖಾರಿ ಝಂಪೆ

ಜ್ಞಾನವಂತರಿಗೆ ವಿಧಿ ಕಾಡುವುದು ಸತ್ಯ ಅ
ಜ್ಞಾನಿಮೂಢರಿಗೆ ಹರಿ ನಿನ್ನ ಬಲವಯ್ಯ ಪ

ಚಂದ್ರನಿಗೆ ವಿಧಿ ಕಾಡಿ ಗ್ರಹಣ ನುಂಗುವ್ರದಾಯ್ತು
ಇಂದ್ರನಿಗೆ ವಿಧಿ ಕಾಡಿ ಭಂಗಪಡಿಸಿತು
ಚಂದದಲಿ ಪಾಂಡವರ ವನವಾಸ ಮಾಡಿಸಿತು
ಅಂದು ಲಲನೆ ಸೀತೆಯನ್ನು ಲಂಕೆಯುಲಡಗಿಸಿತು ೧

ಹಿಂದಕ್ಕೆ ಹರಿಶ್ಚಂದ್ರನರಣ್ಯವ ಸೇರಿಸಿತು
ಮಡದಿಯಾಗಿ ಕಾಡಿತೋ ಕರಿಬಂಟಗೆ
ಕುಂದದೀಶ್ವರನ ಸುಡುಗಾಡ ಸೇರಿಸಿತು
ಇನ್ನು ವಿಧಿಯನು ನೋಡು ನರರ ಪಾಡೇನು ೨

ವಿಧಿ ಕಾಡೊ ಕಾಲಕ್ಕೆ ಇಲ್ಲದಪವಾದ ಬಂದು
ಕಲಿಸಿತೊ ಸುಳ್ಳು ಕಳವು ಹಾದರ
ವಿಧಿಗೊಳಗಾಗದಾ ನರರು ಮತ್ತಿಲ್ಲ
ವಿಧಿಯ ಗೆದ್ದವ ನಮ್ಮ ಪುರಂದರವಿಠಲ ೩

[ವಿಧಿ ಎಂದರೆ ಹಣೆಬರಹ ; ಹೀಗಾಗಬೇಕೆಂದು ಮೊದಲೆ ನಿರ್ಧರಿಸಲ್ಪಟ್ಟಿದ್ದು, ಅದನ್ನು ಯಾರೂ ತೊಡೆದುಹಾಕಲು ಸಾಧ್ಯವಿಲ್ಲ. 'ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ। ಲಲಾಟಲಿಖಿತಾ ರೇಖಾ ಪರಿಮಾರ್ಷ್ಟುಂ ನ ಶಕ್ಯತೇ'॥ ಎಂಬ ಮಾತಿನ ಸಮರ್ಥನೆ ಈ ಪದ. ಜ್ಞಾನಿಗಳನ್ನಾಗಲಿ, ದೇವತೆಗಳನ್ನಾಗಲಿ, ದೇವತಾಂಶ ವಿದ್ದ ರಾಜರನ್ನಾಗಲಿ ವಿಧಿ ಬಿಡದೆ ಕಾಡಿತು. ಇನ್ನು ಮನುಷ್ಯರ ಪಾಡೇನು ? ಅವರಿಗೆ ದೇವರೇ ಗತಿ !]

ಕಾಂಬೋದಿ　　　ಅಟ್ಟ

ಆರು ಬದುಕಿದರೇನು ಆರು ಬಾಳಿದರೇನು
ಪೂರ್ವಜನ್ಮದ ಕರ್ಮ ವಿಧಿ ತೀರದನಕ　　ಪ

ಪತಿಭಕುತಿಯಿಲ್ಲದಿಹ ಸತಿಯಿದ್ದು ಫಲವೇನು
ಮತಿಯಿಲ್ಲದವಗೆ ಬೋಧಿಸಿದರೇನು
ಪತಿಯಿಲ್ಲದವಳಿಗೆ ಬಹು ಭೋಗವಿದ್ದರೇನು
ಮತಿಹೀನನಾದಂಥ ಮಗನ ಗೊಡವೇನು　　೧

ಜ್ಞಾನವಿಲ್ಲದವ ನಿತ್ಯ ಸ್ನಾನಮಾಡಿ ಫಲವೇನು
ದಾನಧರ್ಮವಿಲ್ಲದವನ ದಯವಾದರೇನು
ಮಾನಾಭಿಮಾನಗಳ ಮರೆದವನ ಸಂಗವೇನು
ದೀನನಾದವನಿಗೆ ಧೈರ್ಯವಿದ್ದರೇನು　　೨

ಕಣ್ಣಿಲ್ಲದವಗೆ ಚಂದ್ರನುದಯದಾ ಭ್ರಮೆಯೇನು
ಹೆಣ್ಣಿಲ್ಲದಿಹ ಅಷ್ಟಭೋಗಂಗಳೇನು
ಬಣ್ಣ ಬಂಗಾರವನು ಬಚ್ಚಿಟ್ಟು ಫಲವೇನು
ಅಣ್ಣ ತಮ್ಮಂದಿರನು ಅಗಲಿ ಸುಖವೇನು　　೩

ಗುರುದೈವವರಿಯದವ ಹಿರಿಯನಾದರೆಯೇನು
ಜರಿದು ಕೆಟ್ಟಾಡುವನ ಸರಸವೇನು
ಮೊರೆಹೊಕ್ಕವರ ಕಾಯದವನ ದೊರೆತನವೇನು
ಪರರಿಗುಪಕರಿಸದವ ಬಾಳಿ ಫಲವೇನು　　೪

ವೇದಗಳ ಓದಿ ತಾ ವಾದಿಸಲು ಫಲವೇನು
ಭೇದವೆಣಿಸುತಿಹನ ನಂಟತನವೇನು
ಮೋದದಿಂ ಹರಿಗರ್ಪಿಸದ ಕವಿತೆಯಿಂದೇನು
ಓದಿಸದೆ ಕೆಡಿಸುವ ತಂದೆಯಿದ್ದೇನು　　೫

ಭಾವ ಶುದ್ಧಿಯಿಲ್ಲದವನ ದೇವತಾರ್ಚನೆಯೇನು
ಆವ ವರಗಳ ಕೊಡದ ದೇವರೇನು
ದೇವ ಶ್ರೀ ಪುರಂದರವಿಠಲನ ಚರಣವನು
ಆವಾಗ ನೆನೆಯದಿಹ ಜಿಹ್ವೆಯಿಂದೇನು　　೬

ಗೊಡವೇನು—ಗೊಡವೆಯೇನು.

ವೇದಗಳ ಓದಿ ತಾ ವಾದಿಸಲು—ವೇದದ ರಹಸ್ಯವನ್ನು ಅರಿತುಕೊಂಡಮೇಲೆ ವಾದ ವಿವಾದಗಳ ಆಸಕ್ತಿ ಇರಬಾರದು.

ಓದಿಸದೆ ಕೆಡಿಸುವ—ವಿದ್ಯಾಭ್ಯಾಸ ಕೊಡಿಸದೆ ಹಾಳುಮಾಡುವ.

ಆವಾಗ—ಯಾವಾಗಲೂ.

೧೭೫

ಕಾಂಬೋದಿ — ಝಂಪೆ

ಯಾರೆತ್ತ ಪೋದರೇನು ಊರೆತ್ತ ಬೆಂದರೇನು
ಪೂರ್ವಪ್ರಾಪ್ತಿ ತನಗಲ್ಲದುಂಟೆ ಮನವೆ ಪ

ಹಗಲು ತಾರಕೆಗಳು ಹಾರಿ ಆಡಿದರೇನು
ಬೈಗು ಭಾಸ್ಕರ ಮೂಡಿ ಬೆಳಗಾದರೇನು
ಹಗೆಯುವರ ಮನೆಯಲ್ಲಿ ಹಗರಣಾದರೆ ಏನು
ನಿಗಮಗೋಚರನಂಘ್ರಿ ನೆನೆ ಕಂಡ್ಯ ಮನವೆ ೧

ಬೆಂಡು ಮುಳುಗಿದರೇನು ಗುಂಡು ತೇಲಿದರೇನು
ಭಂಡ ನಾಲಿಗೆ ಎರಡು ತುಂಡಾದರೇನು
ಉಂಡಮನೆಗೆರಡೆಣಿಪನುರಿದು ಬಿದ್ದರೆ ಏನು
ಪುಂಡರೀಕಾಕ್ಷನ್ನ ನೆನೆ ಕಂಡ್ಯ ಮನವೆ ೨

ವೆಚ್ಚಕಿಲ್ಲದ ಹಣವು ವ್ಯರ್ಥವಾದರೆ ಏನು
ಮಚ್ಚರಿಸುವರೆಲ್ಲ ಮಡಿದರೇನು
ಅಚ್ಯುತಾನಂತ ಶ್ರೀ ಪುರಂದರವಿಠ್ಠಲನ
ನಿಶ್ಚಲ ಭಕುತಿಯಿಂದ ನೆನೆ ಕಂಡ್ಯ ಮನವೆ ೩

ಬೈಗು—ಸಂಜೆಯಾದ ಮೇಲೆ.

ಹಗರಣ—ಮಾತುಕತೆ (ಪ್ರಕರಣ), ಜಗಳ. ಸಾಮಾನ್ಯವಾಗಿ ಶತ್ರುಗಳಾದವರು ತೊಂದರೆಗೊಳಗಾದರೆ ಸಮಾಧಾನವೆನಿಸೀತು, ಸ್ವಾರಸ್ಯವೆನಿಸೀತು. ಆದರೆ ಅದರಿಂದೇನು ಎನ್ನುವ ಉದಾಸೀನವೃತ್ತಿ.

ಮಚ್ಚರಿಸುವರು—ಅಸೂಯೆಗಾರರು.

೧೭೬

ಪೂರ್ವಿ ರೂಪಕ

ಯಾತಕ್ಕೆ ದುರಾಶೆ ಎಲೆ ಮನವೆ ಪ

ಎಲೆ ಮನವೆ ನೀ ತಿಳಿ ಮನವೆ ನಿನಗೆ ಅ

ಜನ್ಮಜನ್ಮಾಂತರದ ಪೂಜೆ ಫಲವು
ಅನುಭವಿಸದಲ್ಲದೆ ಬಿಡದೆಲೊ ಮನವೆ ೧

ಪಣೆಯಲ್ಲಿ ಬರೆದ ಬ್ರಹ್ಮನ ಲಿಪಿಯ
ಮೀರುವುದುಂಟೆ ಜಗದೊಳು ಮನವೆ ೨

ಪುರಂದರವಿಠಲನ ಚರಣಕಮಲಗಳ
ಅನುದಿನ ಭಜಿಸಿ ಬದುಕೆಲೊ ಮನವೆ ೩



ನೀಲಾಂಬರಿ

ಮಟ್ಟ

ಏಕೆ ಚಿಂತಿಸುವೆ ಬರಿದೆ ಮರುಳೆ ಪ

ವಿಧಿ ಬರೆದ ವಾಕು ತಪ್ಪದು
ಎಂದಿಗೂ ಮರುಳೆ ಅ

ಹುಟ್ಟುವುದಕಿಂತ ಮೊದಲೆ ತಾಯ ಸ್ತನ
ದಿಟ್ಟ ಕ್ಷೀರವನು ಉಂಡು
ತೊಟ್ಟಿಲೊಳು ಮಲಗುವಾಗ ಗಳಿಸಿ ತಂ
ದಿಟ್ಟು ನೀನುಣುತಿದ್ದೆಯೊ ಮರುಳೆ ೧

ಉರಗ ವೃಶ್ಚಿಕ ಪಾವಕ ಕರಿ ನಂಜು
ಅರಸು ಹುಲಿ ಚೋರಭಯವು
ಹರಿಯಾಜ್ಞೆಯಿಂದಲೇನೆ ನೀನು ಮಹಾ
ಶರಧಿಪೊಕ್ಕರು ಬಿಡದು ಮರುಳೆ ೨

ಇಂತು ಸುಖದುಃಖಂಗಳಿಗೆ ಸಿಲುಕಿ ನೀ
ಭ್ರಾಂತನಾಗಿ ಕೆಡಲು ಬೇಡ
ಸಂತೋಷದಿಂದರ್ಚಿಸಿ ಪೂಜಿಸು
ಕಂತುಪಿತ ಶ್ರೀಪುರಂದರವಿಠಲನ ೩

ಉರಗ—ಸರ್ಪ.
ವೃಶ್ಚಿಕ—ಚೇಳು.
ಪಾವಕ—ಬೆಂಕಿ.
ಕರಿ—ಆನೆ.
ನಂಜು—ವಿಷ.

ಮುಖಾರಿ　　　　ಝಂಪೆ

ಏನು ಮಾಡಿದರೇನು ಹಿಂದಿನ ಕರ್ಮಫಲ
ತಾನು ಮಾಡಿದ ಕರ್ಮ ತನಗಲ್ಲದೆ　　ಪ

ಮರಳಿ ಮರಳಿ ನೀರಿನೊಳಗೆ ಪೊಕ್ಕರು ಇಲ್ಲ
ಹೊರೆಹೊತ್ತು ತಲೆಪರಟಿಯಾದರಿಲ್ಲ
ಭರದಿಂದ ಭೂಮಿಯನು ತೋಡಿ ನೋಡಿದರಿಲ್ಲ
ಪರರಿಗೆ ಬಾಯ್ದೆರೆದು ಪಲ್ಕಿರಿದರಿಲ್ಲ　　೧

ಬಲು ದೇಹವನು ಹ್ರಸ್ವಮಾಡಿ ಬೇಡಿದರಿಲ್ಲ
ಕುಲಗೇಡಿ ತಾನಾಗಿ ತಿರುಗಿದರಿಲ್ಲ
ತಲೆಯ ಜಡೆಗಟ್ಟಿ ಅರಣ್ಯ ಸೇರಿದರಿಲ್ಲ
ಕೊಳಲೂದಿ ತುರುಗಳನು ಕಾಯ್ದರಿಲ್ಲ　　೨

ಧೀರತನವನು ಬಿಟ್ಟು ದಿಗಂಬರಾದರು ಇಲ್ಲ
ಮಾರಿ ರಾವುತನಾಗಿ ಹೋರಿದರಿಲ್ಲ
ಧಾರುಣಿಯೊಳಪ್ರತಿಮ ಪುರಂದರವಿಠ್ಠಲನೆ
ಆರಿಗಳವಯ್ಯ ವಿಧಿ ಮಾರಿ ಬಾಳುವರೆ　　೩

[ಪರಮಾತ್ಮನು ಜಗತ್ತನ್ನು ಸೃಷ್ಟಿ ಮಾಡಿದ ಮೇಲೆ ಶಿಷ್ಟರಕ್ಷಣ, ದುಷ್ಟಶಿಕ್ಷಣಗಳು ಅವನ ಕರ್ತವ್ಯವೇ ; ಅದರಿಂದ ಅವನು ತಪ್ಪಿಸಿಕೊಳ್ಳುವಹಾಗಿಲ್ಲ. ಇದು ಅವನ 'ಕರ್ಮ' ವೆಂದು ದಾಸರು ವಿನೋದವಾಗಿ ಸೂಚಿಸುತ್ತಾರೆ. ಈ ಕರ್ಮದ ಫಲವಾಗಿಯೇ ಹರಿಯು ಹತ್ತವತಾರಗಳನ್ನು ಎತ್ತಬೇಕಾಯಿತೆಂದು ಬಣ್ಣಿಸುತ್ತಾರೆ.]

ಕೇದಾರಗೌಳ ತ್ರಿವಿಡೆ

ಒಂದಲ್ಲ ಎರಡಲ್ಲ ನೊಂದ ಜೀವಕೆ ದುಃಖ
ಒಂದೊಂದು ಕ್ಷಣಕೆ ಅನಂತದುಃಖ ಪ

ಬಸಿರಿನೊಳಗೆ ದುಃಖ ಶಿಶುತನದಲಿ ದುಃಖ
ಎಸೆವ ಕೌಮಾರ ಯೌವನದ ದುಃಖ
ವಶವಲ್ಲದ ದುಃಖ ವಾರ್ಧಿಕ್ಯದ ದುಃಖ
ಸತಿಸುತ ಮಿತ್ರರು ಕಾಡುವ ದುಃಖ ೧

ಅಷ್ಟಭೋಗದ ದುಃಖ ಆರರಿಗಳ ದುಃಖ
ಕಷ್ಟ ದಾರಿದ್ರ್ಯ ಕಾಡುವ ದುಃಖ
ಮೃಷ್ಟಾನ್ನವು ಇಲ್ಲದೆ ಮಿಡುಕುವ ದುಃಖ
ದುಷ್ಟರಿಂದ ನುಡಿ ಕೇಳುವ ದುಃಖ ೨

ತನಗಿಂತಲಧಿಕರನನುಸರಿಸುವ ದುಃಖ
ತನಗಿಂತ ಬಡವರು ಕಾಡುವ ದುಃಖ
ತನ್ನ ಸರಿಯರ ಮಾತು ಕೇಳುವ ದುಃಖ
ತನ್ನವರು ತನಗಿನ್ನು ಆಗದ ದುಃಖ ೩

ಗತಿ ನೀನೆಯೆಂದು ಹಂಗಿನ ಕೂಳಿನ ದುಃಖ
ಪ್ರತಿ ಉಪಕಾರ ಮಾಡುವ ದುಃಖ
ಶ್ರುತಿವಚನಗಳಿಲ್ಲದೆ ಇಹದಲ್ಲಿ ದುಃಖ
ಅತಿ ಸ್ನೇಹದವರನ್ನು ಬಿಡುವ ದುಃಖ ೪

ಇಂತಿಹ ಸುಖ ದುಃಖ ದೇಹ ಗೇಹವೆ ಸಾಕು
ಶಂಕರನೊಡೆಯ ಶ್ರೀಹರಿಯೆ ಕಾಯೊ
ಸಂತತ ಸಿರಿಪುರಂದರವಿಠಲನ ಲಕ್ಷ್ಮೀ
ಕಾಂತನ ನೆನೆದು ನಿಶ್ಚಿಂತನಾಗು ಮನವೆ ೫

೧೮೦

ಬಿಲಹರಿ ಅಟ್ಟ

ಏನಾಯಿತೊ ಈ ಜನಕೆ
ಮೌನವನು ಹಿಡಿದು ಮರೆತರು ಹರಿಯ ಪ

ನಾಲಿಗ್ಗೆ ಮುರಿದಿತೊ ನೆಗ್ಗಿಲ ಕೊನೆಮುಳ್ಳು
ಬಾಲಕತನದಲ್ಲಿ ಭೂತ ಹಿಡಿಯಿತೊ
ಮೇಲು ಕೆಳಗಿನ ತುಟಿ ಎರಡು ಒಂದಾಯಿತೊ
ಕಾಲಮೃತ್ಯುವು ಬಂದು ಕಂಗೆಡಿಸಿತೊ ೧

ಘಟಸರ್ಪ ಕಚ್ಚಿ ವಿಷ ಘನವಾಗಿ ಏರಿತೊ
ಕಟಕರಿಸಿ ನಾಲಿಗೆ ಕಡಿದ್ಹೋಯಿತೊ
ಹಟದಲ್ಲಿ ಹರಿಯನ್ನು ನೆನೆಯದೆ ಇರುವಂಥ
ಕುಟಿಲ ಚಂಚಲ ಮನಸು ಕೂಡಿ ಬಾಧಿಸಿತೊ ೨

ಹರಿಯೆಂದರಿವರ ಶಿರ ಹರಿದು ತಾ ಬೀಳುವುದೆ
ಹರಿನಾಮ ಹಣೆಯಲ್ಲಿ ಬರೆದಿಲ್ಲವೆ
ವರದ ಪುರಂದರವಿಠ್ಠಲರಾಯನ್ನ
ಸ್ಮರಿಸಿದರೆ ಸಿಡಿಲೆರಗಿ ಕೊಲ್ಲುವುದೇ ೩

[ಜನರಲ್ಲಿ ಹರಿವಿಸ್ಮರಣೆಯೆಂಬ ಅಪರಾಧವಿರುವುದನ್ನು ಕಂಡು ದಾಸರು ಮರುಕಗೊಂಡು ರಚಿಸಿದ ಕೃತಿ. ವ್ಯಾಸರಾಯಸ್ವಾಮಿಗಳು 'ಆದ್ಯಪರಾಧ ಮಿಥ್ಯಾಜ್ಞಾನ, ದ್ವಿತೀಯ ಹರಿಯ ವಿಸ್ಮರಣೆ' ಎಂದು ಹೇಳಿರುವುದನ್ನು ನೆನಪಿಗೆ ತಂದುಕೊಳ್ಳಬೇಕು. ಮಿಥ್ಯಾಜ್ಞಾನವನ್ನೇ ಇಲ್ಲಿ "ಬಾಲಕತನದ ಭೂತ", "ಘಟಸರ್ಪ", "ಕಾಲಮೃತ್ಯು" ಎಂದು ಬಣ್ಣಿಸಿದ್ದಾರೆ. ಜೀವನು ತಾನೇ ಸ್ವತಂತ್ರ, ಕರ್ತೃ ಭೋಕ್ತೃ ಎಂದು ಬಗೆಯುವುದೇ ಮಿಥ್ಯಾಜ್ಞಾನದ ತಾತ್ಪರ್ಯ. ಇದರಿಂದ ದಿಟವಾಗಿ ಸ್ವತಂತ್ರನೂ, ಕರ್ತೃ, ತಾರಕ, ಪ್ರೇರಕ, ನಿಯಾಮಕ, ಸ್ವಾಮಿಯೂ ಬಿಂಬರೂಪನೂ ಆದ ಪರಮಾತ್ಮನನ್ನು ಮರೆತು, ತೃತೀಯ ಅಪರಾಧವೆನಿಸಿದ 'ನಿಷಿದ್ಧಾವಿಹಿತಾಚರಣೆ' ಯಲ್ಲಿ ತೊಡಗುತ್ತಾನೆ. ಹರಿಯ ವಿಸ್ಮರಣೆಯಿಂದ ಒದಗಿದ ಫಲ ಇದು; ಇದನ್ನು ಇಲ್ಲಿ ದಾಸರು "ಹಟ" ವೆಂದು ಕರೆದಿದ್ದಾರೆ].

೧೮೧

ಮುಖಾರಿ ಝಂಪೆ

ಸತ್ಯವಂತರಿಗಿದು ಕಾಲವಲ್ಲ ಪ

ದುಷ್ಟ ಜನರಿಗೆ ಸುಭಿಕ್ಷ ಕಾಲ ಅ

ಹರಿಸ್ಮರಣೆ ಮಾಡುವಗೆ ಕ್ಷಯವಾಗುವ ಕಾಲ
ಪರಮ ಪಾಪಿಗಳಿಗೆ ಸುಭಿಕ್ಷಕಾಲ
ಸ್ಥಿರವಾದ ಪತಿವ್ರತೆಯ ಪರರು ನಿಂದಿಪ ಕಾಲ
ಧರೆಯರಿಯೆ ಜಾರೆಯನು ಕೊಂಡಾಡುವ ಕಾಲ ೧

ಉಪಕಾರ ಮಾಡಿದರೆ ಅಪಕರಿಸುವ ಕಾಲ
ಸಕಲವನು ತಿಳಿದವಗೆ ದುರ್ಭಿಕ್ಷಕಾಲ
ಸತಿ ಸುತರು ಎಂಬವರ ನಂಬಲರಿಯದ ಕಾಲ
ಸಟೆಯಲ್ಲವಿದು ಬಹು ವಿಪರೀತ ಕಾಲ ೨

ಧರ್ಮ ಮಾಡುವವ ನಿರ್ಮೂಲವಾಗುವ ಕಾಲ
ಕರ್ಮಿ ಪಾತಕರಿಗೆ ಬಹು ಸೌಖ್ಯಕಾಲ
ನಿರ್ಮಲಾತ್ಮಕ ಸಿರಿ ಪುರಂದರವಿಠಲನ
ಮರ್ಮದೊಳು ಭಜಿಸಲರಿಯದ ಕಾಲವಯ್ಯ ೩

೧೮೨

ಕಾಂಬೋದಿ ಚಾಪು

ಕೆಟ್ಟು ನೆಂಟರ ಸೇರುವುದು ಬಲು ಕಠಿಣ ಪ

ಇನ್ನು ಹುಟ್ಟೇಳು ಜನ್ಮಕ್ಕೆ ಇದು ಬೇಡ ಹರಿಯೆ ಅ

ವಿಷವ ಕುಡಿಯಲಿಬಹುದು ಎಸೆದ ಶೂಲದ ಮುಂದೆ
ಒಸಗಿ ಬಹು ಬೇಗದಿ ಹಾಯುಬಹುದು
ವಿಷದ ಕುಂಡದ ಒಳಗೆ ಮುಳುಗಿಕೊಂಡಿರಬಹುದು
ಎಸೆವ ಅಂಬಿಗೆ ಎದೆಯ ಗುರಿಮಾಡಬಹುದು ೧

ಶರಧಿ ಧುಮುಕಲಿಬಹುದು ಉರಗನಪ್ಪಲುಬಹುದು
ಊರ ಮಾರಿಗೆ ಗ್ರಾಸವಾಗಲಿಬಹುದು
ಪುರುಷ ಮೃಗ ಮೇಲ್ವಾಯ್ದು ಬರೆ ಶಿರವ ಕೊಡಬಹುದು
ಗರಗಸದಲಿ ಕೊರಳ ಕೊಯಿಸಿಕೊಳಬಹುದು ೨

ಕುಡಗೋಲು ಪಿಡಿದು ಕೂಲಿಯ ಮಾಡಿ ಉಣಬಹುದು
ಒಡಲಿಗಾಗಿ ಹುಡಿಯ ಮುಕ್ಕಬಹುದು
ಪೊಡವಿಯೊಳು ಪುರಂದರವಿಠ್ಠಲರಾಯನ
ಕಡು ಹರುಷದಿ ಭಜಿಸಿ ಸುಖಿಯಾಗಬಹುದು ೩

ಶರಧಿ—ಸಮುದ್ರ.
ಉರಗ—ಹಾವು.
ಪುರುಷಮೃಗ—ಗಂಡುಗೂಳಿ.
ಹುಡಿ—ಮಣ್ಣು.

೧೮೩

ಕಾಂಬೋದಿ ಝಂಪೆ

ಭಾಷೆ ಹೀನರ ಸಂಗವಭಿಮಾನ ಭಂಗ ಪ

ಬೇಸತ್ತು ಬೇಲಿಯ ಮೇಲೊರಗಿದಂತೆ ಅ

ಹಸಿವೆಗಾರದೆ ಬೆಕ್ಕು ಹತ್ತಿಯನು ಮೆದ್ದಂತೆ
ತೃಷೆಗಾರದೆ ಜೋಗಿ ತೆವರ ತೋಡಿದಂತೆ
ಬಿಸಿಲಿಗಾರದೆ ಕೋತಿ ಬಂಡೆಮೇಲ್ಕುಳಿತಂತೆ
ಕುಸುಮೆಯ ಹೊಲದಲ್ಲಿ ಕಳ್ಳ ಹೊಕ್ಕಂತೆ ೧

ಮಳೆಯ ರಭಸಕೆ ಅಂಜಿ ಮರವೇರಿ ಕುಳಿತಂತೆ
ಛಳಿಯ ತಾಳದೆ ಜಲದಿ ಮುಳುಗಿದಂತೆ
ಹುಳುವಿನಂಜಿಕೆಗೆ ಹೋಗಿ ಹುತ್ತದಲಿ ಕುಳಿತಂತೆ
ಎಳೆನರಿಯು ಒಂಟೆಯ ತುಟಿಗೆ ಜೋತಂತೆ ೨

ಭಾಷೆ ಹೀನರ ಆಸೆ ಪುರುಷ ನಾರಿಯ ವೇಷ
ಬಿಸಿಲು ಹಣ್ಣನು ಮೆದ್ದು ಬಳಲುತಿಹರು
ವಸುಧೆಯೊಳು ಪುರಂದರವಿಠಲನ ನೆರೆ ನಂಬಿ
ಕುಶಲದಲಿ ಸುಖಿಯಾಗಿ ಬಾಳೆಲವೊ ಮನುಜ ೩

ತೃಷೆಗಾರದೆ—ಬಾಯಾರಿಕೆಯನ್ನು ತಾಳಲಾರದೆ.
ತೆವರು—ದಿಣ್ಣೆ, ಎತ್ತರವಾದ ಪ್ರದೇಶ.
ಕುಸುಮೆ—ಹೊಲಗಳಲ್ಲಿ ಬೆಳೆಸುವ ಬಲು ಮುಳ್ಳೆಲೆಯ ಗಿಡ (ಕುಸುಂಭ).
ಭಾಷೆಹೀನರ ಆಸೆ...—ಮಾತಿಗೆ ತಪ್ಪುವವರನ್ನು ನಂಬುವುದು ಹೆಣ್ಣು ವೇಷದಲ್ಲಿರುವ ಗಂಡಸನ್ನು ನಂಬಿದಂತೆ.

೧೮೪

ಕಾಂಬೋದಿ | ಝಂಪೆ

ಪಾಪಿ ಬಲ್ಲನೆ ಪರರ ಸುಖ ದುಃಖವ ಪ

ಕೋಪಿ ಬಲ್ಲನೆ ಶಾಂತ ಸುಗುಣದ ಘನವ ಅ

ಕತ್ತೆ ಬಲ್ಲುದೆ ಹೊತ್ತ ಕತ್ತುರಿಯ ಪರಿಮಳವ
ಮೃತ್ಯು ಬಲ್ಲುದೆ ವೇಳೆ ಹೊತ್ತೆಂಬುದ
ತೊತ್ತು ಬಲ್ಲಳೆ ಮಾನವಪಮಾನವೆಂಬುದನು
ಮತ್ತೆ ಬಲ್ಲುದೆ ಬೆಕ್ಕು ಹರಿಯ ವಿಾಸಲನು ೧

ಹೇನು ಬಲ್ಲುದೆ ಮುಡಿದ ಹೂವಿನ ಪರಿಮಳವ
ಶ್ವಾನ ಬಲ್ಲುದೆ ರಾಗ ಭೇದಂಗಳ
ವಿಾನ ಬಲ್ಲುದೆ ನೀರು ಸೌಳು ಸ್ವಾದೆಂಬುದನು
ತಾನು ಬಲ್ಲುದೆ ಹಾವು ಹಾಲನೆರೆದವರನು ೨

ಬಾಳೆ ಬಲ್ಲುದೆ ಮರಳಿ ಫಲವಾಗೊ ಸುದ್ದಿಯನು
ಸೂಳೆ ಬಲ್ಲಳೆ ವಿಟನ ಬಡತನವನು
ಕೇಳಬಲ್ಲನೆ ಕಿವುಡನೇಕಾಂತ ಮಾತುಗಳ
ಹೇಳಬಲ್ಲನೆ ಮೂಕ ಕನಸು ಕಂಡುದನು ೩

ಕಾಗೆ ಬಲ್ಲುದೆ ಒಳ್ಳೆ ಕೋಗಿಲೆಯ ಸುಸ್ವರವ
ಗೂಗೆ ಬಲ್ಲುದೆ ಹಗಲು ಹರಿದಾಟವ
ಜೋಗಿ ಬಲ್ಲನೆ ಮನೆಯೊಳಿಲ್ಲ ಉಂಟೆಂಬುದನು
ರೋಗಿ ಬಲ್ಲನೆ ಷಡ್ರಸಾನ್ನರುಚಿಯ ೪

ಕೋಡಗವು ಬಲ್ಲುದೆ ರತ್ನದಾಭರಣವನು
ಹೇಡಿ ಬಲ್ಲನೆ ರಣದ ಸಂಭ್ರಮವನು
ಬೇಡಿದವರಗಳ ಪುರಂದರವಿಠಲನಲ್ಲದೆ
ನಾಡಾಡಿ ದೈವಗಳು ಕೊಡಬಲ್ಲುವೆ ೫

ತೊತ್ತು—ಊಳಿಗದ ಹೆಣ್ಣಾಳು, ದಾಸಿ.
ಹರಿಯ ವಿಾಸಲನು—ನೈವೇದ್ಯ, ಎಡೆ.
ಸೌಳುಸ್ವಾದ—ಉಪ್ಪು, ಸಿಹಿ.
ಬಾಳೆ ಬಲ್ಲುದೆ...—ಬಾಳೆಗಿಡವು ಒಂದೇ ಬಾರಿ ಫಲ ಬಿಡುವುದೆಂಬ ಪ್ರತೀತಿ.
ನಾಡಾಡಿ ದೈವಗಳು—ಗ್ರಾಮದೇವತೆಗಳು ; ಮಾರಿ, ಮಸಣಿ ಮೊದಲಾದುವು.

೧೮೫

ಮುಖಾರಿ — ಅಟ್ಟ

ಈ ಗ್ರಾಮದಲಿ ವಾಸ ಇರುವುದೆ ಪ್ರಯಾಸ ಪ

ಹೊನ್ನು ಹಣಗಳು ಇಲ್ಲ ಇರುವುದಕೆ ಸ್ಥಳವಿಲ್ಲ
ತನ್ನವರು ತನಗೆ ಎಂಬುವರು ಇಲ್ಲ
ಬೆನ್ನುತೊಕ್ಕಂಬದಕೆ ಮತ್ತೆ ಸೋದರರಿಲ್ಲ
ಇನ್ನಿಲ್ಲ ಇಹವಿಲ್ಲ ಪರವಿಲ್ಲವಲ್ಲ ೧

ದುಡುಕಿ ಕೆಡುಕನಿಗೂರು ಒಡವೆವುಳ್ಳವಗೂರು
ಬಡಲಾಸೆಗೆ ತಿರುಗಿ ತಿಂಬುವಗೆ ಊರು
ಬಿಡದೆ ಪರವಸ್ತುಗಳ ಅಪಹರಿಸುವವಗೂರು
ಕಡು ಪಾಪಿ ಕಪಟಿಯಾದವಗೀ ಊರು ೨

ಎನ್ನ ಮನದುಬ್ಬಸವ ಆರಿಗುಸಿರಲೊ ದೇವ
ಚೆನ್ನಕೇಶವ ನನ್ನ ಚರಣವನ್ನು
ಇನ್ನು ನಂಬಿದೆನಯ್ಯ ಪುರಂದರವಿಟ್ಠಲ
ಬಿನ್ನಪವ ನೀ ಕೇಳಿ ಎನ್ನ ಸಲಹಯ್ಯ ೩

೧೮೬

ಉಶಾನಿ (ಹುಸೇನಿ) ಆದಿ

ಎಲ್ಲರು ಮಾಡುವುದು ಹೊಟ್ಟೆಗಾಗಿ ಗೇಣು
ಬಟ್ಟೆಗಾಗಿ ಪ

ಸಿರಿವಲ್ಲಭನ ಭಜಿಸುವುದು ಮುಕ್ತಿಗಾಗಿ ಅ

ಪಲ್ಲಕ್ಕಿಯು ಹೊರುವುದು ಹೊಟ್ಟೆಗಾಗಿ ದೊಡ್ಡ
ಮಲ್ಲರೊಡನಾಡುವುದು ಹೊಟ್ಟೆಗಾಗಿ
ಸುಳ್ಳಾಗಿ ಪೊಗಳುವುದು ಹೊಟ್ಟೆಗಾಗಿ ಸಿರಿ
ವಲ್ಲಭನ ಧ್ಯಾನವು ಮುಕ್ತಿಗಾಗಿ ೧

ಧೊರೆತನ ಮಾಡುವುದು ಹೊಟ್ಟೆಗಾಗಿ ಕರಿ
ತುರಗವೇರುವುದು ಹೊಟ್ಟೆಗಾಗಿ
ದುರಿತವ ಮಾಡುವುದು ಹೊಟ್ಟೆಗಾಗಿ ಸಿರಿ
ಹರಿಯು ಭಜಿಸುವುದು ಮುಕ್ತಿಗಾಗಿ ೨

ಬೆಟ್ಟವ ಹೊರುವುದು ಹೊಟ್ಟೆಗಾಗಿ
ಗಟ್ಯಾಗಿ ಕೂಗುವುದು ಹೊಟ್ಟೆಗಾಗಿ
ದಿಟ್ಟವಾಗಿ ನಮ್ಮ ಶ್ರೀಪುರಂದರ
ವಿಟ್ಠಲನ್ನ ಧ್ಯಾನವು ಮುಕ್ತಿಗಾಗಿ ೩

ದಿಟ್ಟವಾಗಿ—ದಿಟವಾಗಿ.

ಕಾಂಬೋದಿ ಝಂಪೆ

ಕಲಿಯುಗದ ಮಹಿಮೆಯು ಕಾಣಬಂತೀಗ ಪ

ಜಲಜಾಕ್ಷ ಮೇಲ್ಗಿರಿಯ ಶ್ರೀ ವೆಂಕಟೇಶ ಅ

ಹರಿಕಥೆಯನೆ ಬಿಟ್ಟು ಹೀನನುಡಿ ನುಡಿಯುವರು
ಗುರುಹಿರಿಯರ ದೂಷಿಸಲು ಎಣಿಸುತಿಹರು
ಪೊರೆದ ತಾಯ್ತಂದೆಯರ ಮಾತುಗಳ ಮನ್ನಿಸದೆ
ತರುಣಿಯರ ನುಡಿ ಕೇಳಲಿಚ್ಛಿಸುತಿಹರು ೧

ಪಟ್ಟದರಸಿಯ ಬಿಟ್ಟು ಪರಸತಿಯ ಬಯಸುವರು
ಕೊಟ್ಟ ಸಾಲವ ನುಂಗಿ ಕೊಲ್ಲ ಬರುತಿಹರು
ಮುಟ್ಟಿ ಭಾಷೆಯ ಕೊಟ್ಟು ಮೋಸವನೆ ಮಾಡುವರು
ಬಿಟ್ಟು ಪರದೈವವನು ಮಾರಿಗೆರಗುವರು ೨

ಕಂಡುದನು ಪೇಳರು ಕಾಣದನೆ ಪೇಳುವರು
ಉಂಡ ಮನೆಗೆರಡನ್ನು ಬಗೆಯುತ್ತಲಿಹರು
ಕೊಂಡಾಡಿ ಬೇಡಿದರು ಕೊಡರೊಂದು ರುವ್ವಿಯನು
ದಂಡಿಸಿ ಬಡಿವರಿಗೆ ಧನವ ಕೊಡುತಿಹರು ೩

ಕಳ್ಳರೊಳು ಅತಿ ಸ್ನೇಹ ಸುಳ್ಳರೊಳು ಸೋಲುವರು
ಒಳ್ಳೆಯವನೊಡನೆ ವಂಚನೆಯ ಮಾಡುವರು
ಇಲ್ಲದ ಅನಾಥರಿಗೆ ಇಷ್ಟೊಂದನಿಕ್ಕರು
ಬಲ್ಲಿದಂಗೆ ಬಲು ಬಾಯ ಸವಿಯನುಣಿಸುವರು ೪

ಮಾಡಿದುಪಕಾರವನು ಮರೆತುಕೊಂಬರು ಮತ್ತೆ
ಕೂಡಲೇ ಕಾದುವರು ಕಪಟದಿಂದ
ರೂಢಿಯೊಳಗೆ ನಮ್ಮ ಪುರಂದರವಿಠ್ಠಲನ
ಪಾಡಿ ಪೊಗಳುವರಿಗಿನ್ನಾರ ಭಯವಿಲ್ಲ ೫

ಶಬ್ದ ಚಿಂತನ

ದಿನಬಳಕೆಯ ಕೆಲವು ಮಾತುಗಳನ್ನು ಎತ್ತಿಕೊಂಡು ಅವುಗಳ ಸ್ವಾರಸ್ಯವನ್ನು ಬಗೆಬಗೆಯಾಗಿ ಬಣ್ಣಿಸುವುದು ಈ ಪದಗಳಲ್ಲಿ ಕಾಣಬರುತ್ತದೆ. 'ಹುಚ್ಚು', 'ಯಂತ್ರ', 'ಹಣ್ಣು', 'ಮೂರ್ಖ', 'ಭ್ರಷ್ಟ', 'ಆನೆ ಬಂತು', 'ಎಮ್ಮೆ ಕಟ್ಟು', 'ನಾಯಿ ಬಂತು', 'ಮಿಠಾಯಿ', 'ಯಂತ್ರ ದೊರಕಿತು', 'ಮುತ್ತು ಕೊಳ್ಳಿ' ಮೊದಲಾದ ಶಬ್ದಗಳನ್ನು ಸಾಮಾಜಿಕ, ಆಧ್ಯಾತ್ಮಿಕ, ನೈತಿಕ ಚೌಕಟ್ಟುಗಳಲ್ಲಿ ಅಳವಡಿಸಿ, ಪ್ರತಿಮೆಗಳ ಹಂದರವನ್ನು ಹಬ್ಬಿಸಿದ್ದಾರೆ. ಕವಿತೆಯ ಕೌಶಲ, ಉಪಮೆಯ ಸಾರ್ಥಕತೆ, ಮಾತುಗಳ ಮೋಡಿ ಇವುಗಳ ಜೊತೆಗೆ ಸಮಾಜದಲ್ಲಿ ಸರಿಯಾದ ನಡುವಳಿಕೆಯ ಗೊತ್ತು ಗುರಿಗಳನ್ನೂ ಕಾಣಬಹುದು.

ಪೂರ್ವಿ ಆದಿ

ಹುಚ್ಚು ಹಿಡಿಯಿತು ಎನಗೆ ಹುಚ್ಚು ಹಿಡಿಯಿತು ಪ

ಅಚ್ಯುತನ ನಾಮವೆಂಬ ಮೆಚ್ಚುಮದ್ದು ತಲೆಗೆ ಏರಿ ಅ

ವಾಸುದೇವನೆಂಬ ನಾಮ ವದನದಲಿ ಒದರುವೆ ಮಾಯಾ
ಪಾಪವೆಂಬ ಅಂಗಿಯನ್ನು ಹರಿದು ಹರಿದು ಬಿಸುಡುವೆ
ಕ್ಲೇಶವೆಂಬ ಮುಡಿದ ಹೂವ ಕಿತ್ತು ಕಿತ್ತು ಬಿಸುಡುವೆ ಅನ್ಯ
ದೋಷವೆಂಬ ಗೋಡೆಯನ್ನು ಕೆರೆದು ಕೆರೆದು ಹಾಕುವಂಥ ೧

ಕೃಷ್ಣನಂಘ್ರಿ ಕಮಲಕೆರಗಿ ಜರಿದು ಜರಿದು ಬೀಳುವೆ ಎನ್ನ
ಕಷ್ಟವೆಂಬ ಕುಂಭವನ್ನು ಒಡೆದು ಒಡೆದು ಹಾಕುವೆ
ನಿಷ್ಠರನ್ನು ಕಂಡರವರ ಹಿಂದೆ ಹಿಂದೆ ತಿರುಗುವೆ ಸಲೆ
ದುಷ್ಟರನ್ನು ಕಂಡಕಡೆ ಕಲ್ಲು ಕಲ್ಲು ಬೀಸುವಂಥ ೨

ಮಂದಮತಿಗಳನ್ನು ಕಂಡರೆ ಮೂಕನಾಗುವೆನು ಹರಿಯ
ನಿಂದೆ ಮಾಡುವವರ ಮೇಲೆ ಮಣ್ಣು ತಂದು ಚೆಲ್ಲುವೆ
ತಂದೆ ಸಿರಿಪುರಂದರವಿಠಲನ್ನ ಪಾದವನ್ನು
ಹೊಂದಿಸುವ ಜನರ ಸೇರಿ ಹಾಡಿ ಪಾಡಿ ಕುಣಿಯುವಂಥ ೩

[ಭಕ್ತಿಯೆನ್ನುವುದು ರಸಾಭಿವ್ಯಕ್ತಿಯಲ್ಲಿ ಉನ್ಮಾದವೂ ಆದೀತು. ದಿವ್ಯೋನ್ಮಾದದ ಅನುಭವವನ್ನು ದಾಸರು ಇಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ.]

ಮದ್ದು—ಮದವೇರಿಸುವಂಥ ದ್ರವ್ಯ.
ವದನದಲಿ—ಬಾಯಲ್ಲಿ.
ಅಂಗಿ—ಜೀವಕ್ಕೆ ಇರುವ ಮಾಯಾವರಣ, ಕರ್ಮಾವರಣ.
ಕ್ಲೇಶ—ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶಗಳೆಂಬ ಐದು ಕ್ಲೇಶಗಳು.
ಗೋಡೆ—ಸ್ವರೂಪಜ್ಞಾನಕ್ಕೆ ಪ್ರತಿಬಂಧಕವಾದ ಸಾಮಗ್ರಿ.
ಜರಿದು—ಸರಿದು, ಕಾಲುಜಾರಿ ಬಿದ್ದು.
ಮಂದಮತಿಗಳನ್ನು...—'ನ ಬುದ್ಧಿಭೇದಂ ಜನಯೇದಜ್ಞಾನಾಂ' ಎಂದಿರುವುದರಿಂದ.

ಗಮನಶ್ರಮ ಏಕ

ಕಾಗದ ಬಂದಿದೆ ನಮ್ಮ
ಕಮಲನಾಭನದು ಈ ಪ

ಕಾಗದವನ್ನು ಓದಿಕೊಂಡು
ಕಾಲವ ಕಳೆಯಿರೊ ಅ

ಕಾಮ ಕ್ರೋಧವ ಬಿಡಿರೆಂಬೊ
ಕಾಗದ ಬಂದಿದೆ
ನೇಮನಿಷ್ಠೆಯೊಳಿರಿರೆಂಬೊ
ಕಾಗದ ಬಂದಿದೆ
ತಾಮಸ ಜನರ ಕೂಡದಿರೆಂಬೊ
ಕಾಗದ ಬಂದಿದೆ
ನಮ್ಮ ಕಾಮನಯ್ಯನು ತಾನೆ ಬರೆದ
ಕಾಗದ ಬಂದಿದೆ ೧

ಹೆಣ್ಣಿನಾಸೆ ಬಿಡಿರೆಂಬೊ
ಕಾಗದ ಬಂದಿದೆ
ಹೊನ್ನಿನಾಸೆ ಬಿಡಿರೆಂಬೊ
ಕಾಗದ ಬಂದಿದೆ
ಮಣ್ಣಿನಾಸೆ ಬಿಡಿರೆಂಬೊ
ಕಾಗದ ಬಂದಿದೆ ೨

ಗೆಜ್ಜೆ ಕಾಲ್ಕಟ್ಟಿರೆಂಬೊ
ಕಾಗದ ಬಂದಿದೆ ಹೆಜ್ಜೆ
ಹೆಜ್ಜೆಗೆ ಹರಿಯೆನ್ನಿರೆಂಬೊ
ಕಾಗದ ಬಂದಿದೆ
ಲಜ್ಜೆ ಬಿಟ್ಟು ಕುಣಿಯಿರೆಂಬೊ
ಕಾಗದ ಬಂದಿದೆ
ನಮ್ಮ ಪುರಂದರವಿಠ್ಠಲ ತಾನೆ ಬರೆದ
ಕಾಗದ ಬಂದಿದೆ ೩

ಕಾಗದ—ಆದೇಶ ; ಶಾಸ್ತ್ರ (ಶಂಸನ, ಶಾಸನ).

ಕಾಮನಯ್ಯನು ತಾನೆ ಬರೆದ—ಮನ್ಮಥನ ತಂದೆಯಾದ ನಾರಾಯಣನಿಂದಲೇ ವೇದವು ಪ್ರವೃತ್ತವಾಗಿದ್ದು, ಎಲ್ಲ ಶಾಸ್ತ್ರಗಳೂ ವೇದೋಪಬೃಂಹಣಕ್ಕಾಗಿಯೇ ಇವೆ.

ಗೆಜ್ಜೆ ಕಾಲ್ಕಟ್ಟಿರಿ—ಹರಿಸಂಕೀರ್ತನಕ್ಕಾಗಿ.

ಪಂತುವರಾಳಿ ಚಾಪು

ಹಣ್ಣು ಬಂದಿದೆ ಜನರು ಹಣ್ಣು ಕೊಳ್ಳಿರೋ ಪ

ಹಣ್ಣು ಎಂಬೊ ಹರಿನಾಮ ಎಂಬೋ ಶ್ರುತಿಯ ನಿಂಬೆಯ ಅ

ಮನದ ಭೂಮಿಯಲ್ಲಿ ಪುಟ್ಟಿ ಮತಿಗಳಿಂದ ಪಲ್ಲವಿಸಿ
ತಮಗೆ ತಮಗೆ ತಿಳಿದ ಹೊತ್ತು ಭಕುತಿಯಿಂದಲಿ
ಒಲಿದು ಗೊಂಚಲಾದ ಹಣ್ಣು ಜ್ಞಾನವೆಂಬೊ ಪಂಜರದ
ಲಿಳಿದು ನಾಲಿಗೆಯ ಮೇಲೆ ಬಂದು ಕುಳಿತ ಬಾಳೆಯ ೧

ಒಂದು ವರುಷ ಒಂದು ಫಲವು ಬಿತ್ತಿ ಬಂದ ಮಹಾ ರಾಮ
ಚಂದ್ರರೆಂಬೊ ಕಲ್ಪವೃಕ್ಷ ಕದಳಿ ಸಂತತಿ
ಕುಂದದಿಹುದು ಸಕಲ ಫಲವು ಅಲ್ಲಿ ಗೊನೆಗೂಡಿ ಗೋ
ವಿಂದ ರಾಮ ವಾಸುದೇವನೆಂಬೊ ಹಲಸಿನ ೨

ಹರಿಯ ನಾಮವನ್ನು ನಿತ್ಯ ಸ್ಮರಿಸಬಲ್ಲ ವಿಪ್ರರಿಗೆ
ಸುರರು ಮುನಿಗಳೆಲ್ಲ ಬಾಗುವರಯ್ಯ
ಗಿರಿಯ ಮೇಲಿಪ್ಪ ಅಲಮೇಲುಮಂಗ ಅರಸನಾದ
ಪುರಂದರವಿಠಲನೆಂಬೊ ಜಂಬುನೇರಳೆ ೩

ಪಲ್ಲವಿಸಿ—ಚಿಗುರೊಡೆದು.

ಕಲ್ಪವೃಕ್ಷ—ತೆಂಗಿನಕಾಯಿಗಳು.

ಕದಳಿ ಸಂತತಿ—ಬಾಳೆಯ ಹಣ್ಣುಗಳು.

ಗಿರಿಯ ಮೇಲಿಪ್ಪ—ತಿರುಮಲೆ ತಿರುಪತಿಯ ಬೆಟ್ಟದ ಮೇಲಿರುವ.

ಅಲಮೇಲುಮಂಗ—ಅಲರ್ ಮೇಲ್ ಮಂಗೈ ; ತಿರುಪತಿಯಲ್ಲಿ ತಿರುಚ್ಚಾನೂರು ಎಂಬಲ್ಲಿರುವ ದೇವತೆ, ಲಕ್ಷ್ಮೀದೇವಿಯ ಅವತಾರ.

೧೯೧

ಬಿಲಹರಿ ಅಟ್ಟ

ಹಣ್ಣು ಬಂದಿದೆ ಕೊಳ್ಳಿರೋ, ನೀವೀಗ
ಹಣ್ಣು ಬಂದಿದೆ ಕೊಳ್ಳಿರೋ ಪ

ಚಿನ್ನ ಬಾಲಕೃಷ್ಣನೆಂಬೊ, ಚೆನ್ನಾದ ಬಾಳೆಯ ಅ

ಹವ್ಯ ಕವ್ಯದ ಹಣ್ಣು ಸವಿವ ಸಕ್ಕರೆ ಹಣ್ಣು
ಭವರೋಗಗಳನೆಲ್ಲ ಕಳೆವ ಹಣ್ಣು
ನವನೀತಚೋರನೆಂಬ ಜವನ ಅಂಜಿಪ ಹಣ್ಣು
ಅವನಿಯೊಳು ಶ್ರೀರಾಮನೆಂಬೊ ಹಣ್ಣು ೧

ಕೊಳೆತು ಹೋಗುವುದಲ್ಲ ಹುಳಿತು ಹೋಗುವುದಲ್ಲ
ಕಳೆದು ಬಿಸಾಡಿಸಿಕೊಳುವುದಲ್ಲ
ಅಳತೆ ಕೊಂಬುವುದಲ್ಲ ಗಿಳಿ ಕಚ್ಚಿ ತಿಂಬೊದಲ್ಲ
ಒಳಿತಾದ ಹರಿಯೆಂಬೊ ಮಾವಿನಹಣ್ಣು ೨

ಕೆಟ್ಟು ನಾರುವುದಲ್ಲ ಬಿತ್ತಿ ಬೆಳೆಯುವುದಲ್ಲ
ಕಷ್ಟದಿ ಹಣ ಕೊಟ್ಟು ಕೊಂಬುವುದಲ್ಲ
ಸೃಷ್ಟಿಯೊಳಗೆ ನಮ್ಮ ಪುರಂದರವಿಠ್ಠಲ
ಕೃಷ್ಣರಾಯನೆಂಬೊ ಶ್ರೇಷ್ಠವಾದ ಹಣ್ಣು ೩

ಹವ್ಯ ಕವ್ಯ—ಹೋಮ, ಹವನ ಮೊದಲಾದ ಧಾರ್ಮಿಕ ಕ್ರಿಯೆಗಳಿಗೆ ಅನುಕೂಲ ವಾಗುವ.

ಕಮಾಚು ಅಟ್ಟ

ನಂದನ ತನಯ ಗೋವಿಂದನ ಭಜಿಪುದಾ
ನಂದವಾದ ಮಿಠಾಯಿ ಪ

ಬಂಧುಗಳನು ಭವರೋಗಗಳಲ್ಲವ
ನಿಂದಿಪುದೀ ಮಿಠಾಯಿ ಅ

ದಧಿ ಘೃತ ಕ್ಷೀರಕ್ಕಿಂತಲು ಇದು ಬಹು
ಅಧಿಕವಾದ ಮಿಠಾಯಿ
ಕದಳಿ ದ್ರಾಕ್ಷ ಖರ್ಜೂರ ರಸಗಳನು ಮೀರು
ವುದೀ ಮಿಠಾಯಿ ೧

ಪಂಚಭಕ್ಷ್ಯಗಳ ಷಡ್ರಸಾನ್ನಗಳ
ಮಿಂಚಿದಂಥ ಮಿಠಾಯಿ
ಕಂಚೀಶನೇ ರಕ್ಷಿಸು ಎಂದುಸುರುವ–
ರಂಜಿಕೆ ಬಿಡಿಪ ಮಿಠಾಯಿ ೨

ಜಪ ತಪ ಸಾಧನಗಳಿಗಿಂತಲು ಬಹು
ಅಪುರೂಪದ ಮಿಠಾಯಿ
ನಿಪುಣಮತಿಗಳಿಗೆ ಸಾಧ್ಯವಿಲ್ಲದಿಹ
ಪುರಂದರವಿಠಲ ಮಿಠಾಯಿ ೩

ಶಂಕರಾಭರಣ ಚಾಪು

ರಾಮನಾಮ ಪಾಯಸಕ್ಕೆ
ಕೃಷ್ಣನಾಮ ಸಕ್ಕರೆ ಪ

ವಿಠಲನಾಮ ತುಪ್ಪವ ಬೆರೆಸಿ
ಬಾಯಿ ಚಪ್ಪರಿಸಿರೊ ಅ

ಒಮ್ಮನ ಗೋಧಿಯ ತಂದು
ವೈರಾಗ್ಯ ಕಲ್ಲಲಿ ಬೀಸಿ
ಸುಮ್ಮನ ಸಜ್ಜಿಗೆ ತೆಗೆದು
ಸಣ್ಣ ಸೇವಗೆ ಹೊಸೆದು ೧

ಹೃದಯವೆಂಬೊ ಪಾತ್ರೆಯೊಳಗೆ
ಭಾವವೆಂಬೊ ಎಸರು ಇಟ್ಟು
ಬುದ್ಧಿಯಿಂದ ಪಕ್ವವ ಮಾಡಿ
ಹರಿವಾಣದೊಳಗೆ ನೀಡಿ ೨

ಆನಂದ ಆನಂದವೆಂಬೊ
ತೇಗು ಬಂದ ಪರಿಯಲಿ
ಆನಂದವಮೊರುತಿ ನಮ್ಮ
ಪುರಂದರವಿಠಲನ ನೆನೆಯಿರೊ ೩

ಒಮ್ಮನ—ಒಂದು ಮನಸ್ಸು, ಏಕಾಗ್ರಚಿತ್ತ.
ಸುಮ್ಮನ—ಒಳ್ಳೆಯ ಮನಸ್ಸು (ಸುಮನ).
ಭಾವ—ಭಕ್ತಿಭಾವ.
ಬುದ್ಧಿಯಿಂದ—ಮಾಹಾತ್ಮ್ಯಜ್ಞಾನದಿಂದ.
ಹರಿವಾಣದೊಳಗೆ—ಪ್ರತಿಬಿಂಬವಾದ ಜೀವರ ಸ್ವರೂಪದಲ್ಲಿ.

೧೯೪

ಕಲ್ಯಾಣಿ ಅಟ್ಟ

ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲರು
ಕಲ್ಲುಸಕ್ಕರೆ ಕೊಳ್ಳಿರೋ ಪ

ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು
ಫುಲ್ಲಲೋಚನ ಶ್ರೀಕೃಷ್ಣನಾಮವೆಂಬ ಅ

ಎತ್ತು ಹೇರುಗಳಿಂದ ಹೊತ್ತು ಮಾರುವುದಲ್ಲ
ಒತ್ತೊತ್ತಿ ಗೋಣಿಯೊಳು ತುಂಬುವುದಲ್ಲ
ಎತ್ತ ಹೋದರು ಬಾಡಿಗೆ ಸುಂಕವಿದಕಿಲ್ಲ
ಉತ್ತಮ ಸರಕಿದು ಅತಿ ಲಾಭ ಬರುವಂಥ ೧

ನಷ್ಟ ಬೀಳುವುದಲ್ಲ ನಾತ ಹುಟ್ಟುವುದಲ್ಲ
ಎಷ್ಟು ಒಯ್ದರು ಬೆಲೆ ರೊಕ್ಕವಿದಕಿಲ್ಲ
ಕಟ್ಟಿರುವೆಯು ತಿಂದು ಕಡಮೆಯಾಗುವುದಲ್ಲ
ಪಟ್ಟಣದೊಳಗೆ ಪ್ರಸಿದ್ಧವಾಗಿರುವಂಥ ೨

ಸಂತೆ ಸಂತೆಗೆ ಹೋಗಿ ಶ್ರಮಪಡಿಸುವುದಲ್ಲ
ಸಂತೆಯೊಳಗೆ ಇಟ್ಟು ಮಾರುವುದಲ್ಲ
ಸಂತತ ಭಕ್ತರ ನಾಲಗೆ ಸವಿಗೊಂಬ
ಕಾಂತ ಪುರಂದರವಿಠಲ ನಾಮವೆಂಬ ೩

ಕೇದಾರಗೌಳ   ಅಟ್ಟ

ನಿನ್ನ ನಾಮವೆ ಎನಗೆ ಅಮೃತಾನ್ನವು
ಇನ್ನು ಹಸಿದಿರಲೇಕೆ ಎನಗೆ ನೀನೊಲಿದಿರಲು ಪ

ಓಂಕಾರವೆಂಬ ನಿನ್ನ ನಾಮ ಉಪ್ಪಿನಕಾಯಿ
ಶಂಖಪಾಣಿಯ ನಾಮ ಶಾಕಾದಿ ಸೂಪ
ಸಂಕರುಷಣ ಎಂಬ ನಾಮ ದಿವ್ಯ ಶಾಲ್ಯಾನ್ನವು
ಪಂಕಜಾಕ್ಷ ನಿನ್ನ ನಾಮ ಪಳದ್ಯ ಸಾರು ೧

ಕೇಶವನೆಂಬ ನಾಮ ಕರಿದ ಹೂರಣ ಕಡುಬು
ವಾಸುದೇವನ ನಾಮ ವಡೆ ಶ್ಯಾವಿಗೆ
ಸಾಸಿರವೆಂಬ ನಾಮ ಶಾವಿಗೆ ಪರಮಾನ್ನ
ದೋಷದೂರನ ನಾಮ ಸೂಸಲ ಕಡುಬು ೨

ನಾರಾಯಣ ನಿನ್ನ ನಾಮ ನೊರೆಹಾಲು ಸಕ್ಕರೆ
ಶ್ರೀರಾಮನಾಮ ಸರವಳಿಗೆ ಸಜ್ಜಿಗೆ
ಕಾರುಣ್ಯನಿಧಿನಾಮ ಕರಿದ ಹಪ್ಪಳ ಸಂಡಿಗೆ
ನಾರಾಯಣನಾಮ ಪರಿಪರಿಯ ಪರಮಾನ್ನ ೩

ಯದುಪತಿಯೆಂಬ ನಾಮ ಎಣ್ಣೋರಿಗೆ ರಾಶಿ
ಮಧುಸೂದನನೆಂಬ ನಾಮ ಮಂಡಿಗೆಯು
ಚದುರ ಗೋವಳನಾಮ ಚೆಲುವ ಬೀಸೂರಿಗೆ
ಪದುಮನಾಭ ನಿನ್ನ ನಾಮ ಪರಿಪರಿಯ ಭಕ್ಷ್ಯ ೪

ದೇವಕೀ ಸುತನಾಮ ದಧ್ಯನ್ನದ ಮುದ್ದೆ
ಗೋವಿಂದನ ನಾಮ ಗುಳ್ಳೋರಿಗೆ
ಮಾವಮರ್ದನನಾಮ ಕಲಸು ಮೇಲೋಗರ
ರಾವಣಾರಿಯ ನಾಮ ದೋಸೆ ಸುಕ್ಕಿನುಂಡೆ ೫

ಗರುಡವಾಹನನಾಮ ಘೃತ ಪಯೋದಧಿ ತಕ್ರ
ಪರಮ ಪುರುಷನ ನಾಮ ಪನ್ನೀರು ಪಾನ
ಕರಿವರದ ನಿನ್ನ ನಾಮ ಕರ್ಪೂರದ ವೀಳ್ಯ
ಶರಧಿಶಯನನಾಮ ಶಯನಪರ್ಯಂಕ ೬

ಈ ಪರಿಯ ನಾಮಾವಳಿಯನು ನೆರೆ ಸವಿದುಂಬೆ
ಆಪತ್ತು ಬಿಡಿಸೆನ್ನ ಕ್ಷುಧೆಯ ನೂಕಿ
ಗೋಪಾಲ ಉರಗಾದ್ರಿ ಪುರಂದರವಿಠಲನೆ
ಶ್ರೀಪಾದ ನಂಬಿ ಅಪವರ್ಗವ ಸೇರುವೆ ೭

ಪಂತುವರಾಳಿ ಚಾಪು

ಯಂತ್ರ ದೊರಕಿತು ಎನಗೆ
ಯಂತ್ರ ದೊರಕಿತು ಪ

ಯಂತ್ರವಾಹಕ ನಾರಾಯಣನ
ಅಂತರಂಗದಿ ನೆನೆಸುವಂಥ ಅ

ಆಸೆಯಿಂದ ಮುಳುಗೋದಲ್ಲ
ಕ್ಲೇಶಬಟ್ಟು ತಿರುಗೋದಲ್ಲ
ವಾಸುದೇವ ಕೃಷ್ಣನೆಂಬ
ಶಾಶ್ವತವಾದ ದಿವ್ಯನಾಮ ೧

ಹಾಸಬಹುದು ಹೊದೆಯಬಹುದು
ಸೂಸಿ ಒಡಲ ತುಂಬಬಹುದು
ದಾಸರನ್ನು ಬಿಡದೆ ಪೊರೆವ
ಶ್ರೀಶನೆಂಬ ದಿವ್ಯನಾಮ ೨

ಒಂದು ಬಾರಿ ಸ್ಮರಿಸಿದರೆ
ಒಂದು ಕೋಟಿ ಯಜ್ಞಫಲವು
ಇಂದಿರೇಶ ಪುರಂದರ
ವಿಠಲನೆಂಬ ದಿವ್ಯನಾಮ ೩

[ನಾಮಸ್ಮರಣೆಯೆನ್ನುವುದು ಒಂದು ಯಂತ್ರ ; ಸಾಧನ. ಈ ಸಾಧನೆಯನ್ನು ಪ್ರೇರಿಸಿ, ನಡೆಸುವವನು ಅವನೇ ಆದ್ದರಿಂದ ಅವನು 'ಯಂತ್ರವಾಹಕ'. ನಾಮಸ್ಮರಣೆ ಬರಿಯ ಬಾಯಿಂದ ಜರುಗುವ ಕ್ರಿಯೆಯಲ್ಲ ; ಮನಸ್ಸಿನ ವ್ಯಾಪಾರವೆಂಬುದನ್ನು ಕಾಣಿಸಲು 'ಅಂತರಂಗದಿ' ಎಂದಿದ್ದಾರೆ.]

೧೯೭

ಪಂತುವರಾಳಿ ಆದಿ

ಮುತ್ತು ಕೊಳ್ಳಿರೋ ಜನರು
ಮುತ್ತುಕೊಳ್ಳಿರೋ ಪ

ಮುತ್ತು ಬಂದಿದೆ ಕೊಳ್ಳಿ
ಸಚ್ಚಿದಾನಂದ ದಿವ್ಯ ಅ

ಜ್ಞಾನವೆಂಬೋ ದಾರದಲಿ
ಪೋಣಿಸಿದ ದಿವ್ಯ ಮುತ್ತು
ಜ್ಞಾನದಿಂದ ಕೊಂಬುದಿದನು
ದೀನರಾದ ಭಕ್ತ ಜನರು ೧

ಕಟ್ಟಲಾಗದು ಮೂಗಿನಲಿ
ಇಟ್ಟು ಮೆರೆಯಲಾಗದಿದು
ಭ್ರಷ್ಟಜನಕೆ ಕಾಣಿಸದಂಥ
ಕೃಷ್ಣನೆಂಬೊ ಅಣಿಮುತ್ತು ೨

ಹಿಡಿಯಲಿಕ್ಕೆ ನಿಲುಕದದು
ಕಡೆ ಕಾಣದೆಂದು ಬೆಲೆಯು
ಪೊಡವಿಗೆಲ್ಲ ಪುರಂದರವಿಠಲ
ಒಡೆಯನೆಂಬೊ ದಿವ್ಯ ಮುತ್ತು ೩

ಕಾಂಬೋದಿ ಝಂಪೆ

ಭ್ರಷ್ಟರಾದರು ಮನುಜರು ಪ

ಅಷ್ಟ ಮದ ಗರ್ವದಲಿ ಹರಿಸ್ಮರಣೆಯನು ಮರೆತು ಅ

ಮಡದಿ ಮಾತನು ಕೇಳಿ ನಡೆದುಕೊಂಬನು ಭ್ರಷ್ಟ
ಪಡೆದ ಜನನಿಯನು ಬೈಯುವನು ಭ್ರಷ್ಟ
ಕಡವ ಕೊಟ್ಟವರೊಡನೆ ಧಡಿತನ ಮಾಡುವ ಭ್ರಷ್ಟ
ಬಡವರಿಗೆ ಕೊಟ್ಟ ನುಡಿ ನಡೆಸದವ ಭ್ರಷ್ಟ ೧

ಬಾರದೊಡವೆಗಳನ್ನು ಬಯಸುವನು ತಾ ಭ್ರಷ್ಟ
ಸೇರದವರೊಡನೆ ಸ್ನೇಹಿಸುವ ಭ್ರಷ್ಟ
ಶೌರಿದಿನ ವ್ರತವನಾಚರಿಸದವನತಿ ಭ್ರಷ್ಟ
ನಾರಿಯರ ನೆಚ್ಚಿದಾ ನರನು ಕಡು ಭ್ರಷ್ಟ ೨

ತಂತ್ರವನು ಅರಿಯದೆ ಮಂತ್ರ ಮಾಡುವ ಭ್ರಷ್ಟ
ಮಂತ್ರವಿಲ್ಲದ ವಿಪ್ರನತಿ ಭ್ರಷ್ಟನು
ಅಂತರವನರಿಯದೆ ನುಡಿದವನು ಭ್ರಷ್ಟ ಸ್ವ
ತಂತ್ರವಿಲ್ಲದೆ ಕಾರ್ಯ ನಡೆಸುವನು ಭ್ರಷ್ಟ ೩

ಹರಿಚರಿತ್ರೆಗಳನ್ನು ಜರಿದಾಡುವವ ಭ್ರಷ್ಟ
ಹರಿಯ ಶರಣರ ನೋಡಿ ನಿಂದಿಸುವ ಭ್ರಷ್ಟ
ಗುರುಹಿರಿಯರ ಪಾದಕ್ಕೆರಗದವ ಭ್ರಷ್ಟ
ನೆರೆಹೊರೆಯರನು ನೋಡಿ ಕರುಬುವನು ಭ್ರಷ್ಟ ೪

ಹರಿನಾಮವನು ದಿನದಿ ಸ್ಮರಿಸದಾತನು ಭ್ರಷ್ಟ
ಕರುಣವಿಲ್ಲದ ವಿಪ್ರನವ ಭ್ರಷ್ಟನು
ಕರುಣಾಳು ನಮ್ಮ ಸಿರಿ ಪುರಂದರವಿಠಲನ
ಚರಣಕಮಲವ ಸ್ಮರಿಸದವ ಭ್ರಷ್ಟನಯ್ಯ ೫

ಮುಖಾರಿ ಝಂಪೆ

ಮೂರ್ಖರಾದರು ಜನರು ಲೋಕದೊಳಗೆ ಪ

ಏಕ ದೈವವ ಬಿಟ್ಟು ಕಾಕು ದೈವವ ಭಜಿಸಿ ಅ

ಒಂಟಿಯಲಿ ಹೆಂಡತಿಯ ಬಿಡುವಾತನೇ ಮೂರ್ಖ
ನೆಂಟರಿಗೆ ಸಾಲವನು ಕೊಡುವಾತ ಮೂರ್ಖ
ಗಂಟನೊಬ್ಬರ ಕೈಯಲಿಡುವಾತ ಮೂರ್ಖ ಜನ
ಕಂಟಕನಾದವನು ಕಡು ಮೂರ್ಖನಯ್ಯ ೧

ಹಡೆದ ಮಕ್ಕಳ ಮಾರಿ ಒಡಲ ಹೊರೆವವ ಮೂರ್ಖ
ಮಡದಿ ಹುಟ್ಟಿದ ಮನೆಯೊಳಿರುವವನು ಮೂರ್ಖ
ಬಡತನವು ಬಂದಾಗ ಬೈದುಕೊಂಬುವ ಮೂರ್ಖ
ದೃಢಭಕ್ತಿಯಿಲ್ಲದವ ಕಡು ಮೂರ್ಖನಯ್ಯ ೨

ಮುಪ್ಪಿನಲಿ ಮದುವೆ ಮಾಡಿಕೊಂಬುವವ ಮೂರ್ಖ
ಸರ್ಪನಲಿ ಸರಸವಾಡುವನೆ ಮೂರ್ಖ
ಇಪ್ಪತ್ತು ಒಂದು ಕುಲ ಉದ್ಧರಿಸದವ ಮೂರ್ಖ
ಅಪ್ಪ ರಂಗಯ್ಯನ ಭಜಿಸದವ ಮೂರ್ಖನಯ್ಯ ೩

ಸತ್ತ ಕರುವಿನ ತಾಯ ಹಾಲ ಕರೆವವ ಮೂರ್ಖ
ಒತ್ತೆಯಿಲ್ಲದೆ ಸಾಲ ಕೊಡುವವನು ಮೂರ್ಖ
ಹತ್ತೆಂಟು ಬಗೆಯಲ್ಲಿ ಹಂಬಲಿಸುವವ ಮೂರ್ಖ
ಹೆತ್ತ ತಾಯಿಯ ಬೈವ ಕಡು ಮೂರ್ಖನಯ್ಯ ೪

ರಾಮನಾಮವ ನಂಬಿ ಭಜಿಸದಿದ್ದವ ಮೂರ್ಖ
ಹೇಮವನು ಗಳಿಸಿ ಉಣದವನು ಮೂರ್ಖ
ಕಾಮದಲಿ ಹಿರಿಯಳ ಕೂಡಿಕೊಂಡವ ಮೂರ್ಖ
ಭೂಮಿ ದಾನವ ತೆಗೆವ ಭೂಪತಿಯು ಮೂರ್ಖ ೫

ಉಂಡ ಮನೆಗೆರಡನ್ನು ಬಗೆವಾತನೇ ಮೂರ್ಖ
ಕೊಂಡೆ ಮಾತನು ಕೇಳಿ ಕುಣಿವವನು ಮೂರ್ಖ
ಪುಂಡರೀಕಾಕ್ಷ ಶ್ರೀ ಪುರಂದರವಿಠಲನ
ಕಂಡು ಕಂಡು ಭಜಿಸದವ ಕಡು ಮೂರ್ಖನಯ್ಯ ೬

ಬಿಲಹರಿ ಅಟ್ಟ

ನಾರಾಯಣನೆಂಬ ನಾಮದ ಬೀಜವ ನಿಮ್ಮ
ನಾಲಿಗೆ ತುದಿಯಿಂದಲಿ ಬಿತ್ತಿರಯ್ಯ ಪ

ಹೃದಯ ಹೊಲವ ಮಾಡಿ
ಮನವ ನೇಗಿಲ ಮಾಡಿ
ಶ್ವಾಸೋಚ್ಛ್ವಾಸ ಎರಡೆತ್ತು ಮಾಡಿ
ಜ್ಞಾನವೆಂಬ ಹಗ್ಗ
ಕಣ್ಣಿಯ ಮಾಡಿ
ನಿರ್ಮಮವೆಂಬ ಗುಂಟೆಲಿ ಹರವಿರಯ್ಯ ೧

ಮದ ಮತ್ಸರಗಳೆಂಬ
ಮರಗಳನೆ ತರಿದು
ಕಾಮಕ್ರೋಧಗಳೆಂಬ ಕಳೆಯ ಕಿತ್ತಿ
ಪಂಚೇಂದ್ರಿಯವೆಂಬ
ಮಂಚಿಕೆಯನೆ ಹಾಕಿ
ಚಂಚಲವೆಂಬ ಹಕ್ಕಿಯ ಹೊಡೆಯಿರಯ್ಯ ೨

ಉದಯಾಸ್ತಮಾನವೆಂಬ
ಎರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆಯುತಿರೆ
ಸ್ವಾಮಿ ಶ್ರೀ ಪುರಂದರ
ವಿಠಲನ ನೆನೆದರೆ
ಪಾಪರಾಶಿಯ ಪರಿಹರಿಸುವನಯ್ಯ ೩

[ನಾಮಸ್ಮರಣೆಯನ್ನು ಬೇಸಾಯದ ರೂಪಕಕ್ಕೆ ಹೊಂದಿಸಿಕೊಂಡಿರುವ ಪದ. ನಾರಾಯಣನೆಂಬ ನಾಮವೇ ಬೀಜ ; ಅದನ್ನುಚ್ಚರಿಸುವ ನಾಲಗೆಯೇ ಬೀಜವನ್ನು ಬಿತ್ತುವ ಸಾಧನ. ಅಂತರಂಗವೇ ಹೊಲ ; ಅಲ್ಲಿ ಉತ್ತಮ ಸಂಸ್ಕಾರಗಳಿಂದ ಉಳುವ ನೇಗಿಲು ಮನಸ್ಸು ; ಅದಕ್ಕೆ ಹೂಡಿರುವ ಎತ್ತುಗಳು ಶ್ವಾಸಕ್ರಿಯೆಗಳು. ಮಾಹಾತ್ಮ್ಯ ಜ್ಞಾನವೇ ಎತ್ತುಗಳನ್ನು ಕಟ್ಟಿರುವ ಹಗ್ಗ. ಅಹಂಕಾರ ಮಮಕಾರಗಳನ್ನು ಬಿಡುವುದೇ ಹಗ್ಗವನ್ನು ಕಟ್ಟುವ ಗೂಟ. ಪೈರು ಬೆಳೆಯುವುದಕ್ಕೆ ಅಡ್ಡಿಯಾಗುವ ಗಿಡಮರಗಳು ಮದ–ಮತ್ಸರಗಳು ; ಕಳೆ ಕಾಮಕ್ರೋಧ. ಮತ್ತೆ ಹಕ್ಕಿಗಳು ಬಂದು ಬೆಳೆಯನ್ನು ಹಾಳುಮಾಡದಂತೆ, ಹಕ್ಕಿಗಳನ್ನು ಹಿಡಿಯಲು ಮಂಚಿಕೆಯೊಂದನ್ನು ಹೊಲದಲ್ಲಿ ಕಟ್ಟುವರು. ಮನಸ್ಸಿನ ಚಾಂಚಲ್ಯವೆಂಬುದೇ ನಾಮಸ್ಮರಣೆಯ ಪೈರನ್ನು ಹಾಳುಮಾಡುವ ಹಕ್ಕಿ ; ಐದು ಇಂದ್ರಿಯಗಳ ಮೇಲೆ ಒಡೆತನವಿರುವುದೇ ಹಕ್ಕಿಗಳನ್ನು ಹಿಡಿಯುವ ಮಂಚಿಕೆ. 'ಇಂದ್ರಿಯಾಣಿ ಪ್ರಮಾಥಾನಿ ಹರಂತಿ ಪ್ರಸಭಂ ಮನಃ' ಎಂಬ ಗೀತಾವಾಕ್ಯದ ಪ್ರಭಾವ ಇಲ್ಲಿ ಕಾಣುತ್ತದೆ. ಮನುಷ್ಯನ ಆಯುಸ್ಸು ಮುಂಜಾನೆ–ಸಂಜೆಗಳಿಂದ ಸವೆಯುತ್ತ ಬರುತ್ತದೆ. ಹೀಗೆ ಬದುಕು ಸಾಗಿ ಹೋಗುತ್ತಿರುವಾಗ ನಾಮಸ್ಮರಣೆಯ ಬೆಳೆಯನ್ನು ಬೆಳೆದುಕೊಳ್ಳಬೇಕು.]

ಶಂಕರಾಭರಣ ಆದಿ

ಹರಿ ನಾರಾಯಣ ಹರಿ ನಾರಾಯಣ
ಹರಿನಾರಾಯಣ ಎನು ಮನವೆ ಪ

ನಾರಾಯಣನೆಂಬ ನಾಮದ ಬೀಜವ
ನಾರದ ಬಿತ್ತಿದ ಧರೆಯೊಳಗೆ ಅ

ತರಳ ಧ್ರುವನಿಂದ ಅಂಕುರಿಸಿತು ಅದು
ವರ ಪ್ರಹ್ಲಾದನಿಂದ ಮೊಳಕೆಯಾಯ್ತು
ಧರಣೀಶ ರುಕುಮಾಂಗದನಿಂದ ಚಿಗುರಿತು
ಕುರು ಪಿತಾಮಹನಿಂದ ಹೂವಾಯ್ತು ೧

ವಿಜಯನ ಸತಿಯಿಂದ ಕಾಯಾಯಿತು ಅದು
ಗಜೇಂದ್ರನಿಂದ ದೋರೆ ಹಣ್ಣಾಯ್ತು
ಶ್ರೀ ಶುಕಮುನಿಯಿಂದ ಪರಿಪಕ್ವವಾಯಿತು
ಅಜಾಮಿಳ ತಾನುಂಡು ರಸ ಸವಿದ ೨

ಕಾಮಿತ ಫಲವೀವ ನಾಮವೊಂದಿರಲಾಗಿ
ಹೋಮ ನೇಮ ಜಪ ತಪವೇಕೆ
ಸ್ವಾಮಿ ಶ್ರೀ ಪುರಂದರವಿಠಲನ ನಾಮವ
ನೇಮದಿಂದ ನೀ ನೆನೆ ಮನವೇ ೩

ಕುರುಪಿತಾಮಹ—ಭೀಷ್ಮ. ಭಾರತಯುದ್ಧವಾದ ಮೇಲೆ ಭೀಷ್ಮನು ಶರಶಯ್ಯೆಯ ಮೇಲೆ ಮಲಗಿರುತ್ತ, ಕೃಷ್ಣನನ್ನು ಸ್ತೋತ್ರ ಮಾಡಿದ ಪ್ರಸಂಗ ಮಹಾಭಾರತದ ಶಾಂತಿ ಪರ್ವದಲ್ಲಿ ಬರುತ್ತದೆ. ಈ ಭಾಗವು ಭೀಷ್ಮಸ್ತವರಾಜವೆಂದೇ ಪ್ರಸಿದ್ಧವಾಗಿದೆ.

ವಿಜಯನ ಸತಿ—ದ್ರೌಪದಿ ; ವಿಜಯನೆಂಬುದು ಅರ್ಜುನನ ಹೆಸರುಗಳಲ್ಲೊಂದು.

ಶುಕಮುನಿ—ಭಾಗವತವನ್ನು ಏಳುದಿನಗಳ ಕಾಲ ಪರೀಕ್ಷಿದ್ರಾಜನಿಗೆ ಶುಕಮುನಿಯು ಶ್ರವಣಮಾಡಿಸಿದುದು ಭಾಗವತಧರ್ಮ ಬೇರೂರಲು ಕಾರಣವಾಯಿತು.

ರಸ—ಭಕ್ತಿಯ ಸಾರವೆಂದರೆ ನಾಮಸ್ಮರಣೆ ; ಅಜಾಮಿಳನು ಮಾಡಿದ್ದು ಇದನ್ನೇ.

ಹೋಮ ನೇಮ ಜಪ ತಪವೇಕೆ—ವ್ಯಾಸರಾಯಸ್ವಾಮಿಗಳು.

'ಅನ್ಯದೇವತೆಯಾಕೆ ಅನ್ಯಪ್ರತಿಮೆಯು ಯಾಕೆ
ಅನ್ಯವಾದ ಮಂತ್ರ ತಂತ್ರ ವ್ಯಾಕೆ
ಎನ್ನಲ್ಲಿ ಭರಿತ ಸಾಧನಂಗಳಿರುತಿರೆ
ಚೆನ್ನಾಗಿ ಶ್ರೀಕೃಷ್ಣಸ್ವಾಮಿಯ ಪೂಜಿಪೆ'

ಎಂದು ಹೇಳಿರುವುದರ ಛಾಯೆ.



ಕಾಂಬೋದಿ ಅಟ್ಟ

ಹರಿನಾಮದರಗಿಣಿಯು ಹಾರುತಿದೆ ಜಗದಿ
ಪರಮ ಭಾಗವತರು ಬಲೆಯ ಬೀಸುವರು ಪ

ಕೋಪವೆಂಬ ಮಾರ್ಜಾಲ ಕಂಡರೆ ನುಂಗುವುದು
ತಾಪವೆಂಬುವ ಹುಲಿಯು ಕೊಂಡೊಯ್ವುದು
ಕಾಪಾಡಲದನೊಯ್ದು ಹೃದಯದೊಳಗಿಂಬಿಟ್ಟು
ಆಪತ್ತಿಗೊದಗುವುದು ಆ ಮುದ್ದು ಅರಗಿಣಿಯು ೧

ದಾರಿಯಲಿ ನಡೆವಾಗ ಚೋರರುಪಟಳವಿಲ್ಲ
ಮಾರಿ ಬಂದರೆ ಅದನು ಹೊಡೆದು ನೂಕುವುದು
ಕ್ರೂರಯಮಭಟರನ್ನು ಮೂಗು ರೆಕ್ಕೆಲಿ ಬಡಿದು
ದಾರಿ ತೋರುವುದು ಮುರಾರಿ ಪಟ್ಟಣಕೆ ೨

ಎಷ್ಟು ವರ್ಣಿಸಲಿ ನಾ ಈ ಮುದ್ದು ಅರಗಿಣಿಯ
ಹೊಟ್ಟೆಯೊಳಗೀರೇಳು ಜಗವನಿಂಬಿಟ್ಟು
ಸೃಷ್ಟೀಶ ಪುರಂದರವಿಠ್ಠಲನ ನೆನೆನೆನೆದು ಮುಟ್ಟಿ
ಭಜಿಸುವುದು ನೀವೀ ಮುದ್ದು ಅರಗಿಣಿಯ ೩

ಹೃದಯದೊಳಗೆ ಇಂಬಿಟ್ಟು—ಮನಸ್ಸಿನಲ್ಲಿ ಪ್ರೀತಿಯಿಂದ ಕೂಡಿಟ್ಟರೆ.

ಮುರಾರಿಪಟ್ಟಣಕೆ ದಾರಿ—ಮುಕ್ತಿಗೆ, ವೈಕುಂಠಕ್ಕೆ, ದಾರಿಯಾದ ಜ್ಞಾನ, ಭಕ್ತಿ, ವಿರಕ್ತಿಗಳನ್ನು.

ಈರೇಳು ಲೋಕವ—ಹದಿನಾಲ್ಕು ಲೋಕಗಳನ್ನು.

ಆಹಿರಿ | ಅಟ್ಟ

ಕಟ್ಟಬೇಕು ಕಾಟದೆಮ್ಮೆ ಅದರ ಹಯನ
ಎಷ್ಟಾದರೂ ಉಣಬೇಕು ಪ

ಹಮ್ಮುಯೆಂಬೊದೆ ಎಮ್ಮೆ ಗಮ್ಮುಯೆಂಬೊದೆ ಹಗ್ಗ
ಹೆಮ್ಮೆಯೆಂಬೊದೆ ಅದಕೆ ಧಮ್ಮಗುದ್ದಿ
ಸುಮ್ಮನ ಮನದಿಂದ ಹಾಲ್ಕರೆದು ಪರ
ಬೊಮ್ಮನಿಗರ್ಪಿಸಬೇಕು ನಿತ್ಯದಿ ೧

ಚಂಡಿತನವೆಂಬ ಹಿಂಡಿ ಇಡಬೇಕು
ದಿಂಡತನವೆಂಬ ಪೆಂಡೆಮೇವು
ಪುಂಡತನವೆಂಬೋ ಪಿಂಡಿ ರುಬ್ಬಿಡಬೇಕು
ಪಾಂಡುರಂಗ ಗುಂಡಿ ಒಳಗೆ ಹಿಂಡಿಕೊಬೇಕು ೨

ಅಂತರಂಗದ ಒಳಗೆ ಭ್ರಾಂತಿ ಬಿಡಿಸುವ ಎಮ್ಮೆ
ಅಂತದಾರಿಗೂ ತಿಳಿಯದಂಥ ಎಮ್ಮೆ
ಕಂತುಜನಕ ಸ್ವಾಮಿ ಪುರಂದರವಿಠಲನ
ಸಂತರ ಮನೆಯೊಳಗೆ ಇಂಥೆಮ್ಮೆ ಇರಬೇಕು ೩

ಕಾಟದೆಮ್ಮೆ—ಕಾಡೆಮ್ಮೆ ; ತೊಂಡು ತಿರುಗುವ ಎಮ್ಮೆ.
ಹಯನ—ಹಾಲು (ಪಯ).
ಹಮ್ಮು—ಗರ್ವ.
ಗಮ್ಮು—ಶಬ್ದ ಮಾಡುವುದು ; ಇಲ್ಲಿ ನಾಮಸ್ಮರಣೆ.
ಹೆಮ್ಮೆ—ಹಿರಿತನದ ತೋರಿಕೆ (ಪೆಂಪು).
ಸುಮ್ಮನ ಮನದಿಂದ—ಒಳ್ಳೆಯ ಮನಸ್ಸಿನಿಂದ.
ದಿಂಡತನ—ಒರಟುವರ್ತನೆ.
ಪೆಂಡೆಮೇವು—ಕಾಳುಕಡ್ಡಿ.
ಪಿಂಡಿ—ಹಿಂಡಿ.
ಗುಂಡಿ ಒಳಗೆ—ಎದೆಯ ಆಳದಲ್ಲಿ (ಹೃದಯದಲ್ಲಿ), ಪಾತ್ರೆಯಲ್ಲಿ.
ಕಂತುಜನಕ—ಮನ್ಮಥನ ತಂದೆ, ವಿಷ್ಣು.

ಪೂರ್ವಿ ಅಟ್ಟ

ಕಾಗೆ ಕೂಗಿತಲ್ಲ ಈಗ ಒಂದು
ಕಾಗೆ ಕೂಗಿತಲ್ಲ ಪ

ಎಲ್ಲರೇಳದ ಮುನ್ನ ಗುಲ್ಲು ಮಾಡುತಲೆದ್ದು
ಚೆಲ್ಲಿದ ಧವಧಾನ್ಯವ ಮೆಲ್ಲುತ
ಮಲ್ಲಿಗೆ ಮುಡಿಯುವರು ಮರೆದೊರಗಲು ಬೇಡಿ
ಫುಲ್ಲನಾಭನ ಪೂಜಾಸಮಯವಿದೆಂದು ೧

ಯಾರು ಏಳದ ಮುನ್ನ ಓರಂತೆ ತಾನೆದ್ದು
ಕೇರಿಕೇರಿಯಲಿ ಸಂಚರಿಸುತ
ಓರೆ ಮೋರೆಯ ಮೂರು ಕಡೆಗೆ ತಿರುಗಿಸುತ್ತ
ಊರಿಂದ ನೆಂಟರು ಬರುವುದ ಪೇಳ್ವ ೨

ಪಿತೃಗಳ ಕಾರ್ಯಕ್ಕೆ ಅಗತ್ಯವಾಗೋದು
ಹತವಾದವರ ಕಾಂಕ್ಷೆ ತಿಳಿಸುವುದು
ಅತಿ ಹೇಯ ವಸ್ತು ಈ ಕಾಗೆಯೆನಲು ಬೇಡಿ
ಹಿತವಾದ ಶಕುನವ ನುಡಿವುದೀ ಕಾಗೆ ೩

ಕಷ್ಟವ ಇಷ್ಟವನಿಷ್ಟವ ಸಾರುತ್ತ
ಸೃಷ್ಟಿ ಸಂಪದವ ಕೈಗೂಡಿಸುತ್ತ
ಶ್ರೇಷ್ಠಬ್ರಾಹ್ಮಣರ ಬಲಿಹರಣವ ತಿಂದು
ಪಟ್ಟಸಾಲೆ ಮೇಲೆ ಕೂಗುವ ಕಾಗೆ ೪

ಮಂಗಳಮಹಿಮಗೆ ಮಹಲಕ್ಷ್ಮಿಯರಸಗೆ
ಹಿಂಗದೆ ಮಾನವಪ್ರಿಯನಿಗೆ
ಗಂಗೆಯ ಪಿತ ಶ್ರೀ ಪುರಂದರವಿಠಲಗೆ
ಸಿಂಗಾರದ ಪೂಜೆಸಮಯವೆಂದು ೫

ಓರಂತೆ—ಯಾವಾಗಿನಂತೆ.
ಓರೆಮೋರೆಯ—ಸೊಟ್ಟಮೂತಿಯನ್ನು.
ಕಾಂಕ್ಷೆ—ಬಯಕೆ.
ಪಟ್ಟಸಾಲೆ—ಪಡಸಾಲೆ, ವರಾಂಡ.

ಶ್ರೀರಾಗ ಆದಿ

ಆನೆ ಬಂದಿತಮ್ಮಮ್ಮ ಮರಿ
ಯಾನೆ ಬಂದಿತಮ್ಮಮ್ಮ ಪ

ತೊಲಗಿರೆ ತೊಲಗಿರೆ ಪರಬ್ರಹ್ಮ
ಬಲು ಸರಪಣಿ ಕಡಕೊಂಡು ಬಂತಮ್ಮ ಅ

ಕಪಟನಾಟಕದ ಮರಿಯಾನೆ
ನಿಕಟಸಭೆಯಲಿ ನಿಂತಾನೆ
ಶಕಟನ ಬಂಡಿಯ ಮುರಿದಾನೆ
ಕಪಟನಾಟಕದಿಂದ ಸೋದರಮಾವನ
ನಕಟಕಟೆನ್ನದೆ ಕೊಂದಾನೆ ೧

ಕೀಳು ಭುವನವನುಂಡಾನೆ ಸ್ವಾಮಿ
ಬಾಲಕನೆಂಬ ಚೆಲ್ವಾನೆ
ಬಲ್ಲ ಗೋವುಗಳ ಕೂಡೆ ನಲಿದಾನೆ
ಚೆಲುವ ಕಾಳಿಂಗನ ಹೆಡೆಯಲಾಡುತ್ತ
ಸೊಬಗು ಹೆಚ್ಚಿದ ಪಟ್ಟದಾನೆ
ಮದ ಸೊಕ್ಕಿ ಬರುತಾನೆ ೨

ಭೀಮಾರ್ಜುನರನ್ನು ಗೆಲಿಸ್ಯಾನೆ
ಪರಮ ಭಾಗವತರ ಪ್ರಿಯಾನೆ
ಮುದದಿಂದ ಮಥುರೆಲಿ ನಿಂತಾನೆ
ಮದಮುಖದಸುರರ ದಿಗಿಲಿಟ್ಟು ಕೊಂದು
ಪದುಮಲೋಚನ ಪುರಂದರವಿಠಲನೆಂಬಾನೆ ೩

[ದಷ್ಟಪುಷ್ಟವಾಗಿರುವ ಸಣ್ಣ ಮಗು ಮರಿಯಾನೆಯಂತೆ ತೂಗಾಡುತ್ತ ಬರುವ ಚಿತ್ರ.]

ತೊಲಗಿರೆ—ದೂರ ಸರಿಯಿರಿ.
ಕಡಕೊಂಡು—ಕಡಿದುಕೊಂಡು.
ಸೋದರಮಾವನ—ಕಂಸನನ್ನು.

ಕೇದಾರಗೌಳ	ಅಟ್ಟ

ನಾಯಿ ಬಂದದಪ್ಪ ಅಣ್ಣ ಅತ್ತಲಾಗಿರಿ	ಪ

ನಾಯಿ ಅಂದರೆ ನಾಯಿಯಲ್ಲ
ಮಾನವ ಜನ್ಮದ ಹೀನ ನಾಯಿ	ಅ

ಕೊಟ್ಟ ಸಾಲವ ಕೊಡದ ನಾಯಿ
ಇಟ್ಟ ಭಾಷೆಯ ತಪ್ಪುವ ನಾಯಿ
ಕಟ್ಟೆ ಮೇಲೆ ಕುಳಿತುಕೊಂಡು
ಅಟ್ಟಹಾಸದಿ ಬೊಗಳುವ ನಾಯಿ	೧

ಕೊಟ್ಟು ಕುದಿಯುವ ಕೆಟ್ಟನಾಯಿ
ಇಟ್ಟ ಅನ್ನವ ಹಂಗಿಪ ನಾಯಿ
ಪುಟ್ಟಿ ಮಾತೆ ಗರ್ಭದಲ್ಲಿ
ಕೆಟ್ಟ ಕೃತ್ಯವ ಮಾಳ್ಪ ನಾಯಿ	೨

ಪಟ್ಟಸ್ತ್ರೀಯಳ ಬಿಟ್ಟಿಹ ನಾಯಿ
ಬಿಟ್ಟ ಸ್ತ್ರೀಯಳ ಆಳುವ ನಾಯಿ
ದಿಟ್ಟ ಶ್ರೀಪುರಂದರವಿಟ್ಠಲರಾಯನ ಮನ
ಮುಟ್ಟಿ ಭಜಿಸದೆ ಹೋದ ನಾಯಿ	೩

[ನಾಯಿಯೆಂದರೆ ಮನುಷ್ಯನಾಗಿದ್ದೂ ನಾಯಿಯ ಬಾಳನ್ನು ಬಾಳುತ್ತಿರುವವನು; 'ನಾಯಿ ಬಾಳು', ಎನ್ನುತ್ತಾರೆ. ಅವನನ್ನು ಹತ್ತಿರ ಸೇರಿಸಬಾರದು ; ಅವನಿಂದ ದೂರವಿರಬೇಕು ಎಂದು ಇಲ್ಲಿನ ಉಪದೇಶ. ಮನುಷ್ಯನು ನಾಯಿಯಾಗುವುದು ಹೇಗೆ ಎನ್ನುವ ಒಕ್ಕಣೆಯೂ ಇಲ್ಲಿದೆ. 'ನಾಯಿ' ಎಂಬ ಮಾತಿಗೆ ವ್ಯವಹಾರದಲ್ಲಿ ಅಷ್ಟು ಹೀನಾಯವಿರುವುದು ಏಕೆಂಬ ವಿವರಣೆಯೇ ಇದು.]

ಹಿಂದೂಸ್ಥಾನಿ ಕಾಪಿ ಆದಿ

ಗುಣವಾಯಿತೆನ್ನ ಭವರೋಗ
ಕೃಷ್ಣನೆಂಬ ವೈದ್ಯನು ದೊರಕಿದನು
ಗುಣವಾಗುವವರಿಗೆ ಎಣೆಯಿಲ್ಲ
ಗುಣವಂತರಾಗುವರು ಭವವೆಲ್ಲ ಪ

ಸಂತತ ಹರಿಭಕ್ತಿಯನುಪಾನ
ಸಂತತ ಗುರುಭಕ್ತಿ ಮರುಪಾನ
ಸಂತತ ಶ್ರವಣ ಕಠಿನ ಪಥ್ಯ
ಸಂತತ ಕೀರ್ತನ ಉಷ್ಣೋದಕ ೧

ಚಂದ್ರೋದಯ ಉಂಟು ಈತನಲಿ
ಚಿಂತಾಮಣಿಯುಂಟು ಈತನಲಿ
ಸಂಚಿಯೊಳಗೆ ತುಂಬ ಮಾತ್ರೆಗಳುಂಟು
ಚೆನ್ನಾಗಿ ಗುಣಮಾಡುವನೀತ ೨

ಗುರುಸ್ಮರಣೆಯು ಶುಂಠಿ ಮೆಣಸು
ಹರಿದಿವ್ಯನಾಮವು ಸಾರನ್ನ
ಗುರುಪಾದಸೇವೆಯು ಸಿಹಿಸಾರು
ಹರಿಪಾದೋದಕವೇ ಘೃತವು ೩

ಸಹಸ್ರನಾಮದಿ ತಾ ವಂದ್ಯ
ಸಕಲ ಸ್ವತಂತ್ರಕೆ ತಾ ಬಾಧ್ಯ
ಹರಿಸರ್ವೋತ್ತಮನೆಂಬ ವೈದ್ಯ
ಪುರಂದರವಿಠಲನೆ ನಿಜವೈದ್ಯ ೪

[ಸಂಸಾರವೆಂಬುದೇ ಒಂದು ರೋಗ. ಅದನ್ನು ಪರಿಹರಿಸಿಕೊಳ್ಳಲು ಅದರ ನಿಯಾಮಕನಾದ ಪರಮಾತ್ಮನನ್ನೇ ಮೊರೆಹೋಗಬೇಕು. ಭಕ್ತನಾದವನಿಗೆ ಈ ರೋಗ ಗುಣವಾದಂತೆ.]

ಶಂಕರಾಭರಣ ಅಟ್ಟ

ಮಣ್ಣಿಂದ ಕಾಯ ಮಣ್ಣಿಂದ ಪ

ಮಣ್ಣಿಂದ ಸಕಲ ದೇಶಗಳೆಲ್ಲ
ಮಣ್ಣಿಂದ ಸಕಲ ವಸ್ತುಗಳೆಲ್ಲ
ಮಣ್ಣ ಬಿಟ್ಟವರಿಗೆ ಆಧಾರವಿಲ್ಲ
ಅಣ್ಣಗಳಿರೆಲ್ಲರು ಕೇಳಿರಯ್ಯ ಅ

ಅನ್ನ ಉದಕ ಊಟವೀಯೋದು ಮಣ್ಣು
ಬಣ್ಣ ಬಂಗಾರ ಬೊಕ್ಕಸವೆಲ್ಲ ಮಣ್ಣು
ಉನ್ನತವಾದ ಪರ್ವತವೆಲ್ಲ ಮಣ್ಣು
ಕಣ್ಣು ಮೂರುಳ್ಳನ ಕೈಲಾಸ ಮಣ್ಣು ೧

ದೇವರ ಗುಡಿ ಮಠ ಮನೆಯೆಲ್ಲ ಮಣ್ಣು
ಆವಾಗ ಅಡುವ ಮಡಕೆಯು ತಾ ಮಣ್ಣು
ಕೋವಿದರಸರ ಕೋಟೆಗಳೆಲ್ಲ ಮಣ್ಣು
ಪಾವನ ಗಂಗೆಯು ತಡಿಯೆಲ್ಲ ಮಣ್ಣು ೨

ಭತ್ತಭರಣ ಧಾನ್ಯ ಬೆಳೆಯುವುದೆ ಮಣ್ಣು
ಸತ್ತವರನು ಹೂಳಿಸಿಡುವದೆ ಮಣ್ಣು
ಉತ್ತಮವಾದ ವೈಕುಂಠವೇ ಮಣ್ಣು
ಪುರಂದರವಿಠಲನ್ನ ಪುರವೆಲ್ಲ ಮಣ್ಣು ೩

[ಇಲ್ಲಿ ಮಣ್ಣೆಂದರೆ ಮೂಲ ಪ್ರಕೃತಿ.]

ಆವಾಗ ಅಡುವ—ಯಾವಾಗಲೂ ಅಡುಗೆ ಮಾಡುವ.
ಕೋವಿದರಸರ—ಬಲವುಳ್ಳ ರಾಜರ.
ವೈಕುಂಠವೇ ಮಣ್ಣು—ವೈಕುಂಠವೆಂಬ ಅಪ್ರಾಕೃತವಾದ ಲೋಕವು ಮೂಲಪ್ರಕೃತಿ ಯಾದ ಲಕ್ಷ್ಮಿಯು ರೂಪವೇ.

ಪಂತುವರಾಳಿ　　　　　　　　　　　　　　　　　　ಅಟ್ಟ

ಮಾಯವಾದಿ ಗಂಡನನೊಲ್ಲೆನೆ ಅವನ
ಮಾಯರಾಣಿ ಪೂಜೆ ಮಾಡಲಾರೆನಕ್ಕ　　　　ಪ

ಹೆಗಲ ಹಸಿಬೆಯೊಳಗಿಟ್ಟ ಮಡಿಯನುಟ್ಟು
ಗಗನದಿಂದಿಳಿದ ಗಂಗೆಯ ತೆರದಿ
ಅಗೆಯ ಮೃತ್ತಿಕೆಯ ಸರ್ವಾಂಗಕ್ಕೆ ಲೇಪಿಸಿ ಎ
ನಗೆ ಮೈಯ ತೊಳೆಯಲೀಸನೆ ಭ್ರಷ್ಟ ಖೋಡಿ　　　　೧

ನಿಷ್ಠೆಯಿಂದಲಿ ಶಾಲಗ್ರಾಮಶಿಲೆಯ ಸಂ
ಪುಷ್ಟದೊಳಿರಿಸಿ ಪೂಜಿಸು ಎಂದರೆ
ಭ್ರಷ್ಟರು ಕೊಂಬುವ ಮದ್ಯಪಾನವ ಮಾಡಿ
ಜೆಟ್ಟಿದೇವಿಯ ಪೂಜೆ ಮಾಡೆಂಬೋನಕ್ಕ　　　　೨

ಎಳೆ ತುಳಸಿ ಗಂಗೆ ಅಗ್ರೋದಕದಿ ನಿ
ರ್ಮಲವಾಗಿ ಪೂಜೆಯ ಮಾಡೆಂದರೆ
ಬಿಳಿ ನೀರ ಕುಡಿದು ಬತ್ತಲೆ ಬೇವು ಉಟ್ಟು
ಹುಳಿ ಮೂಲಂಗೀರುಳ್ಳಿ ತಿಂಬುವನೆ ಖೋಡಿ　　　　೩

ಹರಿದಿನದುಪವಾಸ ಇರುಳಲಿ ಜಾಗರ
ವರಭಕುತಿಯಲಿ ಆಚರಿಸೆಂದರೆ
ಹುರಳಿ ಗುಗ್ಗುರಿ ಮುಕ್ಕಿ ಮೇಲೆ ಮಜ್ಜಿಗೆ ಕುಡಿದು
ಹಿರಿಯ ಹೆಬ್ಬುಲಿಯಂತೆ ನಿದ್ರಿಪ ಖೋಡಿ　　　　೪

ಸೃಷ್ಟಿಗಧಿಕನಾದ ವರದ ಶ್ರೀ ಪುರಂದರ
ವಿಠ್ಠಲನ ಭಜನೆ ಮಾಡೆಂದರೆ
ಮುಷ್ಟಿ ಭಂಗಿಯ ತಿಂದು ಲಿಂಗಪೂಜೆಯ ಮಾಡಿ
ಇಷ್ಟ ಸಲ್ಲಿಸುತೇನೆಂದೆಳೆಯುವ ಖೋಡಿ　　　　೫

ಶಂಕರಾಭರಣ ಆದಿ

ಸ್ನಾನ ಮಾಡಿರಯ್ಯ ಜ್ಞಾನತೀರ್ಥದಲಿ
ನಾನು ನೀನೆಂಬಹಂಕಾರವ ಬಿಟ್ಟು ಪ

ತನ್ನೊಳು ತಾನೆ ತಿಳಿದರೊಂದು ಸ್ನಾನ
ಅನ್ಯಾಯಗಾರಿ ಕಳೆದರೊಂದು ಸ್ನಾನ
ಅನ್ಯಾಯವಾಡದಿದ್ದರೊಂದು ಸ್ನಾನ
ಚೆನ್ನಾಗಿ ಹರಿಯ ನೆನೆದರೊಂದು ಸ್ನಾನ ೧

ಪರಸತಿಯ ಬಯಸದಿದ್ದರೆ ಒಂದು ಸ್ನಾನ
ಪರನಿಂದೆ ಮಾಡದಿದ್ದರೆ ಒಂದು ಸ್ನಾನ
ಪರದ್ರವ್ಯ ಅಪಹರಿಸದಿರೆ ಒಂದು ಸ್ನಾನ
ಪರತತ್ವ ತಿಳಿದುಕೊಂಡರೆ ಒಂದು ಸ್ನಾನ ೨

ತಂದೆತಾಯಿಗಳ ಸೇವೆ ಒಂದು ಸ್ನಾನ
ಮುಂದಿನ ಮಾರ್ಗ ತಿಳಿದರೊಂದು ಸ್ನಾನ
ಬಂಧನವನು ಬಿಡಿಸಿದರೊಂದು ಸ್ನಾನ
ಸಂಧಿಸಿ ತಿಳಿದುಕೊಂಡರೆ ಸೇತು ಸ್ನಾನ ೩

ಅತ್ತೆ ಮಾವನ ಸೇವೆಯೊಂದು ಸ್ನಾನ
ಭರ್ತನ ಮಾತು ಕೇಳುವುದೊಂದು ಸ್ನಾನ
ಕ್ಷೇತ್ರಪಾತ್ರರ ಸಹವಾಸ ಒಂದು ಸ್ನಾನ
ಪಾರ್ಥಸಾರಥಿ ನಿಮ್ಮ ಧ್ಯಾನವೆ ಸ್ನಾನ ೪

ವೇದ ಶಾಸ್ತ್ರಗಳನೋದಿದರೊಂದು ಸ್ನಾನ
ಭೇದಾಭೇದ ತಿಳಿದರೊಂದು ಸ್ನಾನ
ಸಾಧು ಸಜ್ಜನರ ಸಂಗ ಒಂದು ಸ್ನಾನ
ಪುರಂದರವಿಠಲನ ಧ್ಯಾನವೆ ಸ್ನಾನ ೫

ಮಧ್ಯಮಾವತಿ ಆದಿ

ಸಾಧುಸಜ್ಜನರೊಳಗಿರುವೋದೆ ಹಬ್ಬ
ವೇದಾಂತದರ್ಥವ ತಿಳಿವೋದೆ ಹಬ್ಬ ೧

ಭೇದಬುದ್ಧಿಗಳೆಲ್ಲ ಬಿಡುವೋದೆ ಹಬ್ಬ
ಭಾಗೀರಥಿಲಿ ಲೋಲಾಡುವುದೆ ಹಬ್ಬ ೨

ಸಂಕಲ್ಪ ಸಿದ್ಧಿ ಮನಕೆ ದೊಡ್ಡ ಹಬ್ಬ
ನಿಶ್ಚಿಂತ ಯೋಗಿಗೆ ಅನುದಿನ ಹಬ್ಬ ೩

ಸಾವಿಲ್ಲದವನ ಸಂಸಾರದಿ ಹಬ್ಬ
ಶರೀರಕ್ಕೆ ವ್ಯಾಧಿ ಬಾರದೊಡೆ ಹಬ್ಬ ೪
ಸಂಚಿತ ಕರ್ಮವ ಕಳೆವೋದೆ ಹಬ್ಬ
ಪಂಚಮುಖನಾಭನ ಭಜಿಸುವುದೆ ಹಬ್ಬ ೫

ಕಂಗಳು ಕಾಶಿಯು ಕಾಂಬೋದೆ ಹಬ್ಬ
ಶ್ರೀವಿಶ್ವಪತಿಯು ಭಜಿಸುವುದೆ ಹಬ್ಬ ೬

ಭೂಲೋಕದೊಳು ಕಾಶಿವಾಸವೆ ಹಬ್ಬ
ಪುರಂದರವಿಠಲನ್ನ ಭಜಿಸುಪುದೆ ಹಬ್ಬ ೭

೨೧೨

ಕಾಂಬೋದಿ ಝಂಪೆ

ತುರುಕರು ಕರೆದರೆ ಉಣಬಹುದಣ್ಣ
ತುರುಕರು ಕರೆದರೆ ಅತಿ ಪುಣ್ಯವಯ್ಯ ಪ

ತುರುಕರಿಂದ ಮುಟ್ಟುಮುಡಿ ಬಿಟ್ಟು ಹೋಗೋದು
ತುರುಕರಿಂದಲಿ ಎಂಜಲು ಹೋಗೋದು
ತುರುಕರ ಕೂದಲು ತುರುಬಿಗೆ ಸುತ್ತಿದರೆ
ಎಣಿಕೆಯಿಲ್ಲದ ಮುತ್ತೈದೆಯರಣ್ಣ ೧

ತುರುಕರಿಂದ ಸ್ವರ್ಗ ಸಾಧನವಾಗೋದು
ತುರುಕರಿಂದ ನರಕ ದೂರವಯ್ಯ
ತುರುಕರು ಬಂದರೆ ಸರಕ್ಕನೆ ಏಳಬೇಕು
ತುರುಕರ ಪೂಜಿಸೆ ಹರಿಯೊಲಿವ ೨

ತುರುಕರ ನೀರ ಎರಕೊಂಡ ನಮ್ಮ ದೇವ
ಎರಕೊಂಡ ನೀರೆಲ್ಲ ಸನಕಾದಿಗಳಿಗೆ
ಬೆರಕೆ ಮಾಡಿದ ಹರಿದಾಸರಿಗೆಲ್ಲ
ಎರವು ಮಾಡಿದ ನಮ್ಮ ಪುರಂದರವಿಠಲ ೩

[ಇದೊಂದು ಶ್ಲೇಷಾರ್ಥದ ಪದ. ತುರುಕರೆಂದರೆ ಮುಸಲ್ಮಾನರು (ತುರ್ಕಿಯವರು) ; ತುರು–ಕರು ಎಂದರೆ ಹಸು ಕರು ಎಂದೂ ಆಗುತ್ತದೆ. ಎರಡನೆಯ ಅರ್ಥವನ್ನೇ ಇಲ್ಲಿ ಹಿಡಿದಿದ್ದರೂ ಮೇಲಿನ ನೋಟಕ್ಕೆ ಒಗಟಾಗಿ ತೋರುತ್ತದೆ.]

ಗೂಢಾರ್ಥ ಚಿಂತನ

ಪುರಂದರದಾಸರ ಸಾಹಿತ್ಯದಲ್ಲಿ ಬೆಡಗಿನ ವಚನಗಳಂತಿರುವ ಪದಗಳು ಕೆಲವಿವೆ. ಅವನ್ನು ಮುಂಡಿಗೆಗಳೆಂದು ಕರೆಯುತ್ತಾರೆ. ಅವು ತಟ್ಟನೆ ಅರ್ಥವಾಗುವುದಿಲ್ಲ. ಹಿನ್ನೆಲೆಯ ಉಪನಿಷತ್ತು, ಯೋಗ, ತಂತ್ರಗಳ ಪರಿಚಯವಿದ್ದರೆ ಮಾತ್ರ ತಾತ್ಪರ್ಯ ಬಯಲಾದೀತು. ಮಧ್ವಾಚಾರ್ಯರು ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಭಾಷಾಸ್ತು ತ್ರಿವಿಧಾಃ' ಎಂದು ವ್ಯಾಸರ ಮಾತುಗಳನ್ನು ವಿಂಗಡಿಸಿದ್ದಾರೆ: ಸಮಾಧಿ ಭಾಷೆ, ದರ್ಶನ ಭಾಷೆ, ಗುಹ್ಯಭಾಷೆ ಎಂದು. ಸಮಾಧಿ ಭಾಷೆಯಲ್ಲಿ ಸ್ಪಷ್ಟವಾದ ಮಾತು, ನೇರವಾದ ಒಕ್ಕಣೆ. ದರ್ಶನ ಭಾಷೆಯಲ್ಲಿ ದಾರ್ಶನಿಕ ಪ್ರಕ್ರಿಯೆಗಳನ್ನು ಹಿಡಿದು, ಅನುಮಾನಾದಿ ಯುಕ್ತಿಯಿಂದ ಯಾವುದರೊಂದು ನಿಲುವನ್ನು ಸಮರ್ಥಿಸುವುದು. ಗುಹ್ಯಭಾಷೆ ಪಂಡಿತರಿಗೆ ಮಾತ್ರ ಗ್ರಾಹ್ಯವಾಗುವಂತೆ ಬಳಸು ಮಾತು. ಮೇಲೆ ನೋಡಿದರೆ ಅಸಂಗತ, ವಿರುದ್ಧಾರ್ಥ, ಅಸಂಬದ್ಧ ಪ್ರಲಾಪ. ಆದರೆ ಬೆದಕಿ ನೋಡಿದರೆ ಅದರ ತಾತ್ಪರ್ಯ ತುಂಬ ಸ್ವಾರಸ್ಯವಾಗಿರುತ್ತದೆ ; ಒಗಟುಗಳಂತೆ. ಗುಹ್ಯಭಾಷೆಯನ್ನು ನಾಥಸಿದ್ಧಪಂಥದಲ್ಲಿ ವಿಶೇಷವಾಗಿ ಬಳಸುತ್ತಿದ್ದರು ; ಅಲ್ಲಿ ಅದಕ್ಕೆ ಸಂಧ್ಯಾಭಾಷೆ (ಸಂಧಾಯ ಭಾಷೆ)ಯೆಂದು ಹೆಸರು. ಇಂಥ ಮಾತುಗಳನ್ನು ಬಿಡಿಸುವ ತಿಳಿಯ ಹೇಳುವ ಸಂಪ್ರದಾಯವೇ ಅಲ್ಲೊಂದು ಇದೆ. ಹರಿದಾಸ ಪಂಥದಲ್ಲೂ ಇದ್ದಿರಬೇಕು. ಕೆಲವು ಇಂಥ ಮುಂಡಿಗೆಗಳನ್ನು ತಿಳಿಯ ಹೇಳುವ ಹರಿದಾಸರು ಮೊನ್ನೆಮೊನ್ನೆಯವರೆಗಿದ್ದರು. ಅವರಿಂದ ತಿಳಿದ ವಿವರಗಳನ್ನು ಬಳಸಿ ಮುಂದೆ ಕಾಣುವ ಮುಂಡಿಗೆಗಳ ಅರ್ಥವನ್ನು ಬಿಡಿಸಿದ್ದೇನೆ. ಉಳಿದವಕ್ಕೆ ಸಂಪ್ರದಾಯದ ವಿವರಣೆ ದೊರಕಲಿಲ್ಲವಾಗಿ ಹಾಗೆಯೇ ಕೊಟ್ಟಿದ್ದೇನೆ.

೨೧೩

ಜಯ
ಜಯುವದೆ ಈ ಮನೆತನಕೆ
ಬಿಡುಬಿಡು ಬಿಡುಬಿಡು ಮನ ಸಂಶಯುವ
ಶುಕನೆಂಬ್ಹಕ್ಕಿ ಹೇಳುತದಪ್ಪ
ಜಗವೆಂಬೋ ಗಿಡ ಹುಟ್ಟೈತಣ್ಣ
ಹಣ್ಣುಗಳೆರಡೂ ಐದಾವಪ್ಪ
ಮೂರು ಬುಡದ ಗಿಡ ಕೇಳಣ್ಣ
ಹಣ್ಣಿನ ಒಳಗೆ ನಾಲ್ಕು ರಸವು
ಐದು ದೊಡ್ಡ ಹರೆ ಕಾಣಪ್ಪ
ಆರು ಬಗೆಯ ಸ್ವರೂಪ ಕೇಳು
ಏಳು ಬಗೆಯ ತೊಗಟುಂಟಣ್ಣ
ಸಣ್ಣ ಗರಿಗಳು ಎಂಟೈದಾವೆ
ಅಕ್ಷವು ಇದಕೆ ಒಂಭತ್ತೈತೆ
ಎಲೆಗಳು ಹತ್ತು ಐದಾವಪ್ಪ
ಒಂದೇ ಹಕ್ಕಿ ಹಣ್ತಿಂತೈತೆ
ಮತ್ತೊಂದ್ಹಕ್ಕಿ ನೋಡುತದಪ್ಪ
ಹಣ್ತಿಂದ್ಹಕ್ಕಿ ಬಡವಾಗೈತ
ತಿನ್ನದ ಹಕ್ಕಿ ಬಲಿತೈತಣ್ಣ
ಸುಳ್ಳಲ್ಲ ನೀ ಕೇಳೋ ತಮ್ಮ
ದ್ವಾಸುಪರ್ಣದ ಶ್ರುತಿಯಲ್ಲೈತೆ
ಒಂದೇ ಕುಲದ ಹಕ್ಕ್ಯಲ್ಲಣ್ಣ
ಒಂದೇ ಕುಲವೆಂದು ತಿಳಿಯಲಿ ಬೇಡ
ತಿಳಿದರೆ ನಿಮಗೆ ಕೇಡಾದೀತು
ಹಳೇ ವಸ್ತ್ರವ ಬಿಸಾಡಣ್ಣ
ಹೊಸ ವಸ್ತ್ರವ ನಿಮಗೆ ದೇವರು ಕೊಟ್ಯಾನು
ಹಕ್ಕಿಯರಸ ಆಡಿದ ಮಾತು
ಉತ್ತಮ ಮಾರ್ಗವ ಹಿಡಿಯೊ ತಮ್ಮಾ
ಮಾರ್ಗವ ಕಟ್ಟಿ ಸುಲಿಯುತ್ತಾರೆ
ಗಿರಿ ದುರ್ಗಗಳು ಐದಾವಪ್ಪ
ಮಾರನೆಂಬ ಕಳ್ಳೈದಾನೆ
ಸಮಾರನಾದರೆ ಹೊರಟ್ಹೋಗ್ತಾನೆ

ಪುರಂದರನಾದರೆ ಬಿಡುವೊನಲ್ಲ
ಸುರಜ್ಯೇಷ್ಠನ ಸಂಗತಿ ಹಿಡಿಯೋ
ಕಣ್ಣು ಮೂಗು ಕಿವಿ ನಾಲಿಗೆಯಪ್ಪ
ಒಂದೊಂದೊಬ್ಬರ ಕೊಂದಾದವಣ್ಣ
ಕುರಂಗ ಮಾತಂಗ ಪತಂಗ ಕೇಳೊ
ಭೃಂಗ ಮೀನಾ ಹತವಾದವಣ್ಣ
ಜ್ಞಾನ ಭಕ್ತಿಯೆಂಬ ಮಾರ್ಗವು ಎರಡು
ದೊಡ್ಡ ಮಾರ್ಗವ ಹಿಡಿಬೇಕಣ್ಣ
ದೊಡ್ಡ ಸಂಗತಿ ಬರುವೋತನಕ
ಎರಡೂ ಮನೆಯಲ್ಲಿರಬೇಕಣ್ಣ
ದಾನದ ಕೈಯ ತೋರಿಸಬೇಕು
ಅದರಿಂದ ನದಿಯು ದಾಟುತಿಯಪ್ಪ
ನಿನ್ನ ಯೋಗ್ಯತೆ ತಿಳಿದಮೇಲೆ
ಪುರಂದರವಿಠಲ ಸ್ಥಳ ಕೊಟ್ಟಾನು

[ಇದನ್ನು ಬೀದಿಯಲ್ಲಿ ಕಣಿ ಹೇಳುತ್ತ ಬರುವ ಬುಡುಬುಡಿಕೆಯವರ ಹಾಡಿನ ಧಾಟಿಯಲ್ಲಿ ರಚಿಸಿದ್ದಾರೆ. ಇಲ್ಲಿ 'ಶುಕ' ವೆಂದರೆ ಹಕ್ಕಿಯೂ ಆಯಿತು, ಭಾಗವತವನ್ನು ಹೇಳಿದ ಶುಕಮುನಿಯೂ ಆಯಿತು.]

ಜಗವೆಂಬೋ ಗಿಡ...—ಸಂಸಾರ ವೃಕ್ಷದ ಚಿತ್ರ. ಅಥರ್ವಣ ಉಪನಿಷತ್ತಿನ 'ದ್ವಾಸುಪರ್ಣಾ' ಎಂಬ ಶ್ರುತಿಯ ಆಧಾರದಿಂದ ಈ ರೂಪಕವನ್ನು ಚಿತ್ರಿಸಿದ್ದಾರೆ. ಎರಡು ಹಣ್ಣುಗಳು ಈಶ, ಜೀವ; ಮೂರು ಬುಡ ತ್ರಿಗುಣ (ಸತ್ತ್ವ, ರಜಸ್ಸು, ತಮಸ್ಸು) ; ನಾಲ್ಕು ರಸ ಜೀವಾಭಿಮುಖನಾದ ಈಶನ ಗುಣಗಳು, ಪ್ರೇರಕ, ನಿಯಾಮಕ, ಸಾಕ್ಷಿಕ, ಉದ್ಧಾರಕ ; ಐದು ಹರೆ ಪಂಚೇಂದ್ರಿಯಗಳು; ಆರು ಸ್ವರೂಪ ಅರಿಷಡ್ವರ್ಗ ; ಏಳು ತೊಗಟೆ ಸಪ್ತವ್ಯಸನ ; ಎಂಟು ಗರಿ (ಅಷ್ಟಪ್ರಕೃತಿ) ; ಅಕ್ಷ ಒಂಭತ್ತು (ನವಾವರಣ, ಅವ್ಯಕ್ತ ಇತ್ಯಾದಿ) ; ಹತ್ತು ಎಲೆ ದಶೇಂದ್ರಿಯ ವೃತ್ತಿಗಳು. ಹಣ್ಣು ತಿನ್ನುವ ಹಕ್ಕಿ ಜೀವ ; ನೋಡುತ್ತಿರುವ ಹಕ್ಕಿ ಈಶ ('ಅಭಿಚಾಕಶೀತಿ'). ಎರಡೂ ಒಂದೇ ಕುಲವಲ್ಲ ; ಈಶ ಸ್ವತಂತ್ರ, ಜೀವ ಅಸ್ವತಂತ್ರ. ಜೀವವನ್ನು ಸ್ವತಂತ್ರವೆಂದು ಬಗೆದರೆ ಕೆಡುಕು ('ಘಾತಯಂತಿ ಹಿ ರಾಜಾನಃ ರಾಜಾಹಮಿತಿ ವದಂತಂ').

ಹಳೆ ವಸ್ತ್ರವ ಬಿಸಾಡು...—ಭಗವದ್ಗೀತೆಯ 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ' ಎಂಬ ಶ್ಲೋಕದ ಆಧಾರ. ವಸ್ತ್ರವೆಂದರೆ ದೇಹ, ಜನ್ಮ.

ಹಕ್ಕಿಯರಸ—ಈಶ, ಜೀವನಿಗೆ ಒಡೆಯ.

ಗಿರಿದುರ್ಗಗಳು ಐದು—ಐದು ಇಂದ್ರಿಯ ವಿಷಯ ಸುಖಗಳು.

ಮಾರ—ಮನ್ಮಥ, ಕಾಮ ; ಬಯಕೆಗಳು.

ಸಮೀರ—ಹನುಮಂತ, ಬಲಶಾಲಿ ; ಮುಕ್ತಿಯ ಅಪೇಕ್ಷೆ.

ಪುರಂದರ—ಇಂದ್ರ ; ಸ್ವರ್ಗದ ಅಪೇಕ್ಷೆ.

ಕುರಂಗ ಮಾತಂಗ...—ಜಿಂಕೆಯು (ಕುರಂಗ) ಶಬ್ದಕ್ಕೆ (ಬೇಟೆಗಾರನ ಇಂಪಾದ ಬಿಲ್ಲ ಝೇಂಕಾರಕ್ಕೆ), ಆನೆಯು (ಮಾತಂಗ) ಘ್ರಾಣಕ್ಕೆ, ಪತಂಗವು ರೂಪಕ್ಕೆ (ಬೆಂಕಿಯ ಬೆಳಕಿಗೆ), ದುಂಬಿಯು (ಭೃಂಗ) ಹೂವಿನ ರಸಕ್ಕೆ, ಮೀನು ಸ್ಪರ್ಶಕ್ಕೆ (ಗಾಳಕ್ಕೆ ಸಿಲುಕಿದ ಹುಳಕ್ಕೆ) ಮರುಳಾಗಿ ಪ್ರಾಣಬಿಡುತ್ತವೆ ಎಂಬ ಸುಭಾಷಿತ ಶ್ಲೋಕ.

ಸ್ಥಳ ಕೊಟ್ಟಾನು—ವೈಕುಂಠದಲ್ಲಿ, ಮುಕ್ತರ ಪದವಿಯಲ್ಲಿ.

೨೧೪

ನಾದನಾಮಕ್ರಿಯೆ ಅಟ್ಟ

ಊರ ದೇವರ ಮಾಡಬೇಕಣ್ಣ ತನ್ನೊಳಗೆ ತಾನೆ ಪ

ಊರ ದೇವರ ಮಾಡಿರೆಂದು ಸಾರುತಿದೆ ಶ್ರುತಿ ಇರುಳು ಹಗಲು
ದ್ವಾರಗಳೊಂಭತ್ತು ಮುಚ್ಚಿ ನಿಲ್ಲಿಸಿ ಭ್ರೂಮಧ್ಯದಲ್ಲಿ ಅ

ಎಷ್ಟು ಯುಗಗಳು ತೀರಿಹೋಯ್ತಣ್ಣ ದೇವರ ಮಾಡದೆ
ಕಷ್ಟದಿಂದ ನೊಂದೆ ಕಾಣಣ್ಣ
ಅಷ್ಟ ದಳದ ಕಂಭ ನಿಲ್ಲಿಸಿ ಕಟ್ಟಿ ಚಕ್ರಂಗಳನು ಹಾಕಿ
ಸೃಷ್ಟಿದೇವರ ತಂದು ನಿಲ್ಲಿಸಿ ದುಷ್ಟಕೋಣನ ಶಿರವ ತರಿದು ೧

ಕಷ್ಟತರ್ಕವೆಂಬ ಕುರಿಯಣ್ಣ ಅದನ್ನು ತಂದು
ಕಟ್ಟಿ ತಲೆಯನು ಹೊಡೆಯಬೇಕಣ್ಣ
ಅಷ್ಟಮದದ ಕುರಿಗಳನ್ನು ಕಟ್ಟಿ ತಲೆಯನು ಚಂಡನಾಡಿ
ಅಟ್ಟಿ ತಿರುಗುವ ಕೋಳಿಯನ್ನು ಕುಟ್ಟಿ ಸೂರೆ ಹಾಕುತಲ್ಲಿ ೨

ನಾನು ಎಂಬುವ ಮೇಕೆ ಹೋತಣ್ಣ ಅದಕ್ಕೆ ತಕ್ಕ
ಜ್ಞಾನವೆಂಬುವ ಪೋತರಾಜಣ್ಣ
ಮಾನವೆಂಬ ಛಾಟಿ ಹೊಡೆದು ಹೀನ ಹೋತನ ಸೀಳಿ ಬಿಸುಟು
ಧ್ಯಾನ ಗುಡಿಸಲು ಸೂರೆಗೊಂಡು ತಾನೆ ಬೆಳಗುವ ಜ್ಯೋತಿ ನಿಲ್ಲಿಸಿ ೩

ನಾಳೆ ನೋಡೋಣೆನ್ನಬೇಡಣ್ಣ ಕೇಳಣ್ಣ ನಿನ್ನ
ಬಾಳು ಅಸ್ಥಿರವೆಂದು ತಿಳಿಯಣ್ಣ
ಪಾಳ್ಯಗಾರನಂತೆ ಬಹನು ಬಾಳುವ ಕಾಲದಿ ಯಮನು
ಕೋಳಿ ಪಿಳ್ಳೆಯಾಡುವಾಗ ಹಾಳೆಹದ್ದು ಒಯ್ಯುವಂತೆ ೪

ಹೆಂಡಿರು ಮಕ್ಕಳು ಸುಳ್ಳು ಕೇಳಣ್ಣ ನಿನ್ನ
ಮಂಡೆ ತುಂಬ ಬಳಗ ಕಾಣಣ್ಣ
ದಂಡಧಾರಿ ಯಮನು ಬಂದು ಮಂಡೆಮೇಲೆ ಹೊಯ್ಯುವಾಗ
ಹೆಂಡಿರು ಮಕ್ಕಳು ನಿನ್ನ ಕಂಡು ಭಂಗಬಿಡಿಸಬಲ್ಲರೇನಣ್ಣ ೫

ಸತ್ತ ಪೆಣವ ನೋಡುವಿಯಲ್ಲೊ ನೀ ಗಳಿಸಿದಂಥ
ಬುತ್ತಿ ನೋಡಿ ಉಬ್ಬುವಿಯಲ್ಲೊ
ಮೃತ್ಯುವಿನ ಬಾಯಿಯೊಳಗೆ ತುತ್ತು ಆಗಿ ಹೋಗಬೇಡ
ತೊತ್ತು ಆಗಿ ಗುರುವಿಗೆ ನೀ ಹತ್ತಿ ನೋಡೋ ಗುಡ್ಡವನು ೬

ಮುಂದೆ ಇಂಥ ಜನ್ಮ ಬರದಣ್ಣ, ನೋಡಣ್ಣ ನಿನಗೆ
ಮಂದಮತಿಯು ಬೇಡ ಕಾಣಣ್ಣ
ಹಿಂದಿನ ಕಷ್ಟವ ಮರೆದು ಮುಂದಿನ ಹಮ್ಮನು ತೊರೆದು
ತಂದೆ ಪುರಂದರವಿಠ್ಠಲನ್ನ ಹೊಂದಲು ನೀ ಮುಕ್ತನಣ್ಣ ೭

['ಊರ ದೇವರನ್ನು ಮಾಡುವುದು' ಜಾನಪದ ವ್ಯವಹಾರದಲ್ಲಿ ಬಂದದ್ದು. ಆದರೆ ಇಲ್ಲಿ ಅದಕ್ಕೆ ಆಧ್ಯಾತ್ಮಿಕ ಅರ್ಥವಿದೆ. ದೇಹವೇ ಊರು, ಪುರ ; ಒಂಬತ್ತು ಬಾಗಿಲುಗಳದ್ದು ; ವಿವರಣೆ ಆಗಲೇ ಬಂದಿದೆ. ಈ ಊರಿನ ದೇವರೆಂದರೆ ಬಿಂಬರೂಪೀ ಪರಮಾತ್ಮ. ಪ್ರತಿಬಿಂಬನಾದ ಜೀವನಿಗೆ ತನ್ನ ಪ್ರೇರಕ, ನಿಯಾಮಕ, ಸಾಕ್ಷಿಕನು ಬಿಂಬವೆಂಬ ಅರಿವು ಸೃಷ್ಟಿಯಾದೊಡನೆ ಮರೆಯಾಗುತ್ತದೆ ; ಅದ್ಯಪರಾಧ ಅನ್ಯಥಾ ಜ್ಞಾನದಿಂದಾಗಿ. ಅನಂತರ ಹಲವಾರು ಜನ್ಮಗಳು (ಎಷ್ಟು ಯುಗಗಳು) ಕಳೆದರೂ ಈ ಅರಿವು ಒದಗದೆ ಸಂಸಾರದಲ್ಲಿ ಸಿಲುಕಿ ತೊಳಲುವುದು ಜೀವನ ಕರ್ಮ. ಇದನ್ನು ತಪ್ಪಿಸಿಕೊಳ್ಳಲು ದಾರಿ ಅಷ್ಟಾಂಗಯೋಗ (ಅಷ್ಟದಳದ ಕಂಬ) ; ಅದರಿಂದ ಆರು ಚಕ್ರಗಳು ಜಾಗ್ರತವಾಗಿ, ಅದ್ಯಪರಾಧವಾದ ಅನ್ಯಥಾ ಜ್ಞಾನವು (ದುಷ್ಟಕೋಣ) ತೊಲಗುತ್ತದೆ. ಸಂಸಾರದಲ್ಲಿ ಭ್ರಮಾತ್ಮಕವಾದ ಒಲವು (ಕಷ್ಟತರ್ಕವೆಂಬ ಕುರಿ) ಹಾಗೆಯೇ ನಾಶವಾಗುತ್ತದೆ. ಧನಮದ, ಬಲಮದ, ಯೌವನಮದ ಮೊದಲಾದ ಭ್ರಮೆಗಳು (ಅಷ್ಟಮದದ ಕುರಿಗಳು) ಹೋಗಿ, ಅಸ್ಮಿತೆಯೆಂಬ ಕ್ಲೇಶವು (ಅಟ್ಟಿ ತಿರುಗುವ ಕೋಳಿ) ಕೊನೆಗೊಂಡು, ಅಹಂಕಾರವು (ನಾನು ಎಂಬುವ ಮೇಕೆ) ಸಮ್ಯಕ್ ಜ್ಞಾನದಿಂದ (ಪೋತರಾಜ) ನಿಗ್ರಹಗೊಂಡು ಜೀವನಿಗೆ ಯಥಾರ್ಥಜ್ಞಾನ (ಮಾನವೆಂಬ ಛಾಟಿ)ದಿಂದ ಸಂಸಾರದಲ್ಲಿ ಆಸಕ್ತಿಯು (ಹೀನ ಹೋತ) ಅಳಿಯುತ್ತದೆ. ನಿದಿಧ್ಯಾಸನದಲ್ಲಿ (ಧ್ಯಾನ ಗುಡಿಸಲು) ಸ್ವಯಂಪ್ರಕಾಶವಾದ ಬಿಂಬ (ತಾನೆ ಬೆಳಗುವ ಜ್ಯೋತಿ) ಮೂಡಿಕೊಳ್ಳುತ್ತದೆ. ಇದು ಮೊದಲ ಮೂರು ನುಡಿಗಳ ತಾತ್ಪರ್ಯ.

ಮುಂದೆ, ಅಧ್ಯಾತ್ಮದ ಸಾಧನೆಯನ್ನು ಇಂದೇ ಮಾಡಬೇಕೆಂಬ ಕಳಕಳಿ, ಮಾಡದಿದ್ದರೆ ಒದಗುವ ದುಃಖ ಇವನ್ನು 'ಇಹಚೇದವೇದೀದಥ ಸತ್ಯಮಸ್ತಿ, ನ ಚೇದಿಹಾವೇದೀನ್ಮಹತೋ ವಿನಷ್ಟಿಃ' ಎಂಬ ಉಪನಿಷದ್ವಾಕ್ಯದ ಆಧಾರದ ಮೇಲೆ ಸೂಚಿಸಿದ್ದಾರೆ. ಸಂಸಾರದ ಅಸಾರತೆಯೂ ವರ್ಣನೆಗೆ ಬಂದಿದೆ.]

ಕಾಂಬೋದಿ ಆದಿ

ನೆಚ್ಚದಿರು ಬೆಕ್ಕು ನೆವ ನೋಡುತಿದೆ
ಎಚ್ಚತ್ತಿರೆಚ್ಚತ್ತಿರೆಲೊ ರಾಮುಗ ಪ

ಒಂಬತ್ತು ಬಾಗಿಲ ಪಂಜರವನ್ನೈದಿದೆ
ಕಂಭವಿಲ್ಲ ಕದವು ಮೊದಲೆ ಇಲ್ಲ
ಎಂಭತ್ತು ಸಾವಿರ ಸಂದುಗಂಟಿನ ಗೂಡ
ನಂಬಿ ನೀ ಕೆಡದಿರೊ ಎಲೊ ರಾಮುಗ ೧

ಮುನಿವರು ಐವರು ಮೋಹಿಸುವರಾರು ಮಂದಿ
ಮನ ಕಾಕುಗೊಳಿಸುವರೆಂಟು ಮಂದಿ
ಇನಿತು ತಿಳಿದು ಹಿಂದು ಮುಂದು ವಿಚಾರಿಸಿ
ಮನನೆಚ್ಚಿ ಕೆಡದಿರೋ ಎಲೊ ರಾಮುಗ ೨

ಸತಿಸುತರಿಗೆ ಮತ್ತೆ ಹಿತರಿಗೆ ಬೇಕೆಂಬ
ಅತಿ ಲೋಭತನ ಬೇಡ ಎಲೊ ರಾಮುಗ
ಕ್ಷಿತಿಸುರರೆಂಬ ಭೂಮಿಲಿ ಬಿತ್ತಿ ಮುಂದಣ
ಪಥಕೆ ಸಾಧನ ಮಾಡಿಕೋ ರಾಮುಗ ೩

ಹೊನ್ನು ಹೆಣ್ಣು ಮಣ್ಣು ಎಂಬ ಮೋಹದೊಳಿದ್ದು
ಬಣ್ಣಗೆಡಲಿಬೇಡ ಎಲೊ ರಾಮುಗ
ಸುಣ್ಣವ ಸುಡುವಂತೆ ಸುಡುತಿದೆ ಬೆಕ್ಕು ನಿನ್ನ
ಕಣ್ಣು ತೆರೆದೆಚ್ಚತ್ತಿರೆಲೊ ರಾಮುಗ ೪

ಸ್ಥಿರವೆಂದು ನೆಚ್ಚದಿರು ಈ ಪಂಜರವನು ನೀ
ಉರವಣಿಸುತ ಬೆಕ್ಕು ಮೊರೆಯುತಲಿದೆ
ಸಿರಿಯರಸ ಪುರಂದರವಿಠಲನ್ನ ನೆರೆನಂಬಿ ಪರಮ
ಸುಖಿಯಾಗಿರೊ ಎಲೊ ರಾಮುಗ ೫

[ರಾಮುಗ ಎನ್ನುವುದು ಗಿಳಿ. ಅದನ್ನು ತಿನ್ನಲು ಬೆಕ್ಕು ಹೊಂಚುಹಾಕುತ್ತಿದೆ. ರಾಮುಗನನ್ನು ಎಚ್ಚರಿಸುವ ಪದ ಇದು. ಇಲ್ಲಿ ಗಿಳಿಯು ಜೀವ ; ಬೆಕ್ಕು ಅನ್ಯಥಾ ಜ್ಞಾನದಿಂದ ಒದಗಿದ ಕಾಮ. ಜೀವವಿರುವ ದೇಹ ('ನವದ್ವಾರ ಪುರ') ಗಿಳಿಯಿರುವ ಪಂಜರ, ಗೂಡು. ಅಷ್ಟಾಂಗಯೋಗದ ಪರಿಶ್ರಮವಿಲ್ಲದೆ (ಕಂಬವಿಲ್ಲ), ಸಂಯಮ ವೆಂಬ ಆಶ್ರಯವಿಲ್ಲದೆ (ಕದ), ಎಂಬತ್ತು ಸಾವಿರ ನಾಡಿಗಳಲ್ಲಿ (ಸಂದು ಗಂಟು) ಪ್ರಾಣ ಹರಿಯುತ್ತಿದೆ. ಇದೇ ಸಂಸಾರಾವಸ್ಥೆ. ಇದರಲ್ಲಿ ಪಂಚಕ್ಲೇಶಗಳು (ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಆಹಂಕಾರ), ಅರಿಷಡ್ವರ್ಗ (ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ), ಅಷ್ಟಮದ (ಧನಮದ ಇತ್ಯಾದಿ) ಇವು ಮನಸ್ಸನ್ನು ಕೆಡಿಸುತ್ತಿವೆ. ಇದನ್ನು ತಿಳಿದು ಎಚ್ಚರವಾಗಿರು ಎಂದು ಜೀವಕ್ಕೆ ಸಂಬೋಧನೆ.]

ಪೂರ್ವಿಕಲ್ಯಾಣಿ ಅಟ್ಟ

ಏನಾದರು ಒಂದಾಗಲಿ, ನೂರೆಂಟು ದೇವರು ಮೊರತುಂಬ ಕಲ್ಲೇ ಪ

ಅತ್ತೆಯು ಕಣ್ಣು ಹೋಗಲಿ, ಮಾವನ ಕಾಲು ಮುರಿಯಲಿ,
ಹಿತ್ತಲು ಗೋಡೆ ಬೀಳಲಿ, ಕಾಳಕತ್ತಲೆ ಬಂದು ಕವಿಯಲಿ ಹರಿಯೇ ೧

ಮನೆಯು ಗಂಡ ಮಾಯವಾಗಲಿ, ಉಣಬಂದ ಮೈದುನ ವರಗಲಿ
ಮನೆ ನೆರೆಮನೆ ಹಾಳಾಗಲಿ, ಮತ್ತೆ ಅತ್ತಿಗೆನಾದಿನಿ ಮಡಿಯಲಿ ಹರಿಯೇ ೨

ಕಂದನ ಕಣ್ಣು ಮುಚ್ಚಲಿ ಚಂದ್ರಗೆ ಹಾವು ಕಚ್ಚಲಿ ಈ
ದ್ವಂದ್ವಾರ್ಥಗಳು ಬಿಚ್ಚಲಿ, ಪುರಂದರವಿಠಲನು ಮೆಚ್ಚಲಿ ಹರಿಯೇ ೩

ಒಂದಾಗಲಿ—ಏಕಾಂತಭಕ್ತಿಯಿರಲಿ.

ನೂರೆಂಟು ದೇವರು...—ಕಾಕುದೈವಗಳು ; ಜಡರು.

ಅತ್ತೆ—ಜೀವನಿಗೆ ಹೊಂದಿಕೊಂಡು ಬಂದ ಸಂಸಾರ ಸ್ಥಿತಿಗೆ ಕಾರಣವಾದ ಅನ್ಯಥಾಜ್ಞಾನ.

ಮಾವ—ಅನ್ಯಥಾಜ್ಞಾನದ ಸಂಗಡ ಇರುವ ಹರಿಯ ಮರೆವು (ವಿಸ್ಮರಣ).

ಹಿತ್ತಲುಗೋಡೆ—ಪ್ರಾಚೀನ ಕರ್ಮಗಳು.

ಕಾಳಕತ್ತಲೆ—ವೈರಾಗ್ಯಕ್ಕೆ ಕಾರಣವಾಗುವ ಸಂಸಾರದುಃಖ.

ಮನೆಯ ಗಂಡ—ಅಹಂಕಾರ-ಮಮಕಾರ.

ಉಣಬಂದ ಮೈದುನ—ಇಂದ್ರಿಯಜ್ಞಾನ (ಸಂಸಾರಸ್ಥಿತಿಗೆ ಹೊಂದಿಕೊಂಡು ಬಂದದ್ದು).

ಮನೆ ನೆರೆಮನೆ—ಜನ್ಮ ಜನ್ಮಾಂತರಗಳು.

ಅತ್ತಿಗೆನಾದಿನಿ—ಸಂಸಾರಸ್ಥಿತಿಗೆ ಹೊಂದಿಕೊಂಡು ಬಂದ ಸ್ವಾತಂತ್ರ್ಯಭ್ರಮ, ಕರ್ತೃತ್ವಭ್ರಮ.

ಕಂದ—ಜೀವದ ಸಂಸಾರಾವಸ್ಥೆಯಲ್ಲಿರುವ ಅಭಿನಿವೇಶ (ಸಂಸಾರದಲ್ಲಿ ಆಸಕ್ತಿ).

ಚಂದ್ರಗೆ ಹಾವು ಕಚ್ಚಲಿ—ಕುಂಡಲಿಯು ಜಾಗ್ರತವಾಗಿ ಸಹಸ್ರಾರವನ್ನು ಮುಟ್ಟಲಿ.

ಮುಖಾರಿ ಆದಿ

ಮುಸುಕು ತೆಗೆದರೆ ಬೆನ್ನಿಲಿ ನಾಲಿಗೆ ಇದರ
ಹೆಸರು ಬಲ್ಲವರುಂಟೆ ಪೇಳಿರಿ ನರರೆ ಪ

ಸತ್ತಿಗೆ ತಲೆಯವಳು ನೆತ್ತಿಲಿ ಬಾಲದವಳು
ಕತ್ತಿನ ಕೆಳಗೆ ಕಪ್ಪಿನ ಕೊಪ್ಪಿನವಳು
ಸುತ್ತೇಳು ಮೈಗೆರಡು ಜೋಡು ಭಂಗಾರ
ಸೃಷ್ಟಿಯೊಳಗೆ ಇದರ ಹೆಸರು ಬಲ್ಲವರುಂಟೆ ೧

ಜಡೆ ಮೆರುಗುವ ಬಾಲೆ ಒಡಲೊಳು ಕರುಳಿಲ್ಲ
ಬಿಡದೆ ಪಟ್ಟಾವಳಿಯುಟ್ಟು ಬಲ್ಲವಳು
ಅಡವಿಯೊಳಗೆ ಪುಟ್ಟಿ ಪಡೆದಳು ದೇಹವ
ಪೊಡವಿಯೊಳಗೆ ಇದರ ಹೆಸರು ಬಲ್ಲವರುಂಟೆ ೨

ಬೇರಾಗಿ ಬೆರಳೈದು ಮೂರು ತಾನೊಂದಾಗಿ
ಯಾರು ಕಂಡರು ಎಂದು ನಸುನಗುತ
ಸೇರಿದ ಭಕುತರ ಪೊರೆವ ರಂಗಯ್ಯನ
ಸೇರಿ ಮೆಚ್ಚಿಸಿಕೊಳ್ಳಿ ಪುರಂದರವಿಠಲನ ೩

[ಇದು ಕುಂಡಲಿನೀಯೋಗದ ಸಂಕೇತವುಳ್ಳ ಪದ. ಮುಸುಕೆಂದರೆ ಅವಿದ್ಯೆಯೆಂಬ ಆವರಣ; ಭೋಗಕ್ಕೆಂದು ಸಿದ್ಧವಾದ ಪಾಂಚಭೌತಿಕವಾದ ದೇಹ, ಸ್ಥೂಲ ದೇಹ. ಈ ಹೊದಿಕೆಯ ಒಳಗಿರುವ ಸೂಕ್ಷ್ಮದೇಹದ ರಚನೆ ಈ ಪದದ ವಸ್ತು. ಬೆನ್ನುಹುರಿ ಅಥವಾ ಬ್ರಹ್ಮದಂಡಕ್ಕೆ ಹೊಂದಿಕೊಂಡು ಅದರ ಸತ್ತ್ವವಾಗಿ ಉಳ್ಳ ಕುಂಡಲಿನೀ ಮಾರ್ಗ (ಸುಷುಮ್ನಾ ಮಾರ್ಗ) (ಬೆನ್ನಿಲಿ ನಾಲಗೆ) ; ಕುಂಡಲಿನಿಯು ಮೇಲಕ್ಕೆ ಹೋಗುವ ಪ್ರವೃತ್ತಿಯುಳ್ಳದ್ದು. 'ಸತ್ತಿಗೆತಲೆ' (ಛತ್ರಕ ಎನ್ನುವುದರ ತದ್ಭವ, ಕೊಡೆಯಂತೆ ಹರಡಿಕೊಂಡಿರುವುದು) ಶಿರೋಭಾಗದಲ್ಲಿರುವ ಸಹಸ್ರಾರ ಚಕ್ರ. 'ನೆತ್ತಿಲಿಬಾಲ' ವೆಂದರೆ ಊರ್ಧ್ವಗಾಮಿಯಾದ ಕುಂಡಲಿನಿಯ ಆಧಾರ ಸ್ಥಳ, ಮೂಲಾಧಾರ ಚಕ್ರ. 'ಕತ್ತಿನ ಕೆಳಗೆ ಕಪ್ಪಿನ ಕೊಪ್ಪಿ' ವಿಶುದ್ಧ ಚಕ್ರ. 'ಮೈಗೆರಡು ಜೋಡು ಭಂಗಾರ' ಎಂದರೆ ಎರಡು ಜಾಜ್ವಲ್ಯಮಾನವಾದ ದಳಗಳುಳ್ಳ ಆಜ್ಞಾಚಕ್ರ. 'ಜಡೆ ಮೆರಗುವ

ಬಾಲೆ' ಯೆಂದರೆ ವಜ್ರನಾಡಿಯೊಳಗಿರುವ ಚಿತ್ರಿಣಿ ; ಸುಷುಮ್ನಾಮಾರ್ಗ. ಅದರೊಳಗೆ ಮತ್ತೆ ನಾಡಿಗಳಿಲ್ಲವಾಗಿ 'ಒಡಲೊಳು ಕರುಳಿಲ್ಲ'. ಅವಳು ಉಟ್ಟಿರುವ 'ಪಟ್ಟಾವಳಿ' ಅಗ್ನಿ ಸ್ವರೂಪವಾದುದು (ಇಡಾ ಸೂರ್ಯನೆಂದೂ ಪಿಂಗಳಾ ಚಂದ್ರನೆಂದೂ ನಡುವೆ ಇರುವ ಸುಷುಮ್ನಾ ಅಗ್ನಿಯೆಂದೂ ಗೋರಕ್ಷಪದ್ಧತಿಯ ಒಕ್ಕಣೆ). ಅವಳು ಹುಟ್ಟಿದ 'ಅಡವಿ' ಮೂಲಾಧಾರ ಚಕ್ರದಲ್ಲಿರುವ ಪೃಥ್ವೀಮಂಡಲ ರೂಪವಾದ ತ್ರಿಕೋಣ. 'ಬೇರಾಗಿ' (ಬೇರೆಯಾಗಿ) ಎಂದರೆ ಮೂಲಾಧಾರದಲ್ಲಿ ಸ್ವಯಂಭೂಲಿಂಗವನ್ನು ಸುತ್ತರಿದು ನಿಂತು ಅಲ್ಲಿಂದ ಕವಲೊಡೆದು, ಮೇಲೆ ಐದು ಚಕ್ರಗಳಲ್ಲಿ ('ಬೆರಳೈದು', ಸ್ವಾಧಿಷ್ಠಾನ, ಮಣಿಪೂರ, ಅನಾಹುತ, ವಿಶುದ್ಧ ಮತ್ತು ಆಜ್ಞಾ ಚಕ್ರಗಳಲ್ಲಿ) ಹರಿದು, ಇಡಾ ಪಿಂಗಳಾ ಸುಷುಮ್ನಾ ಮಾರ್ಗಗಳನ್ನು ಆಜ್ಞಾ ಚಕ್ರದಲ್ಲಿ ಒಂದುಗೂಡಿಸಿ ('ಮೂರು ತಾನೊಂದಾಗಿ'), ಸಹಸ್ರಾರದಲ್ಲಿ ಬ್ರಹ್ಮಾನಂದವನ್ನು ('ನಸುನಗುತ') ಪಡೆದು ಕೊಳ್ಳುವುದು ಇಲ್ಲಿನ ಗೂಢಾರ್ಥ.]

೨೧೫

ಘರಜು ಆದಿ

ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟಿ
ಎರಡು ತುಂಬದು ಒಂದು ತುಂಬಲೆ ಇಲ್ಲ ಪ

ತುಂಬಲಿಲ್ಲದ ಕೆರೆಗೆ ಬಂದರು ಮೂವರು ಒಡ್ಡರು
ಇಬ್ಬರು ಕುಂಟರು ಒಬ್ಬಗೆ ಕಾಲೇ ಇಲ್ಲ ಅ

ಕಾಲಿಲ್ಲದ ಒಡ್ಡಗೆ ಕೊಟ್ಟರು ಮೂರು ಎಮ್ಮೆಗಳ
ಎರಡು ಬರಡು ಒಂದಕೆ ಕರುವೇ ಇಲ್ಲ ೧

ಕರುವಿಲ್ಲದ ಎಮ್ಮೆಗೆ ಕೊಟ್ಟರು ಮೂರು ಹೊನ್ನುಗಳ
ಎರಡು ಸವೆಕಲು ಒಂದು ಸಲ್ಲಲೆ ಇಲ್ಲ ೨

ಸಲ್ಲದಿದ್ದ ಹೊನ್ನಿಗೆ ಬಂದರು ಮೂವರು ನೋಟಗಾರರು
ಇಬ್ಬರು ಕುರುಡರು ಒಬ್ಬಗೆ ಕಣ್ಣೇ ಇಲ್ಲ ೩

ಕಣ್ಣಿಲ್ಲದ ನೋಟಗಾರಗೆ ಕೊಟ್ಟರು ಮೂರು ಊರುಗಳ
ಎರಡು ಹಾಳು ಒಂದಕೆ ಒಕ್ಕಲೆ ಇಲ್ಲ ೪

ಒಕ್ಕಲಿಲ್ಲದ ಊರಿಗೆ ಬಂದರು ಮೂವರು ಕುಂಬಾರರು
ಇಬ್ಬರು ಚೊಂಚರು ಒಬ್ಬಗೆ ಕೈಯೇ ಇಲ್ಲ ೫

ಕೈಯಿಲ್ಲದ ಕುಂಬಾರನು ಮಾಡಿದ ಮೂರು ಮಡಕೆಗಳ
ಎರಡು ಒಡಕು ಒಂದಕೆ ಬುಡವೇ ಇಲ್ಲ ೬

ಬುಡವಿಲ್ಲದ ಮಡಕೆಗೆ ಹಾಕಿದರು ಮೂರಕ್ಕಿಕಾಳ
ಎರಡು ಬೇಯದು ಒಂದು ಬೇಯಲೇ ಇಲ್ಲ ೭

ಬೇಯಲಿಲ್ಲದ ಅಕ್ಕಿಗೆ ಬಂದರು ಮೂವರು ನಂಟರು
ಇಬ್ಬರು ಉಣ್ಣರು ಒಬ್ಬಗೆ ಹಸಿವೇ ಇಲ್ಲ ೮

ಹಸಿವಿಲ್ಲದ ನಂಟಗೆ ಕೊಟ್ಟರು ಮೂರು ಟೊಣಪೆಗಳ
ಎರಡು ಸೊಂಕವು ಒಂದು ತಾಕಲೆ ಇಲ್ಲ ೯

ತಾಕಲಿಲ್ಲದ ಟೊಣಪೆಯ ತಾಕಿಸಿ ಸದ್ಗತಿಯ
ನೀಯಬೇಕು ಪುರಂದರವಿಠಲ ನೀನು ೧೦

[ಮುಳ್ಳುಕೊನೆಯೆಂದರೆ ಅಣುಪರಿಮಾಣದ ಜೀವ; ಅದರ ಮೇಲೆ ಮೂರು ಕೆರೆಗಳು ಲಿಂಗದೇಹ, ಅನಿರುದ್ಧದೇಹ (ತುಂಬಲಾರದವು) ಮತ್ತು ಸ್ಥೂಲದೇಹ (ತುಂಬಬಹುದಾದದ್ದು, ಸಾಧನೆಯಿಂದ; ಆದರೆ ಸಾಧನೆ ಮಾಡದೆ ತುಂಬಲಿಲ್ಲ). ಅಲ್ಲಿಗೆ ಬಂದ ಮೂವರು ಒಡ್ಡರು ಅವಸ್ಥಾತ್ರಯ, ಬಾಲ್ಯ, ಯೌವನ, ಮುಪ್ಪು ; ಬಾಲ್ಯ ಮತ್ತು ಮುಪ್ಪುಗಳಲ್ಲಿ ಜ್ಞಾನಶಕ್ತಿಗಳ ಕೊರತೆಯಿದ್ದು ಕುಂಟರು ; ಯೌವನದಲ್ಲಿ ವಿಷಯೋಪಭೋಗಗಳಿಂದಾಗಿ ಅಧ್ಯಾತ್ಮದ ಕಡೆ ಕಾಲು ಬರುವುದಿಲ್ಲ. ಯೌವನಾವಸ್ಥೆಯಲ್ಲಿ ಕೊಟ್ಟ ಮೂರು ಎಮ್ಮೆಗಳು ಏಷಣಾತ್ರಯ (ದಾರೈಷಣ, ಪುತ್ರೈಷಣ, ವಿತ್ತೈಷಣ). ಮೊದಲ ಎರಡು ಏಷಣೆಗಳು ಅಧ್ಯಾತ್ಮ ಪ್ರತಿಬಂಧಿಗಳಾಗಿ ಬರಡು ಎಮ್ಮೆಗಳು ; ವಿತ್ತೈಷಣವನ್ನು ಸರಿಯಾಗಿ ಮಾಡಿದರೆ ಸಾಧನೆಗೆ ನೆರವಾಗುತ್ತದೆ, ಹಾಗೆ ಮಾಡದಿದ್ದರೆ 'ಕರುವೇ ಇಲ್ಲ'. ವಿತ್ತೈಷಣಕ್ಕೆ ಕೊಟ್ಟ ಮೂರು ಹೊನ್ನು ದಾನ, ಭೋಗ, ನಾಶ ಎಂಬ ಹಣಕ್ಕಿರುವ ಮೂರು ದಾರಿಗಳು. ಭೋಗ ಮತ್ತು ನಾಶ ಸವಕಲು ನಾಣ್ಯಗಳು ; ಅವುಗಳಿಗೆ ಬೆಲೆಯಿಲ್ಲ ; ದಾನಕ್ಕೆ ಬೆಲೆಯುಂಟು, ಆದರೆ ದಾನ ಮಾಡಲಿಲ್ಲವಾಗಿ ಅದು ಸಲ್ಲಲಿಲ್ಲ. ದಾನಕ್ಕೆ ಬಂದವರೆಂದರೆ ಸಂಚಿತ, ಆಗಾಮಿ, ಪ್ರಾರಬ್ಧಗಳೆಂಬ ಕರ್ಮ (ನೋಟಗಾರರು, ಕಾಲ ನೋಡಿ ಫಲ ಕೊಡುವವು). ಅವುಗಳಲ್ಲಿ ಸಂಚಿತ, ಆಗಾಮಿ ಎರಡೂ ಕಾಣಸಿಗುವುದಿಲ್ಲ (ಕುರುಡರು) ; ಪ್ರಾರಬ್ಧವು ಪ್ರಕೃತ ದೇಹಕ್ಕೂ ಭೋಗಕ್ಕೂ ಕಾರಣವಾದುದರಿಂದ ಕಂಡುಕೊಳ್ಳಬಹುದು, ಆದರೆ ವಿಷಯಸುಖದಲ್ಲಿ ತೊಡಗಿ ಅದನ್ನು ಕಾಣುವುದಿಲ್ಲ. ಪ್ರಾರಬ್ಧಕರ್ಮಕ್ಕೆ ಮೂರು ಊರುಗಳೆಂದರೆ ತ್ರಿಗುಣ (ಸತ್ತ್ವ. ರಜಸ್ಸು, ತಮಸ್ಸು) ; ಇವುಗಳಲ್ಲಿ ರಜಸ್ಸು, ತಮಸ್ಸು ಎರಡೂ ದುರ್ಗತಿಗೆ ಎಳೆಯುವುದರಿಂದ ಹಾಳು ; ಸತ್ತ್ವದಿಂದ ಸದ್ಗತಿಯ ಸಂಭವವಿದ್ದರೂ ನಾವು ಅದನ್ನು ಎತ್ತಿ ನಿಲ್ಲಿಸದಿದ್ದರೆ 'ಒಕ್ಕಲೆ ಇಲ್ಲ'. ಸತ್ತ್ವಗುಣಕ್ಕೆ ಬಂದ ಮೂವರು ಕುಂಬಾರರು ಹರಿ, ಹರ, ವಿರಿಂಚಿಗಳು ; ಹರನೂ ವಿರಿಂಚಿಯೂ ಅಸ್ವತಂತ್ರರಾಗಿ ಚೊಂಚರು (ಸೊಟ್ಟಗೈಯವರು), ಹರಿಯು ಸ್ವತಂತ್ರನಾದರೂ ನಮ್ಮಲ್ಲಿ ಮನಃಪ್ರಾವಣ್ಯ ಇಲ್ಲವಾಗಿ ಅವನಿಗೆ ಕೈಬಾರದು. ಹರಿಯಿಂದ ಸಿದ್ಧವಾದ ಮೂರು ಮಡಕೆಗಳು ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ಮೋಕ್ಷೋಪಾಯಗಳು. ಜೀವನಿಗೆ ತಾನಾಗಿ ಜ್ಞಾನ, ವೈರಾಗ್ಯಗಳು ಒದಗುವುದಿಲ್ಲವಾಗಿ ಅವು ಒಡಕು ; ಭಕ್ತಿಗೆ ಹರಿಯ ಅನುಗ್ರಹವಿಲ್ಲವಾಗಿ ಬುಡವಿಲ್ಲ. ಭಕ್ತಿಗೆ ಹಾಕಿದ ಮೂರು ಅಕ್ಕಿಕಾಳುಗಳೆಂದರೆ ತ್ರಿವಿಧ ಭಕ್ತಿ (ಸಾತ್ತ್ವಿಕ, ರಾಜಸ, ತಾಮಸ). ಕಡೆಯೆರಡು ಕಾಮ್ಯ ಪ್ರಯೋಜನಾರ್ಥಿಯಾಗಿ ಬೇಯಲಾರವು ; ಸಾತ್ತ್ವಿಕವೊಂದು ಬೇಯಬಲ್ಲುದು, ಆದರೆ ಹರಿಯ ಅನುಗ್ರಹವಿಲ್ಲದೆ ಬೇಯಲಿಲ್ಲ. ಸಾತ್ತ್ವಿಕ ಭಕ್ತಿಗೆ ಹೊಂದಿಕೊಂಡು ಬಂದ ಮೂವರು ನಂಟರು ತ್ರಿಕರಣ (ಮನೋ, ವಾಕ್, ಕಾಯ). ವಾಕ್ ಮತ್ತು ಕಾಯ ಇವೆರಡೂ ನೇರವಾಗಿ ಮುಕ್ತಿಗೆ ಸಾಧಕವಲ್ಲವಾದುದರಿಂದ 'ಉಣ್ಣರು'; ಮನಸ್ಸೊಂದು ಭಕ್ತಿಗೆ ಜೀವವನ್ನು ಒಯ್ಯಬಲ್ಲುದು, ಚಿತ್‌ಸ್ವರೂಪವನ್ನು ಪಡೆದುಕೊಂಡು. ಆದರೆ ಹರಿಯಲ್ಲಿ ಮನಃಪ್ರಾವಣ್ಯ ಇಲ್ಲವಾಗಿ ಅದು 'ಹಸಿವಿಲ್ಲದ್ದು'; ಹಸಿವು ಎಂದರೆ ಮೋಕ್ಷದ ಅಪೇಕ್ಷೆ, ಮುಮುಕ್ಷುತ್ವ. ಮನಸ್ಸಿಗೆ ಕೊಟ್ಟ ಮೂರು ಪೆಟ್ಟುಗಳು (ಟೊಣಪೆಗಳು) ತ್ರಿವಿಧ ದುಃಖ (ಅತೀತ, ಅನಾಗತ, ವರ್ತಮಾನ). ಇವುಗಳಲ್ಲಿ ಅತೀತ ದುಃಖ ಮತ್ತು ಅನಾಗತ ದುಃಖ ಈಗ ಅನುಭವವಕ್ಕೆ ಬಾರವು ('ಎರಡು ತಾಕದು'). ವರ್ತಮಾನ ದುಃಖವೇನೋ

ಅನುಭವಕ್ಕೆ ಬಂದು ವಿರಕ್ತಿಯನ್ನು ಹುಟ್ಟಿಸಿ ಭಕ್ತಿಗೆ ಎಡೆಮಾಡಿಕೊಡಬಲ್ಲದು ; ಆದರೆ ಅಜ್ಞಾನದಿಂದ ಹಾಗಾಗಲಿಲ್ಲ ('ತಾಕಲೆ ಇಲ್ಲ'). ವರ್ತಮಾನ ದುಃಖವನ್ನು ಮನದಟ್ಟು ಮಾಡಿಸಿ ಸಂಸಾರವು ದುಃಖಮಯವಾದುದೆಂದೂ ಹೇಯವೆಂದೂ ಕಾಣಿಸುವಂತೆ ಮಾಡೆಂದೂ, ಹಾಗೆ ಬಂದ ವಿರಕ್ತಿಯಿಂದ ಭಕ್ತಿಯು ಬಲಿತು ಅಪರೋಕ್ಷಜ್ಞಾನ ಒದಗಲೆಂದೂ ಹರಿಯನ್ನು ಬೇಡಿಕೊಂಡಿದ್ದಾರೆ.]

ಪಂತುರಾವಳಿ ಆದಿ

ಮಾಡು ಸಿಕ್ಕದಲ್ಲಾ
ಮಾಡಿನ ಗೂಡು ಸಿಕ್ಕದಲ್ಲಾ
ಜೋಡು ಹೆಂಡಿರಂಜಿ
ಓಡಿಹೋಗುವಾಗ
ಗೋಡೆ ಬಿದ್ದು ಬಯಲಾಯಿತಲ್ಲ ಪ

ಎಚ್ಚರಗೊಳಲಿಲ್ಲಾ ಮನವೇ
ಹುಚ್ಚನಾದೆನಲ್ಲಾ
ಅಚ್ಚಿನೊಳಗೆ ಮೆಚ್ಚು
ಮೆಚ್ಚಿನೊಳಗೆ ಅಚ್ಚು
ಕಿಚ್ಚಿದ್ದು ಹೋಯಿತಲ್ಲಾ ೧

ಮುಪ್ಪು ಬಂದಿತಲ್ಲಾ ಪಾಯಸ
ತಪ್ಪದೆ ಉಣಲಿಲ್ಲಾ
ತುಪ್ಪದ ಬಿಂದಿಗೆ
ತಿಪ್ಪೆ ಮೇಲೆ
ಧೊಪ್ಪನೆ ಬಿತ್ತಲ್ಲಾ ೨

ಯೋಗವು ಬಂತಲ್ಲಾ ಬದುಕು ವಿ
ಭಾಗವಾಯಿತಲ್ಲಾ
ಭೋಗಿಶಯನ ಶ್ರೀ
ಪುರಂದರವಿಠಲನ
ಆಗ ನೆನೆಯಲಿಲ್ಲಾ ೩

ಮಾಡು—ಭಕ್ತಿ ; ಮಾಡಿನ ಗೂಡು—ಭಕ್ತಿಗಮ್ಯನಾದ ಪರಮಾತ್ಮ.

ಜೋಡ ಹೆಂಡಿರು—ಅನ್ಯಥಾಜ್ಞಾನ, ಹರಿವಿಸ್ಮರಣೆ (ಜೀವನಿಗೆ ಸಂಸಾರಾವಸ್ಥೆಯಲ್ಲಿ ಹೊಂದಿಕೊಳ್ಳುವುವು).

ಗೋಡೆ—ಸಂಸಾರವೇ ಸ್ಥಿರವೆಂಬ ನಂಬಿಕೆ.

ಎಚ್ಚರ—ತತ್ತ್ವವಿವೇಕ.

ಹುಚ್ಚ—ಭ್ರಮೆಗಳು (ಸ್ವಾತಂತ್ರ್ಯಭ್ರಮ, ಐಕ್ಯಭ್ರಮ, ಕರ್ತೃತ್ವಭ್ರಮ, ಭೋಕ್ತೃತ್ವ ಭ್ರಮ).

ಅಚ್ಚಿನೊಳಗೆ ಮೆಚ್ಚು—ಸಂಸಾರ ಚಕ್ರದಲ್ಲಿ ಒಲುಮೆ.

ಪಾಯಸ—ಹರಿನಾಮ ಸ್ಮರಣೆ.

ತುಪ್ಪದ ಬಿಂದಿಗೆ—ಸಾಧನ ಶರೀರ.

ಯೋಗ—ಲಿಂಗದೇಹದೊಂದಿಗೆ ಸಂಯೋಗ.

ಬದುಕು ವಿಭಾಗ—ಪಾಪ ಪುಣ್ಯಗಳಲ್ಲಿ.

ಆನಂದಭೈರವಿ ಅಟ್ಟ

ಮೂಗು ಸಣ್ಣದು ಮೂಗುತಿ ದೊಡ್ಡದು
ಭಾರ ಯಾರು ಹೊರಬೇಕು
ಇಂಥಾ ಆಡಿದ ಮಾತುಗಳಾಡಿದವಳ
ಮೋರೆ ಹೇಗೆ ನೋಡಬೇಕು ೧

ಮೀರಿ ಹೋದ ಮಾತಿಗೆ
ಎಳ್ಳು ನೀರೇ ಬಿಡಬೇಕು
ಕೂಡಿದ್ದ ಗೆಳೆಯರು ಆಡಿ
ಕೊಂಡ ಮೇಲೆ ಕೇರಿಯೇ ಬಿಡಬೇಕು ೨

ವಾರಿಗೆ ಒಗತನ ಮೀರಿಹೋದವಳ
ಕೈ ಯಾರು ಹಿಡಿಯಬೇಕು
ಸ್ವಾಮಿ ಶ್ರೀಪುರಂದರವಿಠಲರಾಯ
ನೀನೆ ಹಿಡಿಯಬೇಕು ೩

ಮೂಗು ಸಣ್ಣದು—ಅಣುಪ್ರಮಾಣದ ಜೀವ.

ಮೂಗುತಿ ದೊಡ್ಡದು—ಜೀವವು ಒದಗಿಸಿಕೊಳ್ಳುವ ಕರ್ಮಸಂಬಂಧ ಹೊರೆಯಾದುದು.

ಇಂಥಾ...—ಮಾಯಾದೇವಿ ; ಅವಳ ಸ್ವರೂಪವಾಗಲಿ, ವ್ಯಾಪಾರವಾಗಲಿ ಅಚಿಂತ್ಯವಾದುದು.

ಮೀರಿ ಹೋದ ಮಾತಿಗೆ—ಪ್ರಾಚೀನ ಕರ್ಮಕ್ಕೆ.

ನೀರೇ ಬಿಡಬೇಕು—ತಿಲಾಂಜಲಿ ಕೊಟ್ಟು ಕಳೆದುಕೊಳ್ಳಬೇಕು ; ಹರಿಸ್ಮರಣೆಯಿಂದ.

ಕೂಡಿದ್ದ ಗೆಳೆಯರು—ಪುಣ್ಯಪಾಪಗಳು.

ಕೇರಿ—ಸಂಸಾರ.

ವಾರಿಗೆ ಒಗತನ...—ಪ್ರಾಕೃತ ಕರ್ಮಸಂಬಂಧವನ್ನು ಕಳೆದುಕೊಂಡ ಜೀವ.

ಪೂರ್ವಿ ಆದಿ

ಕುರುಡು ನಾಯಿ ತಾ ಸಂತೆಗೆ ಬಂತಂತೆ
ಅದು ಏತಕೆ ಬಂತೊ ಪ

ಖಂಡಸಕ್ಕರೆ ಹಿತವಿಲ್ಲವಂತೆ
ಖಂಡ ಎಲುಬು ಕಡಿದಿತಂತೆ
ಹೆಂಡಿರ ಮಕ್ಕಳ ನೆಚ್ಚಿತಂತೆ
ಕೊಂಡುಹೋಗುವಾಗ ಯಾರಿಲ್ಲವಂತೆ ೧

ಭರದಿ ಅಂಗಡಿ ಹೊಕ್ಕಿತಂತೆ
ತಿರುವಿ ದೊಣ್ಣೆಯಲಿ ಇಕ್ಕಿದರಂತೆ
ಮರೆತರಿನ್ನು ವ್ಯರ್ಥವಂತೆ
ನರಕದೊಳಗೆ ಬಿದ್ದಿತಂತೆ ೨

ವೇದವಾದಗಳನೋದಿತಂತೆ
ಗಾದೆಮಾಡಿಬಿಟ್ಟಿತಂತೆ
ಹಾದಿತಪ್ಪಿ ನಡೆದು ಯಮನ
ಬಾಧೆಗೆ ತಾ ಗುರಿಯಾಯಿತಂತೆ ೩

ನಾನಾ ಜನ್ಮವನೆತ್ತಿತಂತೆ
ಮಾನವನಾಗಿ ಹುಟ್ಟಿತಂತೆ
ಕಾನನ ಕಾನನ ತಿರುಗಿತಂತೆ
ತಾನು ತನ್ನನೆ ಮರೆಯಿತಂತೆ ೪

ಮಂಗನ ಕೈಯ ಮಾಣಿಕ್ಯದಂತೆ
ಹಾಂಗೂ ಹೀಂಗೂ ಕಳೆದೀತಂತೆ
ರಂಗ ಪುರಂದರವಿಠಲನ ಮರೆತು
ಭಂಗ ಬಹಳ ಪಟ್ಟಿತಂತೆ ೫

ಕುರುಡು ನಾಯಿ—ಆದ್ಯಪರಾಧವಾದ ಅನ್ಯಥಾಜ್ಞಾನದಿಂದ ಕೂಡಿರುವ ಜೀವ.

ಸಂತೆ—ಸಂಸಾರ.

ಖಂಡಸಕ್ಕರೆ—ಸ್ವರೂಪ ಜ್ಞಾನ ; ಆನಂದ.

ಅಂಗಡಿ...—ಕರ್ಮವಿಪಾಕ ; ಅದರಿಂದ ಬರುವ ದುಃಖ.

ವೇದ ವಾದಗಳು—ನಾಲ್ಕು ವೇದಗಳು, ನ್ಯಾಯವೇ ಮೊದಲಾದ ಶಾಸ್ತ್ರಗಳು.

ಹಾದಿ ತಪ್ಪಿ—ಸಾಧನಾಮಾರ್ಗವನ್ನು ಬಿಟ್ಟು.

ತಾನು ತನ್ನನು ಮರೆಯಿತಂತೆ—ಸ್ವರೂಪ ವಿಸ್ಮೃತಿ.

ಹಾಂಗೂ ಹೀಂಗೂ—ಇಹಪರಗಳೆರಡನ್ನೂ.

ರಂಗ...—ಹರಿ ವಿಸ್ಮೃತಿಯಿಂದ.

ಶಂಕರಾಭರಣ ಆದಿ

ಆರಿಗೆ ಮೊರೆಯಿಡಲೊ ಹರಿಯೆ ವಿ
ಚಾರಿಸುವರ ಒಬ್ಬರ ಕಾಣೆ ಪ

ಹಲವಂಗ ಗುಣದವನೊಬ್ಬರಸು
ತಲೆಯಿಲ್ಲದವನೊಬ್ಬ ಪ್ರಧಾನಿ
ತಳವಾರ ಕಿರಿಗಣ್ಣಿನವನೊಬ್ಬ
ಬಲು ಬೊಟ್ಟು ಗುಣದೊಬ್ಬ ಶ್ಯಾನುಭೋಗ ೧

ಅರಸನ ಹೆಂಡತಿ ರತಿಗಾರಿ
ಅರಸನ ಮಗಳು ಅಹಂಕಾರಿ
ಅರಸನ ಸೊಸೆಯೊಬ್ಬಳನ್ಯಾಯಕಾರಿ
ಅರಸನ ದಾಸಿಯು ಅತಿ ಕ್ರೂರಿ ೨

ನಡುನಡುವೆ ಯಮನ ಪಟ್ಟಣವು
ಎನ್ನೊಡೆಯ ಪಂಚೇಂದ್ರಿಯ ದೈವಕರು
ತಡೆಯದಂತೆ ನೀ ದಯಮಾಡೊ
ಎನ್ನೊಡೆಯ ಪುರಂದರವಿಟ್ಠಲನೆ ೩

ಹಲವಂಗ ಗುಣದ ಅರಸು—ಪ್ರಕೃತಿ (ರಜೋಗುಣ ಪ್ರಧಾನವಾದುದು).
ತಲೆಯಿಲ್ಲದ ಪ್ರಧಾನಿ—ಅನ್ಯಥಾಜ್ಞಾನ.
ಕಿರಿಗಣ್ಣಿನ ತಳವಾರ—ಹರಿಯ ವಿಸ್ಮರಣೆ.
ಶ್ಯಾನುಭೋಗ—ನಿಷಿದ್ಧಾಚರಣ, ವಿಹಿತ ಅನಾಚರಣ.
ಅರಸನ ಹೆಂಡತಿ—ಕಾಮ.
ಅರಸನ ಮಗಳು—ಅಹಂಕಾರ.
ಅರಸನ ಸೊಸೆ—ಪಾಪಬುದ್ಧಿ.
ಅರಸನ ದಾಸಿ—ಕ್ರೋಧ.
ನಡುನಡುವೆ ಯಮನ ಪಟ್ಟಣವು—ಜನನ ಮರಣಗಳ ಚಕ್ರ.
ಪಂಚೇಂದ್ರಿಯ ದೈವಕರು—ಪಂಚೇಂದ್ರಿಯಗಳ ತತ್ತ್ವಾಭಿಮಾನಿಗಳು.

೨೨೩

ಪಂತುವರಾಳಿ — ಅಟ್ಟ

ಲೊಟಪಾಟ ಸಂಸಾರ ಏನಣ್ಣ
ಲೊಟಪಾಟ ಸಂಸಾರದೊಳಗೆ ಸಿಲುಕಿ ನಾ
ವಿಠಲ ನಿನ್ನ ಧ್ಯಾನವ ಮರೆತೆನಯ್ಯ ಪ

ಹುಟ್ಟಿದ್ದ ಮುಂಚೆ ಹಸಿವೆಯನರಿಯೆ
ಕೊಟ್ಟಿಗೆಯೊಳಗೆ ಎಂಟು ಆನೆಯು ಕಂಡೆ
ಮನೆಯ ಒಳಗೆ ಏಳು ಕುದುರೆಯು ಕಂಡೆ
ಕಿಲ್ಲೆಯೊಳಗೆ ಏಳು ಚರಣವ ಕಂಡೆ ೧

ಯಾತದ ಮೇಲೆ ಹೋತ ಮೇವುದ ಕಂಡೆ
ಮಾತನಾಡುವ ಗುಬ್ಬಿಯು ಕಂಡೆ
ರಾಜ್ಯವನಾಳುವ ಚಿಣ್ಣಾನೆ ಕಂಡೆ
ರೆಕ್ಕೆಯಿಲ್ಲದೆ ಹಾರುವ ಪಕ್ಷಿಯು ಕಂಡೆ ೨

ಕೀಳುಕೋಟೆಯೊಳೊಬ್ಬ ಅಗಸಾಲ ಸತ್ತರೆ
ಮೇಲುಕೋಟೆಯೊಳೊಬ್ಬ ಅಗಸತಿ ಅಳುವಳು
ಅವನಿಗೂ ಅವಳಿಗೂ ಸಂಬಂಧವೇನೆಂದು
ಅದು ನೋಡಿ ನಗುತಿಪ್ಪ ಪುರಂದರವಿಠಲ ೩

ಕೊಟ್ಟಿಗೆಯೊಳಗೆ ಎಂಟು ಆನೆ—ದೇಹದಲ್ಲಿ ಅಷ್ಟಮದಗಳು; ವಿವರಣೆ ಆಗಲೆ ಬಂದಿದೆ.

ಮನೆಯ ಒಳಗೆ ಏಳು ಕುದುರೆ—ಸಂಸಾರಿ ಜೀವನ ಸಪ್ತವ್ಯಸನಗಳು ; ವಿವರಣೆ ಆಗಲೆ ಬಂದಿದೆ.

ಕಿಲ್ಲೆಯೊಳಗೆ ಏಳು ಚರಣವ—ಕೋಟೆಯೆಂದರೆ ಜೀವವನ್ನು ಯಥಾರ್ಥಜ್ಞಾನದಿಂದ ತಡೆದಿಡುವ ಅವಿದ್ಯೆಯು ಏಳು ಪ್ರಕಾರಗಳು : ರಜಸ್ಸು, ಅಸ್ಮಿತಾ, ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ.

ಯಾತದ ಮೇಲೆ ಹೋತ—ಸಂಸಾರ ಚಕ್ರದಲ್ಲಿ ಜೀವ.

ಮಾತಾಡುವ ಗುಬ್ಬಿ—ಬುದ್ಧಿ.

ರಾಜ್ಯವನಾಳುವ ಚಿಣ್ಣಾನೆ—ಅಹಂಕಾರ ; ಚಿಣ್ಣಾನೆ-ಮರಿಯಾನೆ.

ರೆಕ್ಕೆಯಿಲ್ಲದೆ ಹಾರುವ ಪಕ್ಷಿ—ಮನಸ್ಸು.

ಕೀಳುಕೋಟೆಯೊಳೊಬ್ಬ ಅಗಸಾಲ—ಕೀಳುಕೋಟೆ, ಪ್ರಾಕೃತಜೀವನ ಸಂಸಾರ ; ಅಲ್ಲಿ ಒಡವೆ, ಪಾತ್ರೆ, ಉಪಕರಣಗಳನ್ನು ಮಾಡುವ ಅಕ್ಕಸಾಲೆ, ಕರ್ಮ ; ಅಕ್ಕಸಾಲೆ ಸಾಯುವುದೆಂದರೆ ಕರ್ಮ ನಾಶವಾಗುವುದು.

ಮೇಲುಕೋಟೆಯೊಳೊಬ್ಬ ಅಗಸತಿ—ಮೇಲುಕೋಟೆಯೆಂದರೆ ಮೊದಲ ಅಪರಾಧವಾದ ಅನ್ಯಥಾಜ್ಞಾನ ; ಅಲ್ಲಿ ಅಗಸತಿ (ಅಗಸಗಿತ್ತಿ)ಯೆಂದರೆ ಕಾಮ; ವಿಷಯಗಳನ್ನೆಲ್ಲ ಬಯಕೆಗಳಿಂದ ತೊಳೆದು ಭೋಗ್ಯವಸ್ತುಗಳನ್ನಾಗಿ ಮಾರ್ಪಡಿಸುವುದು.

ಅವನಿಗೂ ಅವಳಿಗೂ ಸಂಬಂಧ—ಕಾಮ ಕರ್ಮಗಳ ನಡುವೆ ಇರುವ ನಂಟು ದುರೂಹ್ಯವಾದುದು.

ನಾದನಾಮಕ್ರಿಯೆ ಏಕ

ಗುದ್ದಿದವನೆ ಬಲ್ಲ ಗುದ್ದಿಸಿಕೊಂಡವನೆ ಬಲ್ಲ
ಸುದ್ದಿಗೆ ತಾವಿಲ್ಲ ಬೌದ್ಧರೆ ಕೇಳಿರಿ ನೀವೆಲ್ಲ ಪ

ಜೀವದೊರಸೆ ಕೊಂದ ಹವಣಿಸಿ
ನೆವಸವ ನುಂಗಿದ
ಬಹು ಭಾಷೆಯು ಕಡಿದ
ಶಿವ ಶಿವ ತಾನಾಗೆ ಬಿರಿದ ೧

ಆರಿಗೆ ಮೊರೆಯಿಡಲಿ
ಪಿರಿದಭಿಮಾನಕ್ಕೆ ಸುಡಲಿ
ಭಾರವು ತಿರುಗಿರಲಿ
ಕಾಣದೆ ಇದಿರಲಿ ಇರಲಿ ೨

ಕರ್ಮವು ಭೇದಿಸಿದ
ವೈರಕೆ ಗುರಿಯುನೆ ಮಾಡಿದ
ಧರ್ಮವ ಭಾವಿಸಿದ ಪುರಂ
ದರವಿಠಲನೆ ನಿಜ ಬುದ್ಧ ೩

[ಬೌದ್ಧರ ಶೂನ್ಯವಾದವನ್ನು ಜರಿಯುವ ಪದವಿದೆಂದು ಒಟ್ಟಾರೆ ಗ್ರಹಿಸಬಹುದು. ಗುದ್ದಿದವನು ಈಶ, ಗುದ್ದಿಸಿಕೊಂಡವನು ಜೀವ ಎಂದೂ ಸೂಚಿಸಬಹುದು. ಉಳಿದ ಮಾತುಗಳು ಅರ್ಥವಾಗುವುದಿಲ್ಲ.]

೨೨೫

ಸುರಟಿ ಆದಿ

ಇಲ್ಲೆ ಕುಳಿತಿದ್ದ ಭೂತವು ಪ

ಒಂದು ಹಲ್ಲಿ ನುಂಗಿತು ಹದಿನಾಲ್ಕು ಲೋಕವ ಅ

ಸೂಳೆಯು ಮನೆಯಲ್ಲಿ ಅದೊಂದು ಕೋಳಿ
ಕೋಳಿಯು ನಾಲಿಗೆ ಏಳು ತಾಳ ಉದ್ದ
ಕೋಳಿ ನುಂಗಿತು ಏಳು ಕಾಳಿಂಗನಾಗನ್ನ
ಮೇಲೆದ್ದು ಬೇಡಿತು ಸಿಂಹದ ಮರಿಯು ೧

ಕಾನನದ ಒಳಗೆ ಅದೊಂದು ಕೋಣ
ಕೋಣನ ಕೊರಳಿಗೆ ಮುನ್ನೂರು ಭಾವಿ
ಕೋಣ ನೀರಿಗೆ ಹೋಗಿ ಕ್ಷೋಣಿಕಪಿಯು ಕೊಂದು
ದೊಡ್ಡ ಟೊಣ್ಣನ ಮನೆಯೊಳಗೌತಣವಯ್ಯ ೨

ವೃಕ್ಷದ ಮೇಲೊಂದು ಸೂಕ್ಷ್ಮದ ಪಕ್ಷಿ
ಪಕ್ಷಿ ಭಕ್ಷಣವಾದ ಅಮೃತದ ಹಣ್ಣು
ಪಕ್ಷಿ ನೋಡಲು ಬಂದ ರಾಕ್ಷಸ ಬ್ರಾಹ್ಮಣ
ಶಿಕ್ಷೆಯು ಮಾಡಿದ ಪುರಂದರವಿಠಲ ೩



ಸೌರಾಷ್ಟ್ರ ಅಟ್ಟ

ನಿನ್ನದು ನಿನಗೆ ಬಾರಿಸಿ ಕೊಟ್ಟೇನು
ತಾರೇ ದಂಡಿಗೆಯು ಪ

ಗಂಗಾಳ ಕಣ್ಣಂತೆ ಅಂಗಳ ಹೊರಗಂತೆ
ಕಂಗಳಿಲ್ಲದವ ಕುರುಡನಂತೆ
ತಾರೇ ದಂಡಿಗೆಯು ೧

ಮಂಡಿಗೆಯು ಸವಿಯಂತೆ ಸಂಡಿಗೆ ಖಾರಂತೆ
ಗಂಡುಳ್ಳವಳು ಮುತ್ತೈದೆಯಂತೆ
ತಾರೇ ದಂಡಿಗೆಯು ೨

ಅತ್ತಕಾಯಂತೆ ಬತ್ತಿದ ಭಾವಿಯಂತೆ
ಅತ್ತೆಯು ಮಗಳು ತನಗಂತೆ
ತಾರೇ ದಂಡಿಗೆಯು ೩

ತಗ್ಗಾದ ಹುರಿಯಂತೆ ಮಗ್ಗಾದ ಗುಣಿಯಂತೆ
ಬಗ್ಗಿದೆರಡು ಹೊರಗಂತೆ
ತಾರೆ ದಂಡಿಗೆಯು ೪

ಹಳ್ಳದ ಹರಿಯಂತೆ ಗುಳ್ಳದ ನೀರಂತೆ
ಪುರಂದರವಿಠಲ ಹೇಳಿದನಂತೆ
ತಾರೇ ದಂಡಿಗೆಯು ೫

೨೨೭

ಮೋಹನ — ಚಾಪು

ಬೈಲಾ ಭಾವಿಗೆ ಬಂದಳೋರ್ವ ಬಾಲೆ ಪ

ಕಾಲು ಜಾರಿತು ಕೊಡ ಒಡೆಯಿತು
ನೀರುರುಳಿತು ಅ

ನೆರಳಿಲ್ಲದೆ ನೀರಿಲ್ಲದೆ ಬೇರಿಲ್ಲದೆ ಸಸಿ ಹುಟ್ಟಿ
ಹೂವಿಲ್ಲದೆ ಕಾಯಿಲ್ಲದೆ ಫಲ ಬಂದಿತು
ಕರವಿಲ್ಲದೆ ಕಾಲಿಲ್ಲದೆ ಕೊಯ್ಯುವರು ಮೂವರು
ಫಲ ಉಂಬರೆಂಭತ್ತನಾಲ್ಕು ಲಕ್ಷದಲ್ಲಿ ೧

ಕುರುಡ ಕಂಡನು ಹೂವು ನಡುವಿರುಳೆ ಬಾಹುದನು
ಮೂಕ ಕಂಡನು ಕನಸು ಕಿವುಡ ಕೇಳಿ
ಸ್ಥಿರವೆಂದು ಇರವು ದಿಟ್ಟ ಗಗನಕೆ ಹಾರಿ
ಮರವು ಮುರಿಯಿತು ನೋಡೆ ಸರಿಯಾಗಿದ್ದಂಥ ೨

ಹೆಚ್ಚಿನ ಕೊಡದವಳು ಕಂಚಿ ತೋರಣ ಕಟ್ಟಿ
ರಚ್ಚಿಗೆ ಬರಲು ನಾಲ್ವರ ಮುಂದಕೆ
ಉಚ್ಚರಿಸಲೊಶವಲ್ಲ ಕೇಳು ಸಜ್ಜನ ಸೊಲ್ಲ
ನಿಚ್ಚ ಭಾವಗಳ ಪುರಂದರವಿಠಲ ಬಲ್ಲ ೩

ನಾದನಾಮಕ್ರಿಯೆ ಆದಿ

ನೋಡಿರಯ್ಯ ನೀವು ನೋಡಿರಯ್ಯ ಪ

ನೋಡಿರಯ್ಯ ಹರಿದಾಸರ ಮಾಯವ
ಜೋಡಾಗಿಪ್ಪ ಎರಡು ಪಕ್ಷಿ
ಗೂಡನಗಲಿ ಗೂಡ ತೊರೆದು
ಆಡುತ ಬಂದು ನುಂಗಿ ನೋಡುವ ಸೊಗಸು ಅ

ಮನೆಯ ಒಳಗೆ ಒಂದು ತಗಣೆ ಮಾಳಿಗೆ ನುಂಗಿತು
ಮಂಚವ ನುಂಗಿತು
ಮಲಗಿದ್ದ ಸತಿಪತಿಯ ನುಂಗಿತು
ಮನೆಗೆ ಬಂದ ಬಳಗವ ನುಂಗಿತು
ಬಿಡದೆ ನುಂಗಿತು ಮನೆ ಮಕ್ಕಳನು
ಅದು ಸಾಲದೆಂದು ತಗಣೆಯ ಮರಿಯು
ಆಡುತ ಬಂದು ನುಂಗಿ ನೋಡುವ ಸೊಗಸ ೧

ಹುತ್ತದೊಳಗೆ ಒಂದು ಸರ್ಪ
ಎಂಟು ಗಜಗಳ ಬಿಡದೆ ನುಂಗಿತು
ಎಂಟು ನೆಂಟರ ನುಂಗಿತು
ಮತ್ತೆ ರವಿ ಚಂದ್ರರ ನುಂಗಿತು
ಅಂಥಾ ಸರ್ಪನ ಕಪ್ಪೆಯು ನುಂಗಿತು
ಅಂಥಾದೊಂದು ಕಪ್ಪೆಯು ಮರಿಯಾಡುತ ಬಂದು
ನುಂಗಿ ನೋಡುವ ಸೊಗಸ ೨

ಮೂರು ನುಂಗಿತು ಮೂರಾರನೆ ನುಂಗಿತು
ಮೂರು ಮೂರ್ತಿಗಳ ಬಿಡದೆ ನುಂಗಿತು
ಸಾಗರ ಸಪ್ತದ್ವೀಪವ ನುಂಗಿತು
ವರ ಗುರುಪಂಚಾಕ್ಷರಗಳ ನುಂಗಿತು
ಶರಣಾಗತ ಶ್ರೀಪುರಂದರವಿಠಲ ತಾನೆ ಒಬ್ಬನೆ ಬಲ್ಲ ೩

ಪರಿಶಿಷ್ಟ

ಪುರಂದರದಾಸರ ಪದಗಳಲ್ಲಿ ಸಾಹಿತ್ಯವಿಮರ್ಶೆ

(ಪ್ರೊ॥ ಅ. ರಾ. ಮಿತ್ರ)

ಪುರಂದರದಾಸರು ಕನ್ನಡದಲ್ಲಿ ಬರೆಯಲು ಅಥವಾ ಪದಗಳನ್ನು ಹಾಡಲು ಆರಂಭಿಸುವ ವೇಳೆಗೆ ಅವರಿಗೆ ಸಹಾಯವಾಗುವಂತೆ ಕನ್ನಡ ಭಾಷೆ ತನ್ನ ಸಮಸ್ತ ದೇಸಿ ಸಂಪತ್ತಿನೊಂದಿಗೆ ಸಿದ್ಧಗೊಂಡಿತ್ತು. ಮಾರ್ಗಸಾಹಿತ್ಯದ ಸಂಸ್ಕೃತ ನಿಷ್ಠ ಬರವಣಿಗೆಗೆ ವಿದಾಯ ಹೇಳಿದ ವಚನಕಾರರು ಕನ್ನಡದ ನರುಗಂಪನ್ನು ಸೂಸುವ ಆಡುಮಾತಿನ ವಿಶಿಷ್ಟ ಗಂಧವಲಯವನ್ನು ಕಂಡುಕೊಂಡಿದ್ದರು. ಮುಂದಿನ ಪುರಾಣ ರಾಶಿ, ಷಟ್ಪದಿಗಳು, ಹರಿಹರ ರಾಘವಾಂಕರ ಕೃತಿಗಳು ಇದೇ ದಿಕ್ಕಿನಲ್ಲಿ ಮುನ್ನಡೆದು ಕನ್ನಡಕ್ಕೆ ಗೇಯ ಲೋಕದ ಮತ್ತು ಧ್ವನಿಲೋಕದ ವೈವಿಧ್ಯ ಸಮೃದ್ಧಿಗಳನ್ನು ಒದಗಿಸಿಕೊಟ್ಟವು. ಅಂದರೆ ಪುರಂದರರ ಕಾಲಕ್ಕೆ ಕನ್ನಡ ಭಾಷೆಯು ತನ್ನ ವಿಶಿಷ್ಟ ಜಾನಾಂಗಿಕ ಸಂಸ್ಕೃತಿಯಿಂದ ಪುಷ್ಟಗೊಂಡಿತ್ತು. ಇಂಥ ಶ್ರೀಮಂತ ಭಾಷೆಗೆ ಸಂಗೀತದ ರೆಕ್ಕೆಗಳನ್ನು ಕಟ್ಟಿ ಹಾರಲುಬಿಟ್ಟ ಕೀರ್ತಿ ಹರಿದಾಸರಿಗೆ ಸಲ್ಲುತ್ತದೆ. ಸರಳವೂ ಧ್ವನಿಪೂರ್ಣವೂ ಗೇಯನಿಷ್ಠವೂ ಆದ ಪುರಂದರದಾಸರ ರಚನೆಗಳು ಬಹು ಸುಲಭವಾಗಿ ಎಲ್ಲ ವರ್ಗದ ಜನರ ಬಾಯಲ್ಲಿ ನಲಿಯತೊಡಗಿದವು. ದಾಸರ ದೇವರ ನಾಮಕ್ಕೆ ಸಾರ್ವತ್ರಿಕವಾಗಿ ಪ್ರಸ್ತುತವಾಗಬಲ್ಲ ಎಲ್ಲ ಗುಣಗಳೂ ಇದ್ದುವು. ಭಕ್ತರಿಗೆ ಈ ಪದಗಳಲ್ಲಿ ಬರುವ ಅಸಂಖ್ಯಾತ ದೈವಭಕ್ತರ ಕಥೆಗಳು ತುಂಬ ಮೆಚ್ಚಿಕೆಯಾದುವು. ಅಲ್ಲದೆ ದೈವಭಕ್ತಿಯ ವಿವಿಧ ಮಜಲುಗಳ ವರ್ಣನೆ ತುಂಬ ಹಿತವೆನಿಸಿತು. ವಿವಿಧ ತೀರ್ಥಕ್ಷೇತ್ರಗಳ ದೈವಗಳ ದೃಶ್ಯವತ್ತಾದ ವರ್ಣನೆಯಂತೂ ನಾಡಿನ ಎಲ್ಲ ಭಾಗಗಳ ಜನರಿಗೂ ಪ್ರಿಯವಾಯಿತು. ಶೃಂಗಾರ ಪ್ರಿಯರಿಗೆ ಕೃಷ್ಣನ ಲೀಲೆಗಳ ವಿವರಣೆಯ 'ಪದ'ಗಳು ಹುಚ್ಚು ಹಿಡಿಸಿದವು. ಶುದ್ಧ ಸಂಗೀತ ಪ್ರೇಮಿಗಳು ಮತ್ತು ಸಂಗೀತಾಸಕ್ತಿಯುಳ್ಳ ಹವ್ಯಾಸಿಗಳು ಈ ಎರಡು ವರ್ಗಗಳಿಗೂ ದಾಸರ ಗೇಯರಚನೆಗಳು ತುಂಬ ಆಸಕ್ತಿಯನ್ನು ಕೆರಳಿಸಿದವು. ಸಾಹಿತ್ಯಾಸಕ್ತರು ಈ ಪದಗಳಲ್ಲಿ ಕಂಡುಬರುವ ಸಮಾಜ ವಿಮರ್ಶೆ, ಜನರ ಸ್ವಭಾವದ ವಿವೇಚನೆ, ಆಚಾರ ವಿಚಾರಗಳ ಚರ್ಚೆ, ಶಬ್ದ ವಿಲಾಸ, ವಿವಿಧ ರಸಗಳ ನಿರ್ವಹಣೆ, ಧ್ವನಿಪ್ರಾಚುರ್ಯ, ಅನುಪ್ರಾಸ, ಪಲ್ಲವಿ ಅನುಪಲ್ಲವಿಗಳ ಮಾಧುರ್ಯ, ನುಡಿಗಟ್ಟಿನ ಹರಹು, ಗಾದೆಗಳ ಬಳಕೆ, ಆತ್ಮೀಯವಾದ ಸಂಭಾಷಣೆಯ ಮಾದರಿ, ನೇರವಾದ ಸಂದೇಶ ಪ್ರಚಾರ ಈ ಗುಣಗಳಿಗೆ ಮಾರು ಹೋದರು. ತಾತ್ವಿಕರು ಈ ಪದಗಳ ಸೂಕ್ತಿಗಳನ್ನೂ ಚರ್ಚೆಗೆ ಗುರಿಮಾಡಿರುವ

ವಿಷಯಗಳ ಜಿಜ್ಞಾಸೆಯನ್ನೂ ತಾತ್ವಿಕ ಸಂದೇಶಗಳನ್ನೂ ಮನಸಾರೆ ಕೊಂಡಾಡಿದರು. ಸಾಮಾನ್ಯ ಜನರಂತೂ ಈ ಹಾಡುಗಳ ಭಾವ ಸೌಂದರ್ಯದಿಂದ ಪ್ರಭಾವಿತರಾದರು. ಹೀಗೆ ಬದುಕಿನ ಎಲ್ಲ ವರ್ಗದ ರಸಿಕರ ಎದೆಯನ್ನು ಮುಟ್ಟುವ ಮನಸ್ಸನ್ನು ತಟ್ಟುವ ಅದ್ಭುತ ಕಲೆಗಾರಿಕೆಯಿಂದ ಪುರಂದರದಾಸರ ರಚನೆಗಳು ಕಂಗೊಳಿಸಿವೆ. ಬರಹದಿಂದ ಮೆರೆಯುವ ಮುನ್ನ ಬಾಯ್ದ್ದರೆ (Oral tradition)ಯ ಸಂಪ್ರದಾಯದಿಂದ ನೇರವಾಗಿ ಜನರನ್ನು ಮುಟ್ಟಿದ್ದರಿಂದ ಅದ್ಭುತ ವೇಗದಿಂದ ಇವು ಪ್ರಸಾರವನ್ನು ಪಡೆದುಕೊಂಡುವು. ಹಾಡು ಕುಣಿತಗಳಲ್ಲಿ ನುರಿತು ಉತ್ತಮ ಕಂಠಶ್ರೀಯನ್ನು ಹೊಂದಿ ಹರಿನಾಮ ಕೀರ್ತನೆಗೆ ಬದುಕನ್ನು ಮುಡಿಪಾಗಿಟ್ಟ ಒಂದು ಬಗೆಯ ಸಂಚಾರೀ ಗಾಯಕ ಪಡೆಯೂ ಈ ಪದಗಳ ಸಂದೇಶವನ್ನು ಮಿಂಚಿನ ವೇಗದಿಂದ ಜನರಿಗೆ ತಲುಪಿಸಲು ಸಹಾಯಕವಾದದ್ದು ಒಂದು ಸೌಭಾಗ್ಯ ಎನ್ನಬೇಕು. ಅಲ್ಲದೆ ಪುರಂದರದಾಸರ ಪದಗಳು ಬಹುಮಟ್ಟಿಗೆ ಲೋಕ ಶಿಕ್ಷಣವನ್ನು ಭಕ್ತಿಯೊಂದಿಗೆ ಬೆರೆಸಿದ ರಚನೆಗಳಾಗಿವೆ.

ಚಾರಣಗಾಯಕ ವರ್ಗ ಜನತೆಗೆ ನೀಡುವ ಲೋಕ ಶಿಕ್ಷಣ ಒಂದು ವಿಶಿಷ್ಟ ಬಗೆಯದು. ಮನೆಮನೆಗಳ ಮುಂದೆ ಒಂದು ಚರಣವನ್ನು ಪಲುಕಿಸುತ್ತ ನಡೆಯುವ ಇವರು ಕೇಳುವ ಜನರ ಮನಸ್ಸಿನ ನೆಲದಲ್ಲಿ ಒಂದು ವಿಚಾರದ ಬೀಜವನ್ನೂ ಬಿತ್ತುತ್ತ ಹೋಗುತ್ತಾರೆ. ಜನರ ಮಾತುಕತೆಯಲ್ಲಿ ಕೂಡ ಈ ಸಾಲುಗಳು ಅನುರಣಿತವಾಗುತ್ತವೆ. ಮಕ್ಕಳಿಂದ ಹಿಡಿದು ಮುದುಕರವರೆಗೆ ನಾನಾ ವಯೋಮಾನದ ಬುದ್ಧಿಮಾನದ ಜನ ನಾನಾಕಾರಣಗಳಿಗಾಗಿ ಈ ಸಾಲುಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ, ಉದ್ಧರಿಸುತ್ತಾರೆ. ಶಾಲಾಶಿಕ್ಷಣದ ಕಟ್ಟುಪಾಡಿನಿಂದ ಪಾರಾದ ಈ 'ಮುಕ್ತ ಶಿಕ್ಷಣ'ದಿಂದ ಆಗುವ ಸಾಹಿತ್ಯಪ್ರಸಾರ ಹೆಚ್ಚು ವ್ಯಾಪಕವಾದದ್ದು. ಅನಕ್ಷರಸ್ಥರೇ ಹೆಚ್ಚಿನ ಸಂಖ್ಯೆಯಲ್ಲಿದ್ದ ಕರ್ನಾಟಕ ದೇಶದಲ್ಲಿ ಇಂಥ ಗಾಯಕರಿಂದಾಗಿ ನಮ್ಮ ಜನ ಪರಂಪರೆಯ ಸತ್ವವನ್ನೂ ಪುರಾಣಪ್ರಜ್ಞೆಯನ್ನೂ ಸಂಘಜೀವನವನ್ನೂ ಮೈಗೂಡಿಸಿಕೊಂಡರು. 'ತಾಸು ಬಾರಿಸುತಿದೆ ಕೇಳಿ', 'ಮುಸುರೆ ತೊಳೆಯಬೇಕು', 'ಕಾಗದ ಬಂದಿದೆ', 'ಬಿಡೆ ನಿನ್ನ ಪಾದವ', 'ಹಾಲುಉಕ್ಕಿತೊ ರಂಗ', 'ಗುದ್ದಿದವನೆ ಬಲ್ಲ, ಗುದ್ದಿಸಿ ಕೊಂಡವನೆ ಬಲ್ಲ', 'ದಾರಿಯಾವುದಯ್ಯ?', 'ಗಾಳಿ ಬಂದ ಸಮಯದಲ್ಲಿ ತೂರಿಕೊಳ್ಳಿರೋ', 'ಬುತ್ತಿಯ ಕಟ್ಟೋ', ಇಂಥ ಸಾಲುಗಳು (ಬೀದಿಯಲ್ಲಿ ಹೋಗುವಾಗ ಬಿದ್ದ ವಸ್ತುಗಳನ್ನು ಎತ್ತಿಕೊಳ್ಳುವಷ್ಟು ಸಲೀಲವಾಗಿ) ಕಂಡ ದೃಶ್ಯವನ್ನೇ ಎತ್ತಿಕೊಂಡು ಲೋಕ ಸಂಗತಿಯಿಂದ ಲೋಕೋತ್ತರ ಸಂಗತಿಗೆ ಜಿಗಿಯುವ ರಸ ಸಾಹಸದಿಂದ ಕೂಡಿವೆ.

ಪುರಂದರದಾಸರ ಕೃತಿಗಳು ಧಾರ್ಮಿಕ–ತಾತ್ತ್ವಿಕ ಜಿಜ್ಞಾಸೆಯ ಭಾರದಿಂದ ಬೀಗುತ್ತಿದ್ದರೂ ಸಂಗೀತದ ರೆಕ್ಕೆಗಳನ್ನು ಕಟ್ಟಿಕೊಂಡಿರುವುದರಿಂದ ಸುಲಭವಾಗಿ ಮನಸ್ಸಿನ ಅಂಗಳದಲ್ಲಿ ಹಾರಾಡುತ್ತವೆ. ಈ 'ಲಘಿಮಾ' ಕೌಶಲಕ್ಕೆ ಕಾರಣವೆಂದರೆ

ತಾತ್ತ್ವಿಕತೆ ಗೇಯತೆ ಎರಡನ್ನೂ ಮೈಗೂಡಿಸಿಕೊಂಡ ಪುರಂದರದಾಸರ ಭಾಷಾಸಿದ್ಧಿ. ಪುರಂದರದಾಸರು ಸ್ವಯಂ ಗೆಜ್ಜೆ ಕಟ್ಟಿಕೊಂಡು ('ಗೆಜ್ಜೆಕಟ್ಟು, ಲಜ್ಜೆಬಿಡು' ಇದು ಅವರದೇ ಒಂದು ಸಾಲು) ಭಾವಶುದ್ಧಿಯಿಂದ ಉತ್ತಮ ಕಂಠದಲ್ಲಿ ಹಾಡಬಲ್ಲವರಾಗಿದ್ದರೆಂದು ಕೇಳಿದ್ದೇವೆ. ತಾವು ಬಳಸುವ ಭಾಷೆಗೂ ಸೊಗಸಾದ ಗೆಜ್ಜೆ ಕಟ್ಟಿ ಕುಣಿಸಬಲ್ಲ ಸಾಮರ್ಥ್ಯ ಅವರದಾಗಿದೆ. ಜನತೆಯ ಹೃದಯಕ್ಕೆ ತುಂಬ ಹತ್ತಿರವಾದ ದೇಸೀ ಛಂದಸ್ಸುಗಳನ್ನು ಆರಿಸಿಕೊಂಡ ದಾಸರು ಅದರ ಸಹಜ ನಿರ್ವಹಣೆಗೆ ದೇಸೀ ಭಾಷೆಯನ್ನೇ ಬಳಸಬೇಕಾಗಿಬಂತು. ಭಾಷೆ ತನ್ನೆಲ್ಲ ಯೋಗಸಾಧನೆಗಳನ್ನು ತಣಿಸಿಕೊಳ್ಳಲು ಪುರಂದರದಾಸರನ್ನು ಆಶ್ರಯಿಸಿದಂತೆ ಕಾಣುತ್ತದೆ. ಅವರ ಬಾಲಕೃಷ್ಣನು "ಯಶೋದೆಯೇ ಅಮ್ಮಾ ಎನ್ನನು ಎತ್ತಿಕೊಳ್ಳಮ್ಮ" ಎಂದು ಯಶೋದೆಯನ್ನು ಕಾಡಿದ ಹಾಗೆ ಭಾಷೆ ತನ್ನೆಲ್ಲ ಸಾಧನೆ ಸಂಪತ್ತಿಗಳಿಂದ ಅಲಂಕೃತಗೊಂಡು ಪುರಂದರ ದಾಸರ ಬಳಿಗೆ ಬಂದು 'ಎತ್ತಿಕೋ ಎನ್ನ' ಎಂದು ಬೇಡಿರಬಹುದು.

ಪುರಂದರದಾಸರಿಗೆ ತಮ್ಮ ಕೀರ್ತನೆಗಳು ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಬಗೆಗೆ ಸ್ಪಷ್ಟವಾದ ರಚನೆಯ ಕಲ್ಪನೆಯಿದ್ದಿತು. ಅವರು ಸರಸ್ವತಿಯನ್ನು ಅಂದರೆ ವಾಕ್ ಅನ್ನು ರೂಪಿಸಿಕೊಂಡ ಬಗೆಯಲ್ಲೇ ಅವರ ಈ ಆಶಯ ಎದ್ದುಕಾಣುತ್ತದೆ.

"ಪಾಲಿಸೆಮ್ಮ 'ಮುದ್ದು' ಶಾರದೆ
ಎನ್ನ ನಾಲಿಗೆಯಲ್ಲಿ ನಿಲ್ಲಬಾರದೆ"

ಎಂಬ ಅವರ ಗೀತೆಯನ್ನು ಪರಿಭಾವಿಸಬಹುದು. ಅವರ ದೃಷ್ಟಿಯಲ್ಲಿ ಶಾರದೆಗೆ "ಮುದ್ದು" ಎಂಬ ನಾಮ ವಿಶೇಷಣ ಸೇರಿಕೊಳ್ಳುತ್ತದೆ. ಮುದ್ದು ಎನ್ನುವುದು ಮೋಹಕತೆ, ಚೆಲುವು ಆಪ್ತತೆಗಳನ್ನು ಸೂಸುವ ಪದ. ಬಳಸುವ ಶಬ್ದಗಳು ಸಂವಹನ ಶಕ್ತಿಯನ್ನು ಪಡೆದುಕೊಂಡು ಮುದ್ದಾಗಿರಬೇಕು ಎಂದು ಅವರು ಬಯಸುತ್ತಾರೆ. ಅಲ್ಲದೆ ಸ್ಫುಟವಾಗಿದ್ದು 'ನಾಲಗೆಯಲ್ಲಿ ನಿಲ್ಲುವ' ಅಂದರೆ ಒಮ್ಮೆ ಕೇಳಿದರೆ ಮರೆಯಲಾಗದ ಶಕ್ತಿ ಶಬ್ದಕ್ಕಿರಬೇಕು. ಬಳಸುವ ಶಬ್ದಗಳ ಬಗೆಗೆ ಲೇಖಕನಿಗೆ ಅಕ್ಷರಕ್ಷರ ವಿವೇಕ ಇರಬೇಕಾಗುತ್ತದೆ. ಅಕ್ಷರಕ್ಷರ ಎಂದರೆ ಬಿಡಿಬಿಡಿಯಾದ ಶಬ್ದ ಎಂಬರ್ಥದ ಜತೆಗೆ ನಾಶವಿಲ್ಲದ ಎಂಬರ್ಥವೂ ಇದೆ. ಅಕ್ಷರ-ಕ್ಷರ ಎಂದರೆ ಯಾವುದು ನಾಶಶೀಲವಾದದ್ದು ಯಾವ ಶಬ್ದ ಅವಿನಾಶಿಯಾದುದು ಎಂಬುದನ್ನು ಕಂಡುಕೊಳ್ಳುವ ಶಬ್ದ ಪ್ರತಿಭೆಯೂ ಬರಹಗಾರನಲ್ಲಿರಬೇಕು ಎಂಬುದು ಅವರ ಇಚ್ಛೆಯಾಗಿದೆ. ಅವಳು 'ಶೃಂಗಾರಪುರ ನೆಲೆವಾಸಿನಿ', 'ಸರ್ವಾಲಂಕಾರ', 'ದಯಾಮೂರ್ತಿ' ಸಂಗೀತ ಗಾನ ವಿಲಾಸಿನಿ' ಮತ್ತು 'ಮಂಗಳಗಾತ್ರೆ' ಎಂದು ಪುರಂದರದಾಸರು ಚಿತ್ರಿಸುತ್ತಾರೆ. ಆಕೆಯ ಮಂಗಳ ಮೋಹಕ ಆಕಾರಕ್ಕೆ ಸಹಾಯಕವಾಗುವ ಶಕ್ತಿಗಳು ಎಂದರೆ ಶೃಂಗಾರ ಅಥವಾ ಅಲಂಕರಣ. ಶಬ್ದಗಳಿಗೆ ಏನೆಲ್ಲ ವರ್ಣಾಲಂಕಾರಗಳನ್ನು ಮಾಡಬಹುದೋ ಅಷ್ಟನ್ನು ಮಾಡಿ ಮೆರೆಸುವುದು ಅವರಿಗೆ ತುಂಬ ಪ್ರಿಯವಾದದ್ದು. 'ಭಾರತಿದೇವಿಯ

ನೆನೆ ನೆನೆ' ಎಂಬ ಪದದಲ್ಲಿಯೂ ಅವರು ಸರಸ್ವತಿಯನ್ನು 'ಸಾರಸಾಕ್ಷಿ', 'ಅಪಾಂಗಿ', 'ಕಿಂಕಿಣಿಕಿಣಿ ಪಾದ ಪಂಕಜ ನೂಪುರ ಕಂಕಣ ಕುಂಡಲಾಲಂಕೃತ ದೇಹ' ಉಳ್ಳವಳು ಎಂದು ಹೇಳಿ ಶಬ್ದದ ಮಾಧುರ್ಯ ಪಲುಕುಗುಣಗಳನ್ನು ಮೆಚ್ಚಿಕೊಂಡಿರುವುದು ಸ್ಪಷ್ಟವಾಗುತ್ತದೆ. ಇಂಥ ನಾಟ್ಯಸತ್ತ್ವ ಉಳ್ಳ ಸರಸ್ವತಿಯು ನುಡಿಗುಣಿತಕ್ಕೆ ತಮ್ಮ ನಾಲಗೆಯ ವೇದಿಕೆಯನ್ನು ಸಿದ್ಧಗೊಳಿಸಿಕೊಡಬೇಕು ಎಂಬ ಅವರ ಬಯಕೆ

"ನಲಿದಾಡೆ ನನ್ನ ನಾಲಗೆ ಮೇಲೆ...
ಕುಣಿದಾಡೆ ಎನ್ನ ನಾಲಗೆ ಮೇಲೆ"

ಎಂಬ ಚರಣದಲ್ಲಿಯೂ ವ್ಯಕ್ತವಾಗಿದೆ.

ಇಂಥ ಸರಸ್ವತಿಯನ್ನು ಆಹ್ವಾನಿಸಿಕೊಂಡ ಪುರಂದರದಾಸರು ಅದನ್ನು ವ್ಯರ್ಥ ಹರಟೆಯಲ್ಲಿ ಹಾಳು ಮಾಡಬಯಸುವುದಿಲ್ಲ.

"ನಾಡ ಮಾತು ಬೇಡ ನಾಲಗೆ
ನಿನ್ನ ಬೇಡಿಕೊಂಬೆನು ನಾಲಗೆ"

ಎನ್ನುತ್ತಾರೆ. ನಾಡ ಮಾತು ಎಂದರೆ ಮೋಸ, ವಂಚನೆಗಳಿಂದ ಕೂಡಿದ ಮೂರ್ಖರ ಮಾತು ಎಂದರ್ಥ. "ನುಡಿದದ್ದೆಲ್ಲ ಗಾಯತ್ರಿ" ಆಗಬೇಕು. ಇದು ಅವರ ಅಭಿಮತ. ತನಗಿಲ್ಲದಾ ವಸ್ತುವೆಲ್ಲಿದ್ದರೇನು ? ಎಂಬ ಕವಿತೆಯಲ್ಲಿ ಅವರು ಸ್ಪಷ್ಟವಾಗಿ

"ದೇವಕೀಸುತನ ಹೊಗಳದ ಕವಿತ್ವವೇನು ?"

ಎಂದು ಘೋಷಿಸಿದ್ದಾರೆ. ಈ ಸ್ಪಷ್ಟ ಗುರಿಯನ್ನಿಟ್ಟುಕೊಂಡು ಹೊರಡದಿದ್ದರೆ ನಮ್ಮ ಶಬ್ದ ಸಾಮರ್ಥ್ಯವೆಲ್ಲ ವ್ಯರ್ಥ ಎಂಬುದು ಅವರ ನಿಲುವು. ಅದನ್ನು 'ತೊಳಲದಿರು ಕಂಡ ಕಡೆಗೆ' ಎಂಬ ದೇವರನಾಮದಲ್ಲಿ ಖಚಿತಪಡಿಸುತ್ತ—

"ಲಿಪಿಯೊಳಗಖಿಳವ ಚಿಂತಿಸಿ ಕಡೆಕಡೆಗೆ
ಕಪಿಯಂತೆ ಎಡೆಯಾಡದೆ ಮನವೆ"

ಎಂದು ಹೇಳಿದ್ದಾರೆ. ನಾವು ಅಖಿಲವನ್ನು ಚಿಂತಿಸಬೇಕಾದದ್ದು ಲಿಪಿಯ ಮೂಲಕ ತಾನೆ. ಆದರೆ ಅದರಲ್ಲಿ ವ್ಯರ್ಥಹರಟೆಯ ಕಡೆಗೆ ಒಲಿಯುವಂಥ ಜೊಳ್ಳು ಮಾತನ್ನು ಚಂಚಲಬುದ್ಧಿಯವರು ಆರಿಸಿಕೊಂಡರೆ ನಿರ್ಮಲಚಿತ್ತರು ಕಂಡ ಕಂಡ ಕಡೆ ತೊಳಲದೆ ಬೇಗನೆ ತಮ್ಮ ಶಬ್ದಮಾರ್ಗವನ್ನು ಕಂಡುಕೊಳ್ಳುತ್ತಾರೆ.

"ಮೋದದಿಂ ಹರಿಗರ್ಪಿಸದ ಕವಿತೆಯಿಂದೇನು ?"

ಇದು ಶಬ್ದಲೋಕದ ಮೂಲಕವೂ ತಮ್ಮ ಜೀವನದ ಉದ್ದೇಶವನ್ನು ವಿವರಿಸುವ ಕಾಯಕ. ಆದುದರಿಂದಲೇ ಅವರು ಹರಿಹರನಂತೆಯೇ ಭಾವಾವೇಶದಿಂದ

"ಹಾಡಿದರೆ ಎನ್ನೊಡೆಯನ ಹಾಡುವೆ
ಬೇಡಿದರೆ ಎನ್ನೊಡೆಯನ ಬೇಡುವೆ"

ಎನ್ನುತ್ತಾರೆ. ಅಷ್ಟೇ ಅಲ್ಲ

"ಮಂಗಳ ಮೂರ್ತಿಯ ಪಾಡದ ಕಂಠ
ಒಡೆದು ಹೋದ ಹರವಿನ ಕಂಠ"

ಎಂದು ಜೊಳ್ಳು ಬರಹವನ್ನು ತಿರಸ್ಕರಿಸುತ್ತಾರೆ. ಕೊರಳನ್ನು 'ಒಡೆದು ಹೋದ ಬಿಂದಿಗೆ'ಗೆ ಹೋಲಿಸಿರುವುದು ಅರ್ಥಪೂರ್ಣವಾಗಿದೆ. ಅವರ "ಕೊಡು ಬೇಗ ದಿವ್ಯ ಮತಿ ಸರಸ್ವತಿ" ಎಂಬ ಕವಿತೆ ಪುರಂದರದಾಸರ ಆಶಯಗಳಿಗೆಲ್ಲ ಉತ್ತಮ ಭಾಷ್ಯ ಬರೆದಂತಿದೆ. ಅವರು ಸರಸ್ವತಿಯಿಂದ ಬಯಸುವುದು ಇಂಥ ದಿವ್ಯಮತಿಯನ್ನು. ಸರಸ್ವತಿ ಅವರ ದೃಷ್ಟಿಯಲ್ಲಿ 'ಪತಿತ ಪಾವನೆ' ವಿಠಲ ಪುರಂದರವಿಠಲನನ್ನು ತೋರುವ ಮತ್ತು

"ಬಂದೆನ್ನ ವದನದಿ ನಿಂದು ಕೃಷ್ಣನ ನಾಮವ
ನುಡಿಸುವ ಸುಜನ ಶಿರೋಮಣಿ"

ಇನ್ನೊಂದು ಪದದಲ್ಲಿ ಪುರಂದರದಾಸರು ತಮ್ಮ ಸಾಹಿತ್ಯವನ್ನು ಕುರಿತಾದ ಮೇಲಿನ ಎಲ್ಲ ಭಾವನೆಗಳನ್ನು ಹರಳುಗಟ್ಟಿಸುವಂತೆ ಇಡೀ ಬ್ರಹ್ಮಾಂಡವನ್ನೇ ವಿಷ್ಣು ರಚಿಸಿದ ಮಹಾಕಾವ್ಯ ಎಂಬಂತೆ ವರ್ಣಿಸಿದ್ದಾರೆ. ಈ ಮಹಾಕಾವ್ಯದ ರಚನೆಯು ಸಿದ್ಧಿ ಸಿದ್ಧಿವಿನಾಯಕನದು. ಈ ಕಾವ್ಯದ ಮತಿ ಪಾರ್ವತಿ. ಭಕ್ತಿದಾಯಕಿ ಶಾರದೆ. ಚಿತ್ತದಲ್ಲಿ ಆನಂದ ಸುಖವನ್ನೀಯುವವಳು ರಮೆ. "ಸತತ ಇವರೊಳು ನಿಂತು ಈ ಕೃತಿಯ ನಡೆಸುವವನು"—ಪುರಂದರವಿಠಲ. ಆತನ 'ಸೌಂದರ್ಯ ಲೀಲೆ'ಯನ್ನು ಹಾಡುವುದಕ್ಕೇ ಕಾವ್ಯ ಹುಟ್ಟಿಕೊಂಡಿದೆ ಎನ್ನುತ್ತಾರೆ ಅವರು. ಕಾವ್ಯ, ಅವರೇ ಹೇಳುವಂತೆ "ಆನಂದ ನಿಲಯ"ಕ್ಕೆ ವಾಹನ. ಅದಕ್ಕೆ ನಮ್ಮನ್ನು ಕರೆದೊಯ್ಯುವ ದೈವ ನಮ್ಮ 'ವರಕವಿ'. ಇಂಥ ವರಕವಿ (=ದೈವ) ಇರುವಾಗ "ನರಕವಿಗಳ ಕೊಂಡಾಡಬಾರದು". ಆದುದರಿಂದ ಅವರು 'ಕಾಮನಯ್ಯನ ಕಥೆಯ ಬರೆದು ಪ್ರೇಮದಿಂದ ಭಜಿಸಿರಯ್ಯ' ಎಂದು ಎಲ್ಲರಿಗೂ ಸಲಹೆ ಕೊಡುತ್ತಾರೆ. ವಾಸ್ತವವಾಗಿ ಅವರು ಸಮಾಜದರ್ಶನ, ವಿಡಂಬನೆ, ವಾತ್ಸಲ್ಯ, ಶೃಂಗಾರ, ಭೀಭತ್ಸ ಯಾವುದನ್ನೇ ವರ್ಣಿಸಲಿ ಅವೆಲ್ಲ ಅವರ ಇಷ್ಟದೈವವೆಂಬ ಉತ್ತರಮುಖಿಗಳಂತೆ ನಾರಾಯಣ ಸೂಚಿಗಳೇ ಆಗುತ್ತವೆ. ಪುರಂದರದಾಸರು ಒಂದು ಸಂದರ್ಭದಲ್ಲಿ

"ನಿನ್ನ ನಾಮಭಂಡಾರವನ್ನು ಕದ್ದ ಕಳ್ಳ ನಾನು"

ಎಂದು ತಮ್ಮನ್ನೇ ವರ್ಣಿಸಿಕೊಂಡಿದ್ದಾರೆ. ವಿನೋದಕ್ಕೆ ಅವರು ಈ ಮಾತು ಹೇಳಿದ್ದರೂ ವಾಸ್ತವವಾಗಿ ಅವರು ಕದ್ದ ಭಂಡಾರದ ವಸ್ತುಗಳೆಲ್ಲ ಕನ್ನಡ ಸಾರಸ್ವತ

ಸಂಗ್ರಹಾಲಯದಲ್ಲಿ ಪ್ರದರ್ಶಿತವಾಗಿ ಸಹೃದಯರ ಮನಸ್ಸನ್ನು ಸೆಳೆದಿವೆ. ಏಕೆಂದರೆ ಅವರು ಹೊರಗಣ್ಣಿನಿಂದ ವಸ್ತು ಸಂಗತಿಗಳ ನಾಮ ರೂಪಗಳನ್ನು ಹೇಗೆ ಗ್ರಹಿಸ ಬಲ್ಲರೋ ಹಾಗೆಯೇ 'ಒಳಗಣ್ಣಿಂದ' ಅವನ ಕಂಡು ನಲಿದಾಡುವುದಕ್ಕೆ ತಕ್ಕ ಮಾನಸಿಕ ಸಿದ್ಧತೆಯನ್ನು ಪಡೆದವರಾಗಿದ್ದಾರೆ. ಕಾವ್ಯದಿಂದಲೂ ಅವರು ತಾವು ನಂಬಿದ ದೈವದ 'ಸೌಂದರ್ಯಲೀಲೆ'ಯನ್ನು ನೋಡಿ ಆತನ 'ಆನಂದ ನಿಲಯ'ದೆಡೆ ಸಾಗಲು ಬಯಸುತ್ತಾರೆ. ಆದುದರಿಂದ ಅವರದು ಶುದ್ಧ ಸಾರಸ್ವತ ದೃಷ್ಟಿಯಲ್ಲ. ಈ ಸಾರಸ್ವತ ಮುಖಕೂಡ ಅವರ ಅಖಂಡ ಜೀವನಾಶಯದ ಒಂದು ಸಾರವತ್ತಾದ ಭಾಗ. ಬೇರೆ ಯಾವ ನಿಟ್ಟಿನಿಂದಲೂ ದೇವರ ನಾಮಭಂಡಾರವನ್ನು ಸೂರೆ ಮಾಡಲು ಸಾಧ್ಯವಿಲ್ಲ ಎಂಬ ಸಂಗತಿ ಅವರಿಗೆ ಗೊತ್ತು.

"ಪೊಡವಿಗಧಿಕನೆಂಬವರಿಗೆ ಬಲ್ಲದು ಕಡೆ
ಮೊದಲಿಲ್ಲದ ಒಡಲಿಹುದು
ಬೆಡಗನರಿವೆನೆಂಬವರಿಗಗೋಚರ
ಪೊಡವಿಯೊಳಗಣ ಭಕ್ತರ ಬಲ್ಲದು"

ಪುರಂದರದಾಸರ ಬಹುಮಟ್ಟಿನ ಕವಿತೆಗಳು ತಟಕ್ಕನೆ ಮೇಲುನೋಟಕ್ಕೆ ಕಂಡಂತೆ ಬರೆದ ಆಶುಕವಿತೆಗಳಂತೆ ಕಾಣುವ ಪದಗಳಾಗಿವೆ. ಜಾನಪದ ಪ್ರಭಾವ ಈ ಲಕ್ಷಣಕ್ಕೆ ಮುಖ್ಯಕಾರಣ. "ಕಲ್ಲುಸಕ್ಕರೆ ಕೊಳ್ಳಿರೋ", "ಕದವ ನಿಕ್ಕಿದಳಿದೆಕೊ ಗಯ್ಯಾಳಿ ಮೂಳಿ", "ತಾಸು ಬಾರಿಸುತಿದೆ ಕೇಳಿ", "ಬುತ್ತಿಯ ಕಟ್ಟೊ ಮನುಜ ಬುತ್ತಿಯ ಕಟ್ಟೊ", "ಜಾಲಿಯ ಮರದಂತೆ ದುರ್ಜನರೆಲ್ಲ", "ನಗೆಯು ಬರುತಿದೆ ಎನಗೆ", "ಕೆಟ್ಟು ನೆಂಟರ ಸೇರುವುದು ಬಹಳ ಕಠಿನ", "ಇಕ್ಕಲಾರೆ ಕೈ ಎಂಜಲು" "ಚಿಕ್ಕ ಮಕ್ಕಳು ಅಳುತಾರೆ ಹೋಗೋ ದಾಸಯ್ಯ", "ಪಾಪೋಸು (=ಚಪ್ಪಲಿ) ಹೋದುವಲ್ಲ–ಸ್ವಾಮಿ ಎನ್ನ ಪಾಪೋಸು ಹೋದುವಲ್ಲ","ನಿಮ್ಮ ಭಾಗ್ಯ ದೊಡ್ಡದೊ ನಮ್ಮ ಭಾಗ್ಯ ದೊಡ್ಡದೋ ?", "ಗಿಳಿಯು ಪಂಜರದೊಳಿಲ್ಲ", "ರಾಗಿ ತಂದೀರ್‍ಯಾ ಭಿಕ್ಷಕೆ ರಾಗಿ ತಂದಿರ್‍ಯಾ ?" ಇಂಥ ಕೆಲವು ಪದ್ಯಗಳನ್ನು ನೋಡಬಹುದು. ನಮ್ಮ ಲೋಕ ವ್ಯವಹಾರದಲ್ಲಿ ನಮಗೆ ಇಷ್ಟವಿರಲಿ ಇಲ್ಲದಿರಲಿ ಕಣ್ಣಿಗೆ ಬೀಳುವ ವಸ್ತು ದೃಶ್ಯ ಸಂಗತಿಗಳು ಹಲವಾರಿವೆ. ಅವುಗಳನ್ನೇ ಮಾಟುಗೋಲಾಗಿ ಬಳಸಿಕೊಂಡರೆ ಈ ಲೋಕದ ಆಪ್ತ ಉಪಮೆಗಳಿಂದ ಕೇಳುಗರ ಮನಸ್ಸು ಕೂಡಲೇ ಆ ಕಡೆ ಒಲಿಯು ತ್ತದೆ. ಆದುದರಿಂದ ಅಂಥ ದೃಶ್ಯವತ್ತಾಗುವ ಚಿತ್ರಗಳನ್ನು ತಟಕ್ಕನೆ ಮೂಡಿಸಿ ಅನಂತರ ಬೇರೆ ಬೇರೆ ಅನುಭವದ ಸೀಮೆಗಳಿಗೆ ಲಂಘಿಸಿದರೆ ಈ ಬಗೆಯ ಅನಿರೀಕ್ಷಿತ ತಿರುವುಗಳನ್ನು ಕೊಡುತ್ತ ಸಾಗುವ 'ಪದ'ಗಳು ಜನರ ಮನಸ್ಸಿನ ಮೇಲೆ ಸ್ಪಷ್ಟವಾದ ಮುದ್ರೆಯನ್ನು ಒತ್ತುತ್ತವೆ. ಹೀಗಾಗಿ ಪುರಂದರದಾಸರು ಸಾಮಾನ್ಯವಾಗಿ ಗಡುಸಾದ ಪಾಂಡಿತ್ಯಶೈಲಿಗೆ ತೆರೆದುಕೊಳ್ಳದ ಸಾಮಾನ್ಯ ಜನತೆಯನ್ನು ಈ ಆಪ್ತ ಸಾಲುಗಳ

ಮೂಲಕ ತಮ್ಮ ಕಡೆಗೆ ಎಳೆದುಕೊಳ್ಳುವ ಸಫಲ ತಂತ್ರವನ್ನು ಅನುಸರಿಸಿದರು. ಲೋಕ ಶಿಕ್ಷಣದ ಈ ತಂತ್ರ ಅದ್ಭುತ ಯಶಸ್ಸು ಪಡೆದು ಅವರ 'ಪದ'ಗಳಲ್ಲಿ ಜನರ ನಾಲಗೆಯ ಮೇಲೆ ನಲಿಯಲು ಸಹಾಯಕವಾಯಿತು. ಲೋಕಚಿತ್ರಗಳಿಗೆ ಗೇಯ ವರ್ಣಗಳನ್ನು ತುಂಬಿ ಹಾಡಲು ಅನುಕೂಲ ಮಾಡಿಕೊಟ್ಟದ್ದರಿಂದ ಅವುಗಳ ಪ್ರಸಾರಕ್ಕೆ ರೆಕ್ಕೆ ಮೂಡಿದಂತಾಯಿತು. ಉದಾಹರಣೆಗೆ ಮೇಲೆ ಉದಾಹರಿಸಿದ ಪದ್ಯಖಂಡಗಳನ್ನು ನೋಡಬಹುದು. "ಕಲ್ಲುಸಕ್ಕರೆ ಕೊಳ್ಳಿರೋ" ಈ ಶಬ್ದ ಸ್ಪಷ್ಟವಾಗಿ ಸಂತೆಯಲ್ಲೋ, ಜಾತ್ರೆಯಲ್ಲೋ, ತೇರಿನ ದಿವಸದಲ್ಲೋ ಒಬ್ಬ ವ್ಯಾಪಾರಿ"ಕಲ್ಲುಸಕ್ಕರೇ... ಕಲ್ಲುಸಕ್ಕರೇ..." ಎಂದು ಕೂಗಿಕೊಂಡು ಕೈಗಾಡಿಯಲ್ಲೋ, ನೆಲದಲ್ಲಿ ಗೋಣಿಚೀಲದ ಮೇಲೆ ಹರಡಿಕೊಂಡೋ ವ್ಯಾಪಾರ ಮಾಡುವ ಧ್ವನಿಯನ್ನು ಹಿಡಿದಿಟ್ಟುಕೊಂಡಿದೆ. ವ್ಯಾಪಾರದಲ್ಲಿ ಪ್ರಚಾರವೇ ಮುಖ್ಯವಾದ ಸಾಧನ ತಾನೆ. ಪುರಂದರದಾಸರು ಅಲೌಕಿಕ ವ್ಯಾಪಾರಕ್ಕೂ ಈ ಬಗೆಯ ಪ್ರಚಾರ ಶೈಲಿಯನ್ನೇ ಬಳಸಿಕೊಂಡಿದ್ದಾರೆ. ದಾರಿಯಲ್ಲಿ ಸುಮ್ಮನೆ ಸಾಗುತ್ತಿರುವವನು ಕೂಡ ಈ ಸಾಲು ಕೇಳಿ ಮುಂದೆ ಏನು ಹೇಳುತ್ತಾರೆಂದು ಆಲಿಸುವಷ್ಟು ಕೆರಳಿದ ಕುತೂಹಲದಿಂದ ನಡಗೆಯನ್ನು ನಿಧಾನ ಮಾಡುತ್ತಾನೆ. ಹೀಗೆ ಪುರಂದರದಾಸರ ಪಲ್ಲವಿಗಳೇ ತುಂಬ ಆಕರ್ಷಕವಾಗಿದ್ದು ನಮ್ಮನ್ನು ಹಿಡಿದು ನಿಲ್ಲಿಸುತ್ತವೆ,

ಕಲ್ಲುಸಕ್ಕರೆ ಕೊಳ್ಳಿರೊ ನೀವೆಲ್ಲರು
ಕಲ್ಲುಸಕ್ಕರೆ ಕೊಳ್ಳಿರೋ

ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು
ಫುಲ್ಲನಾಭಕೃಷ್ಣನ ದಿವ್ಯ ನಾಮವೆಂಬ

ಎತ್ತು ಹೇರುವುದಲ್ಲ ಹೊತ್ತು ಮಾರುವುದಲ್ಲ
ಒತ್ತೊತ್ತಿ ಗೋಣಿಯೊಳ್ ತುಂಬುವುದಲ್ಲ

ಎತ್ತ ಹೋದರು ಮತ್ತೆ (ಬಾಡಿಗೆ) ಸುಂಕವಿದಕಿಲ್ಲ
ಹತ್ತೆಂಟು ಸಾವಿರಕೆ ಬೆಲೆಯಿಲ್ಲದಂತಹ

ನಷ್ಟ ಬೀಳುವುದಲ್ಲ ನಾಶವಾಗುವುದಲ್ಲ
(ಕಟ್ಟಿ ಇಟ್ಟರೆ ಮತ್ತೆ ಕೆಡುವುದಲ್ಲ)
ಕಟ್ಟಿರುವೆಯು ತಿಂದು ಕಡಮೆಯಾಗುವುದಲ್ಲ
ಎಷ್ಟು ದಿನವಿಟ್ಟರೂ ಕೆಟ್ಟುಹೋಗುವುದಲ್ಲ
ಪಟ್ಟಣದೊಳಗಿದು ಅತಿ ಲಾಭ ತರುವಂಥ

ಸಂತೆಪೇಟೆಗೆ ಹೋಗಿ ಶ್ರಮಪಡಿಸುವುದಲ್ಲ
ಎಂತು ಮಾರಿದರದಕಂತವಿಲ್ಲ
ಸಂತತ ಪುರಂದರವಿಠಲನ ನಾಮವ
ಎಂತು ನೆನೆಯಲು ಪಾಪ ಪರಿಹಾರವಲ್ಲದೆ

ನಾಮಸಂಕೀರ್ತನೆಯನ್ನು ಒಂದು ವ್ಯಾಪಾರದ ಪದಾರ್ಥವೆಂಬಂತೆ ಕಲ್ಪಿಸಿ ಅದರ ರುಚಿ, ಸುಲಭ ಒದಗಣೆ, ಸರ್ವಕಾಲೀನ ಪೂರೈಕೆ, ಅವಿನಾಶೀ ಗುಣ, ಲಾಭದ ಆಧಿಕ್ಯ, ಸುಂಕ ವಿಮುಕ್ತಿ ಸಾಗಾಣಿಕೆಯ ಅಥವಾ ತುಂಬುವಿಕೆಯ ಶ್ರಮವೇ ಇಲ್ಲದ ನೇರ ಮಾರಾಟ ವ್ಯವಸ್ಥೆ ಈ ಎಲ್ಲ ಗುಣಗಳನ್ನು ಪ್ರಚಾರ ಮಾಡಿ ಗ್ರಾಹಕರನ್ನು ಒಲಿಸಿಕೊಳ್ಳುವ ಕೆಲಸವನ್ನು ಈ ಕವಿತೆ ಸೊಗಸಾಗಿ ನಿರ್ವಹಿಸಿದೆ. ಕಲ್ಲುಸಕ್ಕರೆಯನ್ನು ತಮ್ಮ ಪ್ರಚಾರ ತಂತ್ರಕ್ಕೆ ಬಳಸಿಕೊಂಡು ತಮ್ಮದೂ ಒಂದು ಬಗೆಯ ಕಲ್ಲುಸಕ್ಕರೆ ಎಂದೇ ಹೇಳಿಕೊಂಡು ಕೊನೆಗೆ ತಮ್ಮ ಸರಕು, ಮಾರುವ ಕಲ್ಲುಸಕ್ಕರೆಗಿಂತಲೂ ಶ್ರೇಷ್ಠ ವಾದದ್ದು ಎಂಬುದನ್ನು ಮನಗಾಣಿಸಿದ್ದಾರೆ.

ಕಲ್ಲುಸಕ್ಕರೆಯಾದರೆ ಎತ್ತಿನಗಾಡಿಯಲ್ಲಿ ಒಯ್ಯಬೇಕು, ತಲೆಯ ಮೇಲೆ ಹೊತ್ತು ಮಾರಬೇಕು, ಅಡಕನಾಗಿ ಚೀಲದಲ್ಲಿ ತುಂಬಬೇಕು. ಸಂತೆ ಸಂತೆಯಲ್ಲೂ ಬಾಡಿಗೆ ಸುಂಕ ಗಳನ್ನು ತೆರಬೇಕು, ಮಳೆ ಗಾಳಿ ಕಾಲಾವಧಿಗಳು ತರುವ ಸವೆತ ನಷ್ಟಗಳನ್ನು ಸಹಿಸ ಬೇಕು. ದೈವ ಸಂಕೀರ್ತನೆ ಎಂಬ ಕಲ್ಲುಸಕ್ಕರೆಗಾದರೆ ಮೇಲಿನ ಯಾವ ಬಾಧೆಯೂ ಇಲ್ಲ. ಹೀಗೆ ವ್ಯಾಪಾರದ ಪರಿಭಾಷೆಯಲ್ಲಿ ಪುರಂದರದಾಸರು ಬಂಡವಾಳವೇ ಇಲ್ಲದೆ ಹೆಚ್ಚಿನ ಅ ಲೌ ಕಿ ಕ ಲಾಭ ಗಳಿಸುವ ವ್ಯಾಪಾರದಲ್ಲಿ ನಮ್ಮನ್ನು ತೊಡಗಿಸಲು ನೋಡಿದ್ದಾರೆ.

ಇನ್ನು ಸಾಹಿತ್ಯ ದೃಷ್ಟಿಯಿಂದಲೂ ಇಂಥ ಪದ್ಯಗಳು ಮನಸೆಳೆಯುತ್ತವೆ. ಹೊತ್ತು ಮಾರುವುದಲ್ಲ, ತುಂಬುವುದಲ್ಲ, ನಾಶವಾಗುವುದಲ್ಲ......ಇತ್ಯಾದಿಯಾಗಿ 'ಅಲ್ಲ' ಎಂಬ ಶಬ್ದವನ್ನು ಇಡೀ ಪದದ ತುಂಬ ಪ್ರಭಾವಕಾರಿಯಾಗಿ ತುಂಬಿರುವುದು ರಸಾನುಭವದ ದೃಷ್ಟಿಯಿಂದ ಮಹತ್ತರವಾಗಿದೆ. ಒಂದು ವಸ್ತುವಿನ ಅಸ್ತಿತ್ವವನ್ನು 'ನೇತಿಮಾರ್ಗ'ದಿಂದ ಸ್ಥಾಪಿಸುವ ತರ್ಕಪದ್ಧತಿಯೂ ಇಲ್ಲಿ ಕೆಲಸಮಾಡಿದೆ. ಸಂಗೀತದ ನೆರವನ್ನೂ ಪಡೆದುಕೊಂಡ ಈ ಪದ ತನ್ನ ಗೇಯ ಸೌಂದರ್ಯದಿಂದ, ಶ್ರಾವಣ ಸತ್ವ ದಿಂದ ನಮ್ಮ ಮನಸೆಳೆಯುತ್ತದೆ. ಹೀಗೆ ಲೋಕದ ಜನಕ್ಕೆ ಆಪ್ತವಾದ ದೃಶ್ಯವಿವರ ಗಳಿಂದ ತುಂಬಿದ ಈ ಕವಿತೆ ಕಲ್ಲುಸಕ್ಕರೆಯಂತೆಯೇ ಹರಳುಗಟ್ಟಿದ ಒಂದು ರಚನೆಯಾಗಿ ಸಾರ್ಥಕವಾಗಿದೆ.

ಹೀಗೆಯೇ 'ಕದವನಿಕ್ಕಿದಳಿದೆಕೊ ಗಯ್ಯಾಳಿ ಮೂಳಿ' ಎಂಬ ಪದ. ದಾಸರು ಭಿಕ್ಷೆಗೆ ಹೋದಾಗ ಅವರನ್ನೂ ಇತರ ಭಿಕ್ಷುಕರಂತೆಯೇ ಕಂಡು ಬಾಗಿಲನ್ನು ಬಡಿದು ಕೊಂಡ ಒಂದು ಹೆಣ್ಣಿನ ಮೇಲಿನ ಆಕ್ರೋಶ ಇಲ್ಲಿ ನಿರೂಪಿತವಾಗಿದೆ. ವಾಸ್ತವವಾಗಿ

ಇದು ಅಂಥ ಹೆಣ್ಣುಗಳ ಮೇಲಿನ ಸಿಟ್ಟಿನ ಪ್ರತಿಕ್ರಿಯೆ ಮಾತ್ರವಲ್ಲ. ಹರಿದಾಸರಂಥ ಮುಕ್ತಜೀವಿಗಳು ಹಾಡು ಹೇಳಿಕೊಂಡು ಮನೆಮನೆಗೆ ಸಾಹಿತ್ಯ-ಧರ್ಮ ಪ್ರಸಾರ ಮಾಡುತ್ತಿರುವಾಗ ಜನ ಮನಸ್ಸಿನ ಬಾಗಿಲು ತೆರೆದು ಇಂಥ ತತ್ತ್ವದ ಪದಗಳಿಗೆ ಕಿವಿ ಗೊಡದೆ ಬದುಕಿನ ಬಾಗಿಲನ್ನೇ ಇಕ್ಕಿಕೊಳ್ಳುತ್ತಿದ್ದಾರಲ್ಲ ಎಂಬ ಸಂಕಟದ ಭಾವವೂ ಈ ಸಿಟ್ಟಿನ ಹಿಂದೆ ಕೆಲಸ ಮಾಡುತ್ತಿದೆ. ಹೀಗೆ ಬೇರೊಂದು ಧ್ವನಿಯ ಲೋಕಕ್ಕೆ ನಮ್ಮನ್ನು ಕರೆದೊಯ್ಯುವ ಈ ಕವಿತೆ ಅಚಾನಕವಾಗಿ ಇಡೀ ದಾಸ ಸಾಹಿತ್ಯ ಮತ್ತು ದಾಸರುಗಳ ಸ್ವರೂಪವನ್ನು ನಮಗೆ ಪರಿಚಯ ಮಾಡಿಕೊಡುವ ಮೂರನೆಯ ಆಯಾಮದಿಂದಲೂ ಶೋಭಿಸುತ್ತದೆ. ಹರಿದಾಸ ಸಾಹಿತ್ಯವನ್ನು ಓದುವುದೆಂದರೆ ದಾಸರ ಪದಗಳನ್ನು ಕೇಳುವುದೆಂದರೆ ಭಾರತ, ರಾಮಾಯಣ ಪಂಚರಾತ್ರಾಗಮಗಳ ಸಾರಸತ್ವವನ್ನು ರೂಢಿಸಿಕೊಂಡಹಾಗೆ ಎಂದು ದಾಸರು ಹೇಳುತ್ತಾರೆ. ಅಂದರೆ ನಮ್ಮ ಸಂಸ್ಕೃತಿ ಪರಂಪರೆಯನ್ನು ದಾಸರ ಪದಗಳು ಉಳಿಸಿಕೊಂಡೇ ಬಂದಿವೆ. ಅಷ್ಟೇ ಅಲ್ಲ ,

"ಮಂಗಳ ಮೂರುತಿ ಪುರಂದರವಿಠಲನ
ತುಂಗವಿಕ್ರಮಪಾದ ಅಂಗಳ ಪೊಕ್ಕಿತೆಂದು..."

ದಾಸರ ಪದಗಳನ್ನು ಕೇಳಿದರೆ ಆಸ್ತಿಕರಿಗೆ ಅವರು ಆರಾಧಿಸುವ ದೈವವೇ ವಾಮನ-ವಿಕ್ರಮ ಕ್ರಮದಲ್ಲಿ ಹಾಡು-ಭಾವನೆಗಳ ರೂಪದಲ್ಲಿ ಮನಸ್ಸಿನ ಅಂಗಳದ ತುಂಬ ವ್ಯಾಪಿಸಿಕೊಳ್ಳುತ್ತದಂತೆ. ಇಂಥ ಸುಲಭವಾದ ಅವಕಾಶವನ್ನೇ ಜನ ಸ್ವಾಗತಿಸು ತ್ತಿಲ್ಲವಲ್ಲ ಎಂಬ ಕೊರಗು ದಾಸರದು.

ತಾಸು ಬಾರಿಸುತ್ತಿರುವ ಶಬ್ದ ಕೇಳಿದ ಕೂಡಲೇ ಪುರಂದರದಾಸರಿಗೆ ಈ ಗಂಟೆಯ ಎಚ್ಚರಿಕೆ ಆಹ್ವಾನಗಳನ್ನು ಅಲೌಕಿಕಕ್ಕೆ ಅನ್ವಯಿಸುವ ಆಸೆ ಮೂಡುತ್ತದೆ. 'ಬುತ್ತಿಯ ಕಟ್ಟೋ' ಎಂಬ ರೂಪಕವೂ ಅಷ್ಟೆ. ಹಳ್ಳಿಯ ಜನ ಅಥವಾ ಯಾತ್ರಿಕರು ತಮ್ಮ ಮಧ್ಯಾಹ್ನದ ಅಥವಾ ಯಾತ್ರೆಯ ದಿನಗಳ ಊಟಕ್ಕಾಗಿ ಬುತ್ತಿ ಸಿದ್ಧಪಡಿಸಿ ಕೊಂಡು ಹೋಗುವ ದೃಶ್ಯ ಎಲ್ಲರೂ ಗಮನಿಸಿರುವಂಥದೇ. ಕೋಲಿಗೆ ಬುತ್ತಿಯ ಗಂಟನ್ನು ಸಿಕ್ಕಿಸಿ ಹೊರಡುವ ತಯಾರಿ ನಡೆಸುತ್ತಾರೆ. ದೈವತತ್ತ್ವಗಳ ಚಿಂತನ ವ್ಯಕ್ತಿಯ ಪಾರಮಾರ್ಥಿಕ ಬದುಕಿನ ದಾರಿಗೆ ಸೂಕ್ತ ಬುತ್ತಿಯಾಗುತ್ತದೆ. ಬುತ್ತಿಯ ಪರಿಕರಗಳೇ ಇಲ್ಲೂ ಮಿಂಚುತ್ತವೆ. ಧರ್ಮದ ಮಡಿಕೆಯಲ್ಲಿ ಒಮ್ಮನ ಅಕ್ಕಿ. ಒಮ್ಮನ ಎಂದರೆ ಒಂದು ಮಾನ, ಒಂದು ಅಳತೆ. ಒಮ್ಮನ ಎಂದರೆ ಶ್ಲೇಷೆಯಿಂದ ಒಂದೇ ಮನಸ್ಸು, ಅಚಂಚಲ ಚಿತ್ತ ಎಂಬರ್ಥವೂ ಘಟಿಸುತ್ತದೆ. ಬುತ್ತಿ ಉಣ್ಣುವಾಗ ಅರಿವೆ ಹಾಸಿಕೊಳ್ಳುತ್ತೇವಷ್ಟೆ. ಇಲ್ಲಿ ಅರಿವು ಎಂಬ ಅರಿವೆಯನ್ನು ಹಾಸಿಕೊಂಡು ಉಣ್ಣ ಬಹುದಾದ ಚಿತ್ರ ಮೂಡಿದೆ. ಹೀಗೆ ಬುತ್ತಿಯನ್ನು ಕಟ್ಟುವ ನಿತ್ಯಕ್ರಿಯೆ, ಮನುಷ್ಯನು ಬಾಳು ಹಸನಾಗಬೇಕಾದರೆ ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆ ಎಂಬರ್ಥದಲ್ಲಿ ವರ್ಧಿಸಿದೆ. ಮುಂದಿನ 'ಜಾಲಿಯ ಮರದಂತೆ ದುರ್ಜನರೆಲ್ಲ' ಎಂಬ 'ಪದ'

ದುಷ್ಟತನದ ಸ್ವರೂಪವನ್ನು ಸಮರ್ಥವಾಗಿ ಬಯಲಿಗೆ ಎಳೆಯುವಲ್ಲಿ ಸಹಾಯಕವಾದ ಸುಂದರ ಪ್ರತಿಮೆಯಾಗುತ್ತದೆ. ಉತ್ತರ ಕರ್ನಾಟಕದ ಬಯಲು ಭಾಗಗಳಲ್ಲಿ ಎಲ್ಲೆಂದರಲ್ಲಿ ವಿಜೃಂಭಿಸಿರುವ ಜಾಲಿಯ ಮರಗಳು ಈ ಚಿಂತನೆಗೆ ಪ್ರೇರಣೆ ನೀಡಿವೆ. ಜಾಲಿ ಮರಗಳು ಮಳೆ ಗಾಳಿ, ಕೃಷಿ ಪೋಷಣೆಗಳ ನೆರವನ್ನೇ ಬೇಡದೆ ತಾವಾಗಿ ಬೆಳೆಯುವ ಮರಗಳು. ದುಷ್ಟಜನರೂ ಅಷ್ಟೆ. ಸಮಾಜಕ್ಕೆ ಬೇಡದಿದ್ದರೂ, ಸಮಾಜ ಇಂಥವರನ್ನು ಬಯಸದಿದ್ದರೂ ಈ ಜನ ತಾವಾಗಿಯೇ ವಕ್ರವಾಗಿ ಬೆಳೆದು ವಿಜೃಂಭಿಸುತ್ತಾರೆ. ಜಾಲಿಯ ಮರದ ಹಿನ್ನೆಲೆಯಲ್ಲಿ ಈ ದುರ್ಜನರ ಛಾಯೆಯನ್ನು ನಾವು ಗುರುತಿಸಿಕೊಳ್ಳುತ್ತ ಹೋಗುವ ರೀತಿಯಲ್ಲಿ ಈ 'ಪದ' ಸಾಗುತ್ತದೆ. ಬೇರಿನಿಂದ ಕೊನೆಯ ತನಕ ('ಮೂಲಾಗ್ರ ಪರಿಯಂತ') ಮುಳ್ಳುಕೂಡಿರುವ 'ಮರ' ಇದ್ದಹಾಗೆ ಈ ಜನ. ಈ ಮರ ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳು ಕೊಡಲಾರದು. ಹಾಗೆಯೇ ಸಮಾಜ ಈ ತೆರನ ಜನರಿಂದ ಏನನ್ನೂ ನಿರೀಕ್ಷಿಸುವಂತಿಲ್ಲ. ಹಸಿದವರಿಗೆ ಹಣ್ಣು ಕೊಡಲಾರದು. ಅದಕ್ಕೆ ವಾಸನೆಯ ಹೂವಿಲ್ಲ. ಅದರಂತೆಯೇ ದುರ್ಜನರಿಗೆ ಸತ್ಕಾರ್ಯಗಳ ಪರಿಮಳ ಭಾರದಿಂದ ಬೀಗುವ ಗುಣವಿಲ್ಲ. ಮರದ ಕೆಳಗೆ ಕೂಡಲು ಸ್ಥಳ ಇರುವುದಿಲ್ಲ, ಕೂತರೆ ಹಿತವಾಗುವುದೂ ಇಲ್ಲ. ದುರ್ಜನರ ಆಶ್ರಯ ಹೀಗೆಯೇ ಅಹಿತಕರ. ರುಚಿಕರವಾದ ಹಣ್ಣಿಲ್ಲದ, ಸುವಾಸನೆಯ ಪುಷ್ಪವಿಲ್ಲದ. ಹಸುರಿಲ್ಲದ ನೆರಳಿಲ್ಲದ ಈ ಮರವನ್ನು ದುರ್ಜನನಿಗೆ ಹೋಲಿಸಿರುವುದು ತುಂಬ ಸೂಕ್ತವಾಗಿದೆ. ವೃಕ್ಷ ಸಂಪತ್ತಿನ ಎಲ್ಲ ಗುಣಗಳಿಂದಲೂ ಜಾಲಿಯ ಮರ ಹೇಗೆ ವಂಚಿತವಾಗಿದೆಯೋ ಹಾಗೆಯೇ ವ್ಯಕ್ತಿ ಸಂಪನ್ನತೆಯ ಎಲ್ಲ ಗುಣಗಳಿಂದಲೂ ದುರ್ಜನರು ವಂಚಿತರಾಗಿರುತ್ತಾರೆ ಎಂಬ ಭಾವವನ್ನು ಈ ಪದ ತುಂಬ ಸರಳರೇಖೆಗಳಲ್ಲಿಯೇ ನಿರೂಪಿಸುತ್ತದೆ.

ರಚನೆಯ ದೃಷ್ಟಿಯಿಂದ ನೋಡಿದರೆ ವಚನ—ದೇವರನಾಮಗಳು ಬೇರೆ ಬೇರೆ ಮಾರ್ಗಗಳಿಂದ ರಸಕೋಶವನ್ನು ಪ್ರವೇಶಿಸುತ್ತವೆ. ವಚನಗಳು ಮೊದಲು ಸುತ್ತಣ ಪ್ರಾಕಾರವನ್ನು ಬಳಸಿಕೊಂಡು ಬಂದು ಅನಂತರ ಗರ್ಭಗುಡಿಯನ್ನು ಪ್ರವೇಶಿಸುವ ಪ್ರಯತ್ನ ಮಾಡಿದರೆ ದೇವರನಾಮಗಳು ಮೊದಲು ನೇರವಾಗಿ ಗರ್ಭಗುಡಿಯನ್ನು ಪ್ರವೇಶಿಸಿ ಅನಂತರ ಸುತ್ತುಹಾಕಿ ಅಲ್ಲಿಗೇ ಬರುತ್ತವೆ. ಒಂದು ವಚನದ ಉದಾಹರಣೆಯಿಂದ ಇದನ್ನು ದೃಢಪಡಿಸಬಹುದು. "ಮನೆಯೊಳಗೆ ಮನೆಯೊಡೆಯನಿಲ್ಲ" ಇದು ಬಸವಣ್ಣನವರ ಒಂದು ವಚನದ ಭಾವ. ಈ ಭಾವವನ್ನು ವ್ಯಂಜಿಸಲು ಬಸವಣ್ಣನವರು ಮೊದಲು ಒಂದು ಸೂಕ್ತ ಆವರಣವನ್ನು ನಿರ್ಮಿಸುತ್ತಾರೆ. ಯಾರೋ ಯಜಮಾನನನ್ನು ಕಾಣಲೆಂದು ಮನೆಗೆ ಬರುತ್ತಾನೆ. ಆದರೆ ಹೊಸ್ತಿಲಲ್ಲಿ ಹುಲ್ಲು ಮನೆಯೊಳಗೆ ಧೂಳು ಕಂಡ ಕೂಡಲೇ ಅವನಿಗೆ ಮನೆಯೊಳಗೆ ಮನೆಯೊಡೆಯನಿದ್ದಾನೆಯೋ ಇಲ್ಲವೋ ಎಂಬ ಅನುಮಾನ ಮೂಡುತ್ತದೆ. ಕೊನೆಗೆ ಮನೆಯೊಳಗೆ ಮನೆಯೊಡೆಯನಿಲ್ಲ ಎಂಬ ಖಚಿತ ನಿರ್ಧಾರ ತೆಗೆದುಕೊಳ್ಳುತ್ತಾನೆ—ಮನೆಗೆ ಬಂದಾತ. ಇದು ವಚನದ ಧಾಟಿ. ಆದರೆ ದಾಸರ ಪದ ನೇರವಾಗಿ ವಿಷಯವನ್ನೇ ಹೇಳಿಬಿಡುತ್ತದೆ.

"ಗಿಳಿಯು ಪಂಜರದೊಳಿಲ್ಲ", "ಅನುಭವದಡುಗೆಯ ಮಾಡಿ", "ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ", "ಸತ್ಯವಂತರಿಗಿದು ಕಾಲವಲ್ಲ", "ಈ ಪರಿಯ ಸೊಬಗಾವ ದೇವರಲಿ ಕಾಣೆ", "ದಾರಿ ಯಾವುದಯ್ಯ ವೈಕುಂಠಕೆ" ಮುಂತಾದ ಪದಗಳನ್ನು ಗಮನಿಸಬಹುದು. ಪಲ್ಲವಿಯು ಮುಖ್ಯ ಚರಣವೇ ಕವಿತೆಯ ಹೂರಣವೂ ಆಗುತ್ತದೆ. ಮುಂದಿನ ಚರಣಗಳೆಲ್ಲಾ ಈ ಕೇಂದ್ರದ ಧ್ವನಿಯನ್ನು ಪ್ರಸಾರಮಾಡುವ 'ಉಲಿಕೇಂದ್ರ' ಗಳಂತೆ ಕಾರ್ಯ ನಿರ್ವಹಿಸುತ್ತವೆ. ರಚನೆಯ ಶಿಲ್ಪದ ದೃಷ್ಟಿಯಿಂದ ಈ ಭಿನ್ನ ಮಾರ್ಗಗಳನ್ನು ಪ್ರಸ್ತಾಪಿಸಲಾಗಿದೆಯೇ ಹೊರತು ಎರಡು ಮಾರ್ಗಗಳ ಗುಣ-ದೋಷಗಳನ್ನು ಅಳೆಯುವ ಪ್ರಯತ್ನ ಇಲ್ಲಿ ಮಾಡಬೇಕಾಗಿಲ್ಲ. ಏಕೆಂದರೆ ರಸಾನುಭವದ ದೃಷ್ಟಿಯಿಂದ ಎರಡು ಮಾರ್ಗಗಳೂ ಫಲಪ್ರದವಾಗಿವೆ, ಕಾರ್ಯೋಪಯೋಗಿಯಾಗಿವೆ.

ಬೆಟ್ಟಕ್ಕೆ ಚಳಿಯಾದೊಡೆ ಏನ ಹೊದ್ದಿಸುವರಯ್ಯ
ಬಯಲು ಬತ್ತಲೆ ಇದ್ದರೆ ಏನನು ಉಡಿಸುವರಯ್ಯ ?
ಭಕ್ತನು ಭವಿಯಾದೊಡೆ ಏನನುಪಮಿಸುವೆನಯ್ಯ —ಬಸವಣ್ಣನವರು

ತನುವ ತೋಂಟವ ಮಾಡಿ ಮನವ ಗುದ್ದಲಿಯ ಮಾಡಿ
ಅಗಿದು ಕಳೆದೆನಯ್ಯ ಭ್ರಾಂತಿನ ಬೇರ, ಒಡೆದು ಸಂಸಾರದ ಹೆಂಟೆಯ
ಬಗಿದು ಬಿತ್ತಿದೆನಯ್ಯ ಬ್ರಹ್ಮ ಬೀಜವ. ಅಖಂಡ ಮಂಡಲವೆಂಬ ಬಾವಿ
ಪವನವೆ ರಾಟಾಳ, ಸುಷುಮ್ನ ನಾಳದಿಂದ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹವೆಂದು ಸಮತೆ ಸೈರಣೆಯೆಂಬ
ಬೇಲಿಯ ನಿಕ್ಕಿ, ಆವಾಗಳೂ ಈ ತೋಟದಲ್ಲಿ ಜಾಗವಿರದ್ದು
ಸಸಿಯ ಸಲಹಿದೆನು ಕಾಣಾ —ಅಲ್ಲಮಪ್ರಭು

ಸವಿವರವಾಗಿ ಸಹಾಯಕ ಸಾಮಗ್ರಿಗಳನ್ನೆಲ್ಲ ಚಿತ್ರಿಸುತ್ತ ಅನಂತರ ಮುಖ್ಯ ವಿಷಯಕ್ಕೆ ಬರುವುದು ವಚನಕಾರರ ಒಂದು ವೈಶಿಷ್ಟ್ಯ. ವಿಷಯ ಸ್ಫೋಟವನ್ನು ಕೊನೆಗಿಟ್ಟುಕೊಳ್ಳುವ ಈ ರಚನಾ ಪದ್ಧತಿಯಿಂದ ಕುತೂಹಲವನ್ನು ಬಲಿಸುವ, ಏರುಮುಖವಾಗಿ ರಸ ಪೋಷಣೆ ಮಾಡುವ, ಅಂಗಾಂಗಗಳಿಂದ ಮುಖ್ಯಾಂಗಕ್ಕೆ ಬರುವ ಒಂದು ವಿಶಿಷ್ಟ ಚಲನೆಯಿದೆ. ದಾಸರ ಕೀರ್ತನೆಗಳಲ್ಲಿ ಈ ಬಗೆಯ ಕುತೂಹಲವನ್ನು ಬಲಿಸುವ ಅವಕಾಶಗಳಿಲ್ಲ ನಿಜ. ವಿಷಯವನ್ನು ನೇರವಾಗಿ ಹೇಳಿಬಿಡುವ, ಅನಂತರ ಅದರ ಎಲ್ಲ ವಿವರಗಳನ್ನೂ ದೃಶ್ಯವತ್ತಾಗಿ ಚಿತ್ರಿಸಿ ಪ್ರತಿ ಘಟ್ಟದಲ್ಲೂ ಕೇಂದ್ರ ವಿಷಯದ ಕಡೆಗೆ ಗಮನ ಸೆಳೆಯುವ ವ್ಯಾವಹಾರಿಕ ಮಾತುಕತೆಯ ಪರಿಣಾಮಕಾರಿಯಾದ ಚಲನೆಯಿದೆ. ನಿರ್ದಿಷ್ಟ ಕ್ಷೇತ್ರದ ದಾರಿಯಲ್ಲಿ ಹೊರಟು ಮಧ್ಯೆ ಸಿಗುವ ಎಲ್ಲ ಸೊಬಗಿನ ತಾಣಗಳನ್ನೂ ನೋಡಿಯಾದ ಮೇಲೆ ಕ್ಷೇತ್ರವನ್ನು ತಲಪುವ ಪ್ರವಾಸೀ

ಪದ್ಧತಿ ವಚನಕಾರರದಾದರೆ, ಮೊದಲು ಮುಖ್ಯ ಕ್ಷೇತ್ರವನ್ನು ತಲಪಿ ಅನಂತರ ಉಳಿದ ಎಡೆಗಳ ಕಡೆಗೆ ಗಮನ ಹರಿಸುವ ಪದ್ಧತಿ ಹರಿದಾಸರದು. ಎರಡು ಬಗೆಗಳೂ ನಮಗೆ ತುಂಬ ಪ್ರಿಯವೇ.

ಕನ್ನಡ ಛಂದಸ್ಸು ಅಕ್ಷರವೃತ್ತ, ಕಂದ, ರಗಳೆಗಳಿಂದ ಕೂಡಿದ ಚಂಪೂ ಕಾವ್ಯ ಪದ್ಧತಿಯಲ್ಲಿ ಸ್ವಲ್ಪಕಾಲ ಮೆರೆಯಿತು. ಇವು ಶುದ್ಧಾಂಗವಾಗಿ ಸಂಸ್ಕೃತದ ಛಂದಸ್ಸಿನ ಪಡಿನೆರಳು. ಅನಂತರ ಮಾತ್ರಾ ಛಂದಸ್ಸು ವ್ಯಾಪಕವಾಗಿ ಬಳಕೆಯಲ್ಲಿ ನಿಂತು ಹರಿಹರನ ರಗಳೆಗಳಲ್ಲಿ, ಎಲ್ಲ ಬಗೆಯ ಷಟ್ಪದಿಗಳಲ್ಲಿ ತನ್ನ ಅಸ್ತಿತ್ವವನ್ನು ತೋರಿಸಿಕೊಂಡಿತು. ಆದರೆ ಈ ಅಕ್ಷರ ಛಂದಸ್ ಮತ್ತು ಮಾತ್ರಾ ಛಂದಸ್ಸನ್ನು ಹೋಲದ ಶುದ್ಧ ದೇಶೀಯವೇ ಆದ ಅಚ್ಚ ಕನ್ನಡ ಅಂಶಿ ಛಂದಸ್ಸು ಒಂದಿದೆ ಎಂಬುದನ್ನು ಬಿ.ಎಂ.ಶ್ರೀ. ಗುರುತಿಸಿಕೊಟ್ಟರು. ಅಂಶ ಛಂದಸ್ಸು ಗೇಯರೂಪಗಳಿಗೆ ಹೇಳಿ ಮಾಡಿಸಿದಂಥ ರೂಪ ಮಾಧ್ಯಮ. ನಮ್ಮ ಹಳೆಯ ತ್ರಿಪದಿಗಳು ಮತ್ತು ಸಾಂಗತ್ಯ ಇತ್ಯಾದಿ ಛಂದೋ ರೂಪಗಳು ಅಂಶಗಣಘಟಿತವಾದವುಗಳೇ ಆಗಿವೆ. 'ಮಾರ್ಗ' ಸಾಹಿತ್ಯದ ಗಣಮಾನ ಪದ್ಧತಿಯಿಂದ ಭಿನ್ನವಾಗಿ ನಿಲ್ಲುವ ನಮ್ಮ 'ಅಂಶ ಮಾನ' ಕೀರ್ತನೆಗಳಂತಹ ಗೇಯರೂಪಗಳಿಗೆ ತುಂಬ ಸಹಾಯಕವಾಗಿವೆ. ಅಕ್ಷರವೃತ್ತ, ಮಾತ್ರಾವೃತ್ತಗಳ ಖಚಿತತೆ, ನಿಯಮ ಪಾಲನೆಯ ನಿರ್ಬಂಧ, ಪ್ರಾಸದ ಅನಿವಾರ್ಯತೆ ಮೊದಲಾದ ಬಿಗಿಯಾದ ಕಟ್ಟುಗಳು ಅಂಶ ಛಂದಸ್ಸಿನಲ್ಲಿ ಅನಗತ್ಯ. ಅಲ್ಲದೆ ವಿಶೇಷವಾಗಿ ಸಂಗೀತದ ಮಟ್ಟುಗಳನ್ನು ಅನುಸರಿಸಿದ ದಾಸರು ಮಾತ್ರಾ ಛಂದಸ್ಸು ಅಂಶ ಛಂದಸ್ಸು ಎರಡನ್ನೂ ತಮ್ಮ ರಚನೆಗೆ ಒಗ್ಗಿಸಿಕೊಂಡು ಸಡಿಲ ರೀತಿಯನ್ನನುಸರಿಸಿ ಕೀರ್ತನೆಗಳನ್ನು ರಚಿಸಿದರು. 'ಕೀರ್ತನೆ' ಎಂದರೆ ಒಂದರ್ಥದಲ್ಲಿ ಕೆತ್ತನೆ ತಾನೆ ? ಶಿಲ್ಪ ಕಲ್ಲಿನಲ್ಲಿ ಕೆತ್ತುವುದನ್ನು ಕವಿ ಶಬ್ದದಲ್ಲಿ ಕೆತ್ತುತ್ತಾನೆ. ಈ ಕೆತ್ತನೆಯ ಕೆಲಸ ಆಯಾ ಶಿಲ್ಪಿಯ ಮನೋಧರ್ಮವನ್ನನುಸರಿಸಿ ಹೆಚ್ಚು ಶಾಸ್ತ್ರನಿಷ್ಠವಾಗದೆ ಜನಮಾನ್ಯವಾಗುವ ದಿಕ್ಕಿನಲ್ಲಿ ಬೆಳೆಯಿತು. ಉಗಾಭೋಗ ಸುಳಾದಿಗಳನ್ನು ಬಿಟ್ಟು ಉಳಿದ ಕೀರ್ತನ ಪದಗಳಿಗೆ ಪುರಂದರದಾಸರು ಅಂಶಲಯ ಮಾತ್ರಾಲಯಗಳನ್ನೇ ಬಳಸಿಕೊಂಡರು. ಮುಖ್ಯವಾಗಿ ತ್ರಿಪದಿ ಸಾಂಗತ್ಯಗಳ ಪರಿಷ್ಕೃತ ರೂಪಗಳನ್ನೊಳಗೊಂಡ ಮುಕ್ತ ಅಂಶಲಯದಲ್ಲಿ ಮತ್ತು ಸ್ಥಿತಿಸ್ಥಾಪಕ ರೂಪದ ಮಾತ್ರಾಲಯದಲ್ಲಿ ಇವರು ಪದಗಳನ್ನು ನಿರ್ವಹಿಸಿದ್ದಾರೆ. ಆದಿಪ್ರಾಸ, ಅಂತ್ಯಪ್ರಾಸ, ವಡಿಗಳನ್ನು ಸಾಕಷ್ಟುಮಟ್ಟಿಗೆ ತಮ್ಮ ರಚನೆಗಳಲ್ಲಿ ಕಾಣಿಸಿದ್ದಾರೆ. ಜಾನಪದ ಮಟ್ಟುಗಳೂ ಹೇರಳವಾಗಿವೆ. ಕೆಲವು ನೃತ್ಯ ಗತಿಗೂ ಹೊಂದಿಸಬಹುದಾದ ಲಯ, ತಾಳಗಳನ್ನು ಹೊಂದಿವೆ. ಕೆಲವು ಉದಾಹರಣೆಗಳನ್ನು ಗಮನಿಸಬಹುದು.

ಅಂಶಗಣ

ವಿ ಬ್ರ ವಿ ಬ್ರ
ನಾ ನಿನ್ನೊ । ಳನ್ಯ । ಬೇಡುವ । ದಿಲ್ಲ

ಬ್ರ ವಿ ವಿ ವಿ ವಿ
ಎನ್ನ । ಹೃದಯಕ । ಮಲದೊಳು । ನಿಂದಿರು । ಹರಿಯೇ

ವಿ ವಿ ವಿ
ಅಂಬಿಗ । ನಾ ನಿನ್ನ । ನಂಬಿದೆ

ವಿ ಬ್ರ ಬ್ರ ವಿ
ಜಗದಂಬ । ರಮಣ । ನಿನ್ನ । ನಂಬಿದೆ ।

ವಿ ವಿ ರು
ಬೇವು ಬೆ । ಲ್ಲದೊಳಿಡ । ಲೇನುಫಲ ।

ವಿ ವಿ ರು
ಹಾವಿಗೆ । ಹಾಲೆರೆ । ದೇನುಫಲ

* * *

ವಿ ವಿ ವಿ ಬ್ರ
ಆಚಾರ । ವಿಲ್ಲದ । ನಾಲಗೆ । ನಿನ್ನ ।

ವಿ ವಿ ವಿ
ನೀಚ ಬು । ದ್ಧಿಯಬಿಡು । ನಾಲಗೆ ।

* * *

ವಿ ವಿ ಬ್ರ ಬ್ರ
ಸುಮ್ಮನೆ । ಬರುವದೆ । ಮುಕ್ತಿ । ನಮ್ಮ ।

ವಿ ವಿ ವಿ ಬ್ರ
ಅಚ್ಯುತಾ । ನಂತನ । ನೆನೆಯದೆ । ಭಕ್ತಿ

* * *

ಮಾತ್ರಾಗಣ

5 5 5 ಗು
ನಂಬದಿರು । ಈ ದೇಹ । ನಿತ್ಯವ । ಲ್ಲ

* * *

5 5 5 3(+2)
ಹರಿನಾಮ । ದರಗಿಣಿಯು । ಹಾರುತಿದೆ । ಜಗದಿ

5 4(+1) 5 (3+2)
ಪರಮಭಾ । ಗವತರು । ಬಲೆಯ ಬೀ । ಸಿದರು

* * *

4 4 —
ಕಂಡೆ ಕ । ರುಣನಿಧಿ । ಯ

4 4 4 —
ಗಂಗೆಯು । ಮಂಡೆಯೊ । ಳಿಟ್ಟದೊರೆ । ಯಃ

* * *

4 4 4 4
ಕಲಿಯುಗ । ದೊಳುಹರಿ । ನಾಮವ । ನೆನೆದರೆ ।

4 4 4 4 +ಗು
ಕುಲಕೋ । ಟಿಗಳು । ದ್ಧರಿಸುವ । ವೋರಂ । ಗ

4 4 4 4
ಯಾದವ । ನೀ ಬಾ । ಯದುಕುಲ । ನಂದನ ।

4 4 4 —
ಮಾಧವ । ಮಧುಸೂ । ದನಬಾ । ರೊ

5 5 5 5
ಸುಳ್ಳನಾ । ಡುವ ಕಳ್ಳ । ನೊಡನೆ ಗೆಳೆ । ತನವೇನು

5 5 5
ಹಳ್ಳಹೊಳೆ । ಯಿಲ್ಲದಿಹ । ಪಾಳ್ಯವೇ । ನು ।

5 5 5 5
ಎಳ್ಳನುರಿ । ಯದವಂಗೆ । ಗಾ ಣಿಗನೆಂಬ । ಪೆಸರೇನು

5 5 5
ಹಳ್ಳಯಿ । ಲ್ಲದವಂಗೆ । ಹೆಗ್ಗಳಿಕೆ । ಯೇನು ।

* * *

5 5 5 5
ಎಲ್ಲಿರುವ । ನೋ ರಂಗ । ನೆಂಬ ಸಂ । ಶಯಃಬೇಡ

5 5 5
ಎಲ್ಲಿ ಭ । ಕ್ತರು ಕರೆದ । ರಲ್ಲಿಒದ । ಗುವನು

* * *

5 5 5 5
ಮಾನಭಂ । ಗವ ಮಾಡಿ । ಮತ್ತೆ ಉಪ । ಚಾರಗಳ ।

5 5 5
ನೇನ ಮಾ । ಡಿದರಲ್ಲಿ । ಇರಬಾರ । ದಯ್ಯ ।

3 3 3 3 3 3 —
ಮರೆಯು । ಬೇಡ । ಮನವೆ । ನೀನು । ಹರಿಯು । ಚರಣ । ವ

3 3 3 3 3 3 3
ಅರುಣ । ಕಿರಣ । ಚರಣ । ಶರಣ । ಪಾತ । ಕ–ಪಾ । ವನ

ವಡಿ ಎಂದರೆ ಆದ್ಯಕ್ಷರಗಳು ಯತಿಯ ಸ್ಥಾನದಲ್ಲಿ ಸುತ್ತಿಬರುವಿಕೆ, ಪಾದದ ಮೊದಲಕ್ಷರ ಮತ್ತು ಪಾದದ ಯತಿಯ ಮುಂದಿನ ಮೊದಲ ಅಕ್ಷರ ಸಮಾನ ಅಥವಾ ಸಜಾತೀಯವಾಗಿರುವಿಕೆ. ಒಂದು ಬಗೆಯ ಒಳಪ್ರಾಸ. ಗೇಯಲಯಗಳಿಗೆ ತುಂಬ ಹೊಂದಿಕೊಳ್ಳುವ ಈ ಬಗೆಯ ಯಮಕ ರೂಪದ ಅಕ್ಷರ–ಸಮೀಪಾಕ್ಷರ ಜೋಡಣೆಯಿಂದ ಶಬ್ದ ಮೈತ್ರಿಯನ್ನು ಸಾಧಿಸಿ ಕಾವ್ಯವನ್ನು ಮಧುರಗೊಳಿಸುವುದು ದೇಸಿ ಕಾವ್ಯದ ಒಂದು ವೈಖರಿ. ತ್ರಿಪದಿಯಲ್ಲಿ ಬಳಕೆಗೊಂಡ ಈ ರಚನಶಿಲ್ಪ ಕೀರ್ತನೆಗಳಲ್ಲೂ ತುಂಬ ಕ್ರಿಯಾಪೂರ್ಣವಾಗಿ ಕಾಣಿಸಿಕೊಳ್ಳುತ್ತದೆ. ಕನಕದಾಸರು ವಡಿಗಳಲ್ಲಿ ನಾನಾ ಬಗೆಯವನ್ನು ಸಮರ್ಥವಾಗಿ ಬಳಸಿದ್ದಾರೆ. ಪುರಂದರದಾಸರ ಕೀರ್ತನೆಗಳಲ್ಲೂ ಇವುಗಳನ್ನು ಸಮಯೋಚಿತವಾಗಿ ದುಡಿಸಿಕೊಳ್ಳಲಾಗಿದೆ. ಕೆಲವು ಉದಾಹರಣೆಗಳನ್ನು ಗಮನಿಸಬಹುದು.

ಬಿಡೆ ನಿನ್ನ ಪಾದವ **ಬಿಂಕ**ವಿದೇಕೊ	(ಏಕಾಕ್ಷವರ್ಣ ವಡಿ)
ಯಾದವ ನೀ ಬಾ **ಯ**ದುಕುಲನಂದನ	"
ಸಕಲಗ್ರಹಬಲ ನೀನೆ **ಸ**ರಸಿಜಾಕ್ಷಾ	"
ಹರಿನಾಮದರಗಿಣಿಯು **ಹಾ**ರುತಿದೆ ಜಗದಿ	"
ಹೂವ ತರುವರ ಮನೆಗೆ **ಹು**ಲ್ಲ ತರುವ	"
ಕಾಯಲಾರೆನು ಕೃಷ್ಣ **ಕು**ಡವರ ಬಾಗಿಲನು	"
ಆರೇನು ಮಾಡುವರು **ಆ**ರಿಂದಲೇನಹುದು...	(ಸ್ವರವಡಿ)
ಬದುಕಿದೆನು ಬುದುಕಿದೆನು **ಭ**ವವೆನಗೆ ಹಿಂಗಿತು	(ವರ್ಗವಡಿ)
ಕಂಡುಕಂಡು ನೀ ಎನ್ನ **ಕೈ** ಬಿಡುವರೇ ಕೃಷ್ಣ	(ವರ್ಗವಡಿ)
ದಾಸನೆಂತಾಗುವೆನು **ಧ**ರೆಯೊಳಗೆ ನಾನು	(ವರ್ಗವಡಿ)
ಅಂತಕನ ದೂತರಿಗೆ **ಕಿಂ**ಚಿತ್ತು ದಯವಿಲ್ಲ	"
ಕಾಗದ ಬಂದಿದೆ ನಮ್ಮ ಕಮಲನಾಭನದು	(ಏಕವರ್ಣವಡಿ)
ಆಡಿದನೋ ರಂಗ **ಅ**ದ್ಭುತದಿಂದಲಿ	(ಏಕವರ್ಣವಡಿ)
ನಲಿದಾಡೆ ಎನ್ನ **ನಾ**ಲಿಗೆ ಮೇಲೆ...	(")

ನೃತ್ಯಗತಿಗೆ ಹೊಂದುವ ಲಯತಾಳಗಳನ್ನು ಪುರಂದರದಾಸರ ಅನೇಕ ಕೀರ್ತನೆಗಳಲ್ಲಿ ಕಾಣಬಹುದಾಗಿದೆ. ಕೆಲವು ಉದಾಹರಣೆಗಳನ್ನು ಗಮನಿಸಬಹುದು :

ಆಡಿದನೋ ರಂಗ ಅದ್ಭುತದಿಂದಲಿ ಕಾಳಿಂಗನ ಫಣೆಯಲಿ
ಬೇಡಿರವರಿಗೆ ಬೇಡಿದ ವರಗಳ
ನೀಡುತಲಿ ದಯ ಮಾಡುತಲಿ ನಲಿ
ದಾಡುತಲಿ ಬೆಣ್ಣೆ ಬೇಡುತಲಿ ಕೃಷ್ಣ...

ಕಂಡೆ ಕರುಣ ನಿಧಿಯ ಗಂಗೆಯ ಮಂಡೆಯೊಳಿಟ್ಟದೊರೆಯ
ರುಂಡಮಾಲೆ ಸಿರಿಯ ನೊಸಲೊಳು ಕೆಂಡಗಣ್ಣಿನ ದೊರೆಯ

ಚಂದ್ರಚೂಡ ಶಿವಶಂಕರ ಪಾರ್ವತಿರಮಣಾ
ನಿನಗೆ ನಮೋ ನಮೋ
ಸುಂದರ ಮೃಗಧರ ಪಿನಾಕಧರ ಹರ
ಗಂಗಾಧರ ಗಜಚರ್ಮಾಂಬರಧರ......

ಹರಿ ಕುಣಿದ ನಮ್ಮ ಹರಿ ಕುಣಿದ
ಅಕಳಂಕಚರಿತ ಮಕರ ಕುಂಡಲಧರ
ಸಕಲರ ಪಾಲಿಪ ಹರಿ ಕುಣಿದ
ಅರಳೆಲೆ ಮಾಗಾಯಿ ಕೊರಳ ಮುತ್ತಿನ ಸರ
ತರಳೆಯರೊಡಗೂಡಿ ಹರಿ ಕುಣಿದ

ಜಾನಪದ ಮಟ್ಟುಗಳನ್ನು ಸುಲಲಿತವಾಗಿ ಬಳಸಬಲ್ಲ ಪುರಂದರದಾಸರು ಜಾನಪದ ಸಾಹಿತ್ಯ ರಚನೆಯ ಎಲ್ಲ ಸಿರಿಗಳನ್ನೂ ಸೂರೆ ಮಾಡಿದ್ದಾರೆ. ಮಾತಿನ ಅಬ್ಬರ ವರ್ಣಾವೃತ್ತಿಯ, ಯಮಕದ, ಒಳಪ್ರಾಸಗಳ ವರ್ಣಮಯತೆ, ಅಚ್ಚ ಕನ್ನಡ ಶಬ್ದಗಳ ಹೆಚ್ಚಳ, ಗಡಸಿನ ಮಾತುಗಾರಿಕೆಯ ಗತ್ತುಗಮಕಗಳು ಜಾನಪದ ವೈಶಿಷ್ಟ್ಯಗಳು.

ಏತರ ಕಟಪಟಿ ಒಂದಿನ ಹೋಗುತಿದಿ ಲಟಪಟಿ
ಬರುವಾಗ ಏನತಂದಿ ಎಲ್ಲಾನೂ ನನ್ನದೆಂದಿ

ಹಳೆಯ ವಸ್ತ್ರವ ಬೀಸಾಡಣ್ಣ
ಹೊಸ ವಸ್ತ್ರ ನಿಮಗೆ ದೇವರು ಕೊಟ್ಟಾನು
ಹಕ್ಕಿಯ ಅರಸ ಹೇಳಿದ ಮಾತು
ಉತ್ತಮ ಮಾರ್ಗವ ಹಿಡಿಯೋ ತಮ್ಮ

ಮಾರನೆಂಬುವ ಕಳ್ಳನೈದಾನೆ ಪುರಂ
ದರನಾದರು ಬಿಡುವೋನಲ್ಲ

ಕಿವಿಯೂ ಮೂಗೂ ನಾಲಿಗೆಯುಪ್ಪ
ತುರಂಗ ಮಾತಂಗ ಪತಂಗ ಕೇಳು

ಶಕುನದ ಹಾಡಿನ ಧಾಟಿಯಲ್ಲಿ ಅವರ ಹಲವಾರು ಪದಗಳು ರಚಿತವಾಗಿವೆ. ಇನ್ನೊಂದು ಉದಾಹರಣೆಯನ್ನು ಗಮನಿಸಬಹುದು :

ಜಗವೆಂಬಾ ಗಿಡ ಹುಟ್ಟಿತಣ್ಣ
ಹಕ್ಕಿಗಳೆರಡೂ ಕೂಡ್ಯೆದಾವೆ
ಹಣ್ಣುಗಳೆರಡೂ ಐದಾವಪ್ಪ
ಮೂವರು ಮೂರು ಗುಣ ಕೇಳಣ್ಣ
ಹಣ್ಣಿನೊಳಗೆ ನಾಲ್ಕು ರಸವಪ್ಪ
ಐದು ದೊಡ್ಡಗುರಿ ಕಾಣಣ್ಣ
ಆರು ಬಗೆಯ ಸ್ವರೂಪ ಕೇಳು
ಏಳು ಬಗೆಯ ಕೆಂಗಲು ಬಣ್ಣ
ಸಣ್ಣ ಗರಿಗಳು ಎಂಟೈದಾವೆ
ಅಕ್ಷವು ಅದಕೆ ಒಂಬತ್ತೈತೆ
ಎಲೆಗಳು ಹತ್ತು ಐದಾವಪ್ಪ...
ಒಂದೇ ಹಕ್ಕಿ ಹಣ್ಣೆನ್ನೈತೆ
ಮತ್ತೊಂದು ಹಕ್ಕಿ ನೋಡತತದಪ್ಪಾ
ಹಣ್ಣಿಂದ ಹಕ್ಕಿ ಬಡವಾಗ್ಯೆತೆ
ತಿನ್ನದಹಕ್ಕಿ ಬಲವಾಗ್ಯೆತೆ

ಇಲ್ಲಿ ಅವರು ಹೇಳುವ ಗಿಡ ಅಶ್ವತ್ಥ ವೃಕ್ಷ, ಬೇರು ಊರ್ಧ್ವದಲ್ಲಿ ಎಲೆ ಕೆಳಗೆ ಹರಡಿರುವ ವೃಕ್ಷ, ಜಗತ್ತು ಎಂಬ ಮರ. ಇದರ ಮೇಲೆ ಎರಡು ಹಕ್ಕಿಗಳು ಜೀವಾತ್ಮ, ಪರಮಾತ್ಮ. ಎರಡು ಹಣ್ಣುಗಳು ಸುಖದುಃಖಗಳು. ಮೂವರು ಮೂರು ಗುಣ ಎಂದರೆ ಸತ್ತ್ವ 'ರಜಸ್' ತಮಸ್ ಎಂಬ ಗುಣಗಳು. ನಾಲ್ಕು ರಸ ಪುರುಷಾರ್ಥಗಳು ಅಥವಾ ಮುಕ್ತಿಯ ನಾಲ್ಕು ವಿಧಗಳು. ಐದು ದೊಡ್ಡಗರಿಗಳು ಪಂಚೇಂದ್ರಿಯಗಳನ್ನೂ ಆರು ಬಗೆಯ ಸ್ವರೂಪಗಳು ಷಡ್ವರ್ಗಗಳನ್ನೂ ಏಳು ಬಗೆಯ ಕೆಂಗಲು ಬಣ್ಣಗಳು (ಕೆಂಪು ಬಣ್ಣ) ಸಪ್ತಧಾತುಗಳನ್ನೂ ಎಂಟು ಸಣ್ಣ ಗರಿಗಳು ಸೂಕ್ಷ್ಮವಾದ ಅಷ್ಟಧಾ ಪ್ರಕೃತಿಗಳನ್ನೂ, ಒಂಬತ್ತು ಅಕ್ಷಗಳು (ಪುಷ್ಪಪಾತ್ರ) ನವದ್ವಾರಗಳನ್ನೂ, ಹತ್ತು ಎಲೆಗಳು ಪಂಚ ಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳನ್ನೂ ಸಂಕೇತಿಸುತ್ತವೆ.

ಪುರಂದರದಾಸರ "ಹಕ್ಕಿ ಬಂದಿತು ಅಂಗಳದಲ್ಲಿ, ಹಾರಿ ಹೋಯಿತು ಆ ಕ್ಷಣ ದಲ್ಲಿ", "ಬಯಲ ಬಾವಿಗೆ ಬಂದಳೋರ್ವ ಬಾಲೆ" ಕಾಬಿಸಿ ಕಾಬಿಸಿ ಮ್ಯಾ ಮ್ಯಾ ಮ್ಯಾ ಇಂಥ ಜಾನಪದ ಸತ್ತ್ವ ಮೈಗೂಡಿದ ಪದಗಳು ಮೋಹಕವಾಗಿವೆ.

ಸಂಗೀತ ನೃತ್ಯ ಕ್ಷೇತ್ರಗಳಲ್ಲಿ ಪುರಂದರದಾಸರಿಗೆ ಪ್ರವೇಶಾವಕಾಶ ಇರು ವಂತೆಯೇ ಸಾಹಿತ್ಯ ಚರಿತ್ರೆಯಲ್ಲೂ ಅವರಿಗೆ ಒಂದು ಸ್ಥಾನವಿದೆ. ಸಾಹಿತ್ಯ ರಚನೆಯ ಕಡೆಗೆ ಹರಿದಾಸರ ಒಲವರ ಹರಿದದ್ದು ನಾಡಿನ ಭಾಗ್ಯ ಎನ್ನಬೇಕು. ಕನಕದಾಸರಂತೂ ಸ್ಪಷ್ಟವಾಗಿ ಸಾಹಿತ್ಯ ಪ್ರಕಾರದ ಎಲ್ಲ ಸೀಮೆಗಳಲ್ಲೂ ಸುತ್ತಾಡಿದ್ದಾರೆ. ನಳಚರಿತ್ರೆ,

ಮೋಹನ ತರಂಗಿಣಿ, ರಾಮಧಾನ್ಯ ಚರಿತೆ ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಆದರೆ ಪುರಂದರದಾಸರು ಕೆಲವು ಷಟ್ಪದಿಗಳನ್ನು ಬರೆದಿದ್ದಾರಾದರೂ ಕೀರ್ತನ ಕ್ಷೇತ್ರಕ್ಕೇ ತಮ್ಮ ಸಾಹಿತ್ಯ ರಚನೆಯನ್ನು ಸೀಮಿತಗೊಳಿಸಿಕೊಂಡವರು. ಕೀರ್ತನೆಗಳಲ್ಲಿ ಭಕ್ತರ ಭಾವುಕರ ರಸಿಕರ ಮೆಚ್ಚುಗೆಗೆ ಪಾತ್ರರಾಗುವ ಗುಣವನ್ನು ಪುರಂದರ ದಾಸರು ಪ್ರದರ್ಶಿಸಿದ್ದಾರೆ. ಈ ವರ್ಗವನ್ನು ಬಿಟ್ಟು ಬರಿಯ ಸಾಹಿತ್ಯ ದೃಷ್ಟಿಯಿಂದ ರಸಪರಿಣಾಮದ ದೃಷ್ಟಿಯಿಂದ ನೋಡಬಯಸುವವರಿಗೂ ಪುರಂದರದ್ವಾರ ತೆರೆದುಕೊಳ್ಳುತ್ತದೆ. ಸಾಹಿತ್ಯ ಪ್ರಿಯನನ್ನು ಆಕರ್ಷಿಸಬಲ್ಲ ಹಲವಾರು ಗುಣಗಳಿಂದ ಅವರ ಕೀರ್ತನೆಗಳು ತುಂಬಿಹೋಗಿವೆ. ಹೀಗಾಗಿ ಸಾಹಿತ್ಯ ಚರಿತ್ರೆಯನ್ನು ನಿರೂಪಿಸುವಾಗ ದಾಸ ಸಾಹಿತ್ಯ ವಚನ ಸಾಹಿತ್ಯಗಳಿಗೆ ಬೇರೆ ಬೇರೆ ಅಧ್ಯಾಯಗಳನ್ನೇ ಮೀಸಲಿರಿಸುವಷ್ಟು ವಿಪುಲ ಸಾಹಿತ್ಯರಾಶಿ ನಿರ್ಮಾಣಗೊಂಡಿದೆ. ಶ್ರೇಷ್ಠ ವಿಚಾರ ಕಲ್ಪನೆ, ಸೂಕ್ತಿ ಗಾದೆ ಒಗಟಿನಂತಹ ಮಾತುಗಳ ಬಳಕೆ, ಶಬ್ದಶಕ್ತಿ, ಶಬ್ದಗಳ ಧ್ವನಿ ಶಕ್ತಿಯನ್ನು ಪೂರ್ಣವಾಗಿ ದುಡಿಸಿಕೊಳ್ಳುವ ಸಾಮರ್ಥ್ಯ, ರಸ ನಿರ್ವಹಣೆ, ಸಮಾಜದ ಹಾಗೂ ವ್ಯಕ್ತಿ ಭಾವಗಳ ಸೂಕ್ಷ್ಮ ಅಂತರೀಕ್ಷಣ, ಅದ್ಭುತ ಉಪಮಾ ರೂಪಕ ಸಂಯೋಜನೆ, ಜನ ಪ್ರೀತಿಸುವ ವಿನೋದ, ವಿಡಂಬನೆ, ಅಣಕ, ವಾತ್ಸಲ್ಯ ಮೊದಲಾದ ಭಾವಗಳನ್ನೂ ನವರಸಗಳನ್ನೂ ತೆರೆದುತೋರಿಸಬಲ್ಲ ಕಲಾಜಾಣ್ಮೆ, ರಾಮಾಯಣ, ಭಾರತ, ಭಾಗವತ ಮತ್ತು ಪುರಾಣಗಳಿಂದ ಆಯ್ದ ಪರಿಚಿತ ಪ್ರಸಂಗಗಳನ್ನು ಬಳಸಿಕೊಳ್ಳುವ ಪ್ರತಿಮಾಕೌಶಲ, 'ನುಡಿಗೊಂದು ಸಿಂಗರದ ಇಳೆ ಎದ್ದು ನಿಲುವಂತೆ' ಕೀರ್ತನೆಗಳಲ್ಲಿ ತುಂಬಿಸುವ ಭಾವ ಲಹರಿ, ಸಂವಾದ ಚಾತುರ್ಯ, ಸಂವಹನ ಕೌಶಲಗಳಿಂದಾಗಿ ಪುರಂದರ ಸಾಹಿತ್ಯ ಜನರ ಮನಸ್ಸನ್ನು ಸೂರೆಗೊಂಡಿದೆ. ಸಂಗೀತ ಪ್ರಧಾನವಾದ ಅವರ ರಚನೆಗಳಲ್ಲಿ ಮೇಲೆ ಹೇಳಿದ ಸಾಹಿತ್ಯಕ ಅಂಶಗಳು ಸಮರಸವಾಗಿ ಬೆರೆತುಕೊಂಡಿವೆ. ಅವುಗಳಲ್ಲಿ ಕೆಲವನ್ನು ನಿದರ್ಶನ ಪೂರ್ವಕವಾಗಿ ಪರಿಶೀಲಿಸಬಹುದು :

ಒಂದು ಕವಿತೆಯಲ್ಲಿ ಪ್ರತಿಪಾದಿತವಾಗುವ ವಿಚಾರ ಎಷ್ಟು ಮುಖ್ಯವೋ ಆ ವಿಚಾರವನ್ನು ಅನನ್ಯ ರೀತಿಯಲ್ಲಿ ಹೇಳುವ ರಚನಾ ಪ್ರತಿಭೆ ಕೂಡ ಅಷ್ಟೇ ಮುಖ್ಯವಾಗುತ್ತದೆ. ಒಬ್ಬ ಉತ್ತಮ ಮಟ್ಟದ ಕವಿಯ ಸತ್ತ್ವ ಪರೀಕ್ಷೆ ನಡೆಯುವುದು ಈ ರಚನೆಯ ಚೌಕಟ್ಟಿನಲ್ಲೇ. ಜನಕ್ಕೆ ತಲಪಿ ಕ್ರಿಯಾಮುಖಿಯಾಗಬೇಕೆಂದು ಬಯಸಿದ ಪುರಂದರದಾಸರು ಅದಕ್ಕೆ ತಕ್ಕ ಪರಿಕರಗಳನ್ನೆಲ್ಲ ಪರಿಷ್ಕಾರವಾಗಿ ಅಣಿಗೊಳಿಸಿದ್ದಾರೆ. ಬಳಸುವ ಶಬ್ದಗಳು ಪ್ರಾಸ, ಅನುಪ್ರಾಸ, ಯಮಕ ಗತಿಗಳಲ್ಲಿ ಹೇಗೆ ವರ್ಣಶೋಭೆಯನ್ನು ಪಡೆಯುತ್ತವೆ ಎಂಬುದನ್ನು ಅವರು ಬಲ್ಲರು. ಸಾಂಕೇತಿಕತೆ, ಅನ್ಯೋಕ್ತಿ, ವ್ಯಂಗ್ಯ, ಶ್ಲೇಷೆ ಅಣಕಗಳಿಂದ ಶಬ್ದದ ಚೆಲುವನ್ನು ಹೆಚ್ಚಿಸಬಹುದೆಂಬುದು ಅವರಿಗೆ ತಿಳಿದ ಸಂಗತಿಯಾಗಿದೆ. ಅಲ್ಲಲ್ಲಿ ಸೂಕ್ತಿಗಳಿಂದ, ಸೂಳ್ನುಡಿಗಳಿಂದ ಗಾದೆ ಮಾತುಗಳಿಂದ ವಿಚಾರಗಳಿಗೆ ಕಾವು ಮೂಡಿಸುವ ಶಕ್ತಿ ಪುರಂದರದಾಸರಿಗೆ ಸಿದ್ಧಿಸಿದೆ. ಉಪಮೆ

ರೂಪಕಗಳ ನಿರ್ವಹಣೆಯಲ್ಲಿ ಅವರು ತೋರುವ ಅಚ್ಚುಕಟ್ಟು, ಅವುಗಳನ್ನು ಸಮಾಜದ ಎಲ್ಲ ಮುಖಗಳಿಂದ ಸ್ವೀಕರಿಸುವ ಕಲಾಜಾಣ್ಮೆ ಗಮನಾರ್ಹವಾದವು. ಉದಾಹರಣೆಗೆ ಅವರ ಶಬ್ದಗಳ ನಾಟ್ಯವಿಲಾಸವನ್ನು ಗಮನಿಸಬಹುದು :

ಮರೆಯಬೇಡ ಮನವೆ ನೀನು
ಹರಿಯ ಚರಣವ
ಅರುಣ ಕಿರಣ ಚರಣ ಶರಣ
ಪಾತಕ ಪಾವನ

ಗುರುವಿನ ಗುಲಾಮ ನಾಗದ ತನಕ ದೊರೆಯದಣ್ಣ ಮುಕುತಿ

ಯಾದವ ನೀ ಬಾ ಯದುಕುಲ ನಂದನ
ಮಾಧವ ಮಧು ಸೂದನ ಬಾರೊ

ಯಾರಿಗೆ ಯಾರುಂಟು ಎರವಿನ ಸಂಸಾರ

ಗೊಲ್ಲರ ಮನೆಗೆ ನೀನು ಮೆಲ್ಲಗೆ ಪೋಗಿ
ಚೆಲ್ಲಿ ಪಾಲು ಮೊಸರು ಬೆಣ್ಣೆ ಸೂರೆ ಮಾಡಿದೆ

ಉಂಗುರ ಉಡಿದಾರ ಉಡಿಘಂಟೆ ನಾ ಕಂಡೆ
ರಂಗು ಮಾಣಿಕ್ಯದ ನವರತ್ನ ಮಾಲೆ ಕಂಡೆ...

ರವಿಯನೊಲ್ಲೆನವ್ವ ನಾನು ಉರಿದು ಮೂಡುವನ
ಹರನ ನಾನೊಲ್ಲೆನವ್ವ ಮರುಳುಗೊಂಬುವನ
ಧರೆಗತಿ ಚೆಲುವನು ಜಗಕೆಲ್ಲ ಒಡೆಯನು
ತಂದು ತೋರೆ ನಮ್ಮ ಪುರಂದರವಿಠಲನ

ಎಂದಪ್ಪಿಕೊಂಬೆನೆ ರಂಗಯ್ಯ ನಿನ್ನ
ಎಂದಪ್ಪಿಕೊಂಬೆ
ಅರಳೆಲೆ ಮಾಗಾಯಿ ಕೊರಳ ಮುತ್ತಿನ ಸರ
ತರಳರನೊಡಗೂಡಿ ಬೆಣ್ಣೆಯ ಮೆಲುವನ

ಶ್ರವಣ ಮೋಹಕವಾದ ಇಂಥ ಉಕ್ತಿ ಖಂಡಗಳು ತಮ್ಮೆಲ್ಲ ವರ್ಣಮಯತೆಯಿಂದ ನಮ್ಮನ್ನು ರಂಜಿಸುತ್ತ ಸಾಗುತ್ತವೆ. ಶಬ್ದದ ಮೇಲ್ಪದರದಲ್ಲಿ ಯಮಕ ವರ್ಣಾವೃತ್ತಿ ನುಡಿಮೇಳಗಳಿಂದ ತುಂಬಿಕೊಂಡು ಸನ್ನಿವೇಶಕ್ಕೆ ತಕ್ಕಂತೆ ತೀವ್ರವಾಗುತ್ತ, ಮಂದವಾಗುತ್ತ, ನಿಲ್ಲುತ್ತ ನಡೆಯುವ ಈ ಚರಣಗಳು ವರ್ಣಿತ ವಿಷಯಗಳ ಅರ್ಥವಲಯಕ್ಕೆ ಆಳವಾಗಿ ಇಳಿಯುವ ಸಾಮರ್ಥ್ಯವನ್ನು ಪಡೆದುಕೊಂಡಿವೆ.

ಆಯಾ ಭಾವಗಳ ಸಂಚಾರಕ್ಕೆ ತಕ್ಕ ನುಡಿಗಾರಿಕೆಯನ್ನು ಒದಗಿಸುವುದರಲ್ಲಿ ಪುರಂದರದಾಸರು ಸಿದ್ಧಹಸ್ತರು. ಆರ್ತಭಾವವನ್ನು ಚಿತ್ರಿಸುವ

ಬಿನ್ನಹಕೆ ಬಾಯಿಲ್ಲವಯ್ಯ
ಅನಂತ ಅಪರಾಧ ಎನ್ನಲ್ಲಿ ಇರಲಾಗಿ

ಅನ್ನಮದ ಅರ್ಥಮದ ಅಖಿಳ ವೈಭವದ ಮದ
ಮುನ್ನ ಪ್ರಾಯದ ಮದವು ರೂಪ ಮದವು
ತನ್ನ ಸತ್ವದ ಮದ ಧರಿತ್ರಿ ವಶವಾದ ಮದ
ಇನ್ನು ತನಗೆದುರಿಲ್ಲವೆಂಬ ಮದವು...

ಎಂಬ ಚರಣವನ್ನು ನೋಡಬಹುದು. 'ಮದ' ಎಂಬ ಶಬ್ದ ಇಲ್ಲಿ ಮದಿಸಿದ ಆನೆ ಯಂತೆ ನುಗ್ಗಿ ತನ್ನ ಬಿರುಸನ್ನೂ ಧಾಳಿಯ ತೀವ್ರತೆಯನ್ನೂ ಪ್ರಕಟಪಡಿಸುತ್ತದೆ. ಈ ಧಾಳಿಯ ಕುದಿಯಲ್ಲಿ ಮನುಷ್ಯ ಮಾಡುವ ತಪ್ಪುಗಳಿಗೆ ಕೊನೆ ಮೊದಲೇ ಇಲ್ಲವೆಂಬು ದನ್ನೂ ಪರ್ಯಾಯವಾಗಿ ಸೂಚಿಸುತ್ತದೆ.

ಹಾಗೆಯೇ

'ಕಂಡು ಕಂಡು ನೀ ಎನ್ನ ಕೈಬಿಡುವರೇ ಕೃಷ್ಣ' ಎಂಬ ಕೀರ್ತನೆಯಲ್ಲಿ ವ್ಯಕ್ತ ವಾಗುವ ಆರ್ತಭಾವದ ಪರಿಯನ್ನು ನೋಡಬಹುದು.

ಬಂಧುಗಳು ಎನಗಿಲ್ಲ
ಬದುಕಿನಲಿ ಸುಖವಿಲ್ಲ
ನಿಂದೆಯಲಿ ನೊಂದೆನೈ
ನೀರಜಾಕ್ಷ

ತಂದೆ ತಾಯಿಯು ನೀನೆ
ಬಂಧು ಬಳಗವು ನೀನೆ
ಎಂದೆಂದಿಗೂ ನಿನ್ನ
ನಂಬಿದೆನೊ ಕೃಷ್ಣ

ಈ ಚರಣದಲ್ಲಿ ಇಲ್ಲ ಇಲ್ಲ ನೀನೆ ನೀನೆ ಎಂಬ ಅಂತ್ಯಾಕ್ಷರಗಳು ಆವೃತ್ತಗೊಳ್ಳುವ ಬಗೆ ಬ, ನ, ತ ಅಕ್ಷರಗಳ ನುಡಿಗುಣಿತಗಳು ಸುತ್ತಿ ಸುತ್ತಿ ಬರುವ ಜೀವದ ನೋವನ್ನು ಶಾಬ್ದಿಕವಾಗಿಯೂ ಚಿತ್ರಿಸುತ್ತ ಹೋಗುತ್ತವೆ.

ನಾನಾ ದೇಶಗಳಲ್ಲಿ **ನಾನಾ** ಕಾಲಗಳಲ್ಲಿ
ನಾನಾ ಯೋನಿಗಳಲ್ಲಿ ಜನಿಸಿ ಜನಿಸಿ
ನಾನು ನನ್ನದು ಎಂಬ ನರಕದೊಳಗೆ ಬಿದ್ದು
ನೀನೆ ಗತಿಯೆಂದು ನಂಬಿದ ದಾಸನ ಮೇಲೆ ...

'ನಾ' ಎಂಬ ಶಬ್ದ ಸ್ವಾರ್ಥ ಸೂಚಕವಾದ ಶಬ್ದ. ಈ ಸ್ವಾರ್ಥವು ಮನುಷ್ಯನನ್ನು ಹೇಗೆ ಎಲ್ಲ ಕಡೆಯಿಂದ ಆವರಿಸುತ್ತದೆಂಬುದನ್ನು 'ನ' ಶಬ್ದದ ನುಡಿಮೇಳಗಳಿಂದಲೇ ವಿವರಿಸುವ ಪ್ರಯತ್ನ ಪುರಂದರದಾಸರದು.
ಹೀಗೆಯೇ

'ಸಂಸಾರವೆಂಬಂಥ ಭಾಗ್ಯವಿರಲಿ
ಕಂಸಾರಿ ನೆನೆವೆಂಬ ಸೌಭಾಗ್ಯವಿರಲಿ'

ಎಂಬ ಚರಣ ಶಾಂತ ಭಾವವನ್ನೂ

"ವಿರಹವ ಮಾತ್ರ ಸೈರಿಸಲಾರೆನೊ", "ಯಾಕೆ ಕಡೆಗಣ್ಣಿಂದೆ ನೋಡುವೆ", "ಇನ್ನೂ ದಯಬಾರದೆ ದಾಸನ ಮೇಲೆ" ಮೊದಲಾದ ಕೀರ್ತನೆಗಳು ವ್ಯಾಕುಲತೆಯನ್ನೂ ಸಮರ್ಥವಾಗಿ ಚಿತ್ರಿಸುತ್ತದೆ.

ಅವರ ಪ್ರಾಸನಿರ್ವಹಣರೀತಿಯೂ ಅದ್ಭುತವಾದದ್ದು. ಮನಸ್ಸಿಗೆ ನೇರವಾಗಿ ನಾಟುವಂತೆ ಅವರು ಪ್ರಾಸಮಯವಾಗಿ ಬರೆಯುತ್ತಾರೆ.

ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ
ಹಡೆದವಳ ಎದೆಗೊರಳ ಕೊಯ್ವಂಥ ಚೂರಿ.

ತನುವ ಖಂಡಿಸಿ ಒಮ್ಮೆ ಮಾಣೋ
ಮನವ ಶೋಧಿಸಿ ಪರಮಾತ್ಮನ್ನ ಕಾಣೋ
ಕೊನೆಗೆ ನಿನ್ನೊಳಗೆ ನೀ ಜಾಣೋ
ನಿನಗೆ ಮುಕ್ತಿ ದೂರಿಲ್ಲವೊ ಒಂದೆ ಗೇಣೋ
(ಜಾಣೋ – ಜಾಣಿಸು. ಜಾನಿಸು, ಧ್ಯಾನಿಸು).

ದುರ್ಬುದ್ಧಿಗಳನೆಲ್ಲ ಬಿಡಿಸೋ
ಕರುಣಕವಚವೆನ್ನ ಹರಣಕ್ಕೆ ತೊಡಿಸೋ
ಚರಣಸೇವೆ ಎನಗೆ ಕೊಡಿಸೋ (ಅಭಯ)
ಕರ ಪುಷ್ಪವನೆನ್ನಲ್ಲಿ ಮುಡಿಸೋ

ಮೊದಲಿಂದ ಬರಬಾರದೆ ನಾ ಬಂದೆ
ಇದರಿಂದ ಗೆದ್ದು ಪೋಗುವುದು ಕಾಣೆ ಮುಂದೆ
ತುದಿಮೊದಲಿಲ್ಲದೆ ಪರರಿಂದ ನೊಂದೆ
ಪದುಮನಾಭನೆ ತಪ್ಪು ಕ್ಷಮೆಮಾಡು ತಂದೆ

ವಿವರಣಶೀಲತೆ ಪುರಂದರದಾಸರ ಇನ್ನೊಂದು ವೈಶಿಷ್ಟ್ಯ. ಬಳಸಿದ ಶಬ್ದ ಗಳಿಗೆ ಸರಿಯಾದ ಅರ್ಥ ವಿವರಣೆಯನ್ನೂ ಅವರು ನಿರಾಯಾಸವಾಗಿ ಕೊಡುತ್ತ ಹೋಗುತ್ತಾರೆ. ಮನಸ್ಸು ಎಂಬ ಶಬ್ದ ಬಂದಕೂಡಲೆ 'ಹುಚ್ಚು ಕುನ್ನಿ ಮನಸ್ಸಿನ ಸಂಚಾರಿ ಬುದ್ಧಿ' ಯನ್ನು ಅವರು ಪ್ರಸ್ತಾಪಿಸುತ್ತಾರೆ. ಸಾಧನೆಯ ಸ್ವರೂಪವನ್ನು ಅವರು

'ನವರಂಧ್ರಗಳ ಕಟ್ಟು
ನೀ ನಡೆವ ದಾರಿಯ ಮುಟ್ಟು
ಕವಿದ ಕಾಮಕ್ರೋಧಗಳ ಮೆಟ್ಟು
ರವಿಮಂಡಲ ಮುಟ್ಟು'

ಎಂದು ವಿವರಿಸುತ್ತಾರೆ. ಮಾನವನಲ್ಲಿ ಅವರು ಅರಸುವುದು.

1. ಹಣ್ಣಿನಂತಹ ಲಕ್ಷಣ
2. ಒಡಲನೆ ಕಟ್ಟಿ ಒಬ್ಬರಿಗಿಡುವ ಗುಣ
3. ಸಮುದ್ರ ಗಾಂಭೀರ್ಯ
4. ಚಿತ್ತಶುದ್ಧಿ
5. ಭಾವಶುದ್ಧಿ

ದೇಹವನ್ನು ಅವರು 'ಎಲು ರಕ್ತಮಾಂಸಗಳ ಮೇಲೆ ಚರ್ಮದಾ ಹೊದಿಕೆ' ಎಂದೂ ಸೋರುವುದೊಂಬತ್ತು ದ್ವಾರದಿಂದಲಿ ಮಲನೀರಿಲ್ಲದಿದ್ದರೆ ನಾರುವ ದೇಹ...' ಎಂದೂ ವ್ಯಾಖ್ಯಾನಿಸುತ್ತಾರೆ. 'ಕಲಿಯುಗ ಮಹಿಮೆಯು ಕಾಣಬಂತೀಗ' ಎಂಬ ಕೀರ್ತನೆಯಲ್ಲಿ ಈ ಯುಗದ ಸ್ವರೂಪವನ್ನು ಎಂಟು ಮಾತುಗಳಲ್ಲಿ ಲಕ್ಷಣಿಸುತ್ತಾರೆ :

ಕಲಿಯುಗ ಮಹಿಮೆಯು ಕಾಣಂತೀಗ...

1. ಹೀನ ನುಡಿಯ ನುಡಿವರು
2. ಗುರು ಹಿರಿಯರ ದೂಷಣೆ ಮಾಡುವರು
3. ಪಟ್ಟದರಸಿಯ ಬಿಟ್ಟು ಪರಸತಿಯ ಬಯಸುವರು
4. ಕೊಟ್ಟ ಸಾಲವ ನುಂಗಿಕೊಳಲೆಣಿಪರು
5. ಭಾಷೆಗೊಟ್ಟು ಮೋಸ ಗೈವರು
6. ಕಂಡುದ ಹೇಳದೆ ಕಾಣದುದ ಹೇಳುವರು
7. ಉಂಡ ಮನೆಗೆ ಎರಡು ಬಗೆವರು
8. ಇಲ್ಲದ ಅನಾಥರಿಗೆ ಇಪ್ಪೊಂದನಿಕ್ಕರು.

'ನರನಾದ ಮೇಲೆ ಹರಿನಾಮ ಜಿಹ್ವೆಯೊಳಿರಬೇಕು' ಎಂದು ಅವರು ವ್ಯಾಖ್ಯಾನಿಸುತ್ತಾರೆ. ವಿಧಿ ನಿಷೇಧ ಎಂಬ ಎರಡು ಶಬ್ದಗಳ ವಿವರಣೆ ನೀಡುತ್ತಾ 'ವಿಧಿ ನಿನ್ನ ಸ್ಮರಣೆ, ನಿಷೇಧ ವಿಸ್ಮೃತಿ' ಎನ್ನುತ್ತಾರೆ. ದಶಾವತಾರದ ಚಿತ್ರಣದಲ್ಲಂತೂ ಈ ವಿಶ್ಲೇಷಣೆ ಅಪೂರ್ವ ಕಾವ್ಯಗುಣದಿಂದ ಆಪ್ತವಾಗುತ್ತದೆ. ವಿಷ್ಣುಕೂಡ ಅವರ ವ್ಯಾಖ್ಯೆಯಲ್ಲಿ 'ಹಾಸಿಕಿಲ್ಲದೆ ಹಾವಿನ ಮೇಲೊರಗಿದವ' ಈತನ ಹತ್ತು ಅವತಾರಗಳಲ್ಲಿ ಒಂದೊಂದೂ ಪುರಂದರದಾಸರ ವಿಶಿಷ್ಟ ವ್ಯಾಖ್ಯಾನಕ್ಕೆ ಸಿಕ್ಕಿದೆ. ಮತ್ಸ್ಯ ಅವತಾರದ ವ್ಯಕ್ತಿ ಮತ್ಸ್ಯ ತಾನೇ. ಈ ಮತ್ಸ್ಯದ ಗುಣಗಳೆಲ್ಲ ಬಾಲಕೃಷ್ಣನಲ್ಲಿವೆ. ಜಲಚರ (ಮೀನು)ದಂತೆ ಕೃಷ್ಣ ರೆಪ್ಪೆ ಅಲುಗಿಸದೆ ಇರಬಲ್ಲ. ನೀನು ಕಣ್ಣುಬಿಟ್ಟರೆ (= ಮತ್ಸ್ಯಾವತಾರ) ನಾನು ಅಂಜುವುದಿಲ್ಲ ಎನ್ನುತ್ತಾರೆ ಕವಿ. ರೆಪ್ಪೆ ಮುಚ್ಚದಿರುವುದೂ ಕೃಷ್ಣನ ಮತ್ಸ್ಯಾವತಾರದ ನೆನಪನ್ನೇ ತರುತ್ತದೆ ಕವಿಗೆ. ಕೃಷ್ಣ ನಿದ್ರೆಮಾಡದಿರುವುದನ್ನು "ಬಿಟ್ಟ ಕಂಗಳ ಮುಚ್ಚಲೊಲ್ಲನೆ" "ಕಂದನೇಕೆ ಕಣ್ಣುಮುಚ್ಚನೆ ?" ಎಂಬ ಮಾತಿನಲ್ಲಿ ಸಹಜವಾಗಿ ಈ ಧ್ವನಿಯಲ್ಲಿ ಹೊರಡಿಸಿಬಿಡುತ್ತಾರೆ. ಮತ್ಸ್ಯ ಜಲವಾಸಿತಾನೆ. ಆದರೆ ಕೃಷ್ಣ ? ಮನೆ ಸಿಕ್ಕದೆ ಸಮುದ್ರದಲ್ಲಿ ವಾಸಿಸುತ್ತಿರಬಹುದೆ ? – ಎಂದು ಪ್ರಶ್ನಿಸುತ್ತಾರೆ. ಅಥವಾ ಅವರನ್ನು ಬೇಡುವ ಕಾಡುವ ಭಕ್ತರ ಕಾಟದಿಂದ ಪಾರಾಗಲು ಅಂಜಿ ಓಡಿ ನೀರಿನಲ್ಲಿ ಸೇರಿಕೊಂಡಿರಬಹುದು. ಬಾಲಕೃಷ್ಣ ಮತ್ಸ್ಯಾವತಾರದಲ್ಲಿ ಮೀನಿನಲ್ಲಿ ಮುಳುಗಿದ್ದವನು. ಆ ಹಳೆಯ ನೆನಪಿನಿಂದ ನೀರೊಳು ಮುಳುಗಿ "ನನ್ನ ಮೈ ಒರಸು" ಎಂದು ಅವನನ್ನು ಬೇಡುತ್ತಾನಂತೆ ! ಪುರಂದರರ ಭಕ್ತರೂ ಸಣ್ಣವರೇನಲ್ಲ "ನೀರ ಪೊಕ್ಕರುಬಿಡೆ"ಎಂದು ದೇವರನ್ನು ಹಿಡಿಯಲು ಹೋಗುವವರೇ.

ಕೂರ್ಮಾವತಾರವೂ ದಾಸರಿಗೆ ಪ್ರಿಯವಾದದ್ದೇ. ವಿಷ್ಣು 'ಬೆಟ್ಟದಡಿಗೆ ಬೆನ್ನು ಕೊಟ್ಟ' ಧೀರನಂತೆ ಕಾಣುತ್ತಾನೆ. ಕೃಷ್ಣ ಏನು ಮಾಡಿದರೂ 'ಮೊಲೆಯುಣ್ಣನಮ್ಮ' ಎಂಬ ಮಾತಿನಲ್ಲಿ ಸಸ್ತನಿವರ್ಗಕ್ಕೆ ಸೇರದ ಕೂರ್ಮದ ಪ್ರಸ್ತಾಪವನ್ನು ಮಾಡಿದ್ದಾರೆ. 'ಹೊರು ಕಲ್ಲ ಕೃಷ್ಣ' ಎಂಬ ಜೀತಕ್ಕೆಳೆಯುವ ಮಾತಿನಲ್ಲೂ ಕೂರ್ಮಾವತಾರದ ಧ್ವನಿಯಿದೆ. ಆಮೆ ಚಿಪ್ಪನ್ನು ಒಳಗೆಳೆದುಕೊಂಡು ಹುದುಗುವ ಸ್ವಭಾವದ್ದುತಾನೆ. ಅದಕ್ಕೆ ಗೂನು ಬೆನ್ನಿರುವುವೂ ಸಹಜವೇ. ಆ ಎರಡನ್ನೂ ನೆನಪಿಸುವಹಾಗೆ "ಹೇಡಿಯ ತೆರದಲಿ ಮೋರೆಯತೋರದೆ', "ಮುಟ್ಟಗೊಡ ಬೆನ್ನ ಮುಳ್ಳ" ಎಂದು ಕೃಷ್ಣಲೀಲೆಯೊಂದಿಗೆ ಸಮೀಕರಿಸಿದ್ದಾರೆ. ಕೃಷ್ಣನನ್ನು "ಚೆಲುವನೆಂಬೆನೆ ಬೆನ್ನಗುಬುಟು" ಎಂದು ವಿನೋದವಾಡಿ ಗೂನಣ್ಣ ಬಲುಗೂನಣ್ಣ ಗಿರಿಯ "ಹ್ಯಾಂಗೆ ನೀ ಹೊತ್ತ್ಯಣ್ಣ ?" ಎಂದು ಪ್ರಶ್ನಿಸುತ್ತಾರೆ. ವರಾಹ (ಹಂದಿ) ಗುರುಗುರಿಸುವುದನ್ನು ನೆನಪಿಸುವ ಹಾಗೆ ಬಾಲಕೃಷ್ಣನನ್ನು "ಇಷ್ಟು ಗಂಟಲೊಳು ಗುರುಗುರುಗುಟ್ಟಿತೇ" ಎಂದು ಕೇಳುತ್ತಾರೆ. ಹೀಗೆ ಎಲ್ಲ ಅವತಾರಗಳ ವಿಶಿಷ್ಟ ಚರ್ಯೆಗಳನ್ನೂ ಎಳೆಎಳೆಯಾಗಿ ಬಿಡಿಸಿ ತೋರಬಲ್ಲ ಶಿಲ್ಪ ಜಾಣ್ಮೆ ಅವರದು. ಮುಖವನ್ನು ಮೇಲೆತ್ತದೆ ಮುಖವಡಿಯಾಗಿ ಮಲಗಿದ ಕೃಷ್ಣನನ್ನು "ತುಟುಕು (=ಸ್ವಲ್ಪವಾದರೂ) ಮುಖ ಮೇಲಕೆತ್ತನಮ್ಮ" ಎಂದು ವರ್ಣಿಸಿ

ಭೂಮಿಯನ್ನು ತನ್ನ ದಾಡೆಯಿಂದ ಎತ್ತಿ ಹಿಡಿದು ಮುಖಕೆಳಗೆ ಮಾಡಿದ್ದ ವರಾಹಾವತಾರದ ನೆನಪು ಮಾಡುತ್ತಾರೆ. ಕೃಷ್ಣ ಮಣ್ಣುತಿನ್ನುವುದು, ಮಣ್ಣನಗೆದು ಬೇರ ತಿನ್ನುವುದು, ಊರು ಅಡವಿಯೊಳಗಿರುವುದು ಇವೆಲ್ಲ ಪೂರ್ವಜನ್ಮದ ವರಾಹಾವತಾರದ ಮಧುರ ನೆನಪುಗಳಾಗುತ್ತವೆ. 'ಬಾಯಿ ಮುಚ್ಚನಮ್ಮ' 'ತೆರೆದ ಬಾಯಿ ಮುಚ್ಚಲಿಲ್ಲ' 'ಬೂಟಕತನದಿ ಬಾಯ್ತೆರೆದು ಅಂಜಿಸಿದ' – ಇಂಥ ಮಾತುಗಳು ನರಸಿಂಹಾವತಾರದ ಸ್ಮೃತಿಗಳನ್ನು ಹೊತ್ತು ತರುತ್ತದೆ. ಭಕ್ತರಿಗೆ ಕಾಣಿಸಿಕೊಳ್ಳದ ದೇವರು ನರಸಿಂಹನಂತೆ ತಗಾದೆ ಮಾಡುತ್ತ "ಕೊಟ್ಟ ಸಾಲವಕೊಡದೆ ಇರುಳು ಹಗಲು ಕಾಣಿಸಿಕೊಳ್ಳುತ್ತಾನೆ". ಕೃಷ್ಣ ಎತ್ತರದ ನೆಲುವಿನಲ್ಲಿದ್ದ ಹಾಲನ್ನು ಎಟುಕಿಸಿಕೊಳ್ಳುವುದನ್ನು ನೋಡಿ "ಗಿಡ್ಡನಾಗಿ ಬೆಳೆದು ಅಳೆವುದೇನು ನ್ಯಾಯವೆ?"ಎಂಬಲ್ಲಿ ವಾಮನಾವತಾರದ ದಟ್ಟನೆನಪು ಮೂಡುತ್ತದೆ. ಮಲಗಿದ ಹುಡುಗನಿಗೆ ನೋವಾದ ಬಗೆಯೂ ಅತಿ ಚಮತ್ಕಾರಿಕ – ಅದ್ಭುತ. "ನೆಲನನಳೆದು ಪುಟ್ಟ ಬೆರಳು ನೊಂದು" ಆ ಹುಡುಗ ಅಳುತ್ತಿದ್ದಾನಂತೆ ! 'ಅಣುರೂಪದವನಿವ ನಿಲುವುಳ್ಳ ನರನಲ್ಲ' ಎಂದೂ "ನೆಲವನಳೆದವಗೆ ಕಾಲಕಿರುಗೆಜ್ಜೆಯೇಕೆ ?" ಎಂದೂ ದಾಸರು ಹಾಸ್ಯಮಾಡುತ್ತಾರೆ. "ಪೆತ್ತ ತಾಯ ಕಂಡರೆ ಸೇರಲೊಲ್ಲನೆ 'ತನ್ನ ಜನನಿಯ ಕಂಡರೆ ಸೇರನೆ' ಎಂಬ ಮಾತಿನ ಹಿನ್ನೆಲೆಯಲ್ಲಿ ತಾಯನ್ನೇ ಕಡಿಯಲು ಹೋದ ಪರಶುರಾಮಾವತಾರವನ್ನು ಸುಲಭವಾಗಿ ಜ್ಞಾಪಿಸುತ್ತಾರೆ. ಹುಡುಗನ ಚೇಷ್ಟೆಕಂಡು ಯಾರೋ ಅವನಿಗೆ ಬುದ್ಧಿಯಿಲ್ಲ ಎಂದು ಆಡಿಕೊಂಡರೆ ಬಾಲಕ ಸಿಟ್ಟಿನಿಂದ ಕೂಡಲೇ 'ಕೈಲಿ ಕೊಡಲಿಯ ಪಿಡಿದ' ನಂತೆ ! ಮಗು ದೊಡ್ಡವರನ್ನು ಹೊಡೆಯಲು ಬಂದರೆ ಅವರು ಭಯ ನಟಿಸುತ್ತ "ರಾಮಣ್ಣ, ಬಡಿಬ್ಯಾಡಣ್ಣ, ರಾಯನೊಬ್ಬನಿಲ್ಲಣ್ಣ" ಎಂದು ಪರಶುರಾಮಾವತಾರವನ್ನು ನೆನಪಿಸುತ್ತಾರೆ. ಹೀಗೆ ಎಲ್ಲ ಅವತಾರಗಳನ್ನೂ ಬಾಲ ಲೀಲೆಗಳ ಹಿನ್ನೆಲೆಯಲ್ಲಿ ವಿವರಿಸುತ್ತಾರೆ. ಅಷ್ಟಾಗಿ ಪ್ರಚಲಿತವಿಲ್ಲದ ಬೌದ್ಧಾವತಾರ ಮತ್ತು ಕಲ್ಕ್ಯವತಾರಗಳನ್ನು ವಿವರವಾಗಿ ವರ್ಣಿಸಿದ್ದಾರೆ. ಮಗು ತುಂಬ ಮಾತಾಡುತ್ತದೆ. "ಅತ್ಯಂತ ಮಾತುಗಳನಾಡಿದನಮ್ಮ" ಎಂಬ ಮಾತಿನ ಹಿನ್ನೆಲೆಯಲ್ಲಿ ಬೌದ್ಧಾವತಾರದಲ್ಲಿ ವಿಷ್ಣುವು ಬಹಳ ರಮ್ಯವಾದ ಮಾತಿನಲ್ಲಿ ತ್ರಿಪುರ ದೈತ್ಯರ ಪತ್ನಿಯರನ್ನು ಮರುಳುಗೊಳಿಸಿ ಅವರ ಪಾತಿವ್ರತ್ಯಭಂಗಮಾಡಿ ರಾಕ್ಷಸರ ಬಲವನ್ನು ಕುಂದಿಸಿ ಅನಂತರ ಕೊಂದ ಘಟನೆ ಮರುಕೊಳಿಸುತ್ತದೆ. ಪಟ್ಟೆ ಪೀತಾಂಬರ ಉಟ್ಟುಕೊಳ್ಳದೆ "ನೀ ಬತ್ತಲೆ ತಿರುಗಲೇಕೋ" "ಬತ್ತಲಿರುವುದೇನು ಅವಗೆ ನಾಚಿಕಿಲ್ಲವೆ" ಈ ಸಾಲುಗಳು ಬೌದ್ಧಾವತಾರಕ್ಕೆ ಸಂಬಂಧಿಸಿವೆ. ಕೃಷ್ಣನು ಆಟದ ಕುದುರೆಯೇರಿ ಸವಾರಿ ಮಾಡುವುದನ್ನು ವಿವರಿಸುವ "ಪುಟ್ಟ ಕುದುರೆಯೇರಿ ಕಲ್ಕಿರೂಪನಾಗಿ ಬಾರೊ" "ದಿಟ್ಟ ತೇಜಿಯನೇರಪ್ಪ" "ಉತ್ತಮ ತೇಜಿಯ ಹತ್ತೇನೆಂದಳುತಾನೆ" ಮಾತುಗಳೂ ಹೇರಳವಾಗಿವೆ. ಒಂದು ಮಗುವನ್ನು ಪ್ರತಿಮೆಯಾಗಿ ಇಟ್ಟುಕೊಂಡು ಅದರ ಸುತ್ತ ಎಂಥೆಂಥ ಚೆಲುವಾದ ಕಲ್ಪನೆಗಳನ್ನು ಬೆಳೆಸಬಹುದೆಂಬುದಕ್ಕೆ ಪುರಂದರ

'ದಶಾವತಾರದ ಪದ'ಗಳು ಉತ್ತಮ ನಿದರ್ಶನವಾಗಬಲ್ಲವು. ಅದ್ಭುತ ಚಿತ್ರಗಳ ವಿವರಣೆಗೆ ಇದಕ್ಕಿಂತ ಸೊಗಸಾದ ಪ್ರತಿಮೆ ಸಿಕ್ಕುವುದು ಸಾಧ್ಯವಿಲ್ಲವೆನ್ನುವುದೂ ನಿಜ. ಆದರೆ ಅದನ್ನು ಪುರಂದರರು ಶೋಧಿಸಿ ದುಡಿಸಿಕೊಂಡಿರುವ ಬಗೆ ಕಾವ್ಯ ಮಯವಾಗಿದೆ.

ಜಾನಪದ ಸತ್ತ್ವದಿಂದ ಮೆರೆಯುವ ಪುರಂದರ ಕವಿತೆಗಳಲ್ಲಿ ಕಾವ್ಯದ ಶೋಭೆ ಯನ್ನು ಹೆಚ್ಚಿಸುವ ಗಾದೆಗಳ ಭಂಡಾರವೇ ಇದೆ. ಈ ಗಾದೆಗಳನ್ನೆಲ್ಲ ತಮ್ಮ ಕೀರ್ತನೆಯ ಭಾವವಿಕಾಸಕ್ಕೆ ಅವರು ತುಂಬ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಭಕ್ತನ ಒಳವೇದನೆಯನ್ನು ವಿವರಿಸಲು ಅವರು "ಗುದ್ದಿದವನೆ ಬಲ್ಲ ಗುದ್ದಿಸಿ ಕೊಂಡವನೆ ಬಲ್ಲ" ಎಂಬ ಗಾದೆಯನ್ನು ಪ್ರಾಸಂಗಿಕವಾಗಿ ಬಳಸುತ್ತಾರೆ. "ನಗುವ ವರಿಗೆ ನಾಲ್ಕು ನಾಲಗೆಯಾದರೆ ಏನು ಗತಿ ?" ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಭಕ್ತಿಯ ಗಾಳಿ ಬೀಸುತ್ತಿರುವಾಗ ಅದನ್ನು ಬಳಸಿಕೊಳ್ಳುವುದು ಎಲ್ಲರ ಜವಾಬ್ದಾರಿ ಎಂಬುದನ್ನು "ಗಾಳಿ ಬಂದ ಸಮಯದಲ್ಲಿ ತೂರಿಕೊಳ್ಳಿರೋ" ಎಂಬ ಕೃಷಿಲೋಕದ ಗಾದೆಯಿಂದ ವಿವರಿಸುತ್ತಾರೆ. ಜನರ ವಿನಯಶೀಲತೆ ಹೇಗಿರಬೇಕೆಂದು ವರ್ಣಿಸುವ ಸಂದರ್ಭದಲ್ಲಿ "ಬಿಲ್ಲಾಗಿ ಇರಬೇಕು ಬಲ್ಲವರ ಎದುರು" ಎಂಬ ಗಾದೆಯ ನೆರವನ್ನು ಪಡೆದುಕೊಳ್ಳುತ್ತಾರೆ. ಜನರ ಮೇಲು ಮಾತಿಗೂ ಒಳಮನಸ್ಸಿಗೂ ನಡುವೆ ದೊಡ್ಡ ಕಂದಕ ಇರುವುದನ್ನು "ತುದಿ ನಾಲಗೆ ಬೆಲ್ಲ, ಎದೆ ಕತ್ತರಿ" "ಇಕ್ಕಲಾರೆ ಕೈ ಎಂಜಲು" "ಮರುಳು ತನವು ಮಾತಿನಲ್ಲಿ, ಹೃದಯದಲ್ಲಿ ಘುಟಿಕೆ" ಮೊದಲಾದ ಗಾದೆಗಳು ಸಮರ್ಥವಾಗಿ ಧ್ವನಿಸುತ್ತವೆ.

ಹಣದ ಬಗೆಗೆ ಪುರಂದರ ಚಿಂತನೆಗಳನ್ನು "ಸಾಲ ಮಾಡಬೇಡ, ಸಾಲದು ಎನಬೇಡ, ನಾಳೆಗೆ ಇಡಬೇಡ", "ಬಿದ್ದು ಹೋಗೊ ರೊಕ್ಕವ ಸುಡು ನೀನಕ್ಕ", "ರೊಕ್ಕ ಎರಡಕ್ಕು ದುಃಖ ಕಾಣಕ್ಕ" "ವೆಚ್ಚಕಿಲ್ಲದ ಹಣವು ವ್ಯರ್ಥವಾದರೇನು ?" ಎಂಬ ಗಾದೆಗಳು ವಿವರಿಸುತ್ತವೆ. ವಿಷ್ಣುವನ್ನು ಬಿಟ್ಟು ಚಿಲ್ಲರೆ ದೈವಗಳನ್ನು ಹಿಂಬಾಲಿಸು ವವರನ್ನು ಕಂಡು "ತುಳಸಿಯಿರಲು ತುಳಚಿಯನ್ನು ತರುವಿರೋ ?" ಎಂದು ಹಾಸ್ಯ ಮಾಡುತ್ತಾರೆ. ನಿಶ್ಚಿತ ಗುರಿಯಿಲ್ಲದೆ ಬರಿದೆ ಮಾತನಾಡುವವರನ್ನು ಅಣಕಕ್ಕೆ ಗುರಿ ಮಾಡಿ "ಹೋಗದೂರಿನ ದಾರಿ ಕೇಳಿ ಮಾಡುವುದೇನು ?" ಎಂಬ ಗಾದೆಯ ಸಹಾಯದಿಂದ ವಿವರಿಸುತ್ತಾರೆ. ಒಮ್ಮೆ ಮಾನ ಹೋದ ಮೇಲೆ ಸತ್ಕಾರ ಮಾಡಿದರೂ ಅದು "ತೊಗಲ ಮೂಗ್ಹರಿದು ಚಿನ್ನದ ಮೂಗನಿತ್ತಂತೆ" ಆಗುತ್ತದಂತೆ ! ಸಂಕಲ್ಪ ಸಾಧನೆಗೆ ಮನಸ್ಸಿನ ಗಟ್ಟಿತನವೂ ಅಗತ್ಯ ಎಂಬುದನ್ನು ವಿವರಿಸುವಾಗ ಆ ಸಾಮರ್ಥ್ಯ ಇಲ್ಲದಿದ್ದರೆ "ಹಣ್ಣಾದ ಹೊತ್ತು ಬಾಯ್ ಹುಣ್ಣಾದ ತೆರನಂತೆ" ಆಗುತ್ತದೆಂದು ಎಚ್ಚರಿಸುತ್ತಾರೆ. "ನೀ ಡೊಂಕಾದರೆ ನಿನ್ನ ನಾಮಡೊಂಕೆ ವಿಠಲ" "ಪಾಪಿ ಬಲ್ಲನೆ ಪರರ ಸುಖದುಃಖವ" ಮೊದಲಾದ ಕೀರ್ತನೆಗಳನ್ನು ಸಂಪೂರ್ಣವಾಗಿ ಗಾದೆಯ ರೂಪದ ಹೇಳಿಕೆಗಳಿಂದಲೇ ವಿವರಿಸುತ್ತ ಹೋಗಿದ್ದಾರೆ. ತಮ್ಮಂಥ ಸರಳ ಜೀವಿ

ಗಳಿಗಿಂತಲೂ ದುಷ್ಟರೇ ಬೇಗ ದೇವರನ್ನು ಒಲಿಸಿಕೊಳ್ಳುತ್ತಾರೆಂಬುದನ್ನು "ಕೊಂಕಣಿಗರ ಎಮ್ಮೆಗೆ ಕೊಡತಿಯೇ ಮದ್ದು" ಎಂಬ ಗಾದೆಯ ಮೂಲಕ ಚಿತ್ರಿಸುತ್ತಾರೆ.

ಶ್ಲೇಷೆಯ ಉಕ್ತಿಗಳು, ಚಮತ್ಕಾರೋಕ್ತಿಗಳು, ಬಳಸುಮಾತುಗಳು. ಅನ್ಯೋಕ್ತಿ ವ್ಯಂಗ್ಯೋಕ್ತಿಗಳು ದಾಸರ ಪದಗಳಲ್ಲಿ ಅಸಂಖ್ಯ ಪ್ರಮಾಣದಲ್ಲಿ ವಿಜೃಂಭಿಸಿವೆ.

ರಾಗಿ ತಂದೀರಾ ಭಿಕ್ಷಕೆ
ರಾಗಿ ತಂದೀರಾ ?

ಇಲ್ಲಿ ದಕ್ಷಿಣಕರ್ನಾಟಕದ ಮುಖ್ಯ ಆಹಾರಗಳಲ್ಲಿ ಒಂದಾದ 'ರಾಗಿ'ಯನ್ನು ಕುರಿತ ಪ್ರಶ್ನೆಯಿಂದ ಈ ಕವಿತೆ ಆರಂಭವಾಗುತ್ತದೆ. ನಾಮಪದವನ್ನು ಕ್ರಿಯಾರೂಪಕ್ಕೆ ತಿರುಗಿಸಿ ಹೆಚ್ಚಿನ ಅರ್ಥವಂತಿಕೆ ಕಾಣಿಸಿರುವುದು ಈ ಪದದ ವೈಶಿಷ್ಟ್ಯ. ರಾಗಿ ಎಂಬ ಶಬ್ದದ ಹಿಂದಾಗಲಿ ಅಥವಾ ಮುಂದಾಗಲಿ ಕೆಲವು ಶಬ್ದಗುಚ್ಛಗಳನ್ನಿರಿಸಿದರೆ ಅವು ಹೊಸಹುಟ್ಟು ಪಡೆಯುತ್ತವೆ.

"ಆರು ಮಾರ್ಗವ ಅರಿತವರಾಗಿ
ಮೂರುಮಾರ್ಗವ ತಿಳಿದವರಾಗಿ
ಭೂರಿತತ್ತ್ವವ ಬೆರೆದವರಾಗಿ
ಕ್ರೂರರ ಸಂಗವ ಬಿಟ್ಟವರಾಗಿ

ಕಾಮಕ್ರೋಧವ ಅಳಿದವರಾಗಿ
ನೇಮ ನಿತ್ಯವ ಮಾಡುವರಾಗಿ
ಆ ಮಹಾ ಪದವಿಯ ಸುಖಿಸುವರಾಗಿ
ಪ್ರೇಮದಿ ಕುಣಿ ಕುಣಿದಾಡುವರಾಗಿ

'ಗಿಳಿಯು ಪಂಜರದೊಳಿಲ್ಲ' ಎಂಬ ಕವಿತೆ ಶ್ಲೇಷೆ ಅನ್ಯೋಕ್ತಿ ಮೊದಲಾದ ಯಾವ ಆಲಂಕಾರಿಕ ಶಬ್ದಗಳನ್ನು ಒಲ್ಲದೆ, ಸಹಜವಾಗಿ ಎರಡು ಮೈಗಳನ್ನು ಒಡೆದು ಕೊಳ್ಳುತ್ತ ಸಾಗುತ್ತದೆ. 'ಗಿಳಿಯು ಪಂಜರದೊಳಿಲ್ಲ' ಈ ಮಾತು ಅವರ ಮಗಳ ಸಾವಿನಿಂದ ವ್ಯಗ್ರಗೊಂಡ ಸಮಯದಲ್ಲಿ ದಾಸರು ರಚಿಸಿದ್ದೆಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಮಗಳ ಸಾವು, ಸಾಕಿದ ಮಗನ ಸಾವು, ಗೆಳೆಯರ, ಜನರ ಸಾವು ಯಾವುದೇ ಈ ಪ್ರಚೋದನೆ ನೀಡಿರಲು ಸಾಧ್ಯ. ಅಥವಾ ದೇಹದ ಗೂಡೊಳಗೆ ಸೇರುವ ಯಾವುದೇ ಆತ್ಮದ ಬಗೆಗೆ ಇವರು ಚಿಂತಿಸಿದ್ದಾರೆ ಎನ್ನಬಹುದು. ಅಥವಾ ಅಂತಃಪುರದ (ಶ್ರೀಮಂತ ಮನೆತನದ) ಸ್ತ್ರೀಯೊಬ್ಬಳು ನಡೆದ ಘಟನೆಯನ್ನೇ ಸಖಿಗೆ ವಿವರಿಸುತ್ತಾ ಕೊನೆಗೆ ಶ್ಲೇಷೆಯನ್ನಾಶ್ರಯಿಸಿರಬಹುದು. ಇಲ್ಲಿ ಬರುವ ಗಿಳಿಯ ಪ್ರತಿಮೆ ತನ್ನ ಚೌಕಟ್ಟಿನ ಪರಿಭಾಷೆಯನ್ನೇ ಭದ್ರವಾಗಿ ಆಶ್ರಯಿಸುತ್ತ ಅತ್ಯಂತ ಗಂಭೀರವಾದ ವಿಷಯ ಚಿಂತನದ ಕಡೆ ನಮ್ಮನ್ನು ಎಳೆದೊಯ್ಯುತ್ತದೆ. ಭಾಷೆ

ಬಲು ಸರಳವಾಗುತ್ತ ವರ್ಣಿತ ವಸ್ತುವನ್ನು ತುಂಬ ಜಟಿಲವಾಗಿಸುತ್ತ ಸಾಗಿರುವುದು ಈ ಕೀರ್ತನೆಯ ವೈಶಿಷ್ಟ್ಯ. ಮಕ್ಕಳ ಹಾಡಿನ ಪುಸ್ತಕಗಳಲ್ಲೂ ಸೇರುವಷ್ಟು ಸರಳ ವಾಗಿದೆ ಈ ಕೀರ್ತನೆ :

ಗಿಳಿಯು ಪಂಜರದೊಳಿಲ್ಲ
ಹರಿಹರಿಯೆ ಬರಿಯ ಪಂಜರವಾಯಿತಲ್ಲ

ತಾನಿಲ್ಲದಾಗ ಗಿಳಿ ಹಾರಿಹೋದ ಸುದ್ದಿ ಬಂದು ಈ ಕವಿತೆಯ ನಾಯಕಿ ಪಂಜರದ ಎಡೆಗೆ ಧಾವಿಸುತ್ತಾಳೆ. ಅದೀಗ ಗಿಳಿ ಇಲ್ಲದ ಪಂಜರ. 'ಬರಿಯ' ಪಂಜರ ಎಂಬ ಮಾತು ಚೈತನ್ಯದಾಯಕ ವಸ್ತು ಇಲ್ಲದ ಮೇಲೆ ಗೂಡಿಗೆ ಬೆಲೆಯಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಗಿಳಿ ಆತ್ಮವಾಗಿ ಪಂಜರ ಶರೀರವಾಗಿ ಸಹಜವಾಗಿ ಧ್ವನಿತ ವಾಗುತ್ತವೆ.

ಅಕ್ಕ ನಿನ್ನ ಮಾತು ಕೇಳಿ
ಚಿಕ್ಕದೊಂದು ಗಿಣಿಯ ಸಾಕೆ
ಅಕ್ಕ–ನಾನಿಲ್ಲದ ವೇಳೆ
ಬೆಕ್ಕುಕೊಂಡು ಹೋಯಿತಯ್ಯೋ

ನಾಯಕಿ ಈ ಮಾತನ್ನು ಒಬ್ಬಳು ಆಪ್ತಳಾದ ಸಖಿಗೆ ಹೇಳುತ್ತಿದ್ದಾಳೆ. ಇದು ಒಂದು ಸಾರ್ವತ್ರಿಕ ಸಂಬೋಧನೆಯ ಅಥವಾ ಆತ್ಮ ಸಂಬೋಧನೆಯ ಪದವೂ ಆಗುತ್ತದೆ. ಇಲ್ಲಿ ಗಿಳಿಯನ್ನು ಸಾಕುವುದು ಒಂದು ಜೀವವನ್ನು ಪೋಷಿಸಿದ ಸಂದರ್ಭವನ್ನು ನೆನಪಿಸುತ್ತದೆ. ತಾನು ಇಲ್ಲದಾಗ, ಎಲ್ಲೋ ಹೋಗಿದ್ದಾಗ ಯಮ ಎಂಬ ಬೆಕ್ಕು ತಟಕ್ಕನೆ ನುಗ್ಗಿ ಬಂದು ಪಂಜರದೊಳಗೆ ಬಾಯಿ ಹಾಕಿ ಗಿಳಿಯನ್ನು ಕಚ್ಚಿಕೊಂಡು ಓಡಿಹೋಗಿದೆ. ಸಾವು ಬಂದು ಅಪ್ಪಳಿಸುವ, ಕೌರ್ಯನಡೆಸುವ ಬಗೆಯನ್ನು 'ಬೆಕ್ಕು' ಎಂಬ ಶಬ್ದ ಸಮರ್ಥವಾಗಿ ಧ್ವನಿಸುತ್ತದೆ.

ದೇಹವನ್ನಾಶ್ರಯಿಸಿದ ಆತ್ಮಕ್ಕೆ ದೇಹದ ಮೂಲಕವೇ ನಾವು ಎಷ್ಟೆಲ್ಲ ಉಪ ಮಾಡುತ್ತೇವೆ ಎಂಬುದು ಮುಂದಿನ ಚಕ್ರಣಗಳಲ್ಲಿ ಚಿತ್ರಗೊಂಡಿದೆ :

ಅರ್ತಿಗೊಂದು ಗಿಳಿಯ ಸಾಕಿದೆ
ಮುತ್ತಿನ ಹಾರವ ಹಾಕಿದೆ
ಮುತ್ತುಕೊಂಡು ಗಿಳಿಯು ತಾನು
ಎತ್ತಲೋಡಿ ಹೋಯಿತಯ್ಯೊ

ಹಸುರು ಬಣ್ಣದ ಗಿಳಿಯು
ಕುಶಲ ಬುದ್ಧಿಯ ಗಿಳಿಯು
ಅಸುವ ಕುಂದಿ ಗಿಳಿಯು ತಾನು
ಹಸನಗೆಡಿಸಿ ಹೋಯಿತಯ್ಯೊ

ಮುಪ್ಪಾಗದ ಬೆಣ್ಣೆಯನ್ನು
ತಪ್ಪದೆ ನಾ ಹಾಕಿ ಸಾಕಿದೆ
ಒಪ್ಪದಿಂದ ಗಿಳಿಯು ಈಗ
ತೆಪ್ಪನೆ ಹಾರಿ ಹೋಯಿತಯ್ಯೋ

ರಾಮ ರಾಮ ಎಂಬ ಗಿಳಿಯು
ಕೋಮಲ ಕಾಯದ ಗಿಳಿಯು
ಸಾಮಜ ಪೋಷಕ ತಾನು
ಪ್ರೇಮದಿ ಸಾಕಿದ ಗಿಳಿಯ

ಈ ಗಿಳಿಯನ್ನು ನಾಯಕಿ ಅದ್ಭುತವಾಗಿ ಸಾಕಿರುವುದು ನಿಜ. ಅದು "ಅಂಗೈಲಿ ಹಾಡುವ ಗಿಣಿ"ಯಾಗಿ "ಮುಂಗೈಲೋದುವ ಗಿಣಿ" ಅರ್ತಿ (ಪ್ರೀತಿ)ಯಿಂದ ಸಾಕಿದ ಗಿಣಿ. 'ಹಸಿರು ಬಣ್ಣದ ಗಿಳಿ' ಎಂಬ ಮಾತು ಅದರ ಚೈತನ್ಯ ಶೀಲತೆಯನ್ನು 'ಕುಶಲ ಬುದ್ಧಿಯ ಗಿಳಿ' ಎಂಬ ಮಾತು ಆ ಗಿಣಿಗೆ ನಾಯಕಿ ಒದಗಿಸಿದ್ದ ಶಿಕ್ಷಣ ಸಂಸ್ಕಾರವನ್ನೂ ಚಿತ್ರಿಸುತ್ತದೆ. 'ಮುಪ್ಪಾಗದ ಬೆಣ್ಣೆ' ಎಂದರೆ ಅದಕ್ಕೆ ವಯಸ್ಸಾಗದಂತೆ ಮಾಡುತ್ತಿದ್ದ ತೈಲ ಸಂಸ್ಕಾರ ಎಂಬರ್ಥ. 'ಮೂರು ಹಾಗದ' ಅಂದರೆ ಮೂರು ಹಣ ಕೊಟ್ಟು ತರಿಸಿದ ಬೆಣ್ಣೆ ಎಂಬರ್ಥವೂ ಘುಸಿಸುತ್ತದೆ. ಈ ಕೋಮಲ ಕಾಯದ ಗಿಳಿಗೆ ಆಕೆ 'ರಾಮ ರಾಮ' ಎನ್ನುವ ಎರಡಕ್ಷರವನ್ನೂ ಉಚ್ಚರಿಸಲು ಕಲಿಸಿದ್ದಳು. ಆದುದರಿಂದ ಅದು ಬರಿ ಆಕೆಯ ಗಿಳಿಯಾಗಿ ಉಳಿದಿರಲಿಲ್ಲ. ಸಾಮಜ ಪೋಷಕ (ಸಾಮಜ = ಆನೆಯನ್ನು, ಪೋಷಕ = ಕಾಪಾಡಿದವ, 'ಗಜೇಂದ್ರ ಮೋಕ್ಷ' ಪ್ರಸಿದ್ಧಿಯ ವಿಷ್ಣು)ನಿಗೂ ಅದರ ಮೇಲೆ ಪ್ರೀತಿ ಇತ್ತು.

ಒಂಬತ್ತು ಬಾಗಿಲ ಮನೆಯು
ತುಂಬಿದ ಸಂದಣಿ ಇರಲು
ಕಂಬ ಮುರಿದು ಡಿಂಬ ಬಿದ್ದು
ಅಂಬರಕ್ಕೆ ಹಾರಿಹೋಯಿತು

ಇಲ್ಲಿ ಕವಲು ಸ್ಪಷ್ಟವಾಗುತ್ತದೆ. ಮನುಷ್ಯನ ಶರೀರ (ಪಂಜರ) ನವದ್ವಾರಗಳ ಒಂದು ಒಡಕು ಮನೆ. 'ಕಂಬ ಮುರಿದು ಡಿಂಬ ಬೀಳುವುದು' ಎಂದರೆ ಪಂಜರ ತೆರೆದು

ಗಿಳಿ (ಆತ್ಮ) ಹಾರಿಹೋಗುವುದು, ಎಂದು ಭಾವ. ಹೀಗೆ ಈ ಕವಿತೆ ಶ್ಲೇಷೆ, ಬೆಡಗು ಗಳೆರಡರ ಸತ್ತ್ವದಿಂದಲೂ ಪುಷ್ಟಿಗೊಳ್ಳುತ್ತ ಸಾಗುತ್ತದೆ. ಕವಿತೆ ಆರಂಭಗೊಂಡಾಗ ಇದ್ದ ದುಃಖದ ತೀವ್ರತೆ ಕ್ರಮ ಕ್ರಮೇಣವಾಗಿ ಜೀವವು ಮುಕ್ತವಾಯಿತೆಂಬ ಧನ್ಯ ಭಾವದೊಂದಿಗೆ ಮುಗಿಯುತ್ತದೆ.

ಪುರಂದರದಾಸರ ರೂಪಕ ಜಗತ್ತು ತುಂಬ ರಮ್ಯವಾದುದು. ಅಪಾರವಾದ ಲೋಕಾನುಭವ, ಅದ್ಭುತ ಪುರಾಣ ಪ್ರಜ್ಞೆಗಳಿಂದ ಪುಷ್ಟಗೊಂಡ ಅವರ ಕೆಲವು ಕೀರ್ತನೆಗಳು ಕೆತ್ತುವ ದೃಶ್ಯ ಶಿಲ್ಪ ಮತ್ತು ಹಚ್ಚುವ ಬಣ್ಣದ ಲೇಪ ಮನೋಜ್ಞ ವಾಗಿವೆ. ಕೆಲವೇ ಸಹಜ ಮಾತುಗಳಲ್ಲಿ ಅವರು ದೊಡ್ಡ ಅರ್ಥಲೋಕಕ್ಕೆ ಸಲೀಲ ವಾಗಿ ಜಿಗಿದುಬಿಡುತ್ತಾರೆ. ಸೂಕ್ತ ಹೋಲಿಕೆ, ಶಬ್ದ ಚಿತ್ರ, ಸಂಕೇತ, ಪ್ರತಿಮಾ ರೂಪಗಳಿಂದ ಅವರ ಕೀರ್ತನೆಗಳು ಜನರ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತವೆ.

"ಸಿರಿ ಸೊಡರಿಗೆ ಗುರುಹಿರಿಯರಪಮಾನ ಬಿರುಗಾಳಿ" ಎಂಬ ಉಕ್ತಿಯನ್ನು ಪರಿಶೀಲಿಸಬಹುದು. ಶ್ರೀಮಂತಿಕೆಯ ಸೊಕ್ಕು ತಲೆಗೇರಬಾರದು ಎಂಬುದು ಅವರ ಹಿತವಾದ. ಅಪಾರವಾದ ಸಿರಿ (ಸಂಪತ್ತು) ಅವರ ಪಾಲಿಗೆ ಒಂದು ಸಣ್ಣ ಸೊಡರು ಅಷ್ಟೆ. ಇತರರನ್ನು ಅವಮಾನಿಸುವುದು ಎಂದರೆ ಬಿರುಗಾಳಿಯನ್ನು ಆಹ್ವಾನಿಸಿದಂತೆ ತನಗೇ ಕೇಡು ತರುವಂಥದು ಎಂಬ ಎಚ್ಚರಿಕೆಯ ಮಾತೂ ಇಲ್ಲಿದೆ.

'ಒಡೆಯ ಮೆಲ್ಲಡಿಯಿಡೆ ಛಡಿ ಬೆತ್ತದವ ನಾನು'

ಎಂದು ಅವರು ಒಂದು ಸುಳಾದಿಯಲ್ಲಿ ಹೇಳಿದ್ದಾರೆ. ಊಳಿಗ ಮಾನ್ಯ ಪದ್ಧತಿ ಯನ್ನು ಸಂತೋಷದಿಂದ ಒಪ್ಪಿಕೊಂಡು ಒಡೆಯನ ಸೇವೆಗೆ ನಿಲ್ಲುವ ಊಳಿಗದವನ ಸ್ಥಾನದಲ್ಲಿ ಪುರಂದರದಾಸರು ನಿಲ್ಲುತ್ತಾರೆ. ಭಗವಂತನೇ ಅವರ ಜಮೀನುದಾರ. ಯಜಮಾನರು ಬರುವುದನ್ನು, ಸ್ವಾಮಿಗಳು, ಮಹಾರಾಜರು ಬರುವುದನ್ನು ಜನಕ್ಕೆ ಘೋಷಿಸುತ್ತ ಬೆಳ್ಳಿಕಟ್ಟಿನ ಕೋಲನ್ನು ಕೈಯಲ್ಲಿ ಹಿಡಿದು ದಾರಿಬಿಡಿಸುತ್ತ ಹೋಗುವು ದಷ್ಟೇ ನನ್ನ ಕೆಲಸ ಎಂದು ಅವರು ಹೇಳಿಕೊಂಡಿದ್ದಾರೆ.

"ಸಾಕು ಸಂಸಾರ ತೆರೆ ನೂಕಲಾರೆನು
ಗುಂಡೇಕಾರರ ಕೇರಿಗೆ ಸಿಕ್ಕಿ ಚೆಂಡಿಗಿಂತ ಹಗುರವಾದೆ"

ಎಂದು ತಮ್ಮ ಬವಣೆಯನ್ನು ನಿರೂಪಿಸುತ್ತಾರೆ. ಗುಂಡೆಕಾರರ ಅಂದರೆ ಕಲ್ಲುಕುಟಿಗರ ಕೇರಿಯಲ್ಲಿ ಸಿಕ್ಕಿಕೊಂಡರೆ, ಕಲ್ಲೇ ಭಾರವಿಲ್ಲದ ಆ ಕೇರಿಯ ಜನರ ಕೈಗೆ ಸಿಕ್ಕಿದರೆ, ಚೆಂಡಿಗಿಂತ ಹಗುರವಾದ ವ್ಯಕ್ತಿಯಾಗಿ ನರಳಬೇಕಾಗುತ್ತದೆ. ಈ ಸ್ಥಿತಿಯನ್ನೇ ಮುಂದುವರಿಸುವ ರೀತಿಯಲ್ಲಿ ಅವರು ಇನ್ನೊಂದು ಕಡೆ :

"ಮರ್ಕಟನ ಕೈ ನೂಲು ಗುಕ್ಕರಿಯ ತೆರನಂತೆ
ಸಿಕ್ಕಿಕೊಂಡು ಕಾಮಕ್ರೋಧಾದಿಗಳು ಎನ್ನ
ಹಿಕ್ಕಿ ಹೀರುತಲಿವೆ"

ಎನ್ನುತ್ತಾರೆ. ಗುಕ್ಕರಿ ಎಂದರೆ ಕುಕ್ಕಡಿ, ನೇಯ್ಗೆಯವರು ಬಳಸುವ ಕದಿರಿಗೆ ಸಿಕ್ಕಿಸಿದ ದಾರದ ಉಂಡೆ. ಇದೇನಾದರೂ ಕಪಿಯ ಕೈಗೆ ಸಿಕ್ಕಿಬಿಟ್ಟರೆ ಹೇಗೆ ಗೋಜಲು ಗೋಜಲಾಗಿ ಕಲಸಿಕೊಂಡು ಮತ್ತೆ ಸರಿಪಡಿಸಲಾಗದ ಸ್ಥಿತಿಗೆ ತರುತ್ತದೋ ಹಾಗೆ ವ್ಯಕ್ತಿಯು ಕಾಮಕ್ರೋಧಾದಿಗಳ ಕೈಯಲ್ಲಿ ಸಿಕ್ಕಿಕೊಳ್ಳುವ ರೀತಿ ಇಲ್ಲಿ ಚಿತ್ರಣ ಗೊಂಡಿದೆ.

ಡಂಭಾಚಾರದ ಭಕ್ತಿಯು, ಕೃತಕ ಮೊಗವಾಡದ ಮನಸ್ಸು ನಮ್ಮ ಅಧಃಪತನ ವನ್ನು ತಡೆಯಲಾರದು ಎಂಬ ಸಂಗತಿಯನ್ನು, ಗ್ರಾಮವನ್ನು ವಿಪತ್ತಿನಿಂದ ರಕ್ಷಿಸ ಲಾರದ 'ಗೋಪುರದ ಗೊಂಬೆ' ಎಂಬ ಅರ್ಥಪೂರ್ಣ ಪ್ರತಿಮೆಯಿಂದ ವಿವರಿಸುತ್ತಾರೆ. "ವಿಷವನುಂಡ ಬಾಯೊಳೊಮ್ಮೆ ಮುದ್ದು ತಾರೊ"—ಇದು ಸಾತ್ತ್ವಿಕ ತಾಮಸ ಗಳನ್ನು ದಾಸರು ಬೆರಸುವ ಬಗೆ. 'ಬಲಿಯ ಬೇಡಿದ ಚೆಲುವ ವಾಮನ—ಹಸನಾದ ಮೋಸ' ಎಂಬ ಮಾತು ವಾಮನಾವತಾರದ ಮೇಲೆ ಬರೆದ ಸೊಗಸಾದ ವ್ಯಾಖ್ಯಾನ ವಾಗಿದೆ. ಕೃಷ್ಣನ ಬಾಯನ್ನು 'ಕರ್ಪೂರದ ಕರಡಿಗೆಯ ಬಾಯಿ' ಎಂದು ಪ್ರಶಂಸಿಸು ತ್ತಾರೆ. ಆರಾಧ್ಯ ದೈವವಾದ ವೇಣುಗೋಪಾಲ ಅವರ ಪಾಲಿಗೆ ಜಡ ಶಿಲಾಮೂರ್ತಿ ಯಲ್ಲ. "ನವಿಲಂತೆ ಕುಣಿದು, ಹಂಸೆಯಂತೆ ನಲಿದು, ಎರಳೆಯಂತೆ ಜಿಗಿ ಜಿಗಿದಾಡಿ, ಬೆಳದಿಂಗಳಂತೆ ಸುಳಿದಾಡುವ" ವ್ಯಕ್ತಿ ಎಂದು ವರ್ಣಿಸುತ್ತಾರೆ.

"ಕಿಟ್ಟಗಟ್ಟಿದ ಕಬ್ಬಿಣಕ್ಕೆ ಪುಟವ ಹಾಕಿಸೋ
ಬೆಟ್ಟಿಗುಂಗುರಮಾಡಿ ಎನ್ನ ಧರಿಸೋ"

ಎಂಬ ಸುಂದರ ರೂಪಕದಲ್ಲಿ ತಮ್ಮ–ದೈವದ ಆಪ್ತ ಸಂಬಂಧ–ಹೇಗಿರಬೇಕೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಸಿರಿ ಬಂದ ಕಾಲಕ್ಕೆ ಬಿರಿ ಬಿರಿ ಕಣ್ಣು
ಮೇಲೆ ನೋಡುವರು
ಸಿರಿ ಹೋದ ಮರುದಿನ ಬಡತನ ಬಂದರೆ
ಹುರುಕು ಕಜ್ಜಿಯ ತುರಿಸಿ ತಿರುಗುವರಲ್ಲ...

ಇಲ್ಲಿ ಸಿರಿತನ–ಬಡತನ ಎರಡನ್ನೂ ದೇಹದ ಒಂದೊಂದು ಅಂಗಚರ್ಯೆಯಿಂದ ಕಾಣಲು ಯತ್ನಿಸಿದ್ದಾರೆ. ("ಬಿರಿ ಬಿರಿ ಕಣ್ಣು" "ತುರಿಸುವ ಕಜ್ಜಿ !") 'ಇಹಲೋಕ ಸುಖ'ವನ್ನು 'ಅರಗಿನ ಪಾಯಸ' ಎಂಬ ವಿಶಿಷ್ಟ ಉಪಮೆಯಿಂದ ವರ್ಣಿಸುತ್ತಾರೆ. 'ನೀರ ಮೇಲಣ ಗುಳ್ಳೆ' 'ನಾರಾಯಣನೆಂಬ ನಾಮದ ಬೀಜ' 'ರಾಮ ನಾಮ ಪಾಯಸಕೆ ಕೃಷ್ಣನಾಮ ಸಕ್ಕರೆ' ಇಂಥ ಉಪಮೆಗಳು ಅವರ ಕೃತಿಗಳಲ್ಲಿ ತುಂಬಿ ಕೊಂಡಿವೆ.

ಹೀಗೆ ಸಾಹಿತ್ಯದ ಗುಣಗಳಿಂದ ಶೋಭಿಸುವ ಪುರಂದರರ ಕೃತಿಗಳನ್ನು ಶುದ್ಧ ಸಾಹಿತ್ಯದ ದೃಷ್ಟಿಯಿಂದ ಪರಿಶೀಲಿಸಿದರೂ ಅದರ ಗಟ್ಟಿತನ ಎದ್ದು ಕಾಣುತ್ತದೆ.

ಪದಾರಂಭದ ಅಕಾರಾದಿ

'ಪದ'ಗಳು		ಪದಸಂಖ್ಯೆ	ಪುಟಸಂಖ್ಯೆ
ಅಂಜಬೇಡೆಲೊ ಜೀವ	—	೧೨೦	219
ಅಂಜಲೇತಕೆ ಜೀವ ಅನುಗಾಲವು	—	೧೮	66
ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ	—	೧೬೦	273
ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ	—	೯೫	178
ಅದರಿಂದೇನು ಫಲ ಇದರಿಂದೇನು ಫಲ	—	೮೪	160
ಅನುದಿನದಲಿ ಬಂದು ತನುವ ಸ್ನೇಹವ ಮಾಡಿ	—	೧೨೧	220
ಆಗಲೇ ಕಾಯಬೇಕು ಅಂಬುಜಾಕ್ಷನೆ	—	೧೬೭	283
ಆಚಾರವಿಲ್ಲದ ನಾಲಿಗೆ ನಿನ್ನ ..	—	೧೩೨	236
ಆನೆ ಬಂದಿತಮ್ಮಮ್ಮ...	—	೨೦೫	327
ಆರ ಹಾರೈಸಿದರೇನುಂಟು	—	೯೯	183
ಆರಿಗೆ ಮೊರೆಯಿಡಲೊ ಹರಿಯೆ	—	೨೨೨	355
ಆರಿದ್ದರೇನಯ್ಯ ನೀನಿಲ್ಲದೆ	—	೧೪೩	250
ಆರು ಬದುಕಿದರೇನು ಆರು ಬಾಳಿದರೇನು	—	೧೭೪	290
ಆರು ಮುನಿದರೇನು ನಮಗಿನ್ನಾರು...	—	೬೩	135
ಆರು ಹಿತವರು ನಿನಗೆ ಈ ಮೂರುಮಂದಿಯೊಳಗೆ	—	೧೦೦	187
ಆವ ಕುಲವಾದರೇನು ಆವನಾದರೇನು ಆತ್ಮ	—	೪೮	110
ಇಂತು ಶ್ರುತಿ ಸ್ಮೃತಿಗಳಲಿ ಸಾರುತಿದೆಕೊ	—	೨೬	81
ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ	—	೨೩	77
ಇನ್ನಾದರೂ ಹರಿಯ ನೆನೆ ಕಂಡ್ಯ ಮನುಜ	—	೬೧	132
ಇನ್ನೂ ದಯೆ ಬಾರದೆ ದಾಸನ ಮೇಲೆ	—	೧೩೯	244
ಇನ್ನೇಕೆ ಯಮನ ಬಾಧೆಗಳು	—	೧೭೦	286
ಇನ್ನೇನು ಗತಿ ಎನಗೆಲೋ ಹರಿಯೆ	—	೫೬	125
ಇರಬೇಕು ಇಲ್ಲದಿರಬೇಕು ಹರಿದಾಸರು	—	೨೯	85
ಇರಬೇಕು ಹರಿದಾಸ ಸಂಗ	—	೨೮	83
ಇಲ್ಲೆ ಕುಳಿತಿದ್ದ ಭೂತವು ಒಂದು	—	೨೨೫	359
ಇಷ್ಟು ಪಾಪಗಳ ಮಾಡಿದ್ದೆ ಸಾಕು	—	೧೫೦	257
ಈಗ ಮಾಡೆಲೊ ರಾಮಧ್ಯಾನವ ನೀ	—	೧೬೬	282
ಈ ಗ್ರಾಮದಲಿ ವಾಸ ಇರುವುದೆ ಪ್ರಯಾಸ	—	೧೮೫	302
ಈಸಬೇಕು ಇದ್ದು ಜಯಿಸಬೇಕು	—	೨೨	76
ಉಬ್ಬದಿರು ಉಬ್ಬದಿರು ಎಲೆ ಮಾನವ	—	೧೨೫	227
ಊರದೇವರ ಮಾಡಬೇಕಣ್ಣ	—	೨೧೪	340
ಋಣವೆಂಬ ಪಾತಕವು ಬಹು ಬಾಧೆಪಡಿಸುತಿದೆ	—	೬೨	133

'ಪದ'ಗಳು		ಪದಸಂಖ್ಯೆ	ಪುಟಸಂಖ್ಯೆ
ಎಂತು ನಿನ್ನ ಪೂಜೆ ಮಾಡಿ ಮೆಚ್ಚಿಸುವೆನೊ	—	೨೦	69
ಎಂದಿಗೆ ನಾನಿನ್ನು ಧನ್ಯನಾಗುವೆ	—	೧೪೦	246
ಎಚ್ಚರದಲಿ ನಡೆ ಮನವೆ	—	೩೦	86
ಎಚ್ಚರಿಕೆ ಎಚ್ಚರಿಕೆ ಮನವೆ	—	೧೨೩	224
ಎಚ್ಚರಿಕೆ ಭಾಗ್ಯ ಯಾರಿಗೂ ಸ್ಥಿರವಲ್ಲ	—	೩೨	90
ಎನಗೂ ಆಣೆ ರಂಗ ನಿನಗೂ ಆಣೆ	—	೧೨೮	231
ಎನ್ನ ಮನದ ಡೊಂಕ ತಿದ್ದಿಸೊ	—	೫೪	122
ಎರವಿನ ಸಿರಿಗೆ ಬಿಮ್ಮನೆ ಬೆರೆತರೆ	—	೧೨೨	222
ಎಲ್ಲರು ಮಾಡುವುದು ಹೊಟ್ಟೆಗಾಗಿ ..	—	೧೮೬	303
ಎಲ್ಲಾನೂ ಬಲ್ಲೆನೆಂಬುವಿರಲ್ಲ	—	೭೫	151
ಎಳ್ಳುಕಾಳಿನಷ್ಟು ಭಕುತಿ	—	೧೨೭	230
ಏಕೆ ಚಿಂತಿಸುವೆ ಬರಿದೆ ಮರುಳೆ	—	೧೭೭	294
ಏತರ ಕಟಪಟಿ ಒಂದಿನ ಹೋಗುತಿ	—	೧೧೨	204
ಏನಾದರು ಒಂದಾಗಲಿ	—	೨೧೬	344
ಏನಾಯಿತೊ ಈ ಜನಕೆ	—	೧೮೦	297
ಏನು ಇಲ್ಲವೊ ಎರಡು ದಿನದ ಸಂಸಾರ	—	೨೭	82
ಏನು ಬಂದೆಯೊ ಜೀವವೆ ವ್ಯರ್ಥವಾಗಿ	—	೧೧೭	215
ಏನು ಮಾಡಿದರೇನು ಭವ ಹಿಂಗದು	—	೬೯	141
ಏನು ಮಾಡಿದರೇನು ಹಿಂದಿನ ಕರ್ಮಫಲ	—	೧೭೮	295
ಏನು ವ್ರತವೇನು ಸಾಧನೆಗಳೇನೊ	—	೮೧	157
ಏನೆಂತೊಲಿದೆ ನಿನ್ನವರಂತೆ ಕೆಡುಬುದ್ಧಿ...	—	೧೫೨	259
ಏನೇನು ಮಾಡಿದರೇನು ಫಲವಯ್ಯ	—	೮೨	158
ಒಂದಲ್ಲ ಎರಡಲ್ಲ ನೊಂದ ಜೀವಕೆ ದುಃಖ	—	೧೭೯	296
ಒಂದೇ ನಾಮದೊಳಡಗಿದವು	—	೧೬	62
ಒಂದೇ ನಾಮವು ಸಾಲದೆ ಶ್ರೀ ಹರಿಯೆಂಬ	—	೧೨	57
ಕಂಡು ಕಂಡು ನೀ ಎನ್ನ ಕೈ ಬಿಡುವರೇ	—	೧೪೬	253
ಕಟ್ಟಬೇಕು ಕಾಟದೆಮ್ಮೆ ಅದರ ಹಯನ	—	೨೦೩	325
ಕಣ್ಣೆತ್ತಿ ನೋಡಲು ಬೇಡ	—	೧೦೭	198
ಕರುಣಿಸಿ ಕೇಳು ಕಂದನ ಮಾತನು	—	೫೮	128
ಕರುಣಿಸೋ ರಂಗ ಕರುಣಿಸೋ	—	೯	52
ಕಲಿಯುಗದ ಮಹಿಮೆಯು ಕಾಣಬಂತೀಗ	—	೧೮೭	304
ಕಲ್ಲುಸಕ್ಕರೆ ಕೊಳ್ಳಿರೋ	—	೧೯೪	313
ಕಾಗದ ಬಂದಿದೆ ನಮ್ಮ ಕಮಲನಾಭನದು	—	೧೮೯	308
ಕಾಗೆ ಕೂಗಿತಲ್ಲ ಈಗ ಒಂದು	—	೨೦೪	326
ಕಾಯಬೇಕೆನ್ನ ಗೋಪಾಲ	—	೭೧	143
ಕುರುಡು ನಾಯಿ ತಾ ಸಂತೆಗೆ ಬಂತಂತೆ	—	೨೨೧	353
ಕೃಷ್ಣ ಎನಬಾರದೆ	—	೧೭	64
ಕೆಟ್ಟಿತು ಕೆಲಸವೆಲ್ಲ ಲೋಕದಿ	—	೧೦೧	189

'ಪದ'ಗಳು		ಪದಸಂಖ್ಯೆ	ಪುಟಸಂಖ್ಯೆ
ಕೆಟ್ಟುನೆಂಟರ ಸೇರುವುದು ಬಲು ಕಠಿನ	—	೧೮೨	299
ಕೆಟ್ಟೆನಲ್ಲೋ ಹರಿಯೆ ಸಿಟ್ಟು ಮಾಡಿ	—	೭೨	144
ಕೈಮೀರಿ ಹೋದ ಮಾತಿಗೆ ಹುಡುಕಾಡಬಾರದು	—	೪೧	100
ಕೊಡು ಕಂಡ್ಯ ಹರಿಯೆ ನಿನ್ನ ನಾಮ	—	೫	48
ಕೊಡುವ ಕರ್ತ ಬೇರೆ ಇರುತಿರೆ	—	೪೯	111
ಕೊಬ್ಬಲಿರಲಿಬೇಡ ಮನುಜ ನೀನು	—	೬೫	137
ಗಂಗಾದಿಸಕಲತೀರ್ಥಗಳಿಗಧಿಕ	—	೧೩	59
ಗರುವವ್ಯಾತಕೊ ನಿನಗೆ ಪಾಮರ ಮನುಜನೆ	—	೩೭	95
ಗುಣವಾಯಿತೆನ್ನ ಭವರೋಗ	—	೨೦೭	329
ಗುದ್ದಿದವನೆ ಬಲ್ಲ ಗುದ್ದಿಸಿಕೊಂಡವನೆ ಬಲ್ಲ	—	೨೨೪	358
ಚಿತ್ತಶುದ್ಧಿ ಇಲ್ಲದವ ಅವ ಜ್ಞಾನಿಯೆ	—	೮೦	156
ಛೀ ಛೀ ಏತರ ಜನ್ಮ	—	೭೯	155
ಜಂಗಮರು ನಾವು ಜಗದೊಳು	—	೪೬	106
ಜನರ ನಡತೆ ಕೇಳಿರಯ್ಯ	—	೮೮	169
ಜಯ ಜಯವದೆ ಈ ಮನೆತನಕೆ	—	೨೧೩	337
ಜಾಲಿಯ ಮರದಂತೆ ಧರೆಯೊಳು ದುರ್ಜನರು	—	೮೯	171
ಜ್ಞಾನವಂತರಿಗೆ ವಿಧಿ ಕಾಡುವುದು ಸತ್ಯ	—	೧೭೩	289
ತಂಗಿಗೆ ಹೇಳಿದ ಕೃಷ್ಣ ಚಂದದಿಂದಲಿ ಬುದ್ಧಿ	—	೧೧೧	203
ತನಗಿಲ್ಲದಾ ವಸ್ತುವೆಲ್ಲಿದ್ದರೇನು	—	೧೩೦	233
ತನುವ ನೀರೊಳಗದ್ದಿ ಫಲವೇನು	—	೧೫೫	265
ತಾ ಪಡೆದುಬಂದುದಕುಪಾಯವೇನು	—	೯೭	181
ತುರುಕರು ಕರೆದರೆ ಉಣಬಹುದಣ್ಣ	—	೨೧೨	334
ತೇಲಿಸೋ ಇಲ್ಲ ಮುಳುಗಿಸೋ	—	೧೩೭	242
ದಾರಿಗೆ ನಿನ್ನ ಬಾಳ್ವೆ ದಾರಿಗೆ	—	೧೧೯	218
ದಾರಿಯೇನಿದಕೆ ಮುರಾರಿ....	—	೫೩	121
ದುಗ್ಗಾಣಿ ಎಂಬುದು ದುರ್ಜನ ಸಂಗ	—	೧೧೪	207
ದುರಿತವೆತ್ತಣದೊ ದುರ್ಗತಿಯೆಲ್ಲಿಹುದೊ	—	೮	51
ಧರ್ಮ ಏಕಃ ಸಹಾಯಃ	—	೯೨	175
ಧರ್ಮಕ್ಕೆ ಕೈ ಬಾರದೀ ಕಾಲ	—	೮೩	159
ಧರ್ಮ ದೊರಕುವುದೆ ದುಷ್ಕರ್ಮಿಗೆ	—	೩೯	98
ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೋ	—	೧೬೧	275
ಧರ್ಮವೇ ಜಯವೆಂಬ ದಿವ್ಯಮಂತ್ರ	—	೨೪	78
ನಂದನ ತನಯ ಗೋವಿಂದನ ಭಜಿಪುದು	—	೧೯೨	311
ನಗೆಯು ಬರುತಿದೆ ಎನಗೆ	—	೬೭	139
ನರನಾದ ಮೇಲೆ ಹರಿನಾಮ ಜಿಹ್ವೆಯೊಳಿರಬೇಕು	—	೨೫	79
ನಾಡಮಾತು ಬೇಡ ನಾಲಿಗೆ	—	೧೩೩	237
ನಾನೇನು ಮಾಡಿದೆನೋ ಕೃಷ್ಣಯ್ಯ	—	೧೫೩	263
ನಾಮಕೀರ್ತನೆ ಅನುದಿನ ಮಾಳ್ಪಗೆ	—	೧೫೭	267

'ಪದ'ಗಳು	ಪದಸಂಖ್ಯೆ	ಪುಟಸಂಖ್ಯೆ
ನಾ ಮಾಡಿದ ಕರ್ಮ ಬಲವಂತವಾದರೆ —	೧೬೯	285
ನಾಯಿ ಬಂದದಪ್ಪ ಅಣ್ಣ ಅತ್ತಲಾಗಿರಿ —	೨೦೬	328
ನಾರಾಯಣ ಎನಬಾರದೆ ನಿಮ್ಮ ನಾಲಿಗೆಯೊಳು —	೪೨	101
ನಾರಾಯಣ ನಿನ್ನ ನಾಮದ ಸ್ಮರಣೆಯು —	೪	46
ನಾರಾಯಣನೆಂಬ ನಾಮದ ಬೀಜವ —	೨೦೦	320
ನಾರಾಯಣನೆಂಬ ನಾಮವ ಮನದಲಿ —	೩೧	88
ನಿಂದಕರಿರಬೇಕು —	೯೩	176
ನಿನ್ನ ಆಶ್ರಯಿಸುವೆ ನಿಗಮಗೋಚರ ನಿತ್ಯ —	೧೪೧	247
ನಿನ್ನದು ನಿನಗೆ ಬಾರಿಸಿಕೊಟ್ಟೇನು —	೨೨೬	360
ನಿನ್ನ ನಾಮವಿದ್ದರೆ ಸಾಕೊ —	೧೦	54
ನಿನ್ನ ನಾಮವೆ ಎನಗೆ ಅಮೃತಾನ್ನವು —	೧೯೫	314
ನೀನ್ಯಾಕೋ ನಿನ್ನ ಹಂಗ್ಯಾಕೋ —	೧೧	55
ನೆಚ್ಚದಿರೀ ಭಾಗ್ಯ ಯಾರಿಗು ಸ್ಥಿರವಲ್ಲ —	೧೨೬	228
ನೆಚ್ಚದಿರು ಬೆಕ್ಕು ನೆವ ನೋಡುತಿದೆ —	೨೧೫	342
ನೆಚ್ಚಬೇಡ ಪ್ರಾಣಿ ಸಂಸಾರ ಸ್ಥಿರವೆಂದು —	೧೫೯	272
ನೆಚ್ಚಬೇಡ ನೀ ನೆಚ್ಚಬೇಡ ಕುಲಧರ್ಮ.... —	೩೮	96
ನೆನೆಬೇಕು ನೆನೆಬೇಕು ನೆನೆಯಬೇಕಮ್ಮ —	೧೪	60
ನೋಡದಿರು ಪರಸ್ತ್ರೀಯರ —	೧೦೬	197
ನೋಡಿರಯ್ಯಾ ನೀವು ನೋಡಿರಯ್ಯಾ —	೨೨೮	362
ಪಂಚಮಹಾಪಾತಕಿಗೆ ಎಂತು ಬುದ್ಧಿಯ ಪೇಳಿ —	೯೦	172
ಪತಿಭಕುತಿ ಇಲ್ಲದಿಹ ಸತಿಯ ಸಂಗ —	೧೦೫	196
ಪರಾಕು ಮಾಡದೆ ಪರಾಂಬರಿಸಿ ಎನ್ನ... —	೧೩೬	241
ಪಾಪಿಗಳೊಳಗೆಲ್ಲ ನಾನು ವೆಗ್ಗಳನೆಂದು... —	೫೫	123
ಪಾಪಿ ಬಲ್ಲನೆ ಪರರ ಸುಖದುಃಖವ —	೧೮೪	301
ಪ್ರಾಚೀನ ಕರ್ಮವು ಬಿಡಲರಿಯದು —	೧೭೨	288
ಪುಟ್ಟಿಸಬೇಡವೊ ದೇವ ಎಂದೆಂದಿಗು —	೧೫೪	264
ಪೂರ್ವ ಜನ್ಮದಲಿ ನಾ ಮಾಡಿದ ಅಘದಿಂದ —	೧೭೧	287
ಬಂದಾನು ಯಮನು ದುಷ್ಟರ ಕೊಂದಾನು —	೧೬೨	276
ಬಡವ ನಿನಗೊಬ್ಬರ ಗೊಡವೆ ಯಾತಕ್ಕೊ —	೩೫	93
ಬರಬೇಕೋ ರಂಗಯ್ಯ ನೀ ಬರಬೇಕೊ —	೧೬೮	284
ಬರಿದೆ ಹೋಯಿತು ಹೋಯಿತು ಹೊತ್ತು —	೬೦	131
ಬಾರಯ್ಯ ರಂಗ ಬಾರಯ್ಯ ಕೃಷ್ಣ —	೫೯	130
ಬಿನ್ನಹಕೆ ಬಾಯಿಲ್ಲವಯ್ಯಾ —	೧೪೭	254
ಬುದ್ಧಿ ಮಾತು ಹೇಳಿದರೆ ಕೇಳಬೇಕಮ್ಮ —	೧೧೦	202
ಬೇವು ಬೆಲ್ಲದೊಳಿಡಲೇನು ಫಲ —	೮೬	163
ಬೈಯಿರೋ ಬೈಯಿರೋ ಮನಮುಟ್ಟಿ ಬೈಯಿರೋ —	೯೪	177
ಬೈಲಾ ಬಾವಿಗೆ ಬಂದಳೋರ್ವ ಬಾಲೆ —	೨೨೭	361
ಭಂಗಾರವಿಡಬಾರೆ ನಿನಗೊಪ್ಪುವ... —	೧೦೮	199

'ಪದ'ಗಳು		ಪದಸಂಖ್ಯೆ	ಪುಟಸಂಖ್ಯೆ
ಭಂಡನಾದೆನು ನಾನು ಸಂಸಾರದಿ	—	೧೪೯	256
ಭ್ರಷ್ಟರಾದರು ಮನುಜರು....ಅಷ್ಟಮದ	—	೧೯೮	318
ಭಾಷೆ ಹೀನರ ಸಂಗವಭಿಮಾನಭಂಗ	—	೧೮೩	300
ಮಂದಮತಿಯೋ ನಾನು ಮದನಜನಕನು ನೀನು	—	೧೫೧	258
ಮಡಿ ಮಡಿ ಮಡಿಯೆಂದಡಿಗಡಿಗ್ಹಾರುತಿ	—	೭೪	146
ಮಣ್ಣಿಂದ ಕಾಯ ಮಣ್ಣಿಂದ	—	೨೦೮	330
ಮತಿಗೆಟ್ಟು ಕಾಲವ ಕಳೆಯಬೇಡ	—	೫೧	118
ಮನವೆನ್ನ ಮಾತು ಕೇಳದು ಮಂದಜ್ಞಾನದಿ	—	೧೪೮	255
ಮರುಳಾಟವೇತಕೋ ಮನುಜ	—	೭೬	152
ಮರೆಯದಿರೆಲೆ ಮನ ಇಲ್ಲಿ	—	೮೭	164
ಮರೆಯಬೇಡ ಮನವೆ ನೀನು ಹರಿಯ....	—	೭	50
ಮಲವ ತೊಳೆಯಬಲ್ಲರಲ್ಲದೆ	—	೭೭	153
ಮಾಡು ಸಿಕ್ಕದಲ್ಲಾ ಮಾಡಿನ ಗೂಡು ಸಿಕ್ಕದಲ್ಲಾ	—	೨೧೯	350
ಮಾತಿಗೆ ಬಾರದ ವಸ್ತು ಬಹಳಿದ್ದರೇನು	—	೪೫	105
ಮಾನಭಂಗವ ಮಾಡಿ ಮತ್ತೆ ಉಪಚಾರಗಳ	—	೪೦	99
ಮಾನವ ಜನ್ಮ ದೊಡ್ಡದು	—	೨೧	75
ಮಾನ ಹೀನನಿಗೆ ಅಭಿಮಾನವೇಕೆ	—	೯೬	179
ಮಾನಿಸರೊಳು ಮಾನಿಸ	—	೧೬೪	279
ಮಾಯವಾದಿ ಗಂಡನನೊಲ್ಲೆನೆ	—	೨೦೯	331
ಮಾಯೆ ಎನ್ನ ಕಾಯವನ್ನು	—	೧೧೬	209
ಮುಂದೆ ಭಲಾ ಎಂದು ಹಿಂದಾಡಿಕೊಂಬರ	—	೧೩೪	238
ಮುತ್ತುಕೊಳ್ಳಿರೋ ಜನರು	—	೧೯೭	317
ಮುತ್ತೈದೆಯಾಗಿರಬೇಕು ಮುದದಿಂದಲಿ	—	೧೦೯	201
ಮುಸುಕು ತೆಗೆದರೆ ಬೆನ್ನಿಲಿ ನಾಲಿಗೆ	—	೨೧೭	345
ಮುಳ್ಳು ಕೊನೆಯ ಮೇಲೆ	—	೨೧೮	347
ಮೂಗು ಸಣ್ಣದು ಮೂಗುತಿ ದೊಡ್ಡದು	—	೨೨೦	352
ಮೂರ್ಖರಾದರು ಜನರು ಲೋಕದೊಳಗೆ	—	೧೯೯	319
ಮೂಢ ಬಲ್ಲನೆ ಜ್ಞಾನ ದೃಢಭಕ್ತಿಯ	—	೯೮	182
ಯಂತ್ರ ದೊರಕಿತು ಎನಗೆ	—	೧೯೬	316
ಯಾಕೆ ಕಡೆಗಣ್ಣಿಂದ ನೋಡುವೆ	—	೧೪೫	252
ಯಾಕೆನ್ನೊಳಿನಿತು ಕೃಪೆಯಿಲ್ಲ ಹರಿಯೆ	—	೭೦	142
ಯಾಕೆ ಚಿಂತಿಸುತಿದ್ದಿ ಕೋತಿ ಮನವೆ	—	೧೨೯	232
ಯಾಕೆ ಮೂರ್ಖನಾದ್ಯೊ ಮನುಜ	—	೩೪	92
ಯಾತಕ್ಕೆ ದುರಾಶೆ ಎಲೆ ಮನವೆ	—	೧೭೬	293
ಯಾರಿಗೆ ದೂರುವೆನೋ ಗಿರಿಯ ರಾಯ	—	೧೧೫	208
ಯಾರೂ ಸಂಗಡ ಬಾಹೋರಿಲ್ಲ	—	೧೫೮	271
ಯಾರೆತ್ತ ಪೋದರೇನು, ಊರೆತ್ತ ಬೆಂದರೇನು	—	೧೭೫	292
ಯಾವ ಕರ್ಮವೊ ಇದು	—	೭೮	154

'ಪದ'ಗಳು		ಪದಸಂಖ್ಯೆ	ಪುಟಸಂಖ್ಯೆ
ರಕ್ಷಿಸು ಲೋಕ ನಾಯಕನೆ ರಕ್ಷಿಸು	—	೫೨	120
ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ	—	೧೦೪	194
ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ	—	೧೯೩	312
ರಾಮ ಮಂತ್ರವ ಜಪಿಸೋ ಏ ಮನುಜ	—	೧೫೬	266
ರಾಮ ರಾಮ ರಾಮ ಸೀತಾರಾಮ ಎನ್ನಿರೋ	—	೧೬೫	280
ರೊಕ್ಕ ಎರಡಕ್ಕು ದುಃಖ ಕಾಣಕ್ಕ	—	೧೧೩	205
ಲೊಟಪಟ ಸಂಸಾರ ಏನಣ್ಣ	—	೨೨೩	356
ವಾರಿಜನಾಭನ ಕರುಣವೆ ಸ್ಥಿರ....	—	೧೨೪	226
ವಿಧಿ ನಿಷೇಧ ನಿನ್ನವರಿಗೆಂತೊ ಹರಿಯೆ	—	೧೯	67
ವಿಷಯದ ವಿಚಾರ ಬಿಡು	—	೩೬	94
ವ್ಯರ್ಥವಲ್ಲವೇ ಜನ್ಮ ವ್ಯರ್ಥವಲ್ಲವೆ	—	೧೫	61
ವೈದ್ಯನ ನಾನರಿಯೆ ಭವರೋಗಕೆ	—	೧೩೮	243
ಶಕ್ತನಾದರೆ ನಂಟರೆಲ್ಲ ಹಿತವರು	—	೬೮	140
ಸಂದಿತಯ್ಯ ಪ್ರಾಯವು	—	೫೭	127
ಸಂಸಾರವೆಂಬಂಥ ಭಾಗ್ಯವಿರಲಿ	—	೫೦	117
ಸತ್ಯವಂತರಿಗಿದು ಕಾಲವಲ್ಲ	—	೧೮೧	298
ಸತ್ಯವೆಂಬುದೆ ಸ್ನಾನ ಉಪವಾಸ ಜಪನೇಮ	—	೪೩	102
ಸಾಕು ಸಂಸಾರ ಸಜ್ಜಾಗಿಲ್ಲ ಒಲ್ಲೆ ಒಗತನವ	—	೧೩೧	234
ಸಾಧು ಸಜ್ಜನರೊಳಗಿರುವೋದೆ ಹಬ್ಬ	—	೨೧೧	333
ಸ್ನಾನ ಮಾಡಿರಯ್ಯ ಜ್ಞಾನ ತೀರ್ಥದಲಿ	—	೨೧೦	332
ಸಿಕ್ಕಿದೆಯ ಎಲೆ ಜೀವ ನಿನ್ನ	—	೧೧೮	216
ಸ್ಮರಣೆಯೊಂದೇ ಸಾಲದೆ ಗೋವಿಂದನ	—	೩	45
ಸುಮ್ಮನೆ ಕಾಲವ ಕಳೆವರೆ	—	೧೬೩	277
ಹಣ್ಣು ಬಂದಿದೆ ಕೊಳ್ಳಿರೋ ನೀವೀಗ	—	೧೯೧	310
ಹಣ್ಣು ಬಂದಿದೆ ಜನರು ಹಣ್ಣು ಕೊಳ್ಳಿರೋ	—	೧೯೦	309
ಹತ್ತಿ ಗಿಡದ ಕೊನೆ ಹಗೆಯಾಗಿ ಬಡಿದ...	—	೬೪	136
ಹರಿಕಥಾಶ್ರವಣ ಮಾಡೊ	—	೩೩	91
ಹರಿಕೊಟ್ಟ ಕಾಲಕ್ಕೆ ಉಣಲಿಲ್ಲ	—	೮೫	162
ಹರಿನಾಮದರಗಿಣಿಯು ಹಾರುತಿದೆ ಜಗದಿ	—	೨೦೨	324
ಹರಿ ನಾರಾಯಣ ಹರಿನಾರಾಯಣ...ಎನು ಮನವೆ	—	೨೦೧	322
ಹರಿ ನೀನೆ ಗತಿಯೆಂದು ನೆರೆ ನಂಬಿದವರನು	—	೧೪೨	248
ಹರಿಯ ನೆನೆಯಿರೋ ನಮ್ಮ...	—	೬	49
ಹರಿಯ ನೆನೆಯದ ನರಜನ್ಮವೇಕೆ	—	೪೪	103
ಹರಿಯೆಂಬ ನಾಮಾಮೃತದ ಸುರುಚಿಯು...	—	೨	44
ಹರಿ ಸರ್ವೋತ್ತಮನೆಂದು ಸ್ಮರಿಸದ ಜನರ...	—	೯೧	174

'ಪದ'ಗಳು		ಪದಸಂಖ್ಯೆ	ಪುಟಸಂಖ್ಯೆ
ಹರಿಸ್ಮರಣೆ ಮಾಡೋ ನಿರಂತರ	—	೧	43
ಹಿಂದಿಲ್ಲ ಸ್ವಾಮಿ ಮುಂದಿಲ್ಲ	—	೧೪೪	251
ಹುಚ್ಚು ಕುನ್ನಿ ಮನವೇ	—	೧೩೫	239
ಹುಚ್ಚು ಹಿಡಿಯಿತು ಎನಗೆ	—	೧೮೮	307
ಹೆಂಡತಿ ಪ್ರಾಣ ಹಿಂಡುತಿ	—	೧೦೩	193
ಹೆಣ್ಣಿಗಿಚ್ಛೈಸುವರೆ ಮೂಢ	—	೧೦೨	191
ಹೆಣ್ಣು ಕೊಟ್ಟತ್ತೈಮಾವಂದಿರ	—	೭೩	145
ಹೆತ್ತ ತಾಯಿತಂದೆಗಳ ಚಿತ್ತವ ನೋಯಿಸಿ	—	೬೬	138
ಹೊಲೆಯ ಹೊರಗಿಹನೆ ಊರೊಳಗಿಲ್ಲವೆ	—	೪೭	108

—